ಭಾನುವಾರ, ಡಿಸೆಂಬರ್ 18, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 348 | ಪುಟ 20 • www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

'ಚೀನಾ ಪೇ ಚರ್ಚಾ' ಯಾವಾಗ? 8
ರಾಮನಗರ: ನಿಖಿಲ್ ಜೆಡಿಎಸ್ ಅಭ್ಯರ್ಥಿ 4
ಇಂದು ಭಾನುವಾರದ ಪುರವಣಿ 10
ಗುಜರಾತ್ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನೀಡಿದ್ದ ಆದೇಶ ಮರುಪರಿಶೀಲನೆಗೆ ಕೋರಿಕೆ
ಬಿಲ್ಕಿಸ್ ಬಾನು ಸಲ್ಲಿಸಿದ್ದ ಅರ್ಜಿ ವಜಾ 7

ಅತಿವೃಷ್ಟಿ, ರೋಗಬಾಧೆ, ಬೆಲೆ ಕುಸಿತ: ಕಾಫಿ, ಕಾಳುಮೆಣಸು ಕೃಷಿಕರು ಕಂಗಾಲು

ಕಾಫಿನಾಡಿನಲ್ಲಿ ಕಂಪನ ಶುರು

• ಕೆ.ಎಂ. ಸಂತೋಷ್‌ಕುಮಾರ್

ಒಳನೋಟ
ಕಷ್ಟದಲ್ಲಿ ವಾಣಿಜ್ಯ ಬೆಳೆಗಾರ
ಪ್ರತಿಕ್ರಿಯಿಸಿ: 9606038256
feedback@prajavani.co.in

ಬೆಂಗಳೂರು: ಜಗತ್ತಿನಾದ್ಯಂತ ಕೋಟ್ಯಂತರ ಜನರಿಗೆ ಒಂದು ಕಪ್ ಕಾಫಿ ಸೇವಿಸದೇ ದಿನಚರಿ ಆರಂಭವಾಗುವುದೇ ಇಲ್ಲ. ಹಬೆಯಾಡುವ ಬಿಸಿ ಬಿಸಿ ಕಾಫಿ ಹೀರುತ್ತಾ ಆಹ್ಹಾ.. ಎಂದು ಆಸ್ವಾದಿಸುವ ಆನಂದ ಕಾಫಿ ಬೆಳೆಗಾರರಿಗೆ ಮಾತ್ರ ಇಲ್ಲ!

ಬೆಲೆ ಕುಸಿತ, ಪ್ರತಿಕೂಲ ಹವಾಮಾನ, ಕಾಂಡ ಕೊರಕ, ಕೀಟ ಬಾಧೆಯಿಂದ ತೋಟಗಳಲ್ಲಿ ಕಾಫಿ ಗಿಡಗಳು ಮತ್ತು ಶೀಘ್ರ ಹರಡುವ ಸೊರಗು ರೋಗದಿಂದ ಕಾಳುಮೆಣಸು ಬಳ್ಳಿಗಳ ನಾಶ ಬೆಳೆಗಾರರನ್ನು ಕಂಗಾಲಾಗಿಸಿದೆ.


ದಶಕಗಳ ನಂತರ, ಕಳೆದ ಋತುವಿನಲ್ಲಿ ಕಾಫಿಯ ಬಂಪರ್ ಬೆಳೆ ಬೆಳೆಗಾರರ ಕನಸುಗಳು ಗರಿಗೆದರುವಂತೆ ಮಾಡಿತ್ತು. ಆದರೆ, ಬೆಲೆ ಏರಿಕೆ ಸ್ಥಿರವಾಗಿ ಉಳಿಯಲಿಲ್ಲ. ಈ ಬಾರಿ ಮತ್ತೆ ಬೆಲೆ ಕುಸಿತ, ಬೆಳೆಹಾನಿ ಬೆಳೆಗಾರರ ಕನಸುಗಳನ್ನು ಕಮರುವಂತೆ ಮಾಡಿದೆ. ಕಾಳುಮೆಣಸು ಬೆಳೆಗಾರರ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಯೇನೂ ಇಲ್ಲ. ಲಾಭದಾಯಕವೆನಿಸಿದ್ದ ಈ ವಾಣಿಜ್ಯ ಬೆಳೆಗಳನ್ನು ನೆಚ್ಚಿಕೊಂಡು, ಸಾಲದ ಸುಳಿಯಿಂದ ಹೊರಬರುವ ತವಕದಲ್ಲಿದ್ದವರ ಬದುಕು ಮತ್ತೆ ತಲ್ಲಣಗೊಂಡಿದೆ. 'ಕಾಫಿ ಬಟ್ಟಲಿನಲ್ಲಿ ಕಂಪನ' ದಿನೇ ದಿನೇ ಹೆಚ್ಚುತ್ತಿದೆ.

ಕಳೆದ ಋತುವಿನಲ್ಲಿ 50 ಕೆ.ಜಿ ಅರೆಬಿಕಾ ಕಾಫಿ ಪಾರ್ಚ್‌ಮೆಂಟ್‌ಗೆ (ಎಪಿ) ಸುಮಾರು ₹16,800ರಿಂದ ₹17,000, ಅರೆಬಿಕಾ ಚೆರಿ (ಎಸಿ) 50 ಕೆ.ಜಿ.ಗೆ ₹9 ಸಾವಿರ ಬೆಲೆ ಇತ್ತು. ಈ ಬಾರಿ ಎಪಿ ₹12,800ರಿಂದ ₹13 ಸಾವಿರ, ಎಸಿ ₹6,000 ಇದೆ. ರೊಬಸ್ಟಾ ಪಾರ್ಚ್‌ಮೆಂಟ್ (ಆರ್‌ಪಿ) 50 ಕೆ.ಜಿ.ಗೆ ₹11 ಸಾವಿರದಿಂದ ₹ 8,500ಕ್ಕೆ, ರೊಬಸ್ಟಾ ಚೆರಿ (ಆರ್‌ಸಿ) ₹5,500–₹6,000ದಿಂದ 4 ಸಾವಿರಕ್ಕೆ ಇಳಿದಿದೆ. ಕಳೆದ ಸಾಲಿನಲ್ಲಿ ಕಾಫಿ ಬೆಲೆ ₹20 ಸಾವಿರ ತಲುಪುವ ಊಹಾಪೋಹ ನಂಬಿ ಕೆಲ ಬೆಳೆಗಾರರು, ವ್ಯಾಪಾರಿಗಳಿಗೆ ಕಾಫಿ ಕೊಟ್ಟರೂ ಬಿಲ್ ಮಾಡಿಸದೇ, ಲಾಭದ ನಿರೀಕ್ಷೆಯಲ್ಲಿದ್ದವರು ಕೈಸುಟ್ಟುಕೊಳ್ಳುವಂತಾಗಿದೆ.

ಈಗ ಕಾಫಿ ಹಣ್ಣಿನ ಸುಗ್ಗಿಕಾಲ. ಬಹಳಷ್ಟು ತೋಟಗಳಲ್ಲಿ ಅರೆಬಿಕಾ ಕಾಫಿ ಹಣ್ಣಾಗಿದೆ. ಕೆಲವೆಡೆ ರೊಬಸ್ಟಾ ಕೂಡ ಅಕಾಲಿಕವಾಗಿ ಹಣ್ಣಾಗಿದೆ. ಮಳೆಯ ಹೊಡೆತಕ್ಕೆ ಬಹಳಷ್ಟು ತೋಟಗಳಲ್ಲಿ ಕಾಫಿ ಹಣ್ಣುಗಳು ಬಿರಿದು, ನೆಲಕಚ್ಚಿವೆ. ಹಣ್ಣು ಕೊಯ್ಲಿಗೆ ಸಾಕಷ್ಟು ಕಾರ್ಮಿಕರು ಲಭಿಸುತ್ತಿಲ್ಲ. ಇನ್ನು ಕೊಯ್ಲು ಮಾಡಿದ ಕಾಫಿ ಸಂಸ್ಕರಿಸಿ, ಒಣಗಿಸಲು ಮಳೆ, ಮೋಡ ಕವಿದ ವಾತಾವರಣ ಅಡ್ಡಿಪಡಿಸುತ್ತಿದೆ.


6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 6


ಸಕಲೇಶಪುರ ತಾಲ್ಲೂಕಿನ ತೋಟಕ್ಕೆ ನುಗ್ಗುವ ಕಾಡಾನೆ ಕಾಫಿ ಹಾಗೂ ಕಾಳು ಮೆಣಸಿಗೆ ಹಾನಿ ಮಾಡುತ್ತಿವೆ.


ಸತತ ಮಳೆಗೆ ಕಾಫಿ ಕಾಯಿಗಳು ಉದುರಿರುವುದು

ಪ್ರಮುಖ ಮೂರು ಜಿಲ್ಲೆಗಳಲ್ಲಿ ಕಾಫಿ ಮತ್ತು ಕಾಳುಮೆಣಸು ಬೆಳೆ ವಿಸ್ತೀರ್ಣ ಮತ್ತು ಬೆಳೆ ಹಾನಿ ವಿವರ (ಹೆಕ್ಟೇರ್‌ಗಳಲ್ಲಿ)



ಧಾರಣೆ, ರಫ್ತು ಕುಗ್ಗಿಸಿದ ಆರ್ಥಿಕ ಹಿಂಜರಿತ

ನೆರಳಿನಡಿ ಅದರಲ್ಲೂ ಪಶ್ಚಿಮ ಘಟ್ಟಗಳ ಜೀವವೈವಿಧ್ಯ ಪ್ರದೇಶದಲ್ಲಿ ಬೆಳೆಯುವಂತಹ ಭಾರತದ ಕಾಫಿಗೆ ಮತ್ತು ಕಾಳು ಮೆಣಸಿಗೆ ಯುರೋಪಿನ ರಾಷ್ಟ್ರಗಳಲ್ಲಿ ಬೇಡಿಕೆ ಹೆಚ್ಚಿದೆ. ಜರ್ಮನಿ, ರಷ್ಯಾ, ಉಕ್ರೇನ್, ಬೆಲ್ಜಿಯಂ, ಅಮೆರಿಕ, ಬ್ರಿಟನ್, ಟರ್ಕಿ, ಇಟಲಿ ಇನ್ನಿತರ ದೇಶಗಳು ಹೆಚ್ಚಿನ ಪ್ರಮಾಣದಲ್ಲಿ ಭಾರತದ ಕಾಫಿ, ಕಾಳು ಮೆಣಸನ್ನು ಆಮದು ಮಾಡಿಕೊಳ್ಳುತ್ತವೆ. ಕೋವಿಡ್ ಪಿಡುಗು, ಐರೋಪ್ಯ ರಾಷ್ಟ್ರಗಳಲ್ಲಿ ಹೆಚ್ಚುತ್ತಿರುವ ಆರ್ಥಿಕ ಹಿಂಜರಿತದ ಬಿಸಿ ಭಾರತದ ಕಾಫಿ, ಕಾಳುಮೆಣಸು ರಫ್ತಿಗೆ ತಟ್ಟಲಾರಂಭಿಸಿದೆ.

ಬ್ರೆಜಿಲ್, ವಿಯಟ್ನಾಂ, ಕೊಲಂಬಿಯಾದಲ್ಲಿ ಈ ಬಾರಿ ಫಸಲು ಉತ್ತಮವಾಗಿದ್ದು, ಉತ್ಪಾದನೆ ಹೆಚ್ಚುವ ನಿರೀಕ್ಷೆ ಇದೆ. ಬ್ರೆಜಿಲ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಾಫಿ ಉತ್ಪಾದನೆಯಾದರೆ ಭಾರತದಲ್ಲಿ ಕಾಫಿ ಬೆಲೆ ₹10 ಸಾವಿರಕ್ಕಿಂತಲೂ ಕೆಳಗಿಳಿಯುವ ಸಾಧ್ಯತೆ ಇದೆ ಎನ್ನುತ್ತಾರೆ ಕಾಫಿ ವ್ಯಾಪಾರಿ ಎ.ಎನ್. ದೇವರಾಜ್.

'ದೇಶದಲ್ಲಿ ಶೇ 30ರಷ್ಟು ಕಾಫಿ ಮಾತ್ರವೇ ಆಂತರಿಕ ಬಳಕೆಯಾಗುತ್ತಿದೆ. ಉಳಿದ ಶೇ 70ರಷ್ಟು ರಫ್ತು ಅವಲಂಬಿಸಿದೆ. ಕಾಫಿಯ ಆಂತರಿಕ ಬಳಕೆಯೂ ಹೆಚ್ಚಬೇಕಿದೆ' ಎನ್ನುವುದು ಬೆಳೆಗಾರರ ಸಂಘಟನೆಗಳ ಅನಿಸಿಕೆ.

₹ 2 ಕೋಟಿ ಮೊತ್ತದ ವಂಚನೆಗೆ ಕಾನೂನು ಕ್ರಮ: ಜಿಎಸ್‌ಟಿ ಮಂಡಳಿ

ನವದೆಹಲಿ (ಪಿಟಿಐ): ಜಿಎಸ್‌ಟಿ ವಂಚನೆಯ ವಿರುದ್ಧ ಕಾನೂನು ಕ್ರಮ ಜರುಗಿಸುವುದಕ್ಕೆ ಸಂಬಂಧಿಸಿದಂತೆ ವಂಚನೆಯ ಮೊತ್ತದ ಗರಿಷ್ಠ ಮಿತಿಯನ್ನು ₹ 1 ಕೋಟಿಯಿಂದ ₹ 2 ಕೋಟಿಗೆ ಹೆಚ್ಚಿಸಲು ಜಿಎಸ್‌ಟಿ ಮಂಡಳಿಯು ಶನಿವಾರ ಒಪ್ಪಿಗೆ ನೀಡಿದೆ. ಆದರೆ, ನಕಲಿ ಇನ್‌ವಾಯ್ಸ್‌ಗೆ ಸಂಬಂಧಿಸಿದ ಈಗಿರುವ ₹ 1 ಕೋಟಿ ಮಿತಿಯನ್ನು ಹಾಗೆಯೇ ಉಳಿಸಿಕೊಳ್ಳಲು ನಿರ್ಧರಿಸಲಾಗಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನೇತೃತ್ವದಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆ ನಡೆಯಿತು. ಭಾರತೀಯ ದಂಡ ಸಂಹಿತೆಯಲ್ಲಿ (ಐಪಿಸಿ) ಅಡಕವಾಗಿರುವ ಶಿಕ್ಷಾರ್ಹ ಅಪರಾಧಗಳಲ್ಲಿ ಕೆಲವೊಂದನ್ನು ಜಿಎಸ್‌ಟಿ ಕಾಯ್ದೆಯಿಂದ ತೆಗೆಯಲು ಮಂಡಳಿಯು ನಿರ್ಧರಿಸಿದೆ.

2017ರ ಸಿಜಿಎಸ್‌ಟಿ ಕಾಯ್ದೆಯ ಸೆಕ್ಷನ್ 132ರ ಅಡಿಯಲ್ಲಿ ಯಾವುದೇ ಅಧಿಕಾರಿಗೆ ಕರ್ತವ್ಯ ನಿರ್ವಹಿಸುವುದಕ್ಕೆ ಅಡ್ಡಿಪಡಿಸುವುದು, ಪುರಾವೆಗಳನ್ನು ಉದ್ದೇಶಪೂರ್ವಕವಾಗಿ ನಾಶಪಡಿಸುವುದು ಹಾಗೂ ಮಾಹಿತಿ ಒದಗಿಸುವುದರಲ್ಲಿ ವಿಫಲ ಆಗುವುದನ್ನು ಶಿಕ್ಷಾರ್ಹ ಅಪರಾಧಗಳ ಪಟ್ಟಿಯಿಂದ ಹೊರಗಿಡಲು ಮಂಡಳಿಯು ಶಿಫಾರಸು ಮಾಡಿದೆ ಎಂದು ರೆವೆನ್ಯು ಕಾರ್ಯದರ್ಶಿ ಸಂಜಯ್ ಮಲ್ಹೋತ್ರಾ ತಿಳಿಸಿದ್ದಾರೆ.

ಮಂಡಳಿಯ ಕೆಲ ಶಿಫಾರಸುಗಳು

- ದ್ವಿದಳಧಾನ್ಯಗಳ ಹೊಟ್ಟಿನ ಮೇಲೆ ವಿಧಿಸುತ್ತಿದ್ದ ಜಿಎಸ್‌ಟಿಯನ್ನು ಕೈಬಿಡಲಾಗಿದೆ. ಸದ್ಯ ಶೇ 5ರಷ್ಟು ಜಿಎಸ್‌ಟಿ ಇತ್ತು
- ಪೆಟ್ರೋಲ್ ಜೊತೆ ಮಿಶ್ರಣ ಮಾಡಲು ಸಂಸ್ಕರಣಾಗಾರಗಳಿಗೆ ಪೂರೈಸುವ ಈಥೈಲ್ ಆಲ್ಕೊಹಾಲ್ ಮೇಲಿನ ಜಿಎಸ್‌ಟಿ ಶೇ 18 ರಿಂದ ಶೇ 5ಕ್ಕೆ ಇಳಿಕೆ
- ದಂಡದ ಮೊತ್ತವು ಸದ್ಯ ವಂಚನೆ ಮಾಡಿರುವ ತೆರಿಗೆ ಮೊತ್ತದ ಶೇ 50ರಿಂದ ಶೇ 100ರವರೆಗೆ ಇದ್ದು, ಅದನ್ನು ಶೇ 25ರಿಂದ ಶೇ 100ರವರೆಗೆ ನಿಗದಿಪಡಿಸಲಾಗಿದೆ

ಭೂ ಪರಿವರ್ತನೆ ದಾಖಲೆ ನೀಡಲು ₹40 ಲಕ್ಷಕ್ಕೆ ಬೇಡಿಕೆ

₹20 ಲಕ್ಷ ಲಂಚ: ನಗರಸಭೆ ಅಧ್ಯಕ್ಷೆ ಪತಿ ಸೇರಿ ನಾಲ್ವರು ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ


ಅನಂತರಾಜು


ಗೋಪಿನಾಥ್


ಮಂಜುನಾಥ್


ಮೈಲಾರಿ

ಗೌರಿಬಿದನೂರು: ನಗರಸಭೆಯಿಂದ ಭೂ ಪರಿವರ್ತನೆಗೆ ಸಂಬಂಧಿಸಿದ ದಾಖಲೆ ಕೊಡಿಸಲು ಬೆಂಗಳೂರಿನ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರಿಂದ ₹20 ಲಕ್ಷ ಲಂಚ ಪಡೆಯುತ್ತಿದ್ದ ಗೌರಿಬಿದನೂರು ನಗರಸಭೆ ಅಧ್ಯಕ್ಷೆ ಎಸ್. ರೂಪಾ ಅವರ ಪತಿ ಕೆ.ಎಸ್. ಅನಂತರಾಜು ಹಾಗೂ ಸದಸ್ಯ ಆರ್.ಪಿ. ಗೋಪಿನಾಥ್ ಸೇರಿದಂತೆ ನಾಲ್ವರನ್ನು ಲೋಕಾಯುಕ್ತ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ನಗರಸಭೆ ಸದಸ್ಯೆ ರಾಜೇಶ್ವರಿ ಅವರ ಪತಿ ಮೈಲಾರಿ ಮತ್ತು ಮತ್ತೊಬ್ಬ ಸದಸ್ಯೆ ವರಲಕ್ಷ್ಮಿ ಅವರ ಪತಿ ಮಂಜುನಾಥ್ ಅವರನ್ನೂ ಬಂಧಿಸಲಾಗಿದೆ.

ಬೆಂಗಳೂರಿನ ರಾಜಾನುಕುಂಟೆಯ ರಿಯಲ್ ಎಸ್ಟೇಟ್ ಉದ್ಯಮಿ ಮಂಜುನಾಥ ರೆಡ್ಡಿ ಎಂಬುವರು ಗೌರಿಬಿದನೂರು ಸಮೀಪ ಎಂಟು ಎಕರೆ ಕೃಷಿ ಜಮೀನು ಖರೀದಿಸಿದ್ದರು.

4ನೇ ಪುಟ ನೋಡಿ



ಸದಾಶಿವ ಆಯೋಗದ ವರದಿ ವಿರೋಧಿಸಿ ಜ.10ಕ್ಕೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾ.ಎ.ಜೆ.ಸದಾಶಿವ ಆಯೋಗದ ವರದಿಯನ್ನು ಆಧಾರವಾಗಿಟ್ಟುಕೊಂಡು ಪರಿಶಿಷ್ಟ ಜಾತಿಗಳನ್ನು ಒಳಮೀಸಲಾತಿ ಹೆಸರಿನಲ್ಲಿ ವರ್ಗೀಕರಿಸಬಾರದು. ಸಾರ್ವಜನಿಕ ಚರ್ಚೆಗೆ ಒಳಪಡಿಸದೇ ಸಂಪುಟ ಉಪ ಸಮಿತಿಯು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬಾರದು ಎಂದು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ಒತ್ತಾಯಿಸಿದೆ.

ಗೊಂದಲ, ಅಸ್ಪಷ್ಟತೆ, ಅವೈಜ್ಞಾನಿಕ, ಅಸಂವಿಧಾನಿಕ ಅಂಶಗಳನ್ನು ಒಳಗೊಂಡ ವರದಿಯನ್ನು ಆಧಾರವಾಗಿ ಪರಿಗಣಿಸದೇ ಕಾನೂನು ಸಚಿವ ಮಾಧುಸ್ವಾಮಿ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ಸಂಪುಟ ಉಪ ಸಮಿತಿಯೇ ಸ್ವಯಂ ಆಗಿ ಪರಿಶಿಷ್ಟ ಜಾತಿಗಳ ವರ್ಗೀಕರಣ ಮಾಡಲು ಕಾರ್ಯಸಾಧು ಶಿಫಾರಸು ಮಾಡಬೇಕು ಎಂದು ಒಕ್ಕೂಟ ಒತ್ತಾಯಿಸಿದೆ.

ಈ ಬೇಡಿಕೆ ಕುರಿತು ಸರ್ಕಾರದ ಮೇಲೆ ಒತ್ತಡ ಹೇರಲು ಜ.10ಕ್ಕೆ ಬೆಂಗಳೂರಿನಲ್ಲಿ 10 ಲಕ್ಷ ಜನರನ್ನು ಸೇರಿಸಿ ಪ್ರತಿಭಟನೆ ನಡೆಸಲು ಭೋವಿ ಸಮಾಜದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಶನಿವಾರ ನಡೆದ ಸಭೆಯಲ್ಲಿ ಒಮ್ಮತದ ನಿರ್ಣಯ ತೆಗೆದುಕೊಳ್ಳಲಾಯಿತು.

4ನೇ ಪುಟ ನೋಡಿ

ಪ್ರಮುಖ ಮುಖ್ಯಾಂಶಗಳು
ರಾಜ್ಯಪಾಲ ಕೋಶಿಯಾರಿ ಪದಚ್ಯುತಿಗೆ ಒತ್ತಾಯ 7
ಇ–ಬಸ್ ತಯಾರಿಕೆ: ಸಾಲ ನೀಡಲು ಬ್ಯಾಂಕ್‌ಗಳ ಹಿಂದೇಟು 9
ವಾಲ್ಮೀಕಿ ನಿಗಮದ ಮೇಲೆ ಲೋಕಾಯುಕ್ತ ದಾಳಿ 4
ದೊಡ್ಡಮ್ಮನ ಕೊಂದು, ಮೃತದೇಹ ಕತ್ತರಿಸಿ ಎಸೆದ! 7



ಬಿಲಾವಲ್ ಭುಟ್ಟೊ ವಿರುದ್ಧ ಬೃಹತ್ ಪ್ರತಿಭಟನೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಪಾಕಿಸ್ತಾನದ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ವಿರುದ್ಧ ದೇಶದ ಬಿಜೆಪಿ ನೇತೃತ್ವದಲ್ಲಿ ಶನಿವಾರ ಪ್ರತಿಭಟನೆಗಳು ನಡೆದವು. ಭುಟ್ಟೊ ಅವರ ಪ್ರತಿಕೃತಿ ದಹಿಸಿ ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು. 7

ಸ್ವಿಗ್ಗಿ, ಜೊಮ್ಯಾಟೊ ಹೆಸರಿನಲ್ಲಿ ಡ್ರಗ್ಸ್ ಮಾರಾಟ

ಬೆಂಗಳೂರು: ಮೊಬೈಲ್ ಆ್ಯಪ್ ಆಧರಿತ ಆಹಾರ ಪೂರೈಕೆ ಕಂಪನಿಗಳಾದ ಸ್ವಿಗ್ಗಿ ಹಾಗೂ ಜೊಮ್ಯಾಟೊ ಹೆಸರಿನಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪಿ ಅಭಿಜಿತ್ ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಬಿಹಾರದ ಅಭಿಜಿತ್ ಸ್ವಿಗ್ಗಿ, ಜೊಮ್ಯಾಟೊ ಡೆಲಿವರಿ ಬಾಯ್ ಕೆಲಸ ಆರಂಭಿಸಿದ್ದ. ಕೆಲ ತಿಂಗಳ ಹಿಂದೆಯಷ್ಟೇ ಕೆಲಸ ಬಿಟ್ಟು, ಡ್ರಗ್ಸ್ ಮಾರಾಟಕ್ಕೆ ಇಳಿದಿದ್ದ' ಎಂದು ಪೊಲೀಸರು ಹೇಳಿದರು. 3B

ಚಿನಕುರಳಿ
ಪ್ರಕಾಶ್ ಶೆಟ್ಟಿ





‘ಪ್ರಜಾವಾಣಿ’, ‘ಡೆಕ್ಕನ್ ಹೆರಾಲ್ಡ್’ ಭೂಮಿಕಾ ಕ್ಲಬ್‌ನ ತೃತೀಯ ಆವೃತ್ತಿ ಕಾರ್ಯಕ್ರಮ

ತಂಪಾದ ಸಂಜೆ... ಇಂಪಾದ ಸಂಗೀತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಯನ ಹಾಗೂ ನೃತ್ಯಕ್ಕೆ ಮನಸೋತ ಮಹಿಳೆಯರು, ಪರ್ವತಾರೋಹಿ ಹಾಗೂ ಬೈಕರ್ಸ್ ಸಾಹಸ ಸನ್ನಿವೇಶದ ಬಣ್ಣನೆ, ಚಳಿಗಾಲದಲ್ಲಿ ಮಹಿಳೆಯರು ಅಂದವಾಗಿ ಕಾಣಿಸುವುದು ಹೇಗೆ ಎಂಬ ನಿರೂಪಕಿ ಪ್ರಶ್ನೆಗೆ ಸ್ಥಳದಲ್ಲಿ ಸರಿ ಉತ್ತರ ನೀಡಿದವರಿಗೆ ಗಿಫ್ಟ್...

– ಇವು ‘ಪ್ರಜಾವಾಣಿ’, ‘ಡೆಕ್ಕನ್ ಹೆರಾಲ್ಡ್’ ಶನಿವಾರ ನಗರದ ಇಂದಿರಾನಗರದ ಕ್ಲಬ್‌ನಲ್ಲಿ ಆಯೋಜಿಸಿದ್ದ ‘ಭೂಮಿಕಾ ಕ್ಲಬ್’ನ (ಬೆಂಗಳೂರಿನ ಮಹಿಳೆಯರಿಗೊಂದು ವಿಶೇಷ ವೇದಿಕೆ) ತೃತೀಯ ಆವೃತ್ತಿ ಕಾರ್ಯಕ್ರಮದ ವೈಶಿಷ್ಟ್ಯಗಳು.

ಕ್ಲಬ್‌ನಲ್ಲಿ ಸಂಗೀತದ ರಸದೌತಣವೇ ಸುರಿಯಿತು. ಇಳಿಸಂಜೆಯಲ್ಲಿ ಇಂಪಾದ ಸಂಗೀತಕ್ಕೆ ಸಭಿಕರು ತಲೆದೂಗಿದರು.

ಆರಂಭದಲ್ಲಿ ಗಾಯಕ ವಾಸು ದೀಕ್ಷಿತ್ ಅವರು ಕನ್ನಡ, ಹಿಂದಿ ಹಾಡುಗಳನ್ನು ಹಾಡಿ ಮೈನವಿರೇಳಿಸಿದರು.

ಮಮತಾ ಸಾಗರ್ ಅವರು ರಚಿಸಿದ ‘ನದಿಯೊಳಗೆ ಆಕಾಶ – ಮೋಡ – ತಣ್ಣಗಿನ ಸೂರ್ಯ, ನನ್ನ ಬೊಗಸೆಯಲ್ಲಿ ಒಂದು ನದಿ...’ ಈ ಹಾಡು ವೇದಿಕೆ ಮೇಲಿಂದ ಹೊಮ್ಮುತ್ತಿದ್ದಂತೆ ಪ್ರೇಕ್ಷಕರು ತಲೆಬಾಗಿದರು.

‘ಏಸು, ಅಲ್ಲಾ ಔರ್ ಕೃಷ್ಣ ಕೌನ್ ಭಗವಾನ್ ಅಪ್ನಾ...’ ಎಂದು ಹಾಡಿದರು.

ಅದಾದ ಮೇಲೆ ಪುರಂದರದಾಸರು ರಚಿತ ‘ರಾಗಿ ತಂದೀರಾ ಭಿಕ್ಷಕೆ ರಾಗಿ ತಂದೀರಾ’ ಎಂದು ವಾಸು ದೀಕ್ಷಿತ್ ಹಾಡಿ, ಪ್ರೇಕ್ಷಕರನ್ನೂ ಹಾಡಿಸಿದರು. ‘ಮಾಡಿದ್ದುಣ್ಣೋ ಮಾರಾಯ...’ ಎಂದು ರಂಜಿಸಿದರು.

ಇದಾದ ಮೇಲೆ ನಿರೂಪಕಿ ಕೇಳಿದ ಪ್ರಶ್ನೆಗೆ ಪ್ರೇಕ್ಷಕರು ಥಟ್ ಎಂದು ಉತ್ತರಿಸಿ ಬಹುಮಾನ ತಮ್ಮದಾಗಿಸಿಕೊಂಡರು. ಕೆಲವು ಪ್ರಶ್ನೆಗಳಿಗೆ ಉತ್ತರದ ಗೊತ್ತಿದ್ದರೂ ಆ ಕ್ಷಣದಲ್ಲಿ ಹೇಳಲು ಸಾಧ್ಯವಾಗದೆ ಅಯ್ಯೋ ಎಂದು ಕೆಲವರು ಮರುಗಿದರು.



ನಗರದಲ್ಲಿ ಶನಿವಾರ ಭೂಮಿಕಾ ಕ್ಲಬ್‌ನ ಮೂರನೇ ಆವೃತ್ತಿ ಕಾರ್ಯಕ್ರಮದಲ್ಲಿ ಸುಧೀಂದ್ರ ನೃತ್ಯಕಲಾನಿಕೇತನ ತಂಡ ನೃತ್ಯ ಪ್ರದರ್ಶನ ನೀಡಿತು.



ಸ್ಟೈಲಿಸ್ಟ್ ಮತ್ತು ಮಾಡೆಲ್ ಖುಷ್ಬು ಶೆಟ್ಟಿ ಹಾಗೂ ಪೌಷ್ಟಿಕ ಮತ್ತು ಫಿಟ್‌ನೆಸ್ ತಜ್ಞೆ ರುಚಿಕಾ ಚೌಧರಿ ಅವರು 'ಟ್ರಾವೆಲ್ ಮತ್ತು ವಿಂಟರ್' ಆವೃತ್ತಿಯಲ್ಲಿ ಆರ್‌ಜೆ ನಿಖಿತಾರೊಂದಿಗೆ ಸಂವಾದ ನಡೆಸಿದರು.

ವನ್ಯಜೀವಿಗಳ ಸ್ಥಳವನ್ನು ಮನುಷ್ಯರು ಆಕ್ರಮಿಸಿಕೊಂಡಿದ್ದರಿಂದ ಅವುಗಳು ನಾಡಿಗೆ ಬರುತ್ತಿವೆ. ಮಕ್ಕಳಲ್ಲಿ ಅವುಗಳ ಬಗ್ಗೆ ಅರಿವು ಮೂಡಿಸಬೇಕು.
ರಾಜಲಕ್ಷ್ಮಿ, ಬೈಕರ್

ಚಳಿಗಾಲದಲ್ಲಿ ಮಹಿಳೆಯರು ತಮ್ಮ ಅಂದ ರಕ್ಷಣೆಗೆ ಸಾಕಷ್ಟು ಕಾಳಜಿ ತೆಗೆದುಕೊಳ್ಳುತ್ತಾರೆ. ಚಳಿಗಾಲದಲ್ಲಿ ಫಿಟ್ ಹಾಗೂ ಸ್ಟೈಲಿಶ್ ಆಗಿ ಕಾಣಿಸುವುದು ಹೇಗೆ ಎಂಬ ಸಂದೇಹಗಳನ್ನು ಖುಷ್ಬೂ ಶೆಟ್ಟಿ ಹಾಗೂ ಫಿಟ್‌ನೆಸ್ ಪರಿಣಿತೆ ರುಚಿಕಾ ಚೌಧರಿ ಅವರಿಂದ ಪರಿಹರಿಸಿಕೊಂಡರು. ಯಾವ ಸೌಂದರ್ಯ ವರ್ಧಕ ಬಳಸಿದರೆ ತ್ವಚೆ ಅಂದವಾಗಿ ಕಾಣಿಸಲಿದೆ ಎಂಬುದನ್ನೂ ತಿಳಿಸಿದರು.

ಸುಧೀಂದ್ರ ನೃತ್ಯ ಕಲಾನಿಕೇತನ ಸಂಸ್ಥೆಯ ಮಕ್ಕಳು ಗುರುರಾಜ್ ವಿಶಿಷ್ಠ ಅವರ ನಿರ್ದೇಶನದಲ್ಲಿ ನೃತ್ಯ ಪ್ರದರ್ಶಿಸಿದರು. ಐಬಿಸಿಎಲ್ ಪ್ರಾಯೋಜಕತ್ವ ವಹಿಸಿತ್ತು.



ಗಾಯಕ ವಾಸು ದೀಕ್ಷಿತ್ ಅವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಸಾಹಸ ತೆರೆದಿಟ್ಟ ಮಹಿಳೆಯರು

‘ಪ್ರವಾಸ ಯೋಜನೆಯ ಸಲಹೆಗಳು’ ಎಂಬ ವಿಚಾರಗೋಷ್ಠಿಯಲ್ಲಿ ಮೂವರು ಸಾಧಕಿಯರು ತಮ್ಮ ಅನುಭವದ ಮಾತುಗಳಿಂದ ಸಭಿಕರನ್ನು ತಮ್ಮತ್ತ ಸೆಳೆದರು.

ಪರ್ವತಾರೋಹಿ ವಸುಮತಿ, ‘ಪರ್ವತಾರೋಹಣದಿಂದ ಸ್ವಚ್ಛ ಗಾಳಿ, ದೈಹಿಕ ಶಕ್ತಿ ದೊರೆಯಲಿದೆ. ನಿರಂತರ ಐದು ತಿಂಗಳು ಪರ್ವತಾರೋಹಣ ಮಾಡಿದ್ದೇನೆ. 150ನೇ ದಿನಗಳವರೆಗೂ ಮೊದಲ ದಿನದ ಉತ್ಸಾಹವೇ ಇತ್ತು. ಗೃಹಿಣಿಯರೂ ಕ್ಲಬ್‌ಗಳಿಗೆ ಸೇರಬೇಕು. ಸಾಹಸಕ್ಕೆ ಪತಿ ಹಾಗೂ ಮಕ್ಕಳಿಂದಲೂ ಪ್ರೋತ್ಸಾಹ ಸಿಗಬೇಕು. ನಾನೂ ತಂಡದ ಜೊತೆಗೆ ಪರ್ವತಾರೋಹಣ ಮಾಡುತ್ತೇನೆ. ಕಾಲಕ್ಕೆ ಅನುಗುಣವಾಗಿ ಪರ್ವತಾರೋಹಣದ ಯೋಜನೆ ರೂಪಿಸಿಕೊಳ್ಳಬೇಕು’ ಎಂದು ಸಲಹೆಯಿತ್ತರು.

ಬೈಕರ್ ರಾಜಲಕ್ಷ್ಮಿ ಮಾತನಾಡಿ, ‘ಸಣ್ಣ ವಯಸ್ಸಿನಿಂದಲೂ ಸಾಹಸ ಪ್ರವೃತ್ತಿ ನನ್ನಲ್ಲಿತ್ತು. ಆರು ವರ್ಷಗಳ ಹಿಂದೆ ಬೈಕ್ ಚಲಾಯಿಸುವುದನ್ನು ಕಲಿತೆ. ಸಾಕಷ್ಟು ದೂರ ಹಾಗೂ ಹೊರ ರಾಜ್ಯಕ್ಕೂ ಬೈಕ್‌ನಲ್ಲಿ ಪ್ರಯಾಣಿಸಿದ್ದೇನೆ. 30 ದಿನಗಳ ಕಾಲ ರಾಜ್ಯದ 30 ಜಿಲ್ಲೆಗಳನ್ನು ಬೈಕ್‌ನಲ್ಲಿಯೇ ಸುತ್ತಿದ್ದೇನೆ. ಮಹಿಳೆಯರಲ್ಲಿ ಸುರಕ್ಷತೆಯ ಕುರಿತು ಅರಿವು ಮೂಡಿಸಿದ್ದೇನೆ’ ಎಂದು ಹೇಳಿದರು.

‘ಬೈಕ್‌ನಲ್ಲಿ ಸುತ್ತಾಟ ನಡೆಸುವಾಗ ಸಾಕಷ್ಟು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕಿದೆ. ಹೆಲ್ಮೆಟ್, ಮೆಡಿಕಲ್ ಕಿಟ್, ರಕ್ಷಣಾ ಸಾಮಗ್ರಿ ಜೊತೆಗೆ ಇರಬೇಕು’ ಎಂದು ಸಲಹೆ ನೀಡಿದರು.

‘ರಜೆಯ ಹೊಂದಾಣಿಕೆ ಮಾಡಿಕೊಂಡು ಸುತ್ತಾಟಕ್ಕೆ ಸ್ಥಳ ನಿಗದಿ ಪಡಿಸುತ್ತೇನೆ. ಮಗ ಹಾಗೂ ಪತಿಯೂ ಬರುತ್ತಾರೆ. ವಿಡಿಯೊ, ಫೋಟೊ ಸೆರೆಹಿಡಿಯಲು ಪತಿ ನೆರವಾಗುತ್ತಾರೆ’ ಎಂದು ಟ್ರಾವೆಲ್ ವ್ಲಾಗರ್ ಗ್ಲಿರಿಯಾ ಖಮ್ರುಯಿ ಅವರು ಕಾರ್ಯಕ್ರಮ ನಿರ್ವಹಿಸಿದ ರಷೀದ್ ಕಪ್ಪನ್ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಥಲಸ್ಸೆಮಿಯಾ ಕೇಂದ್ರ ಉದ್ಘಾಟನೆ

ಜಾಗೃತಿ ಮೂಡಿಸಲು ಬಾಲಿವುಡ್ ನಟ ಜಾಕಿ ಶ್ರಾಫ್ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಥಲಸ್ಸೆಮಿಯಾ ಬಗ್ಗೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಲು ಸ್ಥಳೀಯ ಚಲನಚಿತ್ರೋದ್ಯಮದ ಕಲಾವಿದರೂ ಮುಂದಾಗಬೇಕು’ ಎಂದು ನಟ ಜಾಕಿ ಶ್ರಾಫ್ ಕರೆ ನೀಡಿದರು.

ಅಂಬೇಡ್ಕರ್ ಭವನದಲ್ಲಿ ಶನಿವಾರ ನಡೆದ ಸಂಕಲ್ಪ ಇಂಡಿಯಾ ಫೌಂಡೇಷನ್‌ನ ರಕ್ತ ಕೇಂದ್ರ, ಮಕ್ಕಳ ಆರೈಕೆ ಕೇಂದ್ರ, ಥಲಸ್ಸೆಮಿಯಾ ಡೇ ಕೇರ್ ಕೇಂದ್ರದ ನೂತನ ಕಟ್ಟಡವನ್ನು ವರ್ಚ್ಯುವಲ್ ಆಗಿ ಉದ್ಘಾಟಿಸಿ ಅವರು ಮಾತನಾಡಿದರು.

‘ಥಲಸ್ಸೆಮಿಯಾ ಬಗ್ಗೆ ದೇಶದ ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಜಾಗೃತಿಯ ಅವಶ್ಯಕತೆಯಿದೆ. ಇದು ಆನುವಂಶಿಕ ಕಾಯಿಲೆಯಾಗಿರುವುದರಿಂದ ಮದುವೆಗೂ ಮುನ್ನ ಇದರ ಪರೀಕ್ಷೆ ಮಾಡಿಸಿಕೊಳ್ಳುವುದು ಬಹಳ ಮುಖ್ಯ. ಈ ರೋಗದ ಬಗ್ಗೆ ಹೆಚ್ಚಿನ ಜನರಿಗೆ ತಿಳಿದಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು. ನೂತನ ಕಟ್ಟಡವು ವಸಂತನಗರದಲ್ಲಿದೆ.

‘ನಮ್ಮ ಮನೆಯ ಕೆಲಸಗಾರರು, ಡ್ರೈವರ್‌ಗಳೊಂದಿಗೆ ಈ ರೋಗದ ಬಗ್ಗೆ ಚರ್ಚಿಸಿ, ಅವರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು. ಸರ್ಕಾರವೂ ಸಹ ರೋಗದ ಚಿಕಿತ್ಸೆಗೆ ಅಗತ್ಯ ನೆರವು ನೀಡಬೇಕು. ಸಂಕಲ್ಪ ಇಂಡಿಯಾ ಫೌಂಡೇಷನ್ ಈ ನಿಟ್ಟಿನಲ್ಲಿ ಒಳ್ಳೆಯ ಕೆಲಸ ಮಾಡುತ್ತಿದೆ’ ಎಂದು ಶ್ಲಾಘಿಸಿದರು.

‘2003ರಲ್ಲಿ ಪ್ರಾರಂಭವಾದ ಸಂಕಲ್ಪ ಇಂಡಿಯಾ ಫೌಂಡೇಷನ್ ಸ್ವಯಂ ಪ್ರೇರಿತ ರಕ್ತದಾನ, ಮಕ್ಕಳಲ್ಲಿ ಕಂಡು ಬರುವ ಈ ರೋಗವನ್ನು ತಡೆಗಟ್ಟುವಲ್ಲಿ ಮತ್ತು ಅವರಿಗೆ ಚಿಕಿತ್ಸೆ ನೀಡುತ್ತಾ ಬಂದಿದೆ. ಈಗ ನಿತ್ಯ 25ಕ್ಕೂ ಹೆಚ್ಚು ಮಂದಿಗೆ ರಕ್ತವನ್ನು ಪೂರೈಕೆ ಮಾಡುತ್ತಿದ್ದು, ವರ್ಷಕ್ಕೆ 150 ರಕ್ತದಾನ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ದೇಶದಾದ್ಯಂತ 15 ಥಲಸ್ಸೆಮಿಯಾ ಡೇ ಕೇರ್ ಕೇಂದ್ರಗಳಿದ್ದು, ಇದರಲ್ಲಿ 1,764 ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ’ ಎಂದು ಫೌಂಡೇಷನ್ ಅಧ್ಯಕ್ಷ ಲಲಿತ್ ಪಾರ್ಮರ್ ಮಾಹಿತಿ ನೀಡಿದರು.

ಬೆಂಗಳೂರು ಮತ್ತು ಅಹಮದಾಬಾದ್‌ನಲ್ಲಿರುವ ಬಿಎಂಟಿ ಕೇಂದ್ರಗಳ ಮೂಲಕ 350ಕ್ಕೂ ಹೆಚ್ಚು ಮಕ್ಕಳನ್ನು ಅಸ್ಥಿ ಮಜ್ಜೆ ಕಸಿ ಮಾಡಿ ರೋಗದಿಂದ ಮುಕ್ತಗೊಳಿಸಲಾಗಿದೆ ಎಂದು ಅವರು ತಿಳಿಸಿದರು.


ಥಲಸ್ಸೆಮಿಯಾದಿಂದ ಗುಣಮುಖರಾದ ಮಕ್ಕಳೊಂದಿಗೆ ನಟ ಜಾಕಿ ಶ್ರಾಫ್ —ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- **ದೇಶದಾದ್ಯಂತ 15 ಥಲಸ್ಸೆಮಿಯಾ ಡೇ ಕೇರ್ ಕೇಂದ್ರಗಳಿವೆ**
- **ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಜಾಗೃತಿ ಅಗತ್ಯ**

ಕಾಂಗ್ರೆಸ್: ಬೆಳಗಾವಿಯಲ್ಲಿ ಚುನಾವಣೆ ಸಮಿತಿ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಚುನಾವಣಾ ಸಮಿತಿಯ ಮೊದಲ ಸಭೆ ಭಾನುವಾರ (ಡಿ.18) ಬೆಳಗಾವಿಯ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ನಡೆಯಲಿದೆ.

ವಿಧಾನಸಭೆ ಚುನಾವಣೆಗೆ ಅಗತ್ಯ ತಯಾರಿ ನಡೆಸಲು 37 ಸದಸ್ಯರು, ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಹಾಗೂ ಯುವ ಕಾಂಗ್ರೆಸ್‌ನ ರಾಜ್ಯ ಘಟಕ, ಎನ್‌ಎಸ್‌ಯುಐ, ಮಹಿಳಾ ಕಾಂಗ್ರೆಸ್ ಹಾಗೂ ಸೇವಾದಳದ ಅಧ್ಯಕ್ಷರು ಇರುವ ಸಮಿತಿಯನ್ನು ಇದೇ 14ರಂದು ರಚಿಸಲಾಗಿತ್ತು.

ಬೆಳಗಾವಿಯಲ್ಲಿ ನಡೆಯಲಿರುವ ಸಭೆಯಲ್ಲಿ ಚುನಾವಣಾ ಕಾರ್ಯತಂತ್ರಗಳ ಬಗ್ಗೆ ಚರ್ಚೆ ನಡೆಸಲಾಗುತ್ತದೆ. ಸಭೆಯಲ್ಲಿ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಸಮಿತಿಯ ಸದಸ್ಯರೂ ಆಗಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಉಭಯ ಸದನಗಳಲ್ಲಿ ಶಾಸಕಾಂಗ ಪಕ್ಷದ ನಾಯಕರಾಗಿರುವ ಸಿದ್ದರಾಮಯ್ಯ, ಬಿ.ಕೆ. ಹರಿಪ್ರಸಾದ್ ಭಾಗವಹಿಸಲಿದ್ದಾರೆ.

ಡಿ.19ರಂದು ಸುರ್ಜೇವಾಲ ಸಮ್ಮುಖದಲ್ಲಿ ಮತ್ತೊಂದು ಸಭೆ ನಡೆಯಲಿದೆ. ಜನವರಿ ಮೊದಲ ವಾರ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಬಸ್ ಯಾತ್ರೆ ಶುರುವಾಗಲಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಬೆಂಗಳೂರು ಜಿಲ್ಲಾಧಿಕಾರಿಯಾಗಿ ಕೆ.ಎ.ದಯಾನಂದ


ಕೆ.ಎ.ದಯಾನಂದ

ಬೆಂಗಳೂರು: ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಕರ್ತವ್ಯಲೋಪ ಎಸಗಿದ ಆರೋಪದ ಮೇಲೆ ನಗರ ಜಿಲ್ಲಾಧಿಕಾರಿ ಕೆ. ಶ್ರೀನಿವಾಸ್ ಅಮಾನತುಗೊಂಡ ಬಳಿಕ ತೆರವಾಗಿದ್ದ ಸ್ಥಾನಕ್ಕೆ ಕೆ.ಎ.ದಯಾನಂದ ಅವರನ್ನು ವರ್ಗಾವಣೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಚಿಲುಮೆ ಸಂಸ್ಥೆಯು ಮತದಾರರ ಪಟ್ಟಿ ಪರಿಷ್ಕರಣೆ ಹೆಸರಿನಲ್ಲಿ ಮತದಾರರ ಮಾಹಿತಿ ಕಳವು ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಕೇಂದ್ರ ಚುನಾವಣಾ ಆಯೋಗ ಹಲವು ಕ್ರಮಗಳನ್ನು ಕೈಗೊಂಡಿತ್ತು. ಮಹದೇವಪುರ ವಿಧಾನಸಭಾ ಕ್ಷೇತ್ರದ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಯಾಗಿದ್ದ ಕೆ.ಶ್ರೀನಿವಾಸ್ ಹಾಗೂ ಶಿವಾಜಿನಗರ ಮತ್ತು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಗಳ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಯಾಗಿದ್ದ ಎಸ್. ರಂಗಪ್ಪ ಅವರನ್ನು ಸೇವೆಯಿಂದ ಅಮಾನತು ಮಾಡಿ, ಇಲಾಖಾ ವಿಚಾರಣೆ ನಡೆಸುವಂತೆ ಆಯೋಗವು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿತ್ತು. ಅದರಂತೆ ಸರ್ಕಾರ ಈ ಇಬ್ಬರನ್ನು ಅಮಾನತು ಮಾಡಿತ್ತು.

ಹೆಚ್ಚುವರಿ ಜಿಲ್ಲಾಧಿಕಾರಿಯಾಗಿದ್ದ ಸಂಗಪ್ಪ ಅವರು ಹೆಚ್ಚುವರಿಯಾಗಿ ಜಿಲ್ಲಾಧಿಕಾರಿ ಹುದ್ದೆ ನಿರ್ವಹಿಸುತ್ತಿದ್ದರು. ಹಿಂದುಳಿದ ವರ್ಗಗಳ ಇಲಾಖೆಯ ಆಯುಕ್ತರಾಗಿದ್ದ ಕೆ.ಎ.ದಯಾನಂದ ಅವರನ್ನು ಈ ಸ್ಥಾನಕ್ಕೆ ಸರ್ಕಾರ ವರ್ಗಾವಣೆ ಮಾಡಿದೆ. 2018ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ನಗರ ಜಿಲ್ಲಾಧಿಕಾರಿಯಾಗಿ ದಯಾನಂದ ಅವರು ಕಾರ್ಯನಿರ್ವಹಿಸಿದ್ದರು. ಬಳಿಕ ಶಿವಮೊಗ್ಗ ಜಿಲ್ಲಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು.


ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತರಬನಹಳ್ಳಿಯ ಜೊಯಿಸನ ಅಗ್ರಹಾರದಲ್ಲಿ ಶ್ರೀರಂಗ ಯಕ್ಷಗಾನ ಮತ್ತು ಜಾನಪದ ಕಲಾಸಂಘದ ವತಿಯಿಂದ ‘ಮೂಡಲಪಾಯ ಸುಂದರಕಾಂಡ ಯಕ್ಷಗಾನ’ ನಾಟಕವನ್ನು ಶನಿವಾರ ಪ್ರದರ್ಶಿಸಲಾಯಿತು.







ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಭರವಸೆ • ರಾಷ್ಟ್ರೀಯ ಆರೋಗ್ಯ ಶೃಂಗಸಭೆಗೆ ಚಾಲನೆ

‘ಆಸ್ಪತ್ರೆಗಳ ಅನುಮತಿಗೆ ಏಕಗವಾಕ್ಷಿ ವ್ಯವಸ್ಥೆ’

ಪ್ರಜಾವಾಣಿ ವಾರ್ತೆ



ಆರೋಗ್ಯ ಶೃಂಗದಲ್ಲಿ ಭಾಗವಹಿಸಿದ ವೈದ್ಯರು ವಿವಿಧ ವೈದ್ಯಕೀಯ ಸಾಧನಗಳನ್ನು ಪರಿಶೀಲಿಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಖಾಸಗಿ ಆಸ್ಪತ್ರೆಗಳ ಅಭಿವೃದ್ಧಿಗಾಗಿ ಸರ್ಕಾರದಿಂದ ಬೇಕಿರುವ ವಿವಿಧ ಅನುಮತಿಗಳಿಗೆ ಏಕಗವಾಕ್ಷಿ ವ್ಯವಸ್ಥೆ ತರಲು ಪ್ರಯತ್ನಿಸಲಾಗುವುದು’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಭರವಸೆ ನೀಡಿದರು.

ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ನಗರದಲ್ಲಿ ಹಮ್ಮಿಕೊಂಡ ಎರಡು ದಿನಗಳ ರಾಷ್ಟ್ರೀಯ ಆರೋಗ್ಯ ಶೃಂಗಕ್ಕೆ ಶನಿವಾರ ಚಾಲನೆ ನೀಡಿ, ಮಾತನಾಡಿದರು.

‘ಖಾಸಗಿಯಾಗಿ ವೈದ್ಯಕೀಯ ಸೇವೆ ಪ್ರಾರಂಭಿಸಲು ಅನುಕೂಲ ಆಗುವಂತೆ ಏಕಗವಾಕ್ಷಿ ವ್ಯವಸ್ಥೆ ಜಾರಿಯ ಬಗ್ಗೆ ಮುಖ್ಯಮಂತ್ರಿಯೊಂದಿಗೆ ಸಮಾಲೋಚನೆ ನಡೆಸಲಾಗುವುದು. ಜನರಿಗೆ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸಲು ಸರ್ಕಾರ ಹಾಗೂ ಖಾಸಗಿ ಆಸ್ಪತ್ರೆಗಳ ನಡುವೆ ಉತ್ತಮ ಸಂಬಂಧ ಇರಬೇಕು. ಮೊದಲು ವೈದ್ಯ ಕೇಂದ್ರಿತ ವ್ಯವಸ್ಥೆಯಿತ್ತು. ಈಗ ರೋಗಿ ಕೇಂದ್ರಿತ ವ್ಯವಸ್ಥೆ ಇದೆ. ರೋಗಿಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ 438 ‘ನಮ್ಮ ಕ್ಲಿನಿಕ್’ಗಳನ್ನು ಆರಂಭಿಸಲಾಗುತ್ತಿದೆ’ ಎಂದು ಹೇಳಿದರು.

‘ಕೆಲ ಖಾಸಗಿ ಆಸ್ಪತ್ರೆಗಳಲ್ಲಿ ಬಿಲ್ಲಿಂಗ್ ಹಾಗೂ ದತ್ತಾಂಶಗಳ ಸಂಗ್ರಹಣೆಯಲ್ಲಿ ಪಾರದರ್ಶಕತೆ ಮರೆಯಾಗುತ್ತಿದೆ. ಸರ್ಕಾರದ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಕಾರ್ಯಕ್ರಮಗಳಿಗೆ ಸಮರ್ಪಕ ದತ್ತಾಂಶಗಳು ಬೇಕಾಗುತ್ತವೆ. ಆದ್ದರಿಂದ ಖಾಸಗಿ ಆಸ್ಪತ್ರೆಗಳು ಚಿಕಿತ್ಸೆಯ ಮಾಹಿತಿ, ದತ್ತಾಂಶಗಳನ್ನು ಸರ್ಕಾರದೊಂದಿಗೆ ಹಂಚಿಕೊಳ್ಳಬೇಕು. ಖಾಸಗಿ ಆಸ್ಪತ್ರೆಗಳಲ್ಲಿ ಪಾರದರ್ಶಕತೆ ತರುವ ಬಗ್ಗೆ ಫನಾ ಗಮನಹರಿಸಬೇಕು’ ಎಂದು ಹೇಳಿದರು.

ಸಹಕಾರ ಅಗತ್ಯ: ಫನಾ ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ., ‘ದೊಡ್ಡ ಆಸ್ಪತ್ರೆಗಳು ಸಣ್ಣ ಆಸ್ಪತ್ರೆಗಳಿಗೆ ಅಗತ್ಯ ಸಹಕಾರ ನೀಡಬೇಕು. ಈ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿಯೂ ಗುಣಮಟ್ಟದ ವೈದ್ಯಕೀಯ ಸೇವೆಗಳು ದೊರೆಯಲು ನೆರವಾಗಬೇಕು. ಕೋವಿಡ್ ನಿರ್ವಹಣೆಯಲ್ಲಿ ಇಲ್ಲಿನ ಆಸ್ಪತ್ರೆಗಳು ದೇಶಕ್ಕೆ ಮಾದರಿಯಾಗಿವೆ. ಮೂಲಸೌಕರ್ಯ ವೃದ್ಧಿ, ತಂತ್ರಜ್ಞಾನ ಅಳವಡಿಕೆಗೆ ಆದ್ಯತೆ ನೀಡಲಾಯಿತು. ಇದರಿಂದಾಗಿ ಕೋವಿಡ್ ಮರಣ ತಡೆಯಲು ಸಾಧ್ಯವಾಯಿತು’ ಎಂದು ಹೇಳಿದರು.

ಫನಾ ಕಾರ್ಯದರ್ಶಿ ಡಾ. ರಾಜಶೇಖರ್, ‘ಸರ್ಕಾರವು ನೀತಿ ನಿಯಮಗಳನ್ನು ರೂಪಿಸಬೇಕಾದರೆ ಖಾಸಗಿ ಆಸ್ಪತ್ರೆಗಳೊಂದಿಗೆ ಚರ್ಚಿಸಿ, ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಆಗ ಆರೋಗ್ಯ ಸೇವೆಗಳಲ್ಲಿ ಇನ್ನಷ್ಟು ಸುಧಾರಣೆ ಸಾಧ್ಯವಾಗುತ್ತದೆ. ಖಾಸಗಿ ವೈದ್ಯಕೀಯ ಸಂಸ್ಥೆಗಳಿಂದ ಗುಣಮಟ್ಟದ ಆರೋಗ್ಯ ಸೇವೆ ದೊರೆಯುತ್ತಿದೆ’ ಎಂದರು.

‘ತಂತ್ರಜ್ಞಾನದಿಂದ ಆರೋಗ್ಯ ವ್ಯವಸ್ಥೆ ಬದಲಾಗಲಿ’

ಬೆಂಗಳೂರು: ‘ಆಧುನಿಕ ತಂತ್ರಜ್ಞಾನಗಳ ನೆರವಿನಿಂದ ಆರೋಗ್ಯ ವ್ಯವಸ್ಥೆಯನ್ನು ಆಸ್ಪತ್ರೆ ಆರೈಕೆಯಿಂದ ಮನೆ ಆರೈಕೆಗೆ ಬದಲಿಸಬೇಕು’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಕೆಆರ್‌ಎಸ್‌ಎಸ್‌ಡಿಐ ನಗರದಲ್ಲಿ ಶನಿವಾರ ಹಮ್ಮಿಕೊಂಡ ಮಧುಮೇಹ ತಜ್ಞರ ರಾಜ್ಯಮಟ್ಟದ ಸಮ್ಮೇಳನ ಉದ್ಘಾಟಿಸಿ, ಮಾತನಾಡಿದರು.

‘ಆರೋಗ್ಯ ವ್ಯವಸ್ಥೆಯಲ್ಲಿ ಇನ್ನಷ್ಟು ಸುಧಾರಣೆ ತರಲು ಜಾಗೃತಿ ಹಾಗೂ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ವೈದ್ಯಕೀಯ ಕ್ಷೇತ್ರದಲ್ಲಿ ಕರ್ನಾಟಕ ಪ್ರಗತಿ ಸಾಧಿಸಿದರೂ ತಾಯಿ ಮರಣ ಹಾಗೂ ಶಿಶು ಮರಣ ನಿಯಂತ್ರಣದಲ್ಲಿ ಹಿಂದುಳಿದಿದೆ. ಇದಕ್ಕಾಗಿ ಅರಿವು ಕಾರ್ಯಕ್ರಮ ಅಗತ್ಯ’ ಎಂದು ಹೇಳಿದರು.

‘ಭಾರತ ಈಗ ಮಧುಮೇಹಿಗಳ ಕೇಂದ್ರವಾಗಿರುವುದು ವಿಪರ್ಯಾಸ. 10 ವರ್ಷಕ್ಕೂ ಅಧಿಕ ಕಾಲ ಡಯಾಲಿಸಿಸ್ ಮಾಡಿಕೊಂಡೇ ಬದುಕಿದರೆ ಅದರಿಂದ ಏನು ಲಾಭ ಎಂದು ಚಿಂತಿಸಬೇಕಾಗುತ್ತದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರತಿದಿನ 30 ಸಾವಿರ ಇದ್ದ ಡಯಾಲಿಸಿಸ್ ಪ್ರಕ್ರಿಯೆಗಳನ್ನು 60 ಸಾವಿರಕ್ಕೆ ಹೆಚ್ಚಿಸಲಾಗಿದೆ’ ಎಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷ ಡಾ. ಸುಂದರ್ ಆರ್. ಹಾಗೂ ಪದಾಧಿಕಾರಿಗಳು ಇದ್ದರು.

‘ಚಿಕಿತ್ಸಾ ದರ ಮರುಪರಿಶೀಲಿಸಿ’

‘ಆಯುಷ್ಮಾನ್ ಭಾರತ, ಯಶಸ್ವಿನಿ ಯೋಜನೆಗಳ ದರವನ್ನು ಮರುಪರಿಶೀಲಿಸಬೇಕು. ಯೋಜನೆಗಳಿಗೆ ಸಂಬಂಧಿಸಿದ ಸಮಿತಿಯಲ್ಲಿ ಫನಾ ಸದಸ್ಯರನ್ನು ಸೇರಿಸಿಕೊಳ್ಳಬೇಕು. ಕೋವಿಡ್ ಸಂದರ್ಭದಲ್ಲಿನ ಚಿಕಿತ್ಸೆ ಕುರಿತು ತಡೆಹಿಡಿದಿರುವ ಖಾಸಗಿ ಆಸ್ಪತ್ರೆಗಳ ಬಿಲ್‌ಗಳನ್ನು ಮರುಪರಿಶೀಲಿಸಿ, ಹಣ ಬಿಡುಗಡೆ ಮಾಡಬೇಕು. ಕೆಪಿಎಂಇಎ ಕಾಯ್ದೆ ಅಡಿಯಲ್ಲಿ ಆಸ್ಪತ್ರೆಗಳ ಅನುಮತಿಗೆ ಸಂಬಂಧಿಸಿದ ನವೀಕರಣವನ್ನು ಆನ್‌ಲೈನ್ ಮೂಲಕ ನಡೆಸಬೇಕು’ ಎಂದು ಫನಾ ಪದಾಧಿಕಾರಿಗಳು ಸರ್ಕಾರಕ್ಕೆ ಮನವಿ ಸಲ್ಲಿಸಿದರು.

‘ಅಗ್ನಿ ನಿರಾಕ್ಷೇಪಣಾ ಪತ್ರವನ್ನು ಒಂದು ವರ್ಷದಿಂದ 5 ವರ್ಷಕ್ಕೆ ಒಮ್ಮೆ ಪಡೆಯುವಂತೆ ನಿಯಮ ರೂಪಿಸಬೇಕು. ಅಗ್ನಿ ಸುರಕ್ಷತಾ ನಿಯಮದಲ್ಲಿ ಕಟ್ಟಡದ ಸುತ್ತಲು 21 ಮೀಟರ್ ಸ್ಥಳಾವಕಾಶ ಬಿಡಬೇಕು ಎಂಬ ಅಂಶದಿಂದ ಹಳೆಯ ಕಟ್ಟಡಗಳಿಗೆ ವಿನಾಯಿತಿ ನೀಡಬೇಕು’ ಎಂದು ಆಗ್ರಹಿಸಿದರು.

ಸುದ್ದಿ 2 ನಿಮಿಷ

ದೇವಸ್ಥಾನಗಳಲ್ಲಿ ಮೊಬೈಲ್ ನಿಷೇಧಕ್ಕೆ ಮನವಿ



ಬೆಂಗಳೂರು: ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳಲ್ಲಿ ಮೊಬೈಲ್ ಬಳಕೆ ನಿಷೇಧಿಸುವಂತೆ ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ–ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟವು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಅವರಿಗೆ ಮನವಿ ಸಲ್ಲಿಸಿದೆ.

ಒಕ್ಕೂಟದ ಮುಖ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್ ಅವರು ಸಚಿವರನ್ನು ಶನಿವಾರ ಭೇಟಿ ಮಾಡಿ ಮನವಿ ಸಲ್ಲಿಸಿದರು. ದೇವಸ್ಥಾನಗಳ ಆವರಣದಲ್ಲಿ ಮೊಬೈಲ್ ಬಳಕೆಗೆ ಅವಕಾಶ ಇರುವುದರಿಂದ ಪೂಜಾ ಕೆಲಸಗಳು ಹಾಗೂ ಭಕ್ತಾದಿಗಳಿಗೆ ತೊಂದರೆ ಆಗುತ್ತಿದೆ. ಆದ್ದರಿಂದ ದೇವಸ್ಥಾನಗಳ ಆವರಣಗಳಲ್ಲಿ ಮೊಬೈಲ್ ಬಳಕೆ ನಿಷೇಧಿಸಿ ಆದೇಶ ಹೊರಡಿಸಬೇಕು ಎಂದು ಒತ್ತಾಯ ಮಾಡಿದ್ದಾರೆ.

ದತ್ತಾಂಶ ಸಂಗ್ರಹ ನಿಷೇಧ

ಬೆಂಗಳೂರು: ಖಾಸಗಿ ಸಂಸ್ಥೆಗಳು ಮನೆ ಮನೆ ಸಮೀಕ್ಷೆ ನಡೆಸಿ ದತ್ತಾಂಶ ಸಂಗ್ರಹಣೆ ಮಾಡುವುದನ್ನು ಬಿಬಿಎಂಪಿ ನಿಷೇಧಿಸಿದೆ.

ದತ್ತಾಂಶ ಮತ್ತು ಗುರುತಿನ ಚೀಟಿಗಳ ದುರ್ಬಳಕೆ ಆಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಚುನಾವಣಾಧಿಕಾರಿ ಅಥವಾ ಮತದಾರರ ನೋಂದಣಾಧಿಕಾರಿಗಳು ಖಾಸಗಿ ಸಂಸ್ಥೆಗಳು ದತ್ತಾಂಶ ಸಂಗ್ರಹಿಸುವ ಪ್ರಯತ್ನಕ್ಕೆ ದೃಢೀಕರಣ ಅಥವಾ ನಿರಾಕ್ಷೇಪಣಾ ಪತ್ರಗಳನ್ನು ನೀಡುವುದನ್ನೂ ನಿಷೇಧಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಿದೆ.

‘ನಗರ ವ್ಯಾಪ್ತಿಯ 28 ವಿಧಾನಸಭಾ ಕ್ಷೇತ್ರಗಳಲ್ಲಿ ಮನೆ ಮನೆ ಸಮೀಕ್ಷೆ ಕಾರ್ಯ ಚಾಲ್ತಿಯಲ್ಲಿದ್ದು, ಶೇ 86.55ರಷ್ಟು ಪ್ರಗತಿ ಸಾಧಿಸಲಾಗಿದೆ’ ಎಂದು ವಿವರಿಸಿದೆ.

ಬೀದರ್‌ನಲ್ಲಿ ಲಿಂಗಾಯತ ಪ್ರಥಮ ಮಹಾ ಅಧಿವೇಶನ

ಪ್ರಜಾವಾಣಿ ವಾರ್ತೆ



ಜಾಮದಾರ

ಮೈಸೂರು: ಲಿಂಗಾಯತ ಸ್ವತಂತ್ರ ಧರ್ಮದ ಸಾಂವಿಧಾನಿಕ ಮಾನ್ಯತೆಗೆ ಆಗ್ರಹಿಸಿ ಬೀದರ್‌ನ ಬಸವ-ಕಲ್ಯಾಣದಲ್ಲಿ ಜನವರಿ ಕೊನೆಯ ವಾರದಲ್ಲಿ ‘ರಾಷ್ಟ್ರೀಯ ಲಿಂಗಾಯತ ಪ್ರಥಮ ಮಹಾಅಧಿವೇಶನ’ ನಡೆಸಲು ಜಾಗತಿಕ ಲಿಂಗಾಯತ ಮಹಾಸಭಾ ನಿರ್ಧರಿಸಿದೆ.

ವಿವಿಧ ರಾಜ್ಯಗಳಿಂದ 2 ಲಕ್ಷಕ್ಕೂ ಹೆಚ್ಚು ಮಂದಿಯನ್ನು ಸೇರಿಸಲು ಮತ್ತು ಜ.12ರಿಂದ 14ರವರೆಗೆ 36ನೇ ಶರಣ ಮೇಳವನ್ನು ಕೂಡಲಸಂಗಮದಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದೆ.

‘ಇಲ್ಲಿನ ಹೊಸಮಠದಲ್ಲಿ ಶನಿವಾರ ನಡೆದ ಮಹಾಸಭಾದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು’ ಎಂದು ಮಹಾಸಭಾದ ಉಪಾಧ್ಯಕ್ಷ ಎನ್. ಕೆಂಪಗೌಡರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಮಹಾಸಭಾದ ಪದಾಧಿಕಾರಿಗಳು ಹಾಗೂ ಜಿಲ್ಲಾ ಘಟಕದ ಅಧ್ಯಕ್ಷರು ಸೇರಿದಂತೆ 100 ಮಂದಿ ಪಾಲ್ಗೊಂಡಿದ್ದರು. ಲಿಂಗಾಯತರು ಹಾಗೂ ಲಿಂಗಾಯತ ಮಠಗಳು ಹೇಗಿರಬೇಕು ಎಂಬ ವಿಮರ್ಶೆಯೂ ನಡೆಯಿತು. ಬಸವ ತತ್ವಕ್ಕೆ ಬದ್ಧವಾಗಿರುವ ಮಠಾಧೀಶರು ಹಾಗೂ ರಾಜಕಾರಣಿಗಳನ್ನು ಬೆಂಬಲಿಸಲು ನಿರ್ಣಯಿಸಲಾಯಿತು. ಮಹಾಅಧಿವೇಶನವನ್ನು ಪಕ್ಷಾತೀತವಾಗಿ ನಡೆಸಲಾಗುವುದು’ ಎಂದರು.

ಶಾಮನೂರುಗೆ ಜಾಮದಾರ ಸವಾಲು: ‘ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ನನ್ನ ವಿರುದ್ಧ ಏಕವಚನದಲ್ಲಿ ಮಾತನಾಡಿರುವುದು ಅವರ ಸಂಸ್ಕೃತಿಯನ್ನು ತೋರಿಸುತ್ತದೆ. ನಾನು ವೃತ್ತಿಜೀವನದಲ್ಲಿ ಭ್ರಷ್ಟಾಚಾರ ಮಾಡಿದ್ದನ್ನು ತೋರಿಸಿದರೆ ಅವರಿಗೆ ಗುಲಾಮನಾಗಿರುತ್ತೇನೆ’ ಎಂದು ಎಸ್.ಎಂ.ಜಾಮದಾರ ಸವಾಲೆಸೆದರು.

‘ಅವರ ಭ್ರಷ್ಟಾಚಾರವನ್ನು ಒಂದೊಂದಾಗಿ ಬಯಲಿಗೆ ಎಳೆಯುತ್ತೇನೆ. ನುಂಗಿ ನೀರು ಕುಡಿದಿರುವುದನ್ನೆಲ್ಲಾ ತಿಳಿಸುತ್ತೇನೆ. ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ ರಾಜಕಾಲುವೆ ಒತ್ತುವರಿ ಮಾಡಿ ಅದರ ಮೇಲೆ ಆಸ್ಪತ್ರೆ ಕಟ್ಟಿದ್ದಾರೆ. ಇಂಥವುಗಳನ್ನು ಆಗಾಗ ಪತ್ರಿಕಾಗೋಷ್ಠಿ ನಡೆಸಿ ಜನರ ಮುಂದಿಡುತ್ತೇನೆ’ ಎಂದರು.

‘ಸಾಮಾಜಿಕ ನ್ಯಾಯ ಸಂಕಲ್ಪ ರ‍್ಯಾಲಿ 20ಕ್ಕೆ’

ಬೆಂಗಳೂರು: ನ್ಯಾಯಮೂರ್ತಿ ಎ.ಜೆ ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ಮತ್ತು ಆರ್.ಪಿ.ಐ (ಬಿ) ವತಿಯಿಂದ ಡಿ.20 ರಂದು ‘ಸಾಮಾಜಿಕ ನ್ಯಾಯ ಸಂಕಲ್ಪ ರ‍್ಯಾಲಿ’ಯನ್ನು ಬೆಳಗಾವಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ದಲಿತ ಸಂಘರ್ಷ ಸಮಿತಿಯ ರಾಜ್ಯಾಧ್ಯಕ್ಷ ಎನ್. ಮೂರ್ತಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘2005 ರಲ್ಲಿ ಕರ್ನಾಟಕ ಸರ್ಕಾರ ಚಳವಳಿಗಾರರೊಂದಿಗೆ ಚರ್ಚಿಸಿ ಪರಿಶಿಷ್ಟ ಮೀಸಲಾತಿ ವರ್ಗೀಕರಣಕ್ಕಾಗಿ ನಿವೃತ್ತ ನ್ಯಾಯಮೂರ್ತಿ ಎ.ಜೆ ಸದಾಶಿವ ಆಯೋಗ ರಚಿಸಿತ್ತು. 2012ರಲ್ಲಿ ವರದಿಯನ್ನು ಪಡೆದುಕೊಂಡಿತ್ತು. ವರದಿ ಸಲ್ಲಿಸಿ ಇಂದಿಗೆ 17 ವರ್ಷ ಕಳೆದರೂ ಸರ್ಕಾರ ವರದಿಯನ್ನು ಅಂಗೀಕರಿಸಿ ಅನುಷ್ಠಾನಗೊಳಿಸಿಲ್ಲ. ಈ ಸಂಬಂಧ ಚನ್ನಮ್ಮ ವೃತ್ತದಿಂದ ಸುವರ್ಣಸೌಧವರೆಗೆ ರ‍್ಯಾಲಿಯನ್ನು ಹಮ್ಮಿಕೊಳ್ಳಲಾಗಿದೆ ಎಂದರು.



ಒನಕೆ ಓಬವ್ವ ಪುಸ್ತಕವನ್ನು ಬಿ.ಟಿ.ಲಲಿತಾನಾಯಕ್ ಬಿಡುಗಡೆ ಮಾಡಿದರು. ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಪರ ಹೋರಾಟಗಾರ್ತಿ ಸವಿತಾ, ಎಂ.ವೆಂಕಟಸ್ವಾಮಿ, ಬಸವನಾಗಿ ದೇವ ಸ್ವಾಮೀಜಿ ಇದ್ದರು. –ಪ್ರಜಾವಾಣಿ ಚಿತ್ರ

ಒನಕೆ ಓಬವ್ವ ಅಧ್ಯಯನ ಪೀಠ ಸ್ಥಾಪನೆಗೆ ಒತ್ತಾಯ

ಬೆಂಗಳೂರು: ಒನಕೆ ಓಬವ್ವನವರ ಸಾಧನೆ ಬಗ್ಗೆ ಇನ್ನಷ್ಟು ಬೆಳಕು ಚೆಲ್ಲಲು ರಾಜ್ಯದಲ್ಲಿ ಒನಕೆ ಓಬವ್ವ ಅಧ್ಯಯನ ಪೀಠ ತೆರೆಯಬೇಕು ಎಂದು ಸಮತಾ ಸೈನಿಕ ದಳದ ರಾಜ್ಯ ಘಟಕದ ಅಧ್ಯಕ್ಷ ಎಂ.ವೆಂಕಟಸ್ವಾಮಿ ಒತ್ತಾಯಿಸಿದರು.

ಸಮತಾ ಸೈನಿಕ ದಳ ಆಯೋಜಿಸಿದ್ದ ದಿವಂಗತ ಪ್ರೊ.ಎ.ಡಿ.ಕೃಷ್ಣಯ್ಯ ಅವರು ಬರೆದಿರುವ ಒನಕೆ ಓಬವ್ವ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಒನಕೆ ಓಬವ್ವನ ಮೊದಲ ಜಯಂತಿಯನ್ನು ಚಿತ್ರದುರ್ಗದಲ್ಲಿ ಆಯೋಜನೆ ಮಾಡಿದ್ದೆವು. ಫೂಲನ್ ದೇವಿ ಅವರನ್ನು ಈ ಕಾರ್ಯಕ್ರಮಕ್ಕೆ ಕರೆಸಿದ್ದೆವು. ಸಾಧಕ ಮಹಿಳೆ ಓಬವ್ವ ಬಗ್ಗೆ ಇನ್ನಷ್ಟು ಅಧ್ಯಯನ ನಡೆಯುವ ಅಗತ್ಯವಿದೆ’ ಎಂದರು.

ಸಾಹಿತಿ ಬಿ.ಟಿ.ಲಲಿತಾನಾಯಕ್ ಪುಸ್ತಕ ಬಿಡುಗಡೆ ಮಾಡಿದರು. ಚಲವಾದಿ ಗುರುಪೀಠದ ಬಸವನಾಗಿ ದೇವ ಸ್ವಾಮೀಜಿ ಮಾತನಾಡಿದರು.

ಬೆಂಗಳೂರು ವಿಶ್ವವಿದ್ಯಾಲಯ ಪ್ರಾಧ್ಯಾಪಕಿ ಎಂ.ಸುಮಿತ್ರಾ, ಎಫ್‌ಎಸ್‌ಎಲ್ ವಿಜ್ಞಾನಿ ಎಂ.ವಿ. ಸೌಮ್ಯಾ, ಜೀತ ವಿಮುಕ್ತ ಹೋರಾಟಗಾರ್ತಿ ಪೂರ್ಣಿಮಾ ಮಧುಕರ್, ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಪರ ಹೋರಾಟಗಾರ್ತಿ ಸವಿತಾ ಅವರಿಗೆ ಒನಕೆ ಓಬವ್ವ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಡಿ. 20ರಿಂದ ವಿರಾಗಿ ಶ್ರೀಕುಮಾರೇಶ್ವರ ರಥಯಾತ್ರೆ

ಬೆಂಗಳೂರು: ‘ವಿರಾಟಪುರದ ವಿರಾಗಿ’ ಚಿತ್ರದ ಪ್ರಚಾರಾರ್ಥ ವಿರಾಗಿ ಶ್ರೀಕುಮಾರೇಶ್ವರ ರಥಯಾತ್ರೆ ಡಿ. 20ರಿಂದ ಜ. 1ರವರೆಗೆ ರಾಜ್ಯದಾದ್ಯಂತ ನಡೆಯಲಿದೆ.

ಬಿ.ಎಸ್. ಲಿಂಗದೇವರು ನಿರ್ದೇಶಿಸಿರುವ, ‘ಸಮಾಧಾನ’ ನಿರ್ಮಿಸಿದ ಹಾನಗಲ್ ಕುಮಾರ ಶಿವಯೋಗಿಗಳ ಜೀವನಚರಿತ್ರೆ ಆಧಾರಿತ ಈ ಚಿತ್ರ ಶರಣರ ಬದುಕಿನ ಸಾಧನೆ, ಸಂದೇಶಗಳನ್ನು ಒಳಗೊಂಡಿದೆ. ಡಿ. 20ರಂದು ರಾಜ್ಯದ ಆರು ಪ್ರಮುಖ ನಗರ–ಪಟ್ಟಣಗಳಿಂದ ಆರು ತಂಡಗಳು ಈ ರಥಯಾತ್ರೆ ನಡೆಸಲಿವೆ.

ಭಕ್ತ, ಮಹೇಶ, ಪ್ರಾಣಲಿಂಗಿ, ಶರಣ, ಐಕ್ಯ ಹೆಸರಿನ ಮಾರ್ಗಗಳಲ್ಲಿ ರಥ ಸಂಚಾರ ನಡೆಸಲಿದೆ. ನಾಡಿನ ವಿವಿಧ ಮಠಾಧೀಶರು, ಸ್ವಾಮೀಜಿಗಳು, ಶರಣರು ಈ ರಥಯಾತ್ರೆಯಲ್ಲಿ ಭಾಗವಹಿಸಲಿದ್ದಾರೆ. ಸುಮಾರು ಒಂದು ಕೋಟಿ ಜನರು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ. ರಥಯಾತ್ರೆಯು ಸುಮಾರು 7 ಸಾವಿರ ಕಿಲೋಮೀಟರ್‌ನಷ್ಟು ನಡೆಯಲಿದೆ. ಪ್ರಮುಖ ಸ್ಥಳಗಳಲ್ಲಿ ಸಭೆಗಳು ನಡೆಯಲಿವೆ. ಡಿ. 31ರಂದು ಗದಗದಲ್ಲಿ ಎಲ್ಲ ರಥಗಳು ಸೇರಲಿವೆ. ಜ. 1ರಂದು ಬೆಳಿಗ್ಗೆ 9ಕ್ಕೆ ಗದಗದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಲಿದೆ. 10.30ಕ್ಕೆ ರಥಯಾತ್ರೆಯ ಸಮಾರೋಪ ನಡೆಯಲಿದೆ ಎಂದು ನಿರ್ದೇಶಕ ಬಿ.ಎಸ್.ಲಿಂಗದೇವರು ತಿಳಿಸಿದ್ದಾರೆ.

ಸಾರಿಗೆ ಇಲಾಖೆ: ಹೆಚ್ಚುವರಿ ಆಯುಕ್ತರ ಹುದ್ದೆಗೂ ನಿಯೋಜನೆ

ಬೆಂಗಳೂರು: ವರ್ಗಾವಣೆ ನಿಯಮಗಳಿಗೆ ವಿರುದ್ಧವಾಗಿ ಕಾರ್ಯ-ನಿರ್ವಹಣಾ ವ್ಯವಸ್ಥೆ ಹೆಸರಲ್ಲಿ ಸಿಬ್ಬಂದಿಯನ್ನಷ್ಟೇ ಅಲ್ಲ, ಹೆಚ್ಚುವರಿ ಆಯುಕ್ತರುಗಳನ್ನೂ ಸಾರಿಗೆ ಇಲಾಖೆ ನಿಯೋಜನೆ ಮಾಡಿದೆ.

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಹೆಚ್ಚುವರಿ ಆಯುಕ್ತ ಜಿ.ಜ್ಞಾನೇಂದ್ರ ಕುಮಾರ್ ಅವರನ್ನು ಇ-ಆಡಳಿತ ಮತ್ತು ಪರಿಸರ ವಿಭಾಗಕ್ಕೆ. ಅಲ್ಲಿದ್ದ ಜಿ.ಪುರುಷೋತ್ತಮ ಅವರನ್ನು ರಸ್ತೆ ಸುರಕ್ಷತಾ ಪ್ರಾಧಿಕಾರಕ್ಕೆ ಪರಸ್ಪರ ನಿಯೋಜನೆ ಮಾಡಲಾಗಿದೆ.

ಸಂಬಳವಿಲ್ಲದೇ ಸಿಬ್ಬಂದಿ ಪರದಾಟ: ನಿಯೋಜನೆ ಮೇಲೆ ತೆರಳಿರುವ ಇಬ್ಬರು ಆಯುಕ್ತರು ತಮ್ಮ ವಿಭಾಗಗಳಲ್ಲಿ ವೇತನ ಬಟವಾಡೆಯ ಅಧಿಕಾರ ಚಲಾಯಿಸಲು ಸಾಧ್ಯವಾಗಿಲ್ಲ. ವೇತನ, ಕಚೇರಿ ಖರ್ಚು ವೆಚ್ಚಗಳ ಬಿಲ್‌ಗಳಿಗೆ ಸಹಿ ಮಾಡಲು ತಾಂತ್ರಿಕ ತೊಂದರೆ ಎದುರಾಗಿದೆ. ಪ್ರಭಾರ ಇದ್ದವರಿಗೆ ಡಿಜಿಟಲ್ ಸಹಿ ಮ್ಯಾಪಿಂಗ್ ಮಾಡಲು ಸಾಧ್ಯವಿಲ್ಲ ಎಂದು ರಾಜ್ಯ ಹುಜೂರ್ ಖಜಾನೆ ಕೋರಿಕೆಯನ್ನು ತಿರಸ್ಕರಿಸಿದೆ. ಇದರಿಂದ ಸಿಬ್ಬಂದಿಗೆ ಡಿಸೆಂಬರ್ ತಿಂಗಳ ವೇತನ ಪಡೆಯಲು ಸಾಧ್ಯವಾಗಿಲ್ಲ. ವಿದ್ಯುತ್ ಬಿಲ್, ವಾಹನಗಳ ಇಂಧನ ಪೂರೈಕೆ ಮತ್ತಿತರ ವೆಚ್ಚ ಭರಿಸಲು ಸಾಧ್ಯವಾಗಿಲ್ಲ. ಟೆಂಡರ್ ಪ್ರಕ್ರಿಯೆಗಳು, ಗುತ್ತಿಗೆ ಪಾವತಿ ಮೊತ್ತಗಳೂ ಬಾಕಿ ಉಳಿದಿವೆ.

ನಟರಾಜ್‌ಗೆ ‘ಕಿ.ರಂ.ನಾಗರಾಜ ಸಂಸ್ಕೃತಿ ಪ್ರಶಸ್ತಿ’



ನಟರಾಜ್ ಹುಳಿಯಾರ್

ಬೆಂಗಳೂರು: ಪ್ರಜ್ಞಾ ಸಾಂಸ್ಕೃತಿಕ ವೇದಿಕೆ ನೀಡುವ ‘ಪ್ರೊ.ಕಿ.ರಂ. ನಾಗರಾಜ ಸಂಸ್ಕೃತಿ ಪ್ರಶಸ್ತಿ’ಗೆ ಲೇಖಕ ನಟರಾಜ್ ಹುಳಿಯಾರ್ ಅವರು ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 10 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ. ಇದೇ 25ರಂದು ಸಂಜೆ 5 ಗಂಟೆಗೆ ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಸಾಹಿತಿ ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ವೇದಿಕೆಯ ಅಧ್ಯಕ್ಷ ಆರ್.ಕೆ. ನಲ್ಲೂರು ಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೆಳಸೇತುವೆ ಕಾಮಗಾರಿಯನ್ನು ಶಾಸಕ ಅರವಿಂದ ಲಿಂಬಾವಳಿ ವೀಕ್ಷಿಸಿದರು. ಬಿಜೆಪಿ ನಗರ ಮಂಡಲ ಅಧ್ಯಕ್ಷ ಮನೋಹರರೆಡ್ಡಿ, ಪ್ರಧಾನ ಕಾರ್ಯದರ್ಶಿ ರಾಜೇಶ್, ಮುಖಂಡರಾದ ರಾಜಾರೆಡ್ಡಿ, ವರ್ತೂರು ಶ್ರೀಧರ್, ಶ್ರೀಧರ್ ರೆಡ್ಡಿ ಇದ್ದರು.

ಕೆಳಸೇತುವೆ ಕಾಮಗಾರಿ ವೀಕ್ಷಣೆ

ಕೆ.ಆರ್.ಪುರ: ಮಾರತ್ತಹಳ್ಳಿ ಸಮೀಪದ ರೈಲ್ವೆ ಕೆಳಸೇತುವೆಗೆ ಹೊಂದಿಕೊಂಡಿರುವ ಅಶ್ವತ್ಥ್ ನಗರ, ಚಿನ್ನಪ್ಪನಹಳ್ಳಿ, ಮುನ್ನೇಕೊಳಾಲು, ಸ್ಪೈಸ್ ಗಾರ್ಡನ್‌ಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯ ಕೆಳಗೆ ನಿರ್ಮಾಣ ಆಗುತ್ತಿರುವ (ಪುಶ್ ಬಾಕ್ಸ್) ಕೆಳಸೇತುವೆಯ ಕಾಮಗಾರಿಯನ್ನು ಶಾಸಕ ಅರವಿಂದ ಲಿಂಬಾವಳಿ ವೀಕ್ಷಿಸಿದರು.

ಅರವಿಂದ ಲಿಂಬಾವಳಿ ಮಾತನಾಡಿ, ನಗರದಿಂದ ವರ್ತೂರು, ವೈಟ್‌ಫೀಲ್ಡ್ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲಿ ಮಾರುತ್ತಹಳ್ಳಿ ಸಮೀಪದಲ್ಲಿ 1 ಕಿ.ಮೀ. ಅಂತರದಲ್ಲಿ ಎಲ್ಲೂ ತಿರುವು ಇಲ್ಲದಿರುವುದರಿಂದ ವಾಹನ ಸವಾರರಿಗೆ ತೊಂದರೆಯಾಗಿತ್ತು. ಸದಾ ವಾಹನ ದಟ್ಟಣೆಯಿಂದ ಸಾರ್ವಜನಿಕರು ಸುತ್ತಮುತ್ತಲಿನ ಪ್ರದೇಶಗಳಿಗೆ ತೆರಳಲು ಸಮಸ್ಯೆ ಎದುರಿಸುವಂತಾಗಿತ್ತು. ಸ್ಥಳೀಯರ ಮನವಿ ಮೇರೆಗೆ ವಾಹನ ಸವಾರರಿಗೆ ಅನುಕೂಲವಾಗಲು ಕೆಳಸೇತುವೆ ನಿರ್ಮಾಣ ಮಾಡಲಾಗುತ್ತಿದೆ ಎಂದರು.

ಬಿಜೆಪಿ ನಗರ ಮಂಡಲ ಅಧ್ಯಕ್ಷ ಮನೋಹರರೆಡ್ಡಿ, ಪ್ರಧಾನ ಕಾರ್ಯದರ್ಶಿ ರಾಜೇಶ್, ಮುಖಂಡರಾದ ರಾಜಾರೆಡ್ಡಿ, ವರ್ತೂರು ಶ್ರೀಧರ್, ಶ್ರೀಧರ್ ರೆಡ್ಡಿ ಇದ್ದರು.

ಜೈಲಿನಲ್ಲಿ 'ಅಕ್ರಮ': ಕೈದಿಯ ಮೊಬೈಲ್, ಸಿಮ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಗಳ ಅಕ್ರಮ ಚಟುವಟಿಕೆಗಳು ಮುಂದುವರಿದಿದ್ದು, ಕೈದಿಯೊಬ್ಬರು ಎರಡು ಮೊಬೈಲ್ ಹಾಗೂ ಮೂರು ಸಿಮ್‌ಕಾರ್ಡ್ ಬಳಸುತ್ತಿದ್ದ ಸಂಗತಿಯನ್ನು ಜೈಲಿನ ಅಧಿಕಾರಿಗಳೇ ಪತ್ತೆ ಮಾಡಿದ್ದಾರೆ.

'ಜೈಲಿನಲ್ಲಿರುವ ಕೆಲ ಕೈದಿಗಳು ಐಷಾರಾಮಿ ಸೌಲಭ್ಯ ಪಡೆಯುತ್ತಿದ್ದಾರೆ ಹಾಗೂ ಜೈಲಿನಿಂದಲೇ ಹೊರಗಿನವರಿಗೆ ಕರೆ ಮಾಡಿ ಬೆದರಿಕೆ ಹಾಕುತ್ತಿದ್ದಾರೆ' ಎಂಬ ಆರೋಪಗಳು ಕೇಳಿಬಂದಿದ್ದವು. ಈ ಬಗ್ಗೆ ವಿಶೇಷ ತನಿಖೆ ಸಹ ನಡೆದಿತ್ತು. ಇದೀಗ ಮತ್ತೆ ಕೈದಿಗಳ ಅಕ್ರಮಗಳು ಒಂದೊಂದಾಗಿ ಬಯಲಾಗುತ್ತಿವೆ.

'ಕಾರಾಗೃಹದ 2ನೇ ಟವರ್ ಕಟ್ಟಡದ ಡಿ. ಬ್ಯಾರಕ್‌ನ ಕೊಠಡಿ ಸಂಖ್ಯೆ 6ರಲ್ಲಿರುವ ಕೈದಿ ಸಾಗರ್ ಅಲಿಯಾಸ್ ರಕಿಬುಲ್ ಇಸ್ಲಾಮ್ ಎಂಬಾತನ ಬಳಿ ಡಿ. 14ರಂದು ಎರಡು ಮೊಬೈಲ್ ಹಾಗೂ ಮೂರು ಸಿಮ್‌ಕಾರ್ಡ್‌ಗಳು ಸಿಕ್ಕಿವೆ. ಅವುಗಳ ಸಮೇತ ಜೈಲಿನ ಅಧೀಕ್ಷಕರು ದೂರು ನೀಡಿದ್ದಾರೆ. ಕೈದಿ ಸಾಗರ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪರಪ್ಪನ ಅಗ್ರಹಾರ ಪೊಲೀಸ್ ಮೂಲಗಳು ಹೇಳಿವೆ.

'ಜೈಲಿನ ಸಿಬ್ಬಂದಿ, ಬ್ಯಾರಕ್‌ಗಳ ಎಲ್ಲ ಕೊಠಡಿಗಳಲ್ಲಿ ಅನಿರೀಕ್ಷಿತವಾಗಿ ತಪಾಸಣೆ ನಡೆಸಿದ್ದರು. ಕೈದಿ ಸಾಗರ್ ತನ್ನ ಹಾಸಿಗೆಯ ಕೆಳಭಾಗದಲ್ಲಿ ಮೊಬೈಲ್ ಹಾಗೂ ಸಿಮ್‌ಕಾರ್ಡ್‌ಗಳನ್ನು ಬಚ್ಚಿಟ್ಟುಕೊಂಡಿದ್ದ. ಹಾಸಿಗೆ ತೆಗೆದು ಪರಿಶೀಲಿಸಿದಾಗ, ಮೊಬೈಲ್ ಹಾಗೂ ಸಿಮ್‌ಕಾರ್ಡ್‌ಗಳು ಸಿಕ್ಕಿರುವುದಾಗಿ ಜೈಲಿನ ಸಿಬ್ಬಂದಿ ಹೇಳಿದ್ದಾರೆ' ಎಂದು ಮೂಲಗಳು ವಿವರಿಸಿವೆ.

'ಜೈಲಿನಲ್ಲಿ ಮೊಬೈಲ್ ಹಾಗೂ ಸಿಮ್‌ಕಾರ್ಡ್ ಬಳಕೆ ನಿಷೇಧಿಸಲಾಗಿದೆ. ಇಷ್ಟಾದರೂ ಕೈದಿ ಸಾಗರ್, ಜೈಲಿನ ನಿಯಮಗಳನ್ನು ಉಲ್ಲಂಘನೆ ಮಾಡಿ ಅಕ್ರಮವಾಗಿ ಮೊಬೈಲ್ ಇಟ್ಟುಕೊಂಡಿದ್ದನೆಂದು ಜೈಲಿನ ಸಿಬ್ಬಂದಿ ದೂರಿನಲ್ಲಿ ತಿಳಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೊಬೈಲ್ ಕೊಟ್ಟವರ ಬಗ್ಗೆ ಮಾಹಿತಿ: 'ಅಪರಾಧ ಪ್ರಕರಣದಲ್ಲಿ ಬಂಧಿತನಾಗಿ ಜೈಲು ಸೇರಿದ್ದ ಸಾಗರ್, ಯಾರಿಂದ ಮೊಬೈಲ್ ಪಡೆದುಕೊಂಡಿದ್ದನೆಂಬ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ. ಜೊತೆಗೆ, ಈತ ಸಹ ಕೈದಿಗಳಿಗೆ ಮೊಬೈಲ್ ನೀಡಿ ಹಣ ಪಡೆಯುತ್ತಿದ್ದನೆಂಬ ಅನುಮಾನವೂ ಇದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ವೈಟ್‌ಫೀಲ್ಡ್ ಠಾಣೆ ವ್ಯಾಪ್ತಿಯಲ್ಲಿ ಸಿಸಿಬಿ ವಿಶೇಷ ಕಾರ್ಯಾಚರಣೆ ● ಡೆಲಿವರಿ ಬಾಯ್ ಬಂಧನ

ಸ್ವಿಗ್ಗಿ, ಜೊಮ್ಯಾಟೊ ಹೆಸರಿನಲ್ಲಿ ಡ್ರಗ್ಸ್ ಮಾರಾಟ

ಪ್ರಜಾವಾಣಿ ವಾರ್ತೆ



ಸಿಸಿಬಿ ಪೊಲೀಸರು ಬಂಧಿಸಿರುವ ಆರೋಪಿ ಅಭಿಜಿತ್

ಬೆಂಗಳೂರು: ಮೊಬೈಲ್ ಆ್ಯಪ್ ಆಧರಿತ ಆಹಾರ ಪೂರೈಕೆ ಕಂಪನಿಗಳಾದ ಸ್ವಿಗ್ಗಿ ಹಾಗೂ ಜೊಮ್ಯಾಟೊ ಹೆಸರಿನಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪಿ ಅಭಿಜಿತ್ ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಬಿಹಾರದ ಅಭಿಜಿತ್ ಕೆಲಸ ಹುಡುಕಿಕೊಂಡು ಕೆಲ ವರ್ಷಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದ. ಸ್ವಿಗ್ಗಿ ಹಾಗೂ ಜೊಮ್ಯಾಟೊ ಡೆಲಿವರಿ ಬಾಯ್ ಕೆಲಸ ಆರಂಭಿಸಿದ್ದ. ಕೆಲ ತಿಂಗಳ ಹಿಂದೆಯಷ್ಟೇ ಕೆಲಸ ಬಿಟ್ಟು, ಡ್ರಗ್ಸ್ ಮಾರಾಟಕ್ಕೆ ಇಳಿದಿದ್ದ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಕೆಲಸ ಬಿಟ್ಟ ನಂತರ ಆರೋಪಿ, ಕಂಪನಿಯ ಟೀಶರ್ಟ್ ಹಾಗೂ ಬ್ಯಾಗ್‌ಗಳನ್ನು ವಾಪಸು ನೀಡಿರಲಿಲ್ಲ. ಅವುಗಳನ್ನೇ ಬಳಸಿಕೊಂಡು ಆರೋಪಿ ಡ್ರಗ್ಸ್ ಮಾರುತ್ತಿದ್ದ. ಈತ ಡೆಲಿವರಿ ಬಾಯ್ ಇರಬಹುದೆಂದು ಯಾರಿಗೂ ಅನುಮಾನ ಬಂದಿರಲಿಲ್ಲ. ಇತ್ತೀಚೆಗೆ ಆರೋಪಿ ಕೃತ್ಯದ ಬಗ್ಗೆ ಮಾಹಿತಿ ಬಂದಿತ್ತು. ವೈಟ್‌ಫೀಲ್ಡ್ ಠಾಣೆ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ, ಡ್ರಗ್ಸ್ ಸಮೇತ ಆರೋಪಿಯನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

'₹4 ಲಕ್ಷ ಮೌಲ್ಯದ 3 ಕೆ.ಜಿ. ಗಾಂಜಾ, ಎಲ್‌ಎಸ್‌ಡಿ ಕಾಗದದ 12 ಚೂರುಗಳು, ಮೊಬೈಲ್, ದ್ವಿಚಕ್ರ ವಾಹನ ಹಾಗೂ ಡೆಲಿವರಿ ಕಂಪನಿಗಳ ಟೀ-ಶರ್ಟ್, ಬ್ಯಾಗ್ ಜಪ್ತಿ ಮಾಡಲಾಗಿದೆ.

ಆರೋಪಿ ವಿರುದ್ಧ ವೈಟ್‌ಫೀಲ್ಡ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ, ತನಿಖೆ ಮುಂದುವರಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ಪ್ರಮುಖ ಆರೋಪಿ ನಿರ್ದೇಶನದಂತೆ ಕೆಲಸ: 'ಜಾಲದ ಪ್ರಮುಖ ಆರೋಪಿ ಅಭಿಷೇಕ್ ಎಂಬಾತ ತಲೆಮರೆಸಿಕೊಂಡಿದ್ದಾನೆ. ಆತನೇ ಬಿಹಾರದಿಂದ ನಗರಕ್ಕೆ ಡ್ರಗ್ಸ್ ಕಳುಹಿಸಿ ಆರೋಪಿ ಅಭಿಜಿತ್ ಮೂಲಕ ಗ್ರಾಹಕರಿಗೆ ತಲುಪಿಸುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಆರೋಪಿ ಅಭಿಜಿತ್ ಮನೆಗೆ ಕೊರಿಯರ್ ಹಾಗೂ ಇತರೆ ಮಾರ್ಗಗಳ ಮೂಲಕ ಡ್ರಗ್ಸ್ ಪೊಟ್ಟಣ ಬರುತ್ತಿತ್ತು. ಡ್ರಗ್ಸ್ ತಲುಪಿಸಬೇಕಾದ ಗ್ರಾಹಕರ ವಿಳಾಸವನ್ನು ಪ್ರಮುಖ ಆರೋಪಿ ಅಭಿಷೇಕ್ ತಿಳಿಸುತ್ತಿದ್ದ. ನಂತರ, ಅಭಿಜಿತ್ ತನ್ನ ದ್ವಿಚಕ್ರ ವಾಹನದಲ್ಲಿ ಸುತ್ತಾಡಿ ಗ್ರಾಹಕರಿಗೆ ಡ್ರಗ್ಸ್ ತಲುಪಿಸುತ್ತಿದ್ದ. ಅದರ ಹಣ ನೇರವಾಗಿ ಪ್ರಮುಖ ಆರೋಪಿಗೆ ಸಂದಾಯವಾಗುತ್ತಿತ್ತು. ಆತ ಕಮಿಷನ್ ರೂಪದಲ್ಲಿ ಅಭಿಜಿತ್‌ಗೆ ಹಣ ನೀಡುತ್ತಿದ್ದ' ಎಂದು ತಿಳಿಸಿದರು.

'ಇಬ್ಬರೂ ಸೇರಿಕೊಂಡು ತಮ್ಮದೇ ಡ್ರಗ್ಸ್ ಜಾಲ ಸೃಷ್ಟಿಸಿಕೊಂಡಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಕಂಪನಿಗಳ ಉದ್ಯೋಗಿಗಳು ಹಾಗೂ ಇತರರು ಆರೋಪಿಗಳ ಬಳಿ ಡ್ರಗ್ಸ್ ಖರೀದಿಸುತ್ತಿದ್ದರು' ಎಂದು ಹೇಳಿದರು.

ಡ್ರಗ್ಸ್ ಮಾರಾಟ: ವಿಮಾನ ಸರಕು ತಪಾಸಣೆಕಾರ ಬಂಧನ


ಸಿಬು

ಬೆಂಗಳೂರು: ಯಲಹಂಕ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪಿ ಸಿಬು ಟಿ. ಚಾಕ್ಕೊ ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಕೇರಳದ ಸಿಬು, ಹಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನಯಾನ ಕಂಪನಿಯೊಂದರ ಸರಕು ಸಾಗಣೆ ವಿಭಾಗದಲ್ಲಿ ತಪಾಸಣೆಕಾರನಾಗಿ ಕೆಲಸ ಮಾಡುತ್ತಿದ್ದ. ಈತನನ್ನು ಬಂಧಿಸಿ ₹ 5 ಲಕ್ಷ ಮೌಲ್ಯದ 30 ಗ್ರಾಂ ಎಂಡಿಎಂಎ, ಎಲ್‌ಎಸ್‌ಡಿ ಕಾಗದದ 13 ಚೂರುಗಳು ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಐಷಾರಾಮಿ ಜೀವನ ನಡೆಸಲು ಬಯಸುತ್ತಿದ್ದ ಆರೋಪಿಗೆ ವೇತನ ಸಾಲುತ್ತಿರಲಿಲ್ಲ. ಅಕ್ರಮವಾಗಿ ಹಣ ಸಂಪಾದನೆ ಮಾಡಬೇಕೆಂದು ಡ್ರಗ್ಸ್ ಮಾರಾಟಕ್ಕೆ ಇಳಿದಿದ್ದ. ನೈಜೀರಿಯಾ ಪೆಡ್ಲರ್ ಪರಿಚಯ ಮಾಡಿಕೊಂಡಿದ್ದ ಆರೋಪಿ, ಅವರಿಂದ ಕಡಿಮೆ ಬೆಲೆಗೆ ಡ್ರಗ್ಸ್ ಖರೀದಿಸುತ್ತಿದ್ದ. ನಂತರ, ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಕಂಪನಿಗಳ ಉದ್ಯೋಗಿಗಳಿಗೆ ಡ್ರಗ್ಸ್ ಮಾರುತ್ತಿದ್ದರು' ಎಂದು ತಿಳಿಸಿದರು.

'ಡ್ರಗ್ಸ್ ಮಾರಾಟದಿಂದ ಆರೋಪಿ ಅಕ್ರಮವಾಗಿ ಹಣ ಸಂಪಾದಿಸುತ್ತಿದ್ದ. ಸದ್ಯ ಈತನ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಯಲಹಂಕ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಹೋಟೆಲ್, ಕ್ಲಬ್‌ಗಳ ವ್ಯವಸ್ಥಾಪಕರ ಸಭೆ ● ಅವಘಡ ಸಂಭವಿಸಿದರೆ ಆಯೋಜಕರು ಹೊಣೆ– ಎಚ್ಚರಿಕೆ

ಹೊಸ ವರ್ಷಾಚರಣೆ: ಕ್ಯಾಮೆರಾ ಕಣ್ಗಾವಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಾಕ್‌ಡೌನ್‌ನಿಂದಾಗಿ ಬ್ರಿಗೇಡ್ ರಸ್ತೆಯಲ್ಲಿ ಎರಡು ವರ್ಷ ಸ್ಥಗಿತಗೊಂಡಿದ್ದ ಹೊಸ ವರ್ಷಾಚರಣೆಗೆ ಈ ವರ್ಷ ಪೊಲೀಸರು ಅನುಮತಿ ನೀಡಿದ್ದು, ಆಚರಣೆಗೆ ಸಿದ್ಧತೆಗಳು ಭರದಿಂದ ಸಾಗಿವೆ.

ಬ್ರಿಗೇಡ್ ರಸ್ತೆ, ಎಂ.ಜಿ.ರಸ್ತೆ, ಚರ್ಚ್ ಸ್ಟ್ರೀಟ್ ಹಾಗೂ ಸುತ್ತಮುತ್ತಲ ರಸ್ತೆಗಳಲ್ಲಿ ಡಿ. 31ರಂದು ರಾತ್ರಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರುವ ನಿರೀಕ್ಷೆ ಇದೆ. ಈ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಭದ್ರತೆ ಕೈಗೊಳ್ಳಲು ಪೊಲೀಸರು ತಯಾರಿ ಮಾಡಿಕೊಳ್ಳುತ್ತಿದ್ದಾರೆ.

ಮಹಿಳೆಯರು ಹಾಗೂ ಮಕ್ಕಳ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಿರುವ ಪೊಲೀಸರು, ರಸ್ತೆಯ ಪ್ರಮುಖ ಸ್ಥಳಗಳಲ್ಲಿ ಗುಣಮಟ್ಟದ ದೃಶ್ಯ ಗ್ರಹಿಸುವ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸುತ್ತಿದ್ದಾರೆ. ಕ್ಯಾಮೆರಾ ನಿರ್ವಹಣೆಗಾಗಿ ಪ್ರತ್ಯೇಕ ನಿಯಂತ್ರಣ ಕೊಠಡಿ ನಿರ್ಮಿಸಲಾಗುತ್ತಿದ್ದು, ಪ್ರತಿ ದೃಶ್ಯವನ್ನು ಸಿಬ್ಬಂದಿ ಪರಿಶೀಲನೆ ನಡೆಸಲಿದ್ದಾರೆ.

ಬ್ರಿಗೇಡ್ ರಸ್ತೆ ಹಾಗೂ ಸುತ್ತಮುತ್ತಲ ರಸ್ತೆಗಳ ವ್ಯಾಪಾರಿಗಳ ಜೊತೆ ಕಮಿಷನರ್ ಪ್ರತಾಪ್ ರೆಡ್ಡಿ ಅವರು ಸಭೆ ನಡೆಸಿ ಚರ್ಚಿಸಿದ್ದಾರೆ. ಯಾವೆಲ್ಲ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗ್ಗೆಯೂ ಸೂಚನೆ ನೀಡಿದ್ದಾರೆ.

'ಭದ್ರತೆ ರೂಪುರೇಷೆ ಸಿದ್ಧಪಡಿಸಲಾಗಿದೆ. ಅಕ್ಕ-ಪಕ್ಕದ ವಿಭಾಗ ಪೊಲೀಸರನ್ನು ಹಾಗೂ ಮೀಸಲು ಪೊಲೀಸರನ್ನು ಭದ್ರತೆಗೆ ಬಳಸಿಕೊಳ್ಳಲಾಗುತ್ತಿದೆ. ಸಮವಸ್ತ್ರ ಹಾಗೂ ಮಫ್ತಿಯಲ್ಲೂ ಪೊಲೀಸರು ಭದ್ರತೆ ಕರ್ತವ್ಯ ನಿರ್ವಹಿಸಲಿದ್ದಾರೆ' ಎಂದು ಕೇಂದ್ರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಅವಘಡಗಳಿಗೆ ಆಯೋಜಕರೇ ಹೊಣೆ: ಹೊಸ ವರ್ಷಾಚರಣೆ ಹಾಗೂ ಕ್ರಿಸ್‌ಮಸ್ ಹಬ್ಬದ ಪ್ರಯುಕ್ತ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಅವರು ಶನಿವಾರ ಪಂಚತಾರಾ ಹೋಟೆಲ್, ಕ್ಲಬ್ ಹಾಗೂ ಇತರೆ ಮನರಂಜನಾ ಸ್ಥಳಗಳ ವ್ಯವಸ್ಥಾಪಕರ ಸಭೆ ನಡೆಸಿದರು.

'ಕಾರ್ಯಕ್ರಮದ ಆಸನಗಳ ಸಾಮರ್ಥ್ಯಕ್ಕೆ ತಕ್ಕಂತೆ ಟಿಕೆಟ್ ಹಂಚಿಕೆ ಮಾಡಬೇಕು. ಹೆಚ್ಚುವರಿ ಟಿಕೆಟ್ ವಿತರಿಸಿ, ಜನಸಂದಣಿ ಹೆಚ್ಚಾಗಿ ಅವಘಡ ಸಂಭವಿಸಿದರೆ ಆಯೋಜಕರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು' ಎಂದು ಪ್ರತಾಪ್ ರೆಡ್ಡಿ ಎಚ್ಚರಿಸಿದರು.

'ಹೊಸ ವರ್ಷಾಚರಣೆ ಹಾಗೂ ಕ್ರಿಸ್‌ಮಸ್ ಹಬ್ಬದಂದು ಆಯೋಜಿಸುವ ಕಾರ್ಯಕ್ರಮಗಳ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. ಜೊತೆಗೆ, ಆಯೋಜಕರು ಸಕ್ಷಮ ಪ್ರಾಧಿಕಾರದಿಂದ ಪರವಾನಗಿ ಪಡೆಯಬೇಕು. ಯಾರಾದರೂ ನಿಯಮ ಮೀರಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

'ಮನರಂಜನಾ ಕಾರ್ಯಕ್ರಮ ಆಯೋಜಿಸುವ ಸ್ಥಳಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ ಕಡ್ಡಾಯ. ಮಹಿಳೆಯರು ಹಾಗೂ ಮಕ್ಕಳ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಬೇಕು. ಅದಕ್ಕೆ ಸಂಬಂಧಪಟ್ಟ ಸೂಚನಾ ಫಲಕಗಳನ್ನು ಅಳವಡಿಸಬೇಕು. ಶಸ್ತ್ರಾಸ್ತ್ರ ಹಾಗೂ ಆಯುಧ ಇಟ್ಟುಕೊಂಡು ಬರುವವರಿಗೆ ಪ್ರವೇಶ ನೀಡಬಾರದು. ಕಾರ್ಯಕ್ರಮದಲ್ಲಿ ಡ್ರಗ್ಸ್ ಸರಬರಾಜು ಆಗದಂತೆ ಹೆಚ್ಚಿನ ನಿಗಾ ವಹಿಸಬೇಕು' ಎಂದು ಅವರು ಸೂಚಿಸಿದರು.

'ಪೊಲೀಸ್ ಪರಿಶೀಲನೆ ಪ್ರಮಾಣಪತ್ರ ಇರುವ ವ್ಯಕ್ತಿಗಳನ್ನು ಭದ್ರತೆ ಕೆಲಸಕ್ಕೆ ನಿಯೋಜಿಸಿಕೊಳ್ಳಬೇಕು. ಕಾರ್ಯಕ್ರಮಕ್ಕೆ ಬರುವ ಸಾರ್ವಜನಿಕರು ಹಾಗೂ ಸಿಬ್ಬಂದಿ ರಾತ್ರಿ ವೇಳೆ ಸುರಕ್ಷಿತವಾಗಿ ಮನೆ ತಲುಪಲು ಆಯೋಜಕರೇ ಸಾರಿಗೆ ವ್ಯವಸ್ಥೆ ಮಾಡಬೇಕು' ಎಂದು ಹೇಳಿದರು.

ಕ್ರಿಕೆಟ್: ಮಂತ್ರಿ, ನಾಪಾ ವ್ಯಾಲಿಗೆ ಗೆಲುವು

ಪ್ರಜಾವಾಣಿ ವಾರ್ತೆ


ಎಚ್.ಎಂ. ತಾಂಬೂರಿಯನ್ ಮತ್ತು ಎಸ್‌ವಿ ಲಕ್ಸೂರಿಯಾ ತಂಡಗಳ ನಡುವಿನ ಪಂದ್ಯದ ನೋಟ

ಬೆಂಗಳೂರು: ಮಂತ್ರಿ ಕೋರ್ಟ್‌ಯಾರ್ಡ್ ಮತ್ತು ನಾಪಾ ವ್ಯಾಲಿ ಅಪಾರ್ಟ್‌ಮೆಂಟ್ ತಂಡಗಳು ಚೇಂಜ್‌ಮೇಕರ್ಸ್ ಆಫ್ ಕನಕಪುರ ರೋಡ್ ಅಸೋಸಿಯೇಷನ್ ಆಶ್ರಯದಲ್ಲಿ ಆಯೋಜಿಸಿರುವ 'ಫೆಡರೇಷನ್ ಕ್ರಿಕೆಟ್ ಲೀಗ್' ನಲ್ಲಿ ಗೆಲುವು ಪಡೆದವು.

ಕನಕಪುರ ರಸ್ತೆಯ ಜುಡಿಷಿಯಲ್ ಬಡಾವಣೆ ಮೈದಾನದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ನಾಪಾ ವ್ಯಾಲಿ ತಂಡ 27 ರನ್‌ಗಳಿಂದ ಬಾಲಾಜಿ ಬ್ಲಾಸ್ಟರ್ಸ್ ತಂಡವನ್ನು ಮಣಿಸಿತು. ಮೊದಲು ಬ್ಯಾಟ್ ಮಾಡಿದ ನಾಪಾ ವ್ಯಾಲಿ ನಿಗದಿತ ಆರು ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 81 ರನ್ ಗಳಿಸಿತು. ಬ್ಲಾಸ್ಟರ್ಸ್ ತಂಡ 7 ವಿಕೆಟ್‌ಗೆ 54 ರನ್ ಪೇರಿಸಿತು.

ಇನ್ನೊಂದು ಪಂದ್ಯದಲ್ಲಿ ಮಂತ್ರಿ ಕೋರ್ಟ್‌ಯಾರ್ಡ್ ತಂಡ 9 ವಿಕೆಟ್‌ಗಳಿಂದ ಬಿಸಿಸಿಎಚ್‌ಎಸ್ ರೇಡರ್ಸ್ ತಂಡವನ್ನು ಸೋಲಿಸಿತು.

ಇತರ ಪಂದ್ಯಗಳಲ್ಲಿ ವಿ.ಪಿ. ವಾರಿಯರ್ಸ್ 23 ರನ್‌ಗಳಿಂದ ಡ್ರೀಮ್‌ಟೀಂ ವಿರುದ್ಧ; ಜುಡಿಷಿಯಲ್ ಬಡಾವಣೆ ತಂಡ 11 ರನ್‌ಗಳಿಂದ ಬ್ರಿಗೇಡ್ ಒಮೆಗಾ ವಿರುದ್ಧ; ಎಚ್.ಎಂ. ತಾಂಬೂರಿಯನ್ 14 ರನ್‌ಗಳಿಂದ ಎಸ್‌ವಿ ಲಕ್ಸೂರಿಯಾ ವಿರುದ್ಧ ಹಾಗೂ ಬ್ರಿಗೇಡ್ ಮಿಡೋಸ್ 24 ರನ್‌ಗಳಿಂದ ಸುರಭಿ ಸ್ಮ್ಯಾಷ್ ವಿರುದ್ಧವೂ ಗೆಲುವು ಪಡೆದವು.

ಸೆಮಿಫೈನಲ್ ಹಾಗೂ ಫೈನಲ್ ಭಾನುವಾರ ನಡೆಯಲಿದೆ. ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ಟೂರ್ನಿಯನ್ನು ಉದ್ಘಾಟಿಸಿದರು.

ಎಂಡೊ ಸಂತ್ರಸ್ತರಿಗೆ ಕೋರ್ಟ್ ಆಸರೆ

ಮೃತಳ ಕುಟುಂಬದ ಬ್ಯಾಂಕ್ ಸಾಲ ಮನ್ನಾ ಮಾಡಿಸಿ: ಸರ್ಕಾರಕ್ಕೆ ನಿರ್ದೇಶನ

ಕೊಚ್ಚಿ (ಪಿಟಿಐ): ಎಂಡೋಸಲ್ಫಾನ್ ಸಂತ್ರಸ್ತರು ಮತ್ತು ಅವರ ಕುಟುಂಬದ ದುರವಸ್ಥೆಯನ್ನು ಸರ್ಕಾರವಾಗಲಿ, ನ್ಯಾಯಾಲಯವಾಗಲಿ ನಿರ್ಲಕ್ಷಿಸಬಾರದು ಎಂದು ಕೇರಳ ಹೈಕೋರ್ಟ್ ಹೇಳಿದೆ.

ಎಂಡೋಸಲ್ಫಾನ್ ದುಷ್ಪರಿಣಾಮದಿಂದ 11ನೇ ವಯಸ್ಸಿಗೇ ಮೃತಪಟ್ಟಿರುವ ಕಾಸರಗೋಡಿನ ಅನ್ ಮರಿಯಾಳ ಕುಟುಂಬದವರು ಚಿಕಿತ್ಸೆಗಾಗಿ ಪಡೆದಿರುವ ಸಾಲವನ್ನು ಮನ್ನಾ ಮಾಡಬೇಕು ಎಂದೂ ರಾಜ್ಯ ಸರ್ಕಾರಕ್ಕೆ ನ್ಯಾಯಾಲಯ ನಿರ್ದೇಶನ ನೀಡಿದೆ. ಸರ್ಕಾರವು ಬಾಲಕಿಯರು, ಅಸಮರ್ಥ ವ್ಯಕ್ತಿಗಳು ಮತ್ತು ಅಸಹಾಯಕರ ಪರವಾಗಿ ನಿಲ್ಲಬೇಕು ಎಂದು ನ್ಯಾಯಮೂರ್ತಿ ವಿ.ಜಿ. ಅರುಣ್ ಹೇಳಿದ್ದಾರೆ.

'ಅನ್ ಮರಿಯಾಳಂತಹ ಸಂತ್ರಸ್ತರಿಗೆ ₹5ಲಕ್ಷ ಪರಿಹಾರ ನೀಡುವಂತೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಶಿಫಾರಸು ಮಾಡಿದೆ. ಹೀಗಿರುವಾಗ ರಾಜ್ಯ ಸರ್ಕಾರವು ತಾಂತ್ರಿಕ ಅಂಶಗಳಿಗೆ ಜೋತು ಬಿದ್ದು ಸಂತ್ರಸ್ತರಿಗೆ ಸೌಲಭ್ಯ ನೀಡುವುದನ್ನು ನಿರಾಕರಿಸಬಾರದು' ಎಂದಿದ್ದಾರೆ.

2005ರಲ್ಲಿ ಜನಿಸಿದ್ದ ಅನ್ ಮರಿಯಾಳಲ್ಲಿ ಹುಟ್ಟಿನಿಂದಲೇ ಶೇ80ರಷ್ಟು ಮಾನಸಿಕ ಬೆಳವಣಿಗೆ ಕುಂಠಿತವಾಗಿತ್ತು ಮತ್ತು ಆಕೆ ಬಹು ಅಂಗ ವೈಕಲ್ಯಕ್ಕೂ ಒಳಗಾಗಿದ್ದಳು. ಕಾಸರಗೋಡು ಜಿಲ್ಲೆಯ 11 ಗ್ರಾಮಗಳಲ್ಲಿ 1978ರಿಂದ 2001ರ ನಡುವೆ ಬಳಕೆ ಮಾಡಿದ್ದ ಎಂಡೋಸಲ್ಫಾನ್ ಕೀಟನಾಶಕದ ದುಷ್ಪರಿಣಾಮದಿಂದಾಗಿ ಆರೋಗ್ಯ ಸಮಸ್ಯೆಗೆ ಒಳಗಾದ ಸಾವಿರಾರು ಮಂದಿಯಲ್ಲಿ ಈಕೆಯೂ ಒಬ್ಬಳಾಗಿದ್ದಾಳೆ.

2017ರಲ್ಲಿ ಆನ್ ಮರಿಯಾ ನಿಧನರಾಗುವವರೆಗೂ ತಾಯಿ ಮತ್ತು ಅಜ್ಜ ಆಕೆಗೆ ಚಿಕಿತ್ಸೆ ಒದಗಿಸಲು ಪರದಾಡಿದ್ದರು. ಅದಕ್ಕಾಗಿ ಕೆನರಾ ಬ್ಯಾಂಕ್‌ನಿಂದ ₹3ಲಕ್ಷ ಹಾಗೂ ಎಸ್‌ಬಿಐ ಬ್ಯಾಂಕ್‌ನಿಂದ ₹69ಸಾವಿರ ಸಾಲ ಪಡೆದಿದ್ದರು.

ಸಾಲದ ಬಾಕಿ ಮೊತ್ತ ₹2.3 ಲಕ್ಷವನ್ನು ಮರುಪಾವತಿಸಬೇಕು ಎಂದು ಬ್ಯಾಂಕ್ ಅಧಿಕಾರಿಗಳು ಸೂಚಿಸಿದಾಗ ಬಾಲಕಿಯ ಕುಟುಂಬದವರು ಜಿಲ್ಲಾಧಿಕಾರಿಯನ್ನು ಭೇಟಿ ಮಾಡಿ, 2014ರಲ್ಲಿ ಎಂಡೋಸಲ್ಫಾನ್ ಸಂತ್ರಸ್ತರ ಸಾಲ ಮನ್ನಾ ಮಾಡಲು ಕೇರಳ ಸರ್ಕಾರ ಹೊರಡಿಸಿದ್ದ ಆದೇಶದಂತೆ ತಮ್ಮ ಸಾಲವನ್ನೂ ಮನ್ನಾ ಮಾಡುವಂತೆ ಕೋರಿದ್ದರು. 2016ರಲ್ಲಿ ಈ ಕುರಿತು ಜಿಲ್ಲಾಧಿಕಾರಿ ಮುಖ್ಯಮಂತ್ರಿಗೆ ವರದಿ ಸಲ್ಲಿಸಿದ್ದರು. 2011 ಜೂನ್ 30ರ ಮೊದಲು ಪಡೆದ ಸಾಲವನ್ನು ಮಾತ್ರವೇ ಮನ್ನಾ ಮಾಡಲಾಗುವುದು ಎಂದು ಸರ್ಕಾರ ಅದಕ್ಕೆ ಪ್ರತಿಕ್ರಿಯೆ ನೀಡಿತ್ತು. ಕೇವಲ ₹88,400 ಮಾತ್ರ ಮನ್ನಾ ಮಾಡುವುದಾಗಿಯೂ ಹೇಳಿತ್ತು. ಬಳಿಕ ಸಂತ್ರಸ್ತೆಯ ಕುಟುಂಬಕ್ಕೆ ಸಾಲ ಮರುಪಾವತಿ ಮಾಡುವಂತೆ ಬ್ಯಾಂಕ್ ನೋಟಿಸ್ ಜಾರಿ ಮಾಡಿತ್ತು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್ ಮೊರೆ ಹೋಗಿದ್ದರು.



ಬೆಂಚ್ ವಿತರಣೆ

ಯಿಪ್ಪೀ ಬೆಟರ್ ವರ್ಲ್ಡ್‌ನಿಂದ 18,000 ಕೆ.ಜಿ. ಪ್ಲಾಸ್ಟಿಕ್ ತ್ಯಾಜ್ಯ ಮರುಬಳಕೆಯಿಂದ ತಯಾರಿಸಿದ 1000 ಬೆಂಚ್‌ಗಳನ್ನು ವಿವಿಧ ಶಾಲೆಗಳಿಗೆ ವಿತರಿಸುವ ಕಾರ್ಯಕ್ರಮ ಯವನಿಕಾದಲ್ಲಿ ಇತ್ತೀಚೆಗೆ ನಡೆಯಿತು. ಸರ್ಕಾರದ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್, ಎಂ.ಪಿ. ಮಲ್ಲೈ ಮುಹಿಲನ್, ಐಟಿಸಿ ಲಿಮಿಟೆಡ್‌ನ ಭಾವನಾ ಶರ್ಮ, ಐಶ್ವರ್ಯ ಸಿಂಗ್, ನೂಪುರ್ ಅಗರವಾಲ್ ಮತ್ತು ಉಪ್ಕೃತಿ ಎನ್‌ಜಿಒ ಸ್ಥಾಪಕ ಚಂದನ್ ಎನ್ ಇದ್ದರು

'ವಿಕ್ಟೋರಿಯಾ'ದಲ್ಲಿ ಶಾರಿಕ್‌ಗೆ ಚಿಕಿತ್ಸೆ

ಮಂಗಳೂರು/ಬೆಂಗಳೂರು: ಕುಕ್ಕರ್ ಬಾಂಬ್ ಸ್ಫೋಟದ ಆರೋಪಿ ಮೊಹಮ್ಮದ್ ಶಾರಿಕ್‌ನನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಶನಿವಾರ ಬೆಳಿಗ್ಗೆ ಕರೆತರಲಾಗಿದ್ದು, ಸುಟ್ಟ ಗಾಯಗಳ ವಿಭಾಗದಲ್ಲಿ ಆತನಿಗೆ ವೈದ್ಯರು ಚಿಕಿತ್ಸೆ ನೀಡುತ್ತಿದ್ದಾರೆ.

ಮಂಗಳೂರಿನಲ್ಲಿ ನ.19ರಂದು ಸಂಭವಿಸಿದ್ದ ಸ್ಫೋಟದಲ್ಲಿ ಶಾರಿಕ್ ತೀವ್ರವಾಗಿ ಗಾಯಗೊಂಡಿದ್ದ. ಮಂಗಳೂರಿನ ಫಾದರ್ ಮುಲ್ಲರ್ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುತ್ತಿದ್ದು, ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿರಲಿಲ್ಲ.

ಆರೋಗ್ಯದಲ್ಲಿ ಸುಧಾರಣೆ ಕಾಣದಿದ್ದರಿಂದ ಎನ್‌ಐಎ ಅಧಿಕಾರಿಗಳ ವಿಚಾರಣೆಗೂ ಅಡ್ಡಿಯಾಗಿತ್ತು. ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಶಾರಿಕ್‌ನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ.

ಎನ್‌ಐಎ ಅಧಿಕಾರಿಗಳು ಮೊಕ್ಕಾಂ: ವಿಕ್ಟೋರಿಯಾ ಆಸ್ಪತ್ರೆಯ ಕೊಠಡಿಯಲ್ಲಿ ಶಾರಿಕ್‌ಗೆ ಚಿಕಿತ್ಸೆ ನೀಡಲಾಗುತ್ತಿದೆ. ಕಾವಲಿಗಾಗಿ ಎನ್‌ಐಎ ಅಧಿಕಾರಿಗಳು ಆಸ್ಪತ್ರೆಯಲ್ಲಿ ಮೊಕ್ಕಾಂ ಹೂಡಿದ್ದಾರೆ. ಸ್ಥಳೀಯ ಇಬ್ಬರು ಪೊಲೀಸರನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ.

'ವಿಕ್ಟೋರಿಯಾ ಆಸ್ಪತ್ರೆಯ ಶಾರಿಕ್‌ಗೆ ಚಿಕಿತ್ಸೆ ನೀಡುತ್ತಿದ್ದು, ಆರೋಗ್ಯ ಸ್ಥಿತಿ ಹಾಗೂ ಚಿಕಿತ್ಸಾ ಕ್ರಮಗಳ ಬಗ್ಗೆ ಎನ್‌ಐಎ ಅಧಿಕಾರಿಗಳು ಮಾಹಿತಿ ಪಡೆಯುತ್ತಿದ್ದಾರೆ. ಈ ಬಗ್ಗೆ ಸ್ಥಳೀಯ ಪೊಲೀಸರಿಗೆ ಯಾವುದೇ ಮಾಹಿತಿ ಇಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಚಹಾ ಮಾರಾಟದ ಎಲ್ಲಾ ದಾಖಲೆ ಮುರಿದ ಅಸ್ಸಾಂನ ಮನೋಹರಿ ಗೋಲ್ಡ್ ಟೀ

1 ಕಿಲೋ ಚಹಾ ಎಲೆ ₹1.15 ಲಕ್ಷಕ್ಕೆ ಹರಾಜು

ಪ್ರಜಾವಾಣಿ ವಾರ್ತೆ

ಗುವಾಹಟಿ: ಅಸ್ಸಾಂನ ಪ್ರಖ್ಯಾತ 'ಮನೋಹರಿ ಗೋಲ್ಡ್ ಟೀ' ತೋಟದ 1 ಕಿಲೋಗ್ರಾಂ ಚಹಾ ಎಲೆ ₹1.15 ಲಕ್ಷಕ್ಕೆ ಹರಾಜಾಗುವ ಮೂಲಕ ಚಹಾ ಮಾರಾಟದ ಹಿಂದಿನ ಎಲ್ಲಾ ದಾಖಲೆಗಳನ್ನು ಮುರಿದಿದೆ.

ಅಸ್ಸಾಂನ ದಿಬ್ರುಗಢ ಜಿಲ್ಲೆಯ ಚಹಾ ತೋಟವೊಂದರಲ್ಲಿ ಈ ವಿಶೇಷ ತಳಿಯ ಚಹಾ ಗಿಡವನ್ನು ಬೆಳೆಯಲಾಗುತ್ತದೆ. ಹೈದರಾಬಾದ್ ಮೂಲದ ತನ್ನ ಗ್ರಾಹಕರಾದ ಕೆಫೆ ನಿಲೋಫರ್‌ಗಾಗಿ 'ಆರ್‌ಕೆ ಟೀ ಸೇಲ್ಸ್' ಎಂಬ ಸಂಸ್ಥೆಯು ಶುಕ್ರವಾರ ಖಾಸಗಿ ಹರಾಜಿನಲ್ಲಿ ಭಾರಿ ಮೊತ್ತ ತೆತ್ತು ಚಹಾದ ಎಲೆಗಳನ್ನು ಖರೀದಿಸಿದೆ.

2021ರ ಡಿಸೆಂಬರ್‌ನಲ್ಲಿ ಗುವಾಹಟಿ ಚಹಾ ಹರಾಜು ಕೇಂದ್ರದಲ್ಲಿ ನಡೆದಿದ್ದ ಚಹಾ ಹರಾಜಿನಲ್ಲಿ ಮನೋಹರಿ ಗೋಲ್ಡ್ ಟೀ ₹99,999ಕ್ಕೆ ಮಾರಾಟವಾಗಿತ್ತು.

ಈ ಚಹಾ ಎಲೆಗಳು 24 ಕ್ಯಾರೆಟ್ ಚಿನ್ನದಂತೆ ಕಾಣುತ್ತವೆ ಮತ್ತು ಇದು ಆರೋಗ್ಯಕರ ಪೇಯವಾಗಿದೆ. ಇದರಲ್ಲಿ ಆ್ಯಂಟಿಆಕ್ಸಿಡೆಂಟ್ಸ್ ಮತ್ತು ಪೋಷಕಾಂಶಗಳು ಹೇರಳವಾಗಿ ಇವೆ. ಇದರಿಂದ ದೇಹಕ್ಕೆ ಸಾಕಷ್ಟು ಪ್ರಯೋಜನಗಳಿವೆ ಎಂದು ಮನೋಹರಿ ಟೀ ಎಸ್ಟೇಟ್ ಮಾಲೀಕರಾದ ರಾಜನ್ ಲೋಹಿಯಾ ತಿಳಿಸಿದರು.

'ಕಳೆದ ಬಾರಿ ಭಾರತದ ಚಹಾ ಮಂಡಳಿಯು ಗರಿಷ್ಠ ಹರಾಜು ಮೊತ್ತವನ್ನು ₹1 ಲಕ್ಷಕ್ಕೆ ನಿಗದಿಪಡಿಸಿತ್ತು. ಆ ಕಾರಣದಿಂದಾಗಿ 1 ಕಿಲೋ ಚಹಾ ಎಲೆ ₹99,999 ಲಕ್ಷಕ್ಕೆ ಹರಾಜಾಗಿತ್ತು. ಹಾಗಾಗಿ ಈ ಬಾರಿ ಖಾಸಗಿ ಹರಾಜಿನಲ್ಲಿ ಚಹಾ ಎಲೆ ಹರಾಜು ಮಾಡಲಾಯಿತು. ಮನೋಹರಿ ಟೀ ಹಿಂದಿನ ಎಲ್ಲಾ ದಾಖಲೆಗಳನ್ನು ಮುರಿದಿರುವುದು ಸಂತಸ ತಂದಿದೆ' ಎಂದು ಅವರು ತಿಳಿಸಿದರು.

ಜೋರ್ಹಾಟ್ ಚಹಾ ಹರಾಜು ಕೇಂದ್ರದಲ್ಲಿ ಜೂನ್‌ನಲ್ಲಿ ನಡೆದಿದ್ದ ಚಹಾ ಹರಾಜಿನಲ್ಲಿ ಪಭೋಜನ್ ಗೋಲ್ಡ್ ಟೀ ₹1 ಲಕ್ಷಕ್ಕೆ ಹರಾಜಾಗಿತ್ತು. ಈ ದಾಖಲೆಯನ್ನು ಮನೋಹರಿ ಗೋಲ್ಡ್ ಟೀ ಮುರಿದಿದೆ.

ಅಸ್ಸಾಂನಲ್ಲಿ 850ಕ್ಕೂ ಹೆಚ್ಚು ದೊಡ್ಡ ಚಹಾ ತೋಟಗಳಿವೆ. ಇದು ಪ್ರಪಂಚದ ಚಹಾ ಬೆಳೆಯುವ ಅತ್ಯಂತ ದೊಡ್ಡ ಪ್ರದೇಶವಾಗಿದೆ. ದೇಶದಲ್ಲಿ ಉತ್ಪಾದನೆ ಆಗುವ ಒಟ್ಟು ಚಹಾ ಪ್ರಮಾಣದಲ್ಲಿ ಶೇ 52ರಷ್ಟನ್ನು ಅಸ್ಸಾಂ ಒಂದೇ ರಾಜ್ಯ ಒದಗಿಸುತ್ತಿದೆ.

ಸೂರ್ಯೋದಯಕ್ಕೆ ಮೊದಲೇ ಚಿಗುರೆಲೆ ಸಂಗ್ರಹ



ಅಸ್ಸಾಂನ ಸುಪ್ರಸಿದ್ಧ ಪಾನಿಟೋಲ–126 ಚಹಾ ತಳಿಯ ಅತ್ಯಂತ ಉತ್ತಮ ತದ್ರೂಪ ತಳಿ ಇದಾಗಿದೆ. ಬೇಸಿಗೆ ಆರಂಭವಾಗುವುದಕ್ಕೂ ಮುನ್ನ ಈ ಚಹಾ ಎಲೆಗಳ ಕೊಯ್ಲು ಮಾಡಲಾಗುತ್ತದೆ. ಬೆಳಗ್ಗಿನ ಜಾವ 4ರಿಂದ 6ರ ವರೆಗೆ (ಸೂರ್ಯೋದಯಕ್ಕೂ ಮುನ್ನ) ಚಹಾ ಎಲೆಗಳನ್ನು ಕೊಯ್ಯಲಾಗುವುದು. ಹೀಗೆ ಮಾಡುವುದರಿಂದ ಚಹಾದ ವಿಶಿಷ್ಟ ಸುವಾಸನೆ ಮತ್ತು ಸ್ವಾದದಲ್ಲಿ ವ್ಯತ್ಯಾಸವಾಗುವುದಿಲ್ಲ ಎಂದು ಮನೋಹರಿ ಟೀ ಎಸ್ಟೇಟ್ ಮಾಲೀಕರಾದ ರಾಜನ್ ಲೋಹಿಯಾ ಅವರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಸಾಹಿತ್ಯ-ಸಂಸ್ಕೃತಿ ಸಮಾಗಮ, ಕಾಕೋಳು ಶೈಲೇಶ್ ಅವರ 'ಮುತ್ತಿನ ಮುಕುಟ ಮಣಿ' ಕವನ ಸಂಕಲನ ಬಿಡುಗಡೆ: ರವಿ.ಡಿ. ಚೆನ್ನಣ್ಣನವರ, ಅಧ್ಯಕ್ಷತೆ: ಮನು ಬಳಿಗಾರ, ಅತಿಥಿಗಳು: ವೇಮಗಲ್ ಡಿ. ನಾರಾಯಣಸ್ವಾಮಿ, ಬಿ.ಕೆ. ಶಿವರಾಂ, ಉಪಸ್ಥಿತಿ: ಕಾಕೋಳು ಶೈಲೇಶ್, ಎಂ. ಪುಟ್ಟರಾಜು, ಆಯೋಜನೆ: ವಿಶ್ವಮಾನವ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಕಸ್ತೂರಿಬಾ ಸಭಾಂಗಣ, ಗಾಂಧಿಭವನ, ಶಿವಾನಂದ ವೃತ್ತ, ಬೆಳಿಗ್ಗೆ 9.30

ಮರಿಯ ನಿಕೇತನ ವಿದ್ಯಾಸಂಸ್ಥೆಗಳು, ವಜ್ರಮಹೋತ್ಸವ, ಸುವರ್ಣ ಮಹೋತ್ಸವ: ಅತಿಥಿಗಳು: ಪಿ.ಸಿ. ಮೋಹನ್, ಕೆನಡಿ ಶಾಂತಕುಮಾರ್, ಪದ್ಮನಾಭ ರೆಡ್ಡಿ, ಗಣೇಶ ರೆಡ್ಡಿ, ಆಯೋಜನೆ: ಮರಿಯ ನಿಕೇತನ ವಿದ್ಯಾಸಂಸ್ಥೆಗಳು, ಸ್ಥಳ: ಡಿ ಕೋಸ್ಟ ಲೇಔಟ್, ಮೇರಿಸ್ ಟೌನ್, ಬೆಳಿಗ್ಗೆ 10

ಮ.ಸು. ಮನ್ನಾರ್ ಕೃಷ್ಣ ರಾವ್ ಅವರ 'ನಮ್ಮ ಹೆಮ್ಮೆಯ ಪ್ರಧಾನಿ ಲಾಲ್ ಬಹಾದುರ್ ಶಾಸ್ತ್ರಿ' ಪುಸ್ತಕ ಬಿಡುಗಡೆ: ಸಿ. ಸೋಮಶೇಖರ್, ಅಧ್ಯಕ್ಷತೆ: ಬಾಬು ಕೃಷ್ಣಮೂರ್ತಿ, ಆಯೋಜನೆ: ವಿದ್ಯಾಶ್ರೀ ಪ್ರಕಾಶನ, ಸ್ಥಳ: ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

ಸಾಲಿಡಾರಿಟಿ ಯುವ ಸಮಾವೇಶ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ: ಅತಿಥಿಗಳು: ಡಾ. ತಾಹ ಮತೀನ್, ಮುಹಮ್ಮದ್ ಕುಂಞ, ಬೆಳಿಗ್ಗೆ 10, ಚಾವಡಿ ಚರ್ಚೆ: ವಿಷಯ: ಮಾಧ್ಯಮ ವಿಶ್ಲೇಷಣೆ ಮತ್ತು ದ್ವೇಷ ಭಾಷಣ ಒಂದು ಅವಲೋಕನ: ಲದೀದಾ ಫರ್ಝಾನ, ಬಿ.ಎಂ. ಹನೀಫ್, ಆದಿತ್ಯ ಮೆನನ್, ಪ್ರಶಾಂತ್ ಟಂಡನ್, ಆಯೋಜನೆ: ಸಾಲಿಡಾರಿಟಿ ಯೂತ್ ಮೂವ್‌ಮೆಂಟ್, ಸ್ಥಳ: ಖುದ್ದೂಸ್ ಸಾಹೇಬ್ ಈದ್ಗಾ, ವಸಂತನಗರ, ಮಧ್ಯಾಹ್ನ 2.45

ಸು.ರಂ. ಎಕ್ಕುಂಡಿ ಜನ್ಮ ಶತಮಾನೋತ್ಸವ, ಪುಸ್ತಕ ಬಿಡುಗಡೆ, ಮಾತು, ಕವಿತೆ, ಗಾಯನ: ಉದ್ಘಾಟನೆ: ಜಯಂತ ಕಾಯ್ಕಿಣಿ, ಪುಸ್ತಕ ಬಿಡುಗಡೆ: ವಿಜಯಾ, ಅತಿಥಿಗಳು: ಜಿ.ಎನ್. ಮೋಹನ್, ಉಪಸ್ಥಿತಿ: ರಂಗನಾಥ ಎಕ್ಕುಂಡಿ, ವೇದಾ ಎಕ್ಕುಂಡಿ, ಅಧ್ಯಕ್ಷತೆ: ಎಚ್.ಎಸ್. ವೆಂಕಟೇಶಮೂರ್ತಿ, ಆಯೋಜನೆ: ಭಾಗವತರು, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10


ಜಯಂತ್ ಕಾಯ್ಕಿಣಿ


ಸುಯೋಧನ' ಪೌರಾಣಿಕ ನಾಟಕದ ದೃಶ್ಯ

'ಸುಯೋಧನ' ಪೌರಾಣಿಕ ನಾಟಕ ಪ್ರದರ್ಶನ: ರಚನೆ: ಎಸ್.ವಿ. ಕೃಷ್ಣ ಶರ್ಮ, ನಿರ್ದೇಶನ: ಶಿವು ಹೊನ್ನಿಗಾನಹಳ್ಳಿ, ಸ್ಥಳ- ಕಲಾ ಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

ವಾರ್ಷಿಕ ಬಳಗಕೂಟ: ಅತಿಥಿಗಳು: ಸತ್ಯೇಶ್ ಬೆಳ್ಳೂರ್, ಎಂ.ವಿ. ಸತ್ಯನಾರಾಯಣ, ಅಧ್ಯಕ್ಷತೆ: ಎ.ವಿ. ಪ್ರಸನ್ನ, ಆಯೋಜನೆ ಮತ್ತು ಸ್ಥಳ: ಬಬ್ಬೂರುಕಮ್ಮೆ ಸೇವಾ ಸಮಿತಿಯ ಸಭಾಂಗಣ, ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿ ವಿದ್ಯಾರ್ಥಿನಿಲಯ, ಶೇಷಾದ್ರಿ ರಸ್ತೆ, ಬೆಳಿಗ್ಗೆ 10

ಕುವೆಂಪು ದರ್ಶನ ಮತ್ತು ಪ್ರಸ್ತುತತೆ: ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ಕಮಲಾ ಹಂಪನಾ, ಅತಿಥಿಗಳು: ಪಿ. ಮಲ್ಲಿಕಾರ್ಜುನಪ್ಪ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ಕೃಷ್ಣರಾಜ ಪರಿಷತ್ ಮಂದಿರ, ಕಸಾಪ, ಚಾಮರಾಜಪೇಟೆ, ಬೆಳಿಗ್ಗೆ 10


ನಿವೃತ್ತ ಪ್ರಾಧ್ಯಾಪಕರಿಗೆ ಸನ್ಮಾನ, ಪಿಎಚ್.ಡಿ ಪದವಿ ಪಡೆದವರು, ಪ್ರಶಸ್ತಿ ಪುರಸ್ಕೃತರು, ಶೈಕ್ಷಣಿಕ ಸಾಧನೆ ಮಾಡಿದವರಿಗೆ ಅಭಿನಂದನೆ ಸಮಾರಂಭ: ಅತಿಥಿಗಳು: ಎಲ್. ಹನುಮಂತಯ್ಯ, ಪುಟ್ಟಣ್ಣ, ಅಧ್ಯಕ್ಷತೆ: ಜಯಕರ ಎಸ್.ಎಂ., ಉಪಸ್ಥಿತಿ: ರಾಮಲಿಂಗಪ್ಪ ಟಿ. ಬೇಗೂರು, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಕಾಲೇಜು ಕನ್ನಡ ಅಧ್ಯಾಪಕರ ಸಂಘ, ಸ್ಥಳ: ಪ್ರೊ.ಕೆ. ವೆಂಕಟಗಿರಿಗೌಡ ಸ್ಮಾರಕ ಸಭಾಂಗಣ, ಜ್ಞಾನಭಾರತಿ, ಬೆಳಿಗ್ಗೆ 10

ದಲಿತ ಸಾಹಿತ್ಯ ಪರಿಷತ್ತಿನ ಬೆಳ್ಳಿ ಸಂಭ್ರಮ, ಪ್ರಶಸ್ತಿ ಪ್ರದಾನ ಮತ್ತು ಪುಸ್ತಕ ಬಿಡುಗಡೆ ಸಮಾರಂಭ: ಪ್ರಶಸ್ತಿ ಪ್ರದಾನ: ಮೂಡ್ನಾಕೂಡು ಚಿನ್ನಸ್ವಾಮಿ, ಸಿದ್ದು ಯಾಪಲಪರವಿ ಅವರ 'ಹಗಲಿನಲ್ಲಿ ಸಂಜೆಯಾಯಿತು' ಪುಸ್ತಕ ಬಿಡುಗಡೆ: ದೇವು ಪತ್ತಾರ, ಸಿದ್ದರಾಮ ಹಿಪ್ಪರಗಿ, ಅತಿಥಿಗಳು– ಡಾ.ವೈ.ಎಂ. ಭಜಂತ್ರಿ, ಸುಭಾಷ ಹೊದ್ಲೂರ, ಡಾ.ಎಚ್.ಬಿ. ಕೋಲ್ಕಾರ, ಅಧ್ಯಕ್ಷತೆ– ಡಾ. ಅರ್ಜುನ ಗೊಳಸಂಗಿ, ಆಯೋಜನೆ: ದಲಿತ ಸಾಹಿತ್ಯ ಪರಿಷತ್ತು, ಸ್ಥಳ: ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಪ್ರತಿಭಾ ಪುರಸ್ಕಾರ: ಸಾನ್ನಿಧ್ಯ: ದಯಾನಂದಪುರಿ ಸ್ವಾಮೀಜಿ, ಉದ್ಘಾಟನೆ: ವೀರೇಶಾನಂದ ಸರಸ್ವತೀ, ಅತಿಥಿಗಳು: ಆರ್. ಅಶೋಕ, ಕೆ. ನಾರಾಯಣ್, ಎಂ. ಕೃಷ್ಣಪ್ಪ, ಉಮಾಶ್ರೀ, ಎಂ.ಡಿ. ಲಕ್ಷ್ಮೀನಾರಾಯಣ, ರವೀಂದ್ರ ಪಿ. ಕಲಬುರಗಿ, ಆಯೋಜನೆ: ದೇವಾಂಗ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಮಾನವ ಹಕ್ಕುಗಳ ಬಗ್ಗೆ ಜಾಗೃತಿ, ಆರೋಗ್ಯ ಶಿಬಿರ, ಸರ್ಕಾರಿ ಶಾಲೆಯ ಮಕ್ಕಳಿಗೆ ಪುಸ್ತಕ ವಿತರಣೆ: ಅತಿಥಿಗಳು: ಬೈರತಿ ಸುರೇಶ್, ಮಂಜುನಾಥ್ ಬಾಬು, ಎ. ರಮೇಶ್, ವೆಂಕಟೇಶ ದೊಡ್ಡೇರಿ, ಗಂಡಸಿ ಸದಾನಂದಸ್ವಾಮಿ, ಅಧ್ಯಕ್ಷತೆ: ಪ್ರಸನ್ನ ಗೌಡ ಎಚ್.ಸಿ., ಆಯೋಜನೆ ಮತ್ತು ಸ್ಥಳ: ಮಾನವ ಹಕ್ಕುಗಳ ರಕ್ಷಣೆ ಮತ್ತು ಜಾಗೃತಿ ಸಂಸ್ಥೆ, ಶಾಂತಿಸಾಗರ ಹೋಟೆಲ್, ಆರ್.ಟಿ. ನಗರ, ಬೆಳಿಗ್ಗೆ 10

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಕಾರ್ತಿಕ ಗೌಡ ಎಚ್. ಜಿ., ಅತಿಥಿಗಳು: ಉಷಾ ದಾತಾರ್, ಸುನಿಲ್ ಕುಮಾರ್ ಸಿಂಗ್, ರಾಘವೇಂದ್ರ, ಭವಾನಿ ರಾಮನಾಥ, ಆಯೋಜನೆ: ನೃತ್ಯಾರ್ಪಣ ಸ್ಕೂಲ್ ಆಫ್ ಡಾನ್ಸ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಬೆಳಿಗ್ಗೆ 10


ಕಾರ್ತಿಕ ಗೌಡ ಎಚ್.ಜಿ.

ವಾರ್ಷಿಕೋತ್ಸವ: ಅತಿಥಿಗಳು: ಎನ್. ಕುಮಾರ್, ಸನ್ಮಾನಿತರು: ಟಿ.ಕೆ. ಸ್ವರೂಪ, ಡಾ.ಕೆ. ಪ್ರವೀಣ್, ಆಯೋಜನೆ: ವಂಗೀಪುರಂ ಮಹಾಸಭಾ, ಸ್ಥಳ: ಶಂಕರ ಸೇವಾ ಸಮಿತಿ, ರಾಜಾಜಿನಗರ, ಬೆಳಿಗ್ಗೆ 10.30

ಯು.ಆರ್. ಅನಂತಮೂರ್ತಿ ಸ್ಮಾರಕ ಉಪನ್ಯಾಸ: ವಿಷಯ: ವಿಜೃಂಭಿಸುತ್ತಿರುವ ರಾಜಕೀಯ ಕಾಲದಲ್ಲಿ ಸಂಸ್ಕೃತಿ ಮತ್ತು ಅಸ್ಮಿತೆ, ಉಪನ್ಯಾಸಕರು: ಪ್ರತಾಪ್ ಭಾನು ಮೆಹ್ತಾ, ಆಯೋಜನೆ: ಋಜುವಾತು, ಬಹುವಚನ, ಸ್ಥಳ: ಆರ್.ವಿ. ಟೀಚರ್ಸ್ ಕಾಲೇಜಿನ ಸಭಾಂಗಣ, ರಾಷ್ಟ್ರೀಯ ವಿದ್ಯಾಲಯ ರಸ್ತೆ, 2ನೇ ಬ್ಲಾಕ್, ಜಯನಗರ, ಬೆಳಿಗ್ಗೆ 11

ಅಂತರರಾಷ್ಟ್ರೀಯ ವಿಚಾರಸಂಕಿರಣದ ಉದ್ಘಾಟನೆ: ಇದಾ ರಸಿ ಪುತ್ರ ಮುನಾಬ, ಅತಿಥಿಗಳು: ಎಂ.ಆರ್. ನಾಗರಾಜು, ಎನ್. ನಂದಿನಿ, ದೇವು ರೂಪಾಂತರ, ಆರ್. ಕೆ. ಚಾರಿ, ಆಯೋಜನೆ ಮತ್ತು ಸ್ಥಳ: ಜ್ಞಾನಭಾರತ ಅಕಾಡೆಮಿ, ಜ್ಞಾನಜ್ಯೋತಿನಗರ, ಉಲ್ಲಾಳ ಮುಖ್ಯರಸ್ತೆ, ಬೆಳಿಗ್ಗೆ 11

ಸಂಸ್ಥಾಪಕರ ದಿನಾಚರಣೆ, ಚಿಂತಲಪಲ್ಲಿ ವೆಂಕಟರಾಮಯ್ಯ ಶತಮಾನೋತ್ಸವ ಆಚರಣೆ: ಗಾಯನ: ಶ್ರೀಕಾಂತಂ ನಾಗೇಂದ್ರಶಾಸ್ತ್ರಿ, ಪಿಟೀಲು: ಅಚ್ಯುತರಾವ್, ಮೃದಂಗ: ವಿ. ಕೃಷ್ಣ, ಘಟ: ರಮೇಶ್ ಟಿ.ಎನ್., ಆಯೋಜನೆ: ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, 1 ನೇ ಕೆ. ಬ್ಲಾಕ್, ರಾಜಾಜಿನಗರ, ಸಂಜೆ 5

'ಶಾಲಾ ಮಕ್ಕಳ ವಿಜ್ಞಾನ ಸ್ಪರ್ಧೆ ಮತ್ತು ಪ್ರದರ್ಶನ: ಅತಿಥಿಗಳು: ಎ.ಎಸ್. ಕಿರಣ್ ಕುಮಾರ್, ತರುಣ್ ಸೌರದೀಪ, ಆಯೋಜನೆ ಮತ್ತು ಸ್ಥಳ: ರಾಮನ್ ಇನ್‌ಸ್ಟಿಟ್ಯೂಟ್, ಸಿ. ವಿ. ರಾಮನ್ ಅವೆನ್ಯೂ, ಸದಾಶಿವನಗರ, ಮಧ್ಯಾಹ್ನ 3


ಎ.ಎಸ್.ಕಿರಣ್ ಕುಮಾರ್

ಕರ್ನಾಟಕ ರಾಜ್ಯೋತ್ಸವ: ಉದ್ಘಾಟನೆ: ವೆಂಕಟೇಶ್ ಆರ್. ದಾಸ್, ಅತಿಥಿಗಳು: ಇಸಾಕ್ ದೊಡ್ಡೇರಿ, ರೋ. ಮುನಿರಾಜು ಎನ್., ಸತೀಶ್ ರೆಡ್ಡಿ, ಉಪಸ್ಥಿತಿ: ಎಸ್.ಎಸ್. ಪಡಶೆಟ್ಟಿ, ಕೋ.ಲ. ರಂಗನಾಥರಾವ್, ಆಯೋಜನೆ: ಸಿರಿ ಗನ್ನಡ ಮಿತ್ರ ತಂಡ, ಸ್ಥಳ: ಬಿಎಂಶ್ರೀ ಕಲಾಭವನ, ಬಿಎಂಶ್ರೀ ಪ್ರತಿಷ್ಠಾನ, ನರಸಿಂಹರಾಜ ಕಾಲೊನಿ, ಮಧ್ಯಾಹ್ನ 3.30

ಸುಧಾಮೂರ್ತಿ ಅವರ 'ಗೋಪಿಯ ದಿನಚರಿ' ಪುಸ್ತಕ ಬಿಡುಗಡೆ: ಅತಿಥಿಗಳು: ಆರ್‌ಜೆಕೆ, ನತಾಶ ದೋಶಿ, ಉಪಸ್ಥಿತಿ: ಸುಧಾಮೂರ್ತಿ, ಆಯೋಜನೆ ಮತ್ತು ಸ್ಥಳ: ಸಪ್ನ ಬುಕ್, 7ನೇ, ಬ್ಲಾಕ್, ಕೋರಮಂಗಲ, ಸಂಜೆ 4


ಸುಧಾಮೂರ್ತಿ

ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮ: ಉಪನ್ಯಾಸ: ಪಿ.ಎನ್. ಶ್ರೀನಿವಾಸಾಚಾರಿ, ಅಧ್ಯಕ್ಷತೆ: ಬಿ.ಪಿ. ಕನಿರಾಮ್, ಆಯೋಜನೆ: ಕರ್ನಾಟಕ ವಿಶ್ವಕರ್ಮ ಸಾಹಿತ್ಯ ಕಲಾ ಅಕಾಡೆಮಿ, ಸ್ಥಳ: ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

ರಜತ ಜಯಂತಿ ವರ್ಷ: ಅತಿಥಿಗಳು: ಮದನ ಕಶ್ಯಪ, ಎ. ಅರವಿಂದಾಕ್ಷನ್, ಓಂ ಥಾಣ್ವೆ, ಸ್ಥಳ: ತಿರುಮಲ ವಿದ್ಯಾನಿಕೇತನ್, ವೈಯಾಲಿ ಕಾವಲ್, ಸಂಜೆ 5.30

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರ 'ಮೋಳಿಗೆ ಮಾರಯ್ಯ' ನಾಟಕ ಪ್ರದರ್ಶನ: ನಿರ್ದೇಶನ: ಮಾಲತೇಶ ಬಡಿಗೇರ್, ರಂಗ ವಿನ್ಯಾಸ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಪ್ರಯೋಗ ರಂಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

ಮಾರ್ಗಶೀರ್ಷೋತ್ಸವ: ನಾಮಸಂಕೀರ್ತನೆ: ಶೆಂಕೋಟ್ಟೈ ಹರಿಹರ ಸುಬ್ರಹ್ಮಣ್ಯನ್ ಭಾಗವತರ್ ಮತ್ತು ತಂಡ, ಆಯೋಜನೆ: ಸುರಭಾರತೀ, ಸ್ಥಳ: ಎಚ್‌ಆರ್‌ಬಿಆರ್ ಲೇಔಟ್, ಕಲ್ಯಾಣನಗರ, ಸಂಜೆ 6.30

ಸೌಭಾಗ್ಯಗೆ ನ್ಯಾಯಾಂಗ ಬಂಧನ

ಚಿತ್ರದುರ್ಗ: ಮುರುಘಾ ಮಠದ ಶಿವಮೂರ್ತಿ ಶರಣರ ವಿರುದ್ಧ ಪೋಕ್ಸೊ ಕಾಯ್ದೆಯಡಿ ದೂರು ದಾಖಲಿಸಲು ವಿದ್ಯಾರ್ಥಿನಿಯರಿಗೆ ಕುಮ್ಮಕ್ಕು ನೀಡಿದ ಹಾಗೂ ಪಿತೂರಿ ನಡೆಸಿದ ಆರೋಪದಡಿ ಬಂಧನವಾಗಿ ಪೊಲೀಸ್ ಕಸ್ಟಡಿಯಲ್ಲಿದ್ದ ಜಿ. ಪಂ. ಮಾಜಿ ಅಧ್ಯಕ್ಷೆ ಸೌಭಾಗ್ಯ ಬಸವರಾಜನ್‌ಗೆ 1ನೇ ಹೆಚ್ಚುವರಿ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ ಡಿ. 26ರವರೆಗೆ ನ್ಯಾಯಾಂಗ ಬಂಧನಕ್ಕೆ ಆದೇಶಿಸಿತು.

ಪೊಲೀಸ್ ಕಸ್ಟಡಿ ಅವಧಿ ಮುಗಿದ ಕಾರಣ ಸೌಭಾಗ್ಯ ಅವರನ್ನು ಶನಿವಾರ ಸಂಜೆ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದರು. 26ರವರೆಗೆ ನ್ಯಾಯಾಂಗ ಬಂಧನ ವಿಧಿಸಲಾಯಿತು. ಜಿಲ್ಲಾ ಕಾರಾಗೃಹದಲ್ಲಿ ಮಹಿಳಾ ಕೈದಿಗಳ ವಿಭಾಗ ಇಲ್ಲದ ಕಾರಣ ಅವರನ್ನು ಶಿವಮೊಗ್ಗ ಜಿಲ್ಲಾ ಕಾರಾಗೃಹಕ್ಕೆ ಕಳುಹಿಸಲಾಯಿತು.

2019ರ ವಿಧಾನಸಭಾ ಉಪಚುನಾವಣೆ • ಆರೋಪ–ಪ್ರತ್ಯಾರೋಪದ ಸುಳಿ; ವೆಚ್ಚಕ್ಕೆ ಕಡಿವಾಣ ಹೇಗೆ?

‘ಹುಣಸೂರು ಚುನಾವಣೆಗೆ ಕೊಟ್ಟಿದ್ದು ₹15 ಕೋಟಿ’

ಬೆಂಗಳೂರು: ‘2019ರಲ್ಲಿ ನಡೆದ ಹುಣಸೂರು ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ಎ.ಎಚ್.ವಿಶ್ವನಾಥ್ ಪಕ್ಷದಿಂದ ನೀಡಿದ್ದ ₹ 15 ಕೋಟಿಯಲ್ಲಿ ₹ 5 ಕೋಟಿ ಮಾತ್ರ ವೆಚ್ಚ ಮಾಡಿ, ₹ 10 ಕೋಟಿ ಆಸ್ತಿ ಖರೀದಿಗೆ ಬಳಸಿದ್ದರು’ ಎಂದು ಬಿಜೆಪಿಯ ಸಂಸದ ವಿ. ಶ್ರೀನಿವಾಸ್ ಪ್ರಸಾದ್ ಆರೋಪಿಸಿದ್ದರು. ಅದಕ್ಕೆ ಪ್ರತಿಕ್ರಿಯಿಸಿರುವ ವಿಶ್ವನಾಥ್, ‘ಶ್ರೀನಿವಾಸ್ ಪ್ರಸಾದ್ ಸಹ ಯಾವ ಪಕ್ಷಗಳಿಂದಲೂ ಚುನಾವಣಾ ಫಂಡ್ ಪಡೆದಿಲ್ಲವೆ’ ಎಂದು ಪ್ರಶ್ನಿಸಿದ್ದಾರೆ. ಚುನಾವಣಾ ಆಯೋಗದ ನಿಯಮಗಳ ಪ್ರಕಾರ, ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಯೊಬ್ಬರು ₹ 28 ಲಕ್ಷದವರೆಗೆ ಮಾತ್ರ ವೆಚ್ಚ ಮಾಡಬಹುದು. ಅದರ, ಹಲವು ಪಟ್ಟು ಹಣವನ್ನು ಚುನಾವಣೆಗೆ ಬಳಸುತ್ತಿರುವುದು ಹೊರಬಿದ್ದಿದೆ. ಇಂತಹ ಪ್ರಕರಣಗಳಲ್ಲಿ ಚುನಾವಣಾ ಆಯೋಗ, ತನಿಖಾ ಸಂಸ್ಥೆಗಳು ಯಾವ ಕ್ರಮ ಕೈಗೊಳ್ಳಬೇಕು ಎಂಬುದರ ಕುರಿತು ಹೋರಾಟಗಾರರು, ಲೋಕಾಯುಕ್ತರ ಪ್ರತಿಕ್ರಿಯೆಗಳು ಇಲ್ಲಿವೆ. ಈ ಸಂಬಂಧ ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಪ್ರತಿಕ್ರಿಯೆ ಪಡೆಯಲು ಯತ್ನಿಸಲಾಯಿತಾದರೂ ಅವರು ಕರೆ ಸ್ವೀಕರಿಸಲಿಲ್ಲ.

‘ಸಮಗ್ರ ತನಿಖೆ ನಡೆಯಲಿ’



ಒಬ್ಬರು ಹಾಲಿ ಸಂಸದರು, ಇನ್ನೊಬ್ಬರು ಹಾಲಿ ಶಾಸಕರು. ವೈಯಕ್ತಿಕವಾಗಿ ಏನೇ ಬೈದಾಡಿಕೊಳ್ಳಲಿ. ಆದರೆ, ಸಂಸದರು ಶಾಸಕರ ಮೇಲೆ ಮಾಡಿರುವ ಈ ಆರೋಪವು ಒಂದು ಕ್ರಿಮಿನಲ್ ಅಪರಾಧದ ಬಗ್ಗೆ ಬೊಟ್ಟು ಮಾಡುತ್ತಿದೆ.

ಚುನಾವಣಾ ನೀತಿಸಂಹಿತೆಗಳ ಅನ್ವಯ ಒಬ್ಬ ವಿಧಾನಸಭಾ ಅಭ್ಯರ್ಥಿ ಒಂದು ಚುನಾವಣೆಗೆ ಪ್ರಚಾರ ನಡೆಸಲು ಖರ್ಚು ಮಾಡುವುದಕ್ಕೆ ಇರುವ ಮಿತಿ ₹ 28 ಲಕ್ಷ. ಆದರೆ, ಇಲ್ಲಿ ಹದಿನೈದು ಕೋಟಿ ಕೊಟ್ಟ ಮತ್ತು ಐದು ಕೋಟಿ ಮಾತ್ರ ಖರ್ಚು ಮಾಡಿದ ಆಪಾದನೆಯನ್ನು ಶಾಸಕರ ಮೇಲೆ ಮಾಡಿದ್ದಾರೆ. ಈ ದೇಶದಲ್ಲಿ ಮರ್ಯಾದಸ್ಥ ಚುನಾವಣಾ ಆಯೋಗ ಇರುವುದು ಹೌದಾದರೆ, ಈ ಕೆಸರೆರಚಾಟದ ಬಗ್ಗೆ ಕೂಲಂಕಷ ತನಿಖೆ ನಡೆಸಬೇಕು. ಈ ದುಡ್ಡಿನ ಮೂಲ ಯಾವುದು? ಅವರ ಕೈಗೆ ಹೇಗೆ ಬಂತು? ಹೇಗೆ ವೆಚ್ಚವಾಯಿತು? ಆ ಚುನಾವಣೆಗೆ ಅಭ್ಯರ್ಥಿ ತೋರಿಸಿದ ಖರ್ಚಿನ ಲೆಕ್ಕ ಎಷ್ಟು? ನಿಜವಾದ ಖರ್ಚು ಎಷ್ಟು? ಇದೆಲ್ಲದರ ತನಿಖೆ ನಡೆಸಲೇಬೇಕು

ರಾಜಾರಾಂ ತಲ್ಲೂರು, ಲೇಖಕ

‘ಅಧಿಕಾರ ವ್ಯಾಪ್ತಿ ಪರಿಶೀಲಿಸಿ ಮುಂದಿನ ಕ್ರಮ’



ಇದು ಚುನಾವಣೆಗೆ ಸಂಬಂಧಿಸಿದ ವಿಚಾರ. ಇಂತಹ ಪ್ರಕರಣಗಳಲ್ಲಿ ಚುನಾವಣಾ ಆಯೋಗಕ್ಕೆ ಹೆಚ್ಚು ಅಧಿಕಾರವಿದೆ. ಸರ್ಕಾರಿ ನೌಕರರಿಗೆ ಸಂಬಂಧಿಸಿದ ವಿಷಯದಲ್ಲಿ ಮಾತ್ರ ಲೋಕಾಯುಕ್ತ ಜರುಗಿಸಬಹುದು. ದೂರು ಬಂದರೆ ಲೋಕಾಯುಕ್ತಕ್ಕೆ ಇರುವ ಅಧಿಕಾರ ಮತ್ತು ಈ ಪ್ರಕರಣ ಅದರ ವ್ಯಾಪ್ತಿಗೆ ಬರುತ್ತದೆಯೆ ಎಂದು ಪರಿಶೀಲಿಸಲಾಗುವುದು. ಆ ಬಳಿಕ ಕ್ರಮ ಜರುಗಿಸಲಾಗುವುದು. ರಾಜಕೀಯ ಪಕ್ಷಗಳೂ ಪ್ರಕರಣದ ಭಾಗವಾಗಿರುವುದರಿಂದ ನೇರವಾಗಿ ಲೋಕಾಯುಕ್ತ ಕ್ರಮ ಜರುಗಿಸಲು ಅವಕಾಶಗಳು ಕಡಿಮೆ. ರಾಜಕೀಯ ಪಕ್ಷವನ್ನು ‘ಸಾರ್ವಜನಿಕ ನೌಕರ’ ಅಥವಾ ‘ಸಾರ್ವಜನಿಕ ಸಂಸ್ಥೆ’ ಎಂಬುದಾಗಿ ಪರಿಗಣಿಸಬಹುದೇ ಎಂಬುದು ಮೊದಲು ಇತ್ಯರ್ಥ ಆಗಬೇಕಾಗುತ್ತದೆ. ನಂತರವೇ ಮುಂದುವರಿಯಬೇಕಾಗುತ್ತದೆ.

ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ಲೋಕಾಯುಕ್ತ

‘ಆಯೋಗ ಕ್ರಮ ಜರುಗಿಸಬೇಕು’



ರಾಜ್ಯದಲ್ಲಿ 2018ರ ಚುನಾವಣೆಯ ನಂತರ ಅಧಿಕಾರಕ್ಕೆ ಬಂದ ಸಮ್ಮಿಶ್ರ ಸರ್ಕಾರವನ್ನು ಹಣದಿಂದಲೇ ಬೀಳಿಸಲಾಗಿತ್ತು. ಈಗ ಮಾರಾಟಗೊಂಡಿದ್ದ ಶಾಸಕರನ್ನು ಮತ್ತೆ ಗೆಲ್ಲಿಸಲು ಬಿಜೆಪಿ ಹಣದ ಹೊಳೆ ಹರಿಸಿದೆ ಎನ್ನುವುದು ಶ್ರೀನಿವಾಸ್ ಪ್ರಸಾದ್ ಹೇಳಿಕೆಯಿಂದ ಬಹಿರಂಗವಾಗಿದೆ.

ಚುನಾವಣಾ ಆಯೋಗ ಪ್ರಸಾದ್ ಅವರ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಹಣಕೊಟ್ಟವರ, ಪಡೆದವರ ವಿರುದ್ಧ ಪ್ರಕರಣ ದಾಖಲಿಸಬೇಕು. ತನಿಖೆ ನಡೆಸಬೇಕು. ಇಂತಹ ಅಸಹ್ಯ ರಾಜಕಾರಣಕ್ಕೆ ಅಂತ್ಯ ಹಾಡಬೇಕು.

ಆದರ್ಶ ಆರ್.ಅಯ್ಯರ್, ಸಹ ಅಧ್ಯಕ್ಷ, ಜನಾಧಿಕಾರ ಸಂಘರ್ಷ ಪರಿಷತ್

‘ಇ.ಡಿ ಏನು ಮಾಡುತ್ತಿದೆ?’



ವಿಧಾನಸಭೆಗೆ 2019ರಲ್ಲಿ ನಡೆದಿದ್ದ ಉಪ ಚುನಾವಣೆಗೆ ಆಯೋಗ ನಿಗದಿ ಮಾಡಿದ್ದಕ್ಕಿಂತ 50 ಪಟ್ಟು ಅಧಿಕ ಹಣ ಬಿಜೆಪಿ ತನ್ನ ಅಭ್ಯರ್ಥಿಗೆ ನೀಡಿದೆ. ಶ್ರೀನಿವಾಸ್ ಪ್ರಸಾದ್ ಅವರ ಹೇಳಿಕೆ ನಿಜವೇ ಆಗಿದ್ದರೆ ಎ.ಎಚ್.ವಿಶ್ವನಾಥ್ ಅವರ ವಿರುದ್ಧ ಏಕೆ ಪ್ರಕರಣ ದಾಖಲಿಸಿಲ್ಲ. ವಿರೋಧ ಪಕ್ಷಗಳ ಮೇಲೆ ಮುರಿದುಕೊಂಡು ಬೀಳುತ್ತಿರುವ ಜಾರಿ ನಿರ್ದೇಶನಾಲಯ (ಇ.ಡಿ) ಏನು ಮಾಡುತ್ತಿದೆ. ಬಿಜೆಪಿಗೆ ಅಷ್ಟೊಂದು ಹಣ ಎಲ್ಲಿಂದ ಬಂತು? ಆ ಹಣವನ್ನು ನಗದು ರೂಪದಲ್ಲಿ ಕೊಟ್ಟಿದ್ದರೋ? ಚೆಕ್ ಕೊಡಲಾಗಿತ್ತೋ ಎನ್ನುವ ಮಾಹಿತಿಯನ್ನೂ ಬಹಿರಂಗಪಡಿಸಬೇಕು. ಡಿಜಿಟಲ್ ಬಳಕೆ ಕುರಿತು ಬೊಬ್ಬೆ ಹೊಡೆಯುವ ಪ್ರಧಾನಿ ಮೋದಿಯವರು ಈ ಕುರಿತು ಏನನ್ನುತ್ತಾರೆ?

ಸಿ.ಎನ್.ದೀಪಕ್, ರಾಜ್ಯ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ

ಸುದ್ದಿ 2 ನಿಮಿಷ

ರಾಮನಗರ ಕ್ಷೇತ್ರ: ನಿಖಿಲ್ ಜೆಡಿಎಸ್ ಅಭ್ಯರ್ಥಿ

ರಾಮನಗರ: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ರಾಮನಗರ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ನಿಖಿಲ್ ಕುಮಾರಸ್ವಾಮಿ ಕಣಕ್ಕೆ ಇಳಿಯಲಿದ್ದಾರೆ.

ನಗರದಲ್ಲಿ ಶನಿವಾರ ನಡೆದ ಪಂಚರತ್ನ ರಥಯಾತ್ರೆ ಸಂದರ್ಭ ಹಾಲಿ ಶಾಸಕಿ ಅನಿತಾ ಕುಮಾರಸ್ವಾಮಿ ಈ ಘೋಷಣೆ ಮಾಡಿದರು.

‘ಕೆಲವರು ನನ್ನ ಬಗ್ಗೆ ಅಪಪ್ರಚಾರ ಮಾಡುತ್ತಿದ್ದರು. ಇದಕ್ಕೆಲ್ಲ ತೆರೆ ಎಳೆಯಬೇಕು ಎಂದೇ ಇಂದು ಈ ಘೋಷಣೆ ಮಾಡಿದ್ದೇನೆ. 2023ರ ಚುನಾವಣೆಯಲ್ಲಿ ನನ್ನ ಮಗನನ್ನು ಈ ಕ್ಷೇತ್ರದಿಂದ ಅಭ್ಯರ್ಥಿಯಾಗಿಸಲು ತೀರ್ಮಾನಿಸಿದ್ದೇವೆ. ನಮ್ಮ ಕುಟುಂಬಕ್ಕೆ ಆಶೀರ್ವಾದ ನೀಡಿದಂತೆ ಅವನನ್ನೂ ಬೆಂಬಲಿಸಬೇಕು’ ಎಂದು ಕೋರಿದರು.

‘ಕ್ಷೇತ್ರದಲ್ಲಿ ಹೋದಲ್ಲೆಲ್ಲ ನಾನು ಅಭ್ಯರ್ಥಿ ಆಗಬೇಕು ಎಂದು ಜನ ಬಯಸಿದ್ದರು. ಈಗ ನನ್ನ ತಾಯಿ ಅಧಿಕೃತವಾಗಿ ಘೋಷಣೆ ಮಾಡಿದ್ದಾರೆ. ಆ ಜವಾಬ್ದಾರಿ ಹೊರಲು ನಾನು ಸಿದ್ಧನಾಗುತ್ತೇನೆ’ ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಪ್ರತಿಕ್ರಿಯಿಸಿದರು.

ಕಳೆದ ಬಾರಿ ಕುಮಾರಸ್ವಾಮಿ ಚನ್ನಪಟ್ಟಣ ಹಾಗೂ ರಾಮನಗರ ಎರಡೂ ಕ್ಷೇತ್ರದಲ್ಲೂ ಸ್ಪರ್ಧಿಸಿ ಗೆದ್ದ ಬಳಿಕ ರಾಮನಗರ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ನಂತರ ನಡೆದ ಉಪ ಚುನಾವಣೆಯಲ್ಲಿ ಅನಿತಾ ಕುಮಾರಸ್ವಾಮಿ ಆಯ್ಕೆ ಆಗಿದ್ದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಈ ಸಂದರ್ಭ ಜೊತೆಗಿದ್ದರು. ಪಂಚರತ್ನ ಯಾತ್ರೆ ಸಂದರ್ಭ ಹೆಲಿಕಾಪ್ಟರ್‌ನಿಂದ ಪುಷ್ಪವೃಷ್ಟಿಯೂ ನಡೆಯಿತು.



ಸಭಾಪತಿ ಹುದ್ದೆಗೆ ನಾನೇ ಬಿಜೆಪಿ ಅಭ್ಯರ್ಥಿ: ಬಸವರಾಜ ಹೊರಟ್ಟಿ

ಧಾರವಾಡ: ‘ವಿಧಾನ ಪರಿಷತ್ ಸಭಾಪತಿ ಸ್ಥಾನಕ್ಕೆ ನನ್ನನ್ನು ಬಿಜೆಪಿಯ ಅಧಿಕೃತ ಅಭ್ಯರ್ಥಿ ಎಂದು ಘೋಷಿಸಲಾಗಿದೆ. ವಿಧಾನ ಪರಿಷತ್ ಸದಸ್ಯ ರವಿಕುಮಾರ ಅವರು ಕರೆ ಮಾಡಿ ಈ ವಿಚಾರ ತಿಳಿಸಿದ್ದಾರೆ. ಶನಿವಾರ ಅಧಿಕೃತ ಘೋಷಣೆ ಹೊರಬೀಳಲಿದೆ’ ಎಂದು ಪರಿಷತ್ ಸದಸ್ಯ ಬಸವರಾಜ ಹೊರಟ್ಟಿ ತಿಳಿಸಿದರು.

ಶನಿವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬೆಳಗಾವಿಯಲ್ಲಿ ಅಧಿವೇಶನ ನಡೆಯುವಾಗ ಪ್ರತಿಭಟನೆ ಮಾಡುವುದು ಬೇಡ. ಅಲ್ಲಿ ಉತ್ತರ ಕರ್ನಾಟಕ ಸಮಸ್ಯೆಗಳ ಕುರಿತು ಚರ್ಚೆಯಾಗಬೇಕು. ವಿನಾಕಾರಣ ಪ್ರತಿಭಟನೆಯಿಂದ ಚರ್ಚೆಗಳು ನಡೆಯಲ್ಲ’ ಎಂದರು.

‘ನಮ್ಮದು ಸಮಗ್ರ ಕರ್ನಾಟಕ, ಅದರಲ್ಲಿ ಎರಡು ಮಾತಿಲ್ಲ. ಆದರೆ, ಪ್ರಮುಖವಾಗಿ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಸ್ಪಂದಿಸಲು ಸರ್ಕಾರ, ಸದಸ್ಯರು ಮುಂದಾಗಬೇಕು. ಬೆಳಗಾವಿಯಲ್ಲಿ ನಡೆಯುವ ಅಧಿವೇಶನದಲ್ಲಿ ಈ ಭಾಗದ ಸಮಸ್ಯೆ ಬಗ್ಗೆ ಚರ್ಚೆ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ’ ಎಂದರು.

ಕಾಂಗ್ರೆಸ್ ವಿರುದ್ಧ 19ರಿಂದ ಬಿಜೆಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಯೋತ್ಪಾದಕರನ್ನು ಬೆಂಬಲಿಸುವ ಕಾಂಗ್ರೆಸ್ ಪಕ್ಷದ ಧೋರಣೆಯನ್ನು ವಿರೋಧಿಸಿ ಡಿ.19ರಿಂದ ಮೂರು ದಿನ ರಾಜ್ಯದ ಎಲ್ಲೆಡೆ ಹೋರಾಟ ನಡೆಸಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಹೇಳಿದ್ದಾರೆ.

ಉಗ್ರರನ್ನು ರಕ್ಷಿಸುವ ಹಾಗೂ ಅವರನ್ನು ರಕ್ಷಿಸುವ ವಿರೋಧ ಪಕ್ಷ ರಾಜ್ಯದಲ್ಲಿದೆ. ಹಿಂದೆ ಅಧಿಕಾರದಲ್ಲಿ ಇದ್ದಾಗ ಅವರ ವಿರುದ್ಧದ ಪ್ರಕರಣಗಳನ್ನು ರದ್ದುಮಾಡಿತ್ತು. ಪಿಎಫ್ಐ ಭಾಗ್ಯ, ಟಿಪ್ಪು ಜಯಂತಿ ಭಾಗ್ಯದಂತಹ ನೆರವು ನೀಡುವ ಕೆಲಸವನ್ನು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಿರಂತರವಾಗಿ ಮಾಡುತ್ತ ಬಂದಿದ್ದಾರೆ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

‘ಚುನಾವಣೆಗೆ ಪ್ರಸಾದ್ ಹಣ ಪಡೆದಿಲ್ಲವೇ?’

ಪ್ರಜಾವಾಣಿ ವಾರ್ತೆ

ಮೈಸೂರು: ‘ಸಂಸದ ವಿ.ಶ್ರೀನಿವಾಸಪ್ರಸಾದ್ ಅವರು ಚುನಾವಣೆ ಸಂದರ್ಭದಲ್ಲಿ ಪಕ್ಷದಿಂದ ಹಣ ಪಡೆದಿಲ್ಲವೇ? ಅವರೂ ಹಲವು ಚುನಾವಣೆಗಳನ್ನು ನಡೆಸಿದ್ದಾರೆ. ಹಾಗಾದರೆ, ಯಾರಿಂದಲೂ ಹಣ ಪಡೆದಿಲ್ಲವೇ, ಪಕ್ಷದವರು ಕೊಟ್ಟಿಲ್ಲವೇ’ ಎಂದು ಬಿಜೆಪಿಯ ವಿಧಾನಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ತಿರುಗೇಟು ನೀಡಿದರು.

‘ಹುಣಸೂರು ಉಪ ಚುನಾವಣೆಗೆಂದು ಬಿಜೆಪಿಯವರು ಕೊಟ್ಟಿದ್ದ ₹ 15 ಕೋಟಿಯಲ್ಲಿ ₹ 10 ಕೋಟಿಯನ್ನು ವಿಶ್ವನಾಥ್ ಜೇಬಿಗಿಳಿಸಿಕೊಂಡ’ ಎಂಬ ಶ್ರೀನಿವಾಸಪ್ರಸಾದ್ ಹೇಳಿಕೆಗೆ ಇಲ್ಲಿ ಶನಿವಾರ ತೀಕ್ಷ್ಣ ಪ್ರತಿಕ್ರಿಯೆ ನೀಡಿದರು.

‘ಚುನಾವಣೆಯಲ್ಲಿ ಅಭ್ಯರ್ಥಿಗಳಿಗೆ ಯಾವುದೇ ಪಕ್ಷ ಹಣ ಕೊಡುವುದು–ತೆಗೆದುಕೊಳ್ಳುವುದು ಸಹಜ. ಅದು ಅವರಿಗೆ ಗೊತ್ತಿಲ್ಲದಿರುವಂಥದ್ದೇನಲ್ಲ. ಅದನ್ನು ಈಗ ಹೇಳುವಂಥದ್ದು ಏನಿತ್ತು?’ ಎಂದು ಪ್ರಶ್ನಿಸಿದರು. ‘ಸುಮ್ಮನೆ ಪೆದ್ದು ಪೆದ್ದಾಗಿ ಮಾತನಾಡುವುದನ್ನೆಲ್ಲಾ ಒಪ್ಪುವುದಿಲ್ಲ’ ಎಂದರು.

‘ಉಪ ಚುನಾವಣೆ ವೇಳೆ ಬಿ.ಎಸ್. ಯಡಿಯೂರಪ್ಪ ಸೈನಿಕನ ಕೈಯಲ್ಲಿ ದುಡ್ಡು ಕೊಟ್ಟು ಕಳುಹಿಸಿದ್ದರು. ಆತ ಹುಣಸೂರಿಗೆ ಬರಲಿಲ್ಲ. ನನಗೆ ಎಷ್ಟು ಕೋಟಿ ರೂಪಾಯಿ ಬಂದಿದೆ ಎನ್ನುವುದು ಪ್ರಸಾದ್‌ಗೇನು ಗೊತ್ತು? ದಲಿತರ ಕಷ್ಟಕ್ಕಾಗದ ವೈಟ್ ಕಾಲರ್ ರಾಜಕಾರಣಿ, ದಲಿತರ ಮೇಲೆ ದೌರ್ಜನ್ಯ ನಡೆದಾಗ ಧ್ವನಿ ಎತ್ತಿಲ್ಲ. ಈಗ ನನ್ನ ಬಗ್ಗೆ ಬೀದಿ ರೌಡಿಯಂತೆ ಮಾತನಾಡಿದ್ದಾರೆ’ ಎಂದು ಟೀಕಾಪ್ರಹಾರ ನಡೆಸಿದರು.

‘ನನ್ನನ್ನು ಪಕ್ಷ ಬಿಡು ಎನ್ನಲು ಪ್ರತಾಪ ಸಿಂಹ ಯಾರು?. ನನ್ನನ್ನು ಕೇಳಲು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಿದ್ದಾರೆ. ಬೇರೆಯವರು ಮಾಡಿರುವ ಕೆಲಸವನ್ನು ತಾನೇ ಮಾಡಿಸಿದ್ದೆಂದು ತಿರುಗುವ ಆತನಿಗೆ ನಾಚಿಕೆಯಾಗಬೇಕು’ ಎಂದರು.

‘ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಕಾಂಗ್ರೆಸ್ ಪಕ್ಷವನ್ನು ನಿಷೇಧಿಸುವ ಪರಿಸ್ಥಿತಿ ಬರುತ್ತದೆ ಎನ್ನಲು ಶಾಸಕ ಕೆ.ಎಸ್.ಈಶ್ವರಪ್ಪ ಯಾರು? ಇಂದಿರಾಗಾಂಧಿ ಮನೆ ಮ್ಯೂಸಿಯಂ ಆಗಿದೆ. ಅವರ ದೇವರ ಕೋಣೆಯಲ್ಲಿ ಭಾರತದ ಭೂಪಟವಿದೆ. ಅವರೇ ನಿಜವಾದ ದೇಶ ಭಕ್ತರು’ ಎಂದರು.

‘ಸಂದರ್ಭ ಬಂದರೆ ಕಾಂಗ್ರೆಸ್‌ಗೆ ಹೋಗುತ್ತೇನೆ, ಇಲ್ಲವಾದರೆ ಇಲ್ಲೇ ಇರುತ್ತೇನೆ. ಯಾವುದೇ ಪಕ್ಷದಲ್ಲಿದ್ದರೂ ಅದರ ತಪ್ಪಿನ ಬಗ್ಗೆ ಮಾತನಾಡುವುದು ನಾನು ಮಾತ್ರ. ಬಾವುಟ ಬದಲಾದರೂ, ನನ್ನ ಕಾರ್ಯಸೂಚಿ ಬದಲಾಗದು’ ಎಂದರು.

‘ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಾಗಲೀ, ಕಾಂಗ್ರೆಸ್ ಆಗಲಿ ಭಯೋತ್ಪಾದಕರ ಬೆನ್ನು ತಟ್ಟುತ್ತಿಲ್ಲ. ನೀವು ಮತದಾರ ಪಟ್ಟಿಯನ್ನೇ ಬದಲಿಸುತ್ತಿದ್ದೀರಲ್ಲಾ ನಾಚಿಕೆ ಆಗುವುದಿಲ್ಲವೇ? ಮತದಾರರ ಹಕ್ಕನ್ನೇ ಕಸಿಯಲು ಹೊರಟಿದ್ದೀರಿ ಎಂದರೆ ಇನ್ನಾವುದನ್ನೋ ತಂದು ಬಿಡುತ್ತೀರಿ. ಮುಖ್ಯಮಂತ್ರಿ ಆದಿಯಾಗಿ ಎಲ್ಲರೂ ಯಾಕಿಷ್ಟು ಸುಳ್ಳು ಹೇಳುತ್ತಿದ್ದೀರಿ. ಬಿಜೆಪಿಯ ಈ ನಡೆಯನ್ನು ನಾನು ಒಪ್ಪುವುದಿಲ್ಲ’ ಎಂದರು.

ಅಪಥ್ಯವಾದರೂ ಬಿಜೆಪಿಯಲ್ಲಿ ಏಕಿರಬೇಕು: ವಿಶ್ವನಾಥ್‌ಗೆ ಪ್ರತಾಪ ಪ್ರಶ್ನೆ

ಮೈಸೂರು: ‘ವಿಧಾನಪರಿಷತ್ ಸದಸ್ಯ ಎ.ಎಚ್. ವಿಶ್ವನಾಥ್ ಅವರಿಗೆ ಬಿಜೆಪಿಯ ತತ್ವ–ಸಿದ್ಧಾಂತಗಳು ಅಪಥ್ಯವಾದರೂ ಬಿಜೆಪಿಯಲ್ಲಿ ಏಕಿರಬೇಕು? ಬೇರೆ ಕಡೆಗೆ ಹೋಗಬಹುದಲ್ಲವೇ?’ ಎಂದು ಬಿಜೆಪಿಯ ಸಂಸದ ಪ್ರತಾಪ ಸಿಂಹ ಕೇಳಿದರು.

ಚಾಮರಾಜನಗರ ಸಂಸದ ವಿ.ಶ್ರೀನಿವಾಸ ಪ್ರಸಾದ್ ವಿರುದ್ಧ ವಿಶ್ವನಾಥ್ ಟೀಕಾಪ್ರಹಾರದ ಬಗ್ಗೆ ಇಲ್ಲಿ ಶನಿವಾರ ಪ್ರತಿಕ್ರಿಯಿಸಿದ ಅವರು, ‘ಪಕ್ಷದಲ್ಲೇ ಇದ್ದುಕೊಂಡು ಇಲ್ಲಿನವರನ್ನೇ ಮಾತುಗಳ ಮೂಲಕ ನಿತ್ಯವೂ ಚುಚ್ಚುವುದು, ತಿವಿಯುವುದನ್ನು ಅವರು ಬಿಡಬೇಕು. ವಿಶ್ವನಾಥ್ ಬಗ್ಗೆ ಬೇಸತ್ತಿರುವ ಜನ ಈಗಾಗಲೇ ಚುನಾವಣೆಯಲ್ಲಿ ಎಚ್ಚರಿಕೆಯ ಸಂದೇಶವನ್ನು ನೀಡಿದ್ದಾರೆ. ಆದರೂ ಬುದ್ಧಿ ಕಲಿಯುತ್ತಿಲ್ಲವಲ್ಲಾ’ ಎಂದು ಪ್ರಶ್ನಿಸಿದರು.

‘ಶ್ರೀನಿವಾಸ ಪ್ರಸಾದ್ ಅತ್ಯಂತ ಹಿರಿಯ ರಾಜಕಾರಣಿ. ಎಲ್ಲ ಸಮಾಜದವರಿಗೂ ಅವರ ಬಗ್ಗೆ ಗೌರವವಿದೆ. ಸಾರ್ವಜನಿಕ ಹಾಗೂ ವೈಯಕ್ತಿಕ ಜೀವನದ ಬಗ್ಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. ಅವರು ಏನೇ ಹೇಳಿದರೂ ಒಂದು ತೂಕವಿರುತ್ತದೆ’ ಎಂದು ಹೇಳಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ಗ್ರಾಮ ವಾಸ್ತವ್ಯದ ಹಳ್ಳಿಗೆ ₹1 ಕೋಟಿ ಅನುದಾನ

ಪ್ರಜಾವಾಣಿ ವಾರ್ತೆ

ಬಾಡ (ಹಾವೇರಿ): ‘ಕಂದಾಯ ಸಚಿವರು ಎಲ್ಲೆಲ್ಲಿ ಗ್ರಾಮ ವಾಸ್ತವ್ಯ ಮಾಡುತ್ತಾರೋ ಆ ಗ್ರಾಮಕ್ಕೆ ₹1 ಕೋಟಿ ಅನುದಾನ ನೀಡಲು ಸರ್ಕಾರ ತೀರ್ಮಾನಿಸಿದೆ. ಈ ಪ್ರಕಾರ ಕನಕದಾಸರ ಜನ್ಮಭೂಮಿಯಾದ ಬಾಡ ಗ್ರಾಮಕ್ಕೆ ₹1 ಕೋಟಿ ಅನುದಾನ ಬಿಡುಗಡೆ ಮಾಡಿ, ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶಿಗ್ಗಾವಿ ತಾಲ್ಲೂಕಿನ ಬಾಡ ಗ್ರಾಮದಲ್ಲಿ ಶನಿವಾರ ಏರ್ಪಡಿಸಿದ್ದ ಕಂದಾಯ ಸಚಿವರ ಗ್ರಾಮ ವಾಸ್ತವ್ಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾವುಕರಾದ ಸಿಎಂ: ನಾನು ಸತ್ತ ಮೇಲೆ ನನ್ನ ಹೆಣವನ್ನು ಇದೇ ಮಣ್ಣಲ್ಲಿ (ಶಿಗ್ಗಾವಿ ಕ್ಷೇತ್ರ) ಹೂಳಬೇಕು ಅಂತ ಘೋಷಣೆ ಮಾಡಿದ್ದೇನೆ ಎಂದು ಭಾವುಕರಾಗಿ ಮಾತು ನಿಲ್ಲಿಸಿದರು.



ಗ್ರಾಮ ವಾಸ್ತವ್ಯ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಫಲಾನುಭವಿಯೊಬ್ಬರಿಗೆ ಆದೇಶ ಪತ್ರ ವಿತರಿಸಿದರು. ಕಂದಾಯ ಸಚಿವ ಆರ್.ಅಶೋಕ, ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ್ ಇದ್ದಾರೆ

ಸಿದ್ದರಾಮಯ್ಯಗೆ ತಿರುಗೇಟು: ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, ಕಂಬಳಿ ಹಾಕಿಕೊಂಡು ನಾಟಕ ಮಾಡಿದವರು, ಅಹಿಂದ ಎಂದು ಘೋಷಣೆ ಮಾಡಿದವರು ಕುರಿಗಾಹಿಗಳಿಗೆ ಕುರಿ ಕೊಡಲಿಲ್ಲ. ನಮ್ಮ ಬೊಮ್ಮಾಯಿ ಅವರು ಕುರಿಗಾಹಿಗಳಿಗೆ ಕುರಿಯನ್ನು ಉಚಿತವಾಗಿ ನೀಡುವ ಮೂಲಕ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದಿದ್ದಾರೆ ಎಂದು ಹೇಳುವ ಮೂಲಕ ಸಿದ್ದರಾಮಯ್ಯ ಅವರ ಹೆಸರು ಹೇಳದೇ ಟೀಕಿಸಿದರು.

2,790 ಗ್ರಾಮ ವಾಸ್ತವ್ಯ: ಕಂದಾಯ ಸಚಿವ ಆರ್. ಅಶೋಕ ಮಾತನಾಡಿ, ಸರ್ಕಾರಿ ಕಚೇರಿಗಳಿಗೆ ಅಲೆದಾಡಿ, ಚಪ್ಪಲಿ ಸವೆಯುತ್ತವೆಯೇ ಹೊರತು ನಮಗೆ ಪರಿಹಾರ ಸಿಗುವುದಿಲ್ಲ ಎಂಬ ಜನರ ಭಾವನೆ ಹೋಗಲಾಡಿಸಲು ‘ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ’ ಕಾರ್ಯಕ್ರಮ ರೂಪಿಸಿದೆ. ಇದು ನನ್ನ 13ನೇ ಗ್ರಾಮ ವಾಸ್ತವ್ಯ. ಇದುವರೆಗೆ ರಾಜ್ಯದಲ್ಲಿ ವಿವಿಧ ಜಿಲ್ಲಾಧಿಕಾರಿಗಳು 350 ಕಡೆ, ಉಪವಿಭಾಗಾಧಿಕಾರಿಗಳು 351 ಕಡೆ, ತಹಶೀಲ್ದಾರ್‌ಗಳು 2,089 ಕಡೆ ಸೇರಿದಂತೆ ಒಟ್ಟು 2,790 ಗ್ರಾಮ ವಾಸ್ತವ್ಯ ಮಾಡಲಾಗಿದೆ. ಒಟ್ಟು 3,72,856 ಜನರಿಗೆ ಸ್ಥಳದಲ್ಲೇ ಪರಿಹಾರ ಕೊಡಲಾಗಿದೆ ಎಂದು ವಿವರ ನೀಡಿದರು.

ಅಲೆಮಾರಿ ಅಭಿವೃದ್ಧಿ ನಿಗಮ ಸ್ಥಾಪನೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ ರಚಿಸಿ ರಾಜ್ಯ ಸರ್ಕಾರ ಹೊರಡಿಸಿದೆ. ಇದು, ಸಮುದಾಯಗಳ ಬಹುದಿನಗಳ ಬೇಡಿಕೆಯಾಗಿತ್ತು.

ಪರಿಶಿಷ್ಟ ಜಾತಿಯ 51 ಮತ್ತು ಪರಿಶಿಷ್ಟ ಪಂಗಡದಲ್ಲಿನ 23 ಅಲೆಮಾರಿ ಉಪ ಜಾತಿಗಳ ಒಟ್ಟು ಜನಸಂಖ್ಯೆ 9.91 ಲಕ್ಷ (2011ರ ಜನಗಣತಿ ಪ್ರಕಾರ) ಈ ನಿಗಮದಲ್ಲಿ ಸೌಲಭ್ಯ ಪಡೆದುಕೊಳ್ಳಲಿದ್ದಾರೆ. ವ್ಯವಸ್ಥಾಪಕ ನಿರ್ದೇಶಕ ಸೇರಿ ಎಂಟು ಹುದ್ದೆಗಳನ್ನು ಸೃಜಿಸಿದೆ. ಜಿಲ್ಲಾ ಕೇಂದ್ರಗಳಲ್ಲಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳೇ ನಿಗಮದ ಕೆಲಸ ನಿರ್ವಹಿಸಬೇಕು. ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಲೆಕ್ಕ ಶೀರ್ಷಿಕೆಯ ಅನುದಾನ ಬಳಸಿಕೊಳ್ಳಲು ಆದೇಶದಲ್ಲಿ ತಿಳಿಸಲಾಗಿದೆ.

ಪ್ರತ್ಯೇಕ ನಿಗಮ ಸ್ಥಾಪನೆ ಸಂಬಂಧ ಎರಡು ತಿಂಗಳ ಹಿಂದೆಯೇ ಸಚಿವ ಸಂಪುಟ ಸಭೆ ತೀರ್ಮಾನ ಕೈಗೊಂಡಿತ್ತು.

ಸದಾಶಿವ ಆಯೋಗದ ವರದಿ ವಿರೋಧಿಸಿ ಜ.10ಕ್ಕೆ ಪ್ರತಿಭಟನೆ

ಒಂದನೇ ಪುಟದಿಂದ

ಸಭೆಯಲ್ಲಿ ಬಂಜಾರ ಗುರುಪೀಠದ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಭೋವಿ ಸಮಾಜದ ಮುಖಂಡರಾದ ರವಿ ಮಾಕಳಿ, ಮೈಸೂರು ಸೀತಾರಾಮು, ಶಿವಮೊಗ್ಗ ರವಿಕುಮಾರ್, ಹಾವೇರಿ ರವಿ, ಬಳ್ಳಾರಿ ಮಹೇಶ, ದಾವಣಗೆರೆ ಜಯಪ್ಪ, ರವಿ ಹುಚ್ಚಂಗಿಪುರ, ಚಿತ್ರದುರ್ಗ ತಿಪ್ಪೇಸ್ವಾಮಿ, ಚಿಕ್ಕಮಗಳೂರು ಕೊಲ್ಲಭೋವಿ, ಬಂಜಾರ ಸಮಾಜದ ರಾಘವೇಂದ್ರ ನಾಯ್ಕ, ಅನಂತ ನಾಯ್ಕ, ರಾಜು ಲಮಾಣಿ, ಡಿ.ಆರ್. ಗಿರೀಶ್, ಕೊರಚ ಸಮುದಾಯದ ಮುಖಂಡ ರಾಮಚಂದ್ರಪ್ಪ, ದಲಿತ ಸಮುದಾಯದ ಮುಖಂಡರಾದ ಮಾವಳ್ಳಿ ಶಂಕರ್, ನಾಗರಾಜ್, ಎನ್.ವೆಂಕಟೇಶ್, ಬಿ. ಗೋಪಾಲ್, ಇಂದೂಧರ ಹೊನ್ನಾಪುರ ಅವರೆಲ್ಲ ಪಾಲ್ಗೊಂಡಿದ್ದರು.

ಸದಾಶಿವ ಆಯೋಗದ ವರದಿಯನ್ನು ಸಾರ್ವಜನಿಕ ಚರ್ಚೆಗೆ ಬಿಡಬೇಕು. ಆಕ್ಷೇಪಣೆ, ತಕರಾರು ಸ್ವೀಕರಿಸಬೇಕು. 101 ಪರಿಶಿಷ್ಟ ಜಾತಿಗಳಿಗೂ ದೃಢೀಕೃತ ಪ್ರತಿ ನೀಡಬೇಕು. ವೈಜ್ಞಾನಿಕ, ವಸ್ತುನಿಷ್ಠ ಅಧ್ಯಯನ ನಡೆಸಬೇಕು. ಪರಿಶಿಷ್ಟರ ಹಿಂದುಳಿದಿರುವಿಕೆ ಆಧರಿಸಿ ಜನಸಂಖ್ಯೆವಾರು ಮೀಸಲಾತಿ ಹಂಚಿಕೆ ಮಾಡಬೇಕು. ಕಾಂತರಾಜ್ ವರದಿ ಪ್ರಕಟಿಸಬೇಕು ಎಂದು ಸಭೆಯಲ್ಲಿ ಮಾತನಾಡಿದವರು ಒತ್ತಾಯಿಸಿದರು.

ಆಯೋಗದ ಅಭಿಪ್ರಾಯವು ಭವಿಷ್ಯದಲ್ಲಿ ಭೋವಿ, ಬಂಜಾರ, ಕೊರಚ, ಕೊರಮ ಸಮುದಾಯಗಳಲ್ಲಿ ಪರಿಶಿಷ್ಟ ಜಾತಿ ಪಟ್ಟಿಯಿಂದ ಕೈಬಿಡುವ ಆತಂಕ ಮೂಡಿಸಿದೆ. 14 ಲಕ್ಷ ಪರಿಶಿಷ್ಟ ಜಾತಿಯ ಜನರನ್ನು ವರದಿಯಲ್ಲಿ ಪರಿಗಣಿಸಿಲ್ಲ. ಪ್ರತಿ ಜಾತಿಯ ಜೀವನ ವಿಧಾನ, ಉದ್ಯೋಗ, ಆರ್ಥಿಕತೆ, ಶಿಕ್ಷಣಕ್ಕೆ ಸಂಬಂಧಿಸಿದ ವಾಸ್ತವಾಂಶಗಳನ್ನು ಮರೆಮಾಚಲಾಗಿದೆ ಎಂದು ದೂರಿದರು. ಮೀಸಲಾತಿ ವರ್ಗೀಕರಣಕ್ಕೆ ಶಿಫಾರಸಿಗೆ ಮುನ್ನ ಎಲ್ಲ ಸಮುದಾಯಗಳ ಅಭಿಪ್ರಾಯ ಆಲಿಸಬೇಕು ಎಂದು ಆಗ್ರಹಿಸಿ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರವನ್ನೂ ಒಕ್ಕೂಟ ಬರೆದಿದೆ.

ಗಂಗಾ ಕಲ್ಯಾಣ ಯೋಜನೆಯಲ್ಲಿ ಭ್ರಷ್ಟಾಚಾರ ಆರೋಪ– ₹ 8 ಲಕ್ಷ ನಗದು, ಚಿನ್ನ ವಶ

ವಾಲ್ಮೀಕಿ ನಿಗಮದ ಮೇಲೆ ಲೋಕಾಯುಕ್ತ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಂಗಾ ಕಲ್ಯಾಣ ಯೋಜನೆಯಲ್ಲಿ ಪಂಪ್ ಅಳವಡಿಕೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿರುವ ಸುಳಿವು ಆಧರಿಸಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಕೇಂದ್ರ ಕಚೇರಿ ಸೇರಿದಂತೆ ಐದು ಸ್ಥಳಗಳ ಮೇಲೆ ಶನಿವಾರ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು, ₹ 8 ಲಕ್ಷ ನಗದು, ಚಿನ್ನಾಭರಣ ಹಾಗೂ ಅಪಾರ ಪ್ರಮಾಣದ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು, ತನಿಖೆಗೆ ಆದೇಶ ನೀಡಿದ್ದಾರೆ.

ಲೋಕಾಯುಕ್ತದ ಬೆಂಗಳೂರು ನಗರ ಎಸ್‌ಪಿ ಅಶೋಕ್ ಕೆ.ವಿ. ನೇತೃತ್ವದ ತಂಡಗಳು ಬೆಂಗಳೂರಿನ ವಸಂತನಗರದಲ್ಲಿರುವ ವಾಲ್ಮೀಕಿ ಅಭಿವೃದ್ಧಿ ನಿಗಮದ ಕೇಂದ್ರ ಕಚೇರಿ, ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಕವಿತಾ ಎಂ. ವಾರಂಗಲ್ ಅವರ ಬೆಂಗಳೂರಿನ ಮನೆ, ರಾಣೆಬೆನ್ನೂರಿನಲ್ಲಿರುವ ಅವರ ಮನೆ, ನಿಗಮದ ಧಾರವಾಡ ಜಿಲ್ಲಾ ಕಚೇರಿ ಹಾಗೂ ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಟೋಲಲಿಯಲ್ಲಿರುವ ಕವಿತಾ ಅವರ ಮನೆಯ ಮೇಲೆ ದಾಳಿಮಾಡಿ ಶೋಧ ನಡೆಸಿವೆ.

‘ಕವಿತಾ ಅವರ ಬೆಂಗಳೂರಿನ ಮನೆಯಲ್ಲಿ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ. ರಾಣೆಬೆನ್ನೂರಿನ ಮನೆಯಲ್ಲಿ ಅವರ ಪತಿಯ ಬಳಿ ಇದ್ದ ₹ 8 ಲಕ್ಷ ನಗದನ್ನು ತನಿಖಾ ತಂಡ ವಶಪಡಿಸಿಕೊಂಡಿದೆ. ನಿಗಮದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕುಟುಂಬದವರ ಬ್ಯಾಂಕ್ ದಾಖಲೆಗಳನ್ನೂ ವಶಕ್ಕೆ ಪಡೆಯಲಾಗಿದೆ’ ಎಂದು ಲೋಕಾಯುಕ್ತದ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಗಂಗಾ ಕಲ್ಯಾಣ ಯೋಜನೆಯ ಫಲಾನುಭವಿಗಳ ಜಮೀನುಗಳಲ್ಲಿ ಕೊರೆದಿರುವ ಕೊಳವೆ ಬಾವಿಗಳಿಗೆ ಸಬ್‌ಮರ್ಸಿಬಲ್ ಪಂಪ್ ಅಳವಡಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಈ ಯೋಜನೆಯಲ್ಲಿ ಭಾರಿ ಪ್ರಮಾಣದ ಅವ್ಯವಹಾರ ನಡೆಯುತ್ತಿರುವ ಕುರಿತು ಹಲವು ದೂರುಗಳು ಬಂದಿದ್ದವು. ಈ ಕುರಿತು ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ. ನಿಗಮದ ಕೇಂದ್ರ ಕಚೇರಿ ಹಾಗೂ ಧಾರವಾಡ ಜಿಲ್ಲಾ ಕಚೇರಿಗಳಿಂದ ಅಪಾರ ಪ್ರಮಾಣದ ಕಡತಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

₹20 ಲಕ್ಷ ಲಂಚ: ನಗರಸಭೆ ಅಧ್ಯಕ್ಷೆ ಪತಿ ಸೇರಿ ನಾಲ್ವರು ಲೋಕಾಯುಕ್ತ ಬಲೆಗೆ

ಒಂದನೇ ಪುಟದಿಂದ

ಈ ಜಮೀನಿನಲ್ಲಿ 133 ವಸತಿ ನಿವೇಶನಗಳ ಬಡಾವಣೆ ನಿರ್ಮಾಣ ಮಾಡಿದ್ದರು. ಉದ್ಯಮಿಯನ್ನು ಸಂಪರ್ಕಿಸಿದ್ದ ಆರೋಪಿಗಳು ನಗರಸಭೆಯಿಂದ ಅನುಮೋದನೆ ಕೊಡಿಸಲು ಪ್ರತಿ ಎಕರೆಗೆ ₹5 ಲಕ್ಷದಂತೆ ಒಟ್ಟು ₹40 ಲಕ್ಷ ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದರು.

ಉದ್ದಮಿ ರೆಡ್ಡಿ ಅವರು ಈ ಬಗ್ಗೆ ಲೋಕಾಯುಕ್ತ ಬಿ.ಎಸ್.ಪಾಟೀಲ ಅವರಿಗೆ ದೂರು ನೀಡಿದ್ದರು. ನಂತರ ರಾಜಾನುಕುಂಟೆ ಬಳಿಯ ರೆಸಾರ್ಟ್‌ಗೆ ಬಂದು ಹಣ ಪಡೆಯುವಂತೆ ಆರೋಪಿಗಳಿಗೆ ತಿಳಿಸಿದ್ದರು. ನಾಲ್ವರೂ ರೆಸಾರ್ಟ್‌ಗೆ ಬಂದು ₹20 ಲಕ್ಷ ಪಡೆಯುವಾಗ ಲೋಕಾಯುಕ್ತ ಡಿವೈಎಸ್‌ಪಿ ಭೂತೇಗೌಡ ನೇತೃತ್ವದ ತಂಡ ಅವರನ್ನು ಬಂಧಿಸಿದೆ.

ಆರೋಪಿಗಳು ನಗರಸಭೆ ವ್ಯಾಪ್ತಿಯಲ್ಲಿ ಭೂ ಪರಿವರ್ತನೆಗೆ ಸಂಬಂಧಿಸಿದ ವಹಿವಾಟಿನಲ್ಲಿ ತೊಡಗಿದ್ದರು. ದಾಖಲೆ ಕೋರಿ ಅರ್ಜಿ ಸಲ್ಲಿಸುವ ಜನರನ್ನು ಸಂಪರ್ಕಿಸಿ ಹಣಕ್ಕೆ ಬೇಡಿಕೆ ಇಡುತ್ತಿದ್ದರು. ಕೆಲವರನ್ನು ಬೆದರಿಸಿಯೂ ಹಣ ವಸೂಲಿ ಮಾಡಿದ್ದಾರೆ ಎಂದು ನಗರಸಭೆಯ ಮೂಲಗಳು ತಿಳಿಸಿವೆ.

ಒಂಬತ್ತು ಎಕರೆ ಕೃಷಿ ಭೂಮಿ ಪರಿವರ್ತನೆಗೆ ನಗರಸಭೆಯಿಂದ ಅನುಮೋದನೆ ಪಡೆಯಲು ಅಧಿಕಾರಿಗಳು ಮತ್ತು ಸದಸ್ಯರಿಗೆ ಆರೋಪಿಗಳು ಹಣ ಹಂಚಿದ ಬಗ್ಗೆ ಇತ್ತೀಚೆಗೆ ನಡೆದ ನಗರಸಭೆಯ ಸಾಮಾನ್ಯ ಸಭೆಯಲ್ಲಿ ಕಾವೇರಿದ ಚರ್ಚೆ ನಡೆದಿತ್ತು.

ವೀರಶೈವ ಮಹಾಸಭಾ ರಾಜಕಾರಣಕ್ಕೆ ಬಳಕೆ ಆರೋಪ

ಶಾಮನೂರು ಶಿವಶಂಕರಪ್ಪ, ಖಂಡ್ರೆಗೆ ತುರ್ತು ನೋಟಿಸ್

ಬೆಂಗಳೂರು: ‘ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಮಹಾ ಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ ಮತ್ತು ರಾಜ್ಯ ಘಟಕದ ಅಧ್ಯಕ್ಷ ಎನ್. ತಿಪ್ಪಣ್ಣ ಮಹಾಸಭಾದ ಸ್ಥಾನಗಳನ್ನು ರಾಜಕಾರಣಕ್ಕೆ ದುರ್ಬಳಕೆ ಮಾಡಿಕೊಳ್ಳುತ್ತಿದ್ದು ಅವರನ್ನು ಪದಚ್ಯುತಗೊಳಿಸಬೇಕು ಮತ್ತು ಮಹಾಸಭಾದಲ್ಲಿ ಲಿಂಗಾಯತ ಪದ ಸೇರ್ಪಡೆಗೆ ತಡೆ ನೀಡಬೇಕು’ ಎಂದು ಕೋರಲಾದ ಸಿವಿಲ್ ದಾವೆಗೆ ಸಂಬಂಧಿಸಿ ಮೂರು ಜನರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಬೆಂಗಳೂರು ಸಿಟಿ ಸಿವಿಲ್ ಸೆಷನ್ಸ್ ನ್ಯಾಯಾಲಯ ಆದೇಶಿಸಿದೆ.

ಈ ಕುರಿತಂತೆ ಎಸ್.ಎನ್.ಕೆಂಪಣ್ಣ ಸೇರಿದಂತೆ ಐವರು ಸಲ್ಲಿಸಿರುವ ದಾವೆಯನ್ನು 9ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶೆ ಮುಮ್ತಾಜ್, ಪ್ರತಿವಾದಿಗಳ ಗೈರು ಹಾಜರಿಯಲ್ಲಿ ಆಲಿಸಿದರು. ನೋಟಿಸ್ ಜಾರಿಗೆ ಆದೇಶಿಸಿ 2023ರ ಫೆ.17ಕ್ಕೆ ವಿಚಾರಣೆ ಮುಂದೂಡಿದರು.

ದಾವೆಯಲ್ಲಿ ಏನಿದೆ?: ‘ಮಹಾಸಭಾ 2020ರಲ್ಲಿ ತನ್ನ ಬೈ–ಲಾ ನಿಯಮಗಳ ತಿದ್ದುಪಡಿ ಮೂಲಕ ಲಿಂಗಾಯತ ಪದವನ್ನು ವೀರಶೈವದ ಜೊತೆ ಸೇರಿಸಿದೆ. ಇದು ವೀರಶೈವರು ಮತ್ತು ಲಿಂಗಾಯತರನ್ನು ಪ್ರತ್ಯೇಕ ಎಂದು ಗುರುತಿಸಿದಂತಾಗುತ್ತದೆ. ಅಖಿಲ ಭಾರತ ವೀರಶೈವ ಮಹಾಸಭಾದ ಹೆಸರನ್ನು ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಎಂದು ಬಳಸದಂತೆ ತಡೆ ನೀಡಬೇಕು’ ಎಂದು ದಾವೆದಾರರು ಕೋರಿದ್ದಾರೆ.

‘ಶಾಮನೂರು ಶಿವಶಂಕರಪ್ಪ ಹಾಲಿ ಕಾಂಗ್ರೆಸ್ ಪಕ್ಷದ ದಾವಣಗೆರೆ ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಶಾಸಕರಾಗಿದ್ದು 91 ವರ್ಷವಾಗಿದೆ. ಅವರ ದೈಹಿಕ ಮತ್ತು ಮಾನಸಿಕ ದೃಢತೆ ಮಹಾಸಭಾದ ಅಧ್ಯಕ್ಷ ಸ್ಥಾನ ನಿಭಾಯಿಸುವಷ್ಟು ಸಾಮರ್ಥ್ಯ ಹೊಂದಿಲ್ಲ. ಈಶ್ವರ ಖಂಡ್ರೆ ಕೂಡಾ ಕಾಂಗ್ರೆಸ್ ಶಾಸಕರಾಗಿದ್ದಾರೆ. ಇವರು ಮಹಾಸಭಾವನ್ನು ರಾಜಕೀಯ ವೇದಿಕೆಯಾಗಿ ಬಳಸಿಕೊಳ್ಳುತ್ತಿದ್ದಾರೆ’ ಎಂದು ದಾವೆದಾರರು ಆಪಾದಿಸಿದ್ದಾರೆ.

‘ಮಹಾಸಭಾ ಪದಾಧಿಕಾರಿಗಳು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಂದ ಹೊರತಾಗಿರಬೇಕು. ಹಾಗಾಗಿ, ಈ ಸಂಬಂಧ ಘನ ನ್ಯಾಯಾಲಯ ಸೂಕ್ತ ಡಿಕ್ರಿ ಹೊರಡಿಸಬೇಕು’ ಎಂದು ಕೋರಿದ್ದಾರೆ. ದಾವೆದಾರರ ಪರ ಶರತ್ ಎಸ್.ಗೋಗಿ ಹಾಜರಾಗಿದ್ದರು.

ಮಹಾಧಿವೇಶನ ಮುಂದೂಡಿಕೆ: ‘ಇದೇ 24ರಿಂದ ಮೂರು ದಿನ ದಾವಣಗೆರೆಯಲ್ಲಿ ಆಯೋಜಿಸಿದ್ದ ಮಹಾಸಭಾದ 23ನೇ ಮಹ ಅಾಧಿವೇಶನವನ್ 2023ರ ಫೆಬ್ರುವರಿ 11, 12 ಮತ್ತು 13ಕ್ಕೆ ಮುಂದೂ ಡಲಾಗಿದೆ’ ಎಂದು ಖಂಡ್ರೆ ಅವರು ಹೇಳಿಕೆ ನೀಡಿದ್ದಾರೆ.

ಪಿಎಸ್‌ಐ ಅಕ್ರಮ: ಪ್ರಭಾವಿಗಳ ರಕ್ಷಣೆಗೆ ಯತ್ನ– ಪ್ರಿಯಾಂಕ್ ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಪರೀಕ್ಷಾ ಹಗರಣದಲ್ಲಿ ರಾಜ್ಯ ಪೊಲೀಸ್ ಮಹಾನಿರ್ದೇಶಕರು (ಡಿಜಿಪಿ), ಕಲಬುರಗಿ ನಗರ ಪೊಲೀಸ್ ಕಮಿಷನರ್ ಮತ್ತು ಮೂವರು ಶಾಸಕರು ಶಾಮೀಲಾಗಿರುವ ಕುರಿತು ಗೃಹ ಸಚಿವರಿಗೆ ಸಾಕ್ಷ್ಯಗಳನ್ನು ಒದಗಿಸಿದ್ದರೂ ಏಕೆ ತನಿಖೆ ನಡೆಸುತ್ತಿಲ್ಲ ಎಂದು ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಪಿಎಸ್‌ಐ ನೇಮಕಾತಿ ಪರೀಕ್ಷೆ ಬರೆದಿದ್ದ ಅಭ್ಯರ್ಥಿಯೊಬ್ಬರು ಪರೀಕ್ಷಾ ಅಕ್ರಮದಲ್ಲಿ ಡಿಜಿಪಿ, ಕಲಬುರಗಿ ನಗರ ಪೊಲೀಸ್ ಕಮಿಷನರ್ ಮತ್ತು ಮೂವರು ಶಾಸಕರ ವಿರುದ್ಧ ಸಾಕ್ಷ್ಯ ಒದಗಿಸಿದ್ದರೂ ತನಿಖೆ ನಡೆಸುತ್ತಿಲ್ಲ ಎಂದು ಗೃಹ ಸಚಿವರ ಜತೆಗೆ ದೂರವಾಣಿ ಸಂಭಾಷಣೆ ನಡೆಸಿರುವ ಆಡಿಯೊ ರೆಕಾರ್ಡಿಂಗ್ ತುಣುಕುಗಳನ್ನು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಆಡಿಯೊದಲ್ಲಿ ಏನಿದೆ?

ಅಭ್ಯರ್ಥಿಯೊಬ್ಬರು 4 ನಿಮಿಷ 52 ಸೆಕೆಂಡ್ ಹಾಗೂ 3 ನಿಮಿಷ 31 ಸೆಕೆಂಡ್‌ಗಳ ಕಾಲ ಗೃಹ ಸಚಿವರ ಜತೆ ದೂರವಾಣಿ ಮೂಲಕ ಮಾತನಾಡಿರುವ ಕರೆಯ ರೆಕಾರ್ಡಿಂಗ್ ತುಣುಕುಗಳನ್ನು ಪತ್ರಿಕಾಗೋಷ್ಠಿಯಲ್ಲಿ ಪ್ರಿಯಾಂಕ್ ಖರ್ಗೆ ಬಿಡುಗಡೆ ಮಾಡಿದರು. ಸಾಕ್ಷ್ಯ ಒದಗಿಸಿದ್ದರೂ ಕ್ರಮ ಜರುಗಿಸಿಲ್ಲ ಎಂದು ಆಕ್ಷೇಪಿಸಿರುವುದು ಅವುಗಳಲ್ಲಿದೆ.

‘ಪ್ರಭಾವಿಗಳು ಭಾಗಿಯಾಗಿರುವ ಕುರಿತು ಅಭ್ಯರ್ಥಿಯೊಬ್ಬರು ನೇರವಾಗಿ ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ಭೇಟಿಮಾಡಿ ಸಾಕ್ಷ್ಯಗಳನ್ನು ನೀಡಿದ್ದರು. ಆದರೆ, ಗೃಹ ಸಚಿವರು ತನಿಖೆ ನಡೆಸದೇ ಮೌನವಹಿಸಿದ್ದಾರೆ. 545 ಪಿಎಸ್‌ಐ ಹುದ್ದೆಗಳ ಭರ್ತಿಯಲ್ಲಿ ನಡೆದಂತೆ 402 ಹುದ್ದೆಗಳ ಭರ್ತಿಯಲ್ಲೂ ಅಕ್ರಮ ನಡೆಯುತ್ತಿದೆ ಎಂದು ಅಭ್ಯರ್ಥಿ ಸಚಿವರಿಗೆ ನೇರವಾಗಿ ತಿಳಿಸಿದ್ದಾರೆ. ಆದರೆ ಏಕೆ ತನಿಖೆ ನಡೆಸಿಲ್ಲ’ ಎಂದು ಕೇಳಿದರು.

ಲಿಖಿತ ಪರೀಕ್ಷೆ ಪತ್ರಿಕೆ–1 ಹಾಗೂ ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲೂ ಅಕ್ರಮ ನಡೆದಿದೆ ಎಂಬ ಬಗ್ಗೆಯೂ ಗೃಹ ಸಚಿವರಿಗೆ ಸಾಕ್ಷ್ಯ ಒದಗಿಸಲಾಗಿತ್ತು. ಅವುಗಳನ್ನು ಗೃಹ ಸಚಿವರು ಸಿಐಡಿ ತನಿಖಾ ತಂಡಕ್ಕೆ ನೀಡಿದ್ದಾರೆಯೆ? ಆ ಸಾಕ್ಷ್ಯಗಳು ಈಗ ಎಲ್ಲಿವೆ ಎಂದು ಪ್ರಶ್ನಿಸಿದರು.

‘ಹಗರಣಕ್ಕೆ ಸಂಬಂಧಿಸಿದ ಆಡಿಯೊ ತುಣುಕಿನಲ್ಲಿರುವ ಧ್ವನಿ ತನ್ನದೇ ಎಂದು ಶಾಸಕರೊಬ್ಬರು ವಿಧಾನಸಭೆಯಲ್ಲೇ ಒಪ್ಪಿಕೊಂಡಿದ್ದರು. ಆ ಕುರಿತು ತನಿಖೆಯೇ ನಡೆದಿಲ್ಲ. ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ ಮತ್ತು ಅವರ ಮಗ ಬಿ.ವೈ.ವಿಜಯೇಂದ್ರ ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದ್ದಾರೆ. ಪತ್ರಿಕಾ ವರದಿಗಳ ಆಧಾರದಲ್ಲಿ ಹೇಳಿಕೆ ನೀಡಿದ್ದ ನನಗೆ ಪೊಲೀಸರು ನೋಟಿಸ್ ನೀಡಿದ್ದರು. ಅದೇ ರೀತಿ ಯತ್ನಾಳ ಅವರಿಗೂ ನೋಟಿಸ್ ನೀಡಲಾಗಿದೆಯೆ’ ಎಂದು ಪ್ರಿಯಾಂಕ್ ಕೇಳಿದರು.

ಮುರುಘಾ ಮಠ ಪ್ರಕರಣದಲ್ಲಿ ಕಾನೂನು ತಜ್ಞರ ಅಭಿಮತ

‘ಆಡಳಿತಾಧಿಕಾರಿ ಏಕೆ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಜಗದ್ಗುರು ಮುರುಘಾ ರಾಜೇಂದ್ರ ಬೃಹನ್ಮಠಕ್ಕೆ ಆಡಳಿತಾಧಿಕಾರಿಯನ್ನಾಗಿ ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್.ವಸ್ತ್ರದ ಅವರನ್ನು ನೇಮಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಸಲ್ಲಿಸಲಾಗಿರುವ ರಿಟ್ ಅರ್ಜಿ ವಿಚಾರಣೆ ವೇಳೆ ವ್ಯಕ್ತವಾದ ಅಂಶಗಳಲ್ಲಿ, 'ಮಠಗಳು ಸರ್ಕಾರದ ನಿಯಂತ್ರಣದ ವ್ಯಾಪ್ತಿಗೆ ಒಳಪಡುವುದಿಲ್ಲವೇ' ಎಂಬ ಬಗೆಗಿನ ಜಿಜ್ಞಾಸೆ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ.

ಈ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್‌ನ ಹಿರಿಯ ವಕೀಲ ಅಶೋಕ ಹಾರನಹಳ್ಳಿ, 'ಮಠಗಳ ಆಡಳಿತದಲ್ಲಿ ಸರ್ಕಾರ ಮಧ್ಯಪ್ರವೇಶಿಸಲು ಅವಕಾಶವಿಲ್ಲ. ಆದಾಗ್ಯೂ, ಸಾರ್ವಜನಿಕ ಹಿತಾಸಕ್ತಿ ಅಡಗಿದ್ದಾಗ ಅಥವಾ ಮಠದ ಅಧೀನದಲ್ಲಿರುವ ಶಿಕ್ಷಣ ಸಂಸ್ಥೆಗಳು, ಅವುಗಳ ಆಡಳಿತ ಕುಸಿದರೆ ಕಂಡು ಬಂದಾಗ ಸ್ಥಿರ-ಚರಾಸ್ತಿಗಳಿಗೆ ಆಡಳಿತಾಧಿಕಾರಿ ನೇಮಕ ಮಾಡಬಹುದು' ಎನ್ನುತ್ತಾರೆ.

'ಈ ಹಿಂದೆ ಸೋಸಲೆ ವ್ಯಾಸರಾಜ ಮಠಕ್ಕೆ ಆಡಳಿತಾಧಿಕಾರಿ ನೇಮಕ ಮಾಡಿದ ಪ್ರಕರಣವನ್ನು ಇಲ್ಲಿ ಸ್ಮರಿಸಬಹುದು. ಬೇಕಾದರೆ ಆಡಳಿತಾಧಿಕಾರಿ ಜೊತೆ ಸಮುದಾಯಕ್ಕೆ ಸಂಬಂಧಿಸಿದ ಹಿರಿಯರ ಒಟ್ಟಿಗೆ ಪಡೆದು ಸಲಹೆ ಪಡೆಯಬಹುದು. ಸ್ಥಾಪಿತವಾಗಿ ಸಿವಿಲ್ ಪ್ರೊಸೀಜರ್ ಕೋಡ್‌ನ ಕಲಂ 92ರ ಅನುಸಾರ ಯಾವುದೇ ಭಕ್ತರು ಅಡ್ವೊಕೇಟ್ ಜನರಲ್ ಅಥವಾ ಕೋರ್ಟ್ ಸಮ್ಮತಿ ಪಡೆದು ಸ್ಕೀಂ ದಾವೆ ಸಲ್ಲಿಸುವ ಈವರೆಗಿನ ವಾಡಿಕೆಯಾಗಿದೆ' ಎನ್ನುತ್ತಾರೆ.

ಹೈಕೋರ್ಟ್‌ನ ಮತ್ತೊಬ್ಬ ಹಿರಿಯ ವಕೀಲ ಗಂಗಾಧರ ಆರ್.ಗುರುಮಠ ಅವರು, ಮುರುಘಾಶರಣರ ಪ್ರಕರಣದಲ್ಲಿ ಪ್ರಮುಖವಾದ ಮೂರು ಪ್ರಶ್ನೆಗಳಿವೆ ಎನ್ನುತ್ತಾರೆ.

• ಮುರುಘಾ ಮಠವು ಸರ್ಕಾರದಿಂದ ಕೋಟ್ಯಂತರ ರೂಪಾಯಿಗಳ ಅನುದಾನ ಪಡೆಯುತ್ತಿದೆ. ಚಿತ್ರದುರ್ಗದಲ್ಲಿ ಎತ್ತರದ ಬಸವ ಪ್ರತಿಮೆ ಸ್ಥಾಪನೆ ಮತ್ತು ಅಲ್ಪಸಂಖ್ಯಾತ ಸಂಶೋಧನಾ ಕೇಂದ್ರಕ್ಕೆ ಸರ್ಕಾರ ದಶಕಗಳಿಂದ ಕೋಟ್ಯಂತರ ಅನುದಾನ ನೀಡುತ್ತಿದೆ. ಈ ಕುರಿತ ಆಡಿಟ್ ವರದಿಗಳು ಸಾರ್ವಜನಿಕ ಅಂಶಗಳನ್ನು ಒದಗಿಸುತ್ತಿವೆಯಲ್ಲವೇ?

• ಸರ್ಕಾರದಿಂದ ಆಡಳಿತಾಧಿಕಾರಿ ನೇಮಕ ಮಾಡಲಾಗಿರುವ ಆದೇಶ ಪ್ರಶ್ನಿಸಿರುವ ಅರ್ಜಿದಾರರು ಸಾಮಾನ್ಯ ಭಕ್ತರು. ಸಾಮಾನ್ಯ ಭಕ್ತರು ಈ ರೀತಿ ನೇರವಾಗಿ ಹೈಕೋರ್ಟ್ ಮೆಟ್ಟಿಲೇರಲು ಕಾನೂನಿನಲ್ಲಿ ಇರುವ ಅವಕಾಶಗಳೇನು? ಅರ್ಜಿಯಲ್ಲಿ ಅರಿಲಿಜಿಯಸ್ ಡಿನಾಮಿನಶನ್‌ಗೆ ಸೂಕ್ತ ದಾಖಲೆ ಒದಗಿಸಿದರಷ್ಟೇ ಕೋರ್ಟ್ ಅದನ್ನು ಮಾನ್ಯ ಮಾಡಲು ಸಾಧ್ಯವಲ್ಲವೇ?

• 'ಮುರುಘಾಶರಣರು ಮಠದ ಆಡಳಿತ ಅಥವಾ ಚಟುವಟಿಕೆಗಳಲ್ಲಿ ಮೂಗು ತೂರಿಸದಂತೆ ಚಿತ್ರದುರ್ಗದ 2ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಆದೇಶಿಸಿದೆ. ಧರ್ಮ ಸಂಸ್ಥೆಗಳ ದುರುಪಯೋಗ ತಡೆ ಕಾಯ್ದೆ–1988ರ ಕಲಂ 8 (2) ಅನ್ವಯ ಕ್ರಿಮಿನಲ್ ಪ್ರಕರಣದ ಆರೋಪಿಯಾಗಿರುವ ಶರಣರು ಮಠ ಮತ್ತು ಅದರ ಅಧೀನದಲ್ಲಿ ನಡೆಯುತ್ತಿರುವ ಇತರ ಸಂಸ್ಥೆಗಳ ಚಟುವಟಿಕೆಗಳಲ್ಲಿ ತಮ್ಮ ಅಧಿಕಾರ ಚಲಾಯಿಸದಂತೆ ನಿರ್ಬಂಧಿಸಿ ಆದೇಶಿಸಿದ್ದಾರೆ. ವಸ್ತುಸ್ಥಿತಿ ಹೀಗಿರುವಾಗ ಮಠದ ಆಡಳಿತದಲ್ಲಿ ಸರ್ಕಾರ ಸಂವಿಧಾನದ 162ನೇ ವಿಧಿಯ ಅನುಸಾರ ತನ್ನ ಅಧಿಕಾರ ಚಲಾಯಿಸಬಹುದು' ಎಂಬ ಅಭಿಪ್ರಾಯವನ್ನು ಗುರುಮಠ ಅವರು ವ್ಯಕ್ತಪಡಿಸುತ್ತಾರೆ.

ಪಾವಿತ್ರ್ಯ ರಕ್ಷಣೆಗೆ ಧರ್ಮಸ್ಥಳ ಪ್ರಾಧಿಕಾರ ರಚನೆ

ಸಮೀಕ್ಷೆ ನಡೆಸಿ ಪ್ರಸ್ತಾವ ಸಲ್ಲಿಸಲು ಜಿಲ್ಲಾಧಿಕಾರಿಗೆ ಸಚಿವ ಆನಂದ್‌ಸಿಂಗ್ ಸೂಚನೆ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): 'ಧರ್ಮಸ್ಥಳ ತೀರ್ಥಕ್ಷೇತ್ರವಾಗಿದ್ದು, ಇದರ ಪಾವಿತ್ರ್ಯ ರಕ್ಷಣೆಗಾಗಿ ಧರ್ಮಸ್ಥಳ ಪ್ರಾಧಿಕಾರ ರಚಿಸಲಾಗುವುದು' ಎಂದು ಪ್ರವಾಸೋದ್ಯಮ ಇಲಾಖೆ ಸಚಿವ ಆನಂದ್ ಸಿಂಗ್ ಹೇಳಿದರು.

ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯಿಂದ ಧರ್ಮಸ್ಥಳದಲ್ಲಿ ₹4.80 ಕೋಟಿ ವೆಚ್ಚದಲ್ಲಿ ಮಾಡಲಾದ ನೇತ್ರಾವತಿ ಸ್ನಾನಘಟ್ಟ ಅಭಿವೃದ್ಧಿ ಕಾಮಗಾರಿಯನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಧರ್ಮಸ್ಥಳ ಹಾಗೂ ಸುತ್ತಮುತ್ತಲಿನ ಪರಿಸರದಲ್ಲಿ ಬಾರ್, ಮಾಂಸಾಹಾರಿ ಹೋಟೆಲ್, ಜೂಜು ಮೊದಲಾದವುಗಳನ್ನು ತಡೆಗಟ್ಟಿ ಕ್ಷೇತ್ರದ ಪಾವಿತ್ರ್ಯ ರಕ್ಷಣೆಗಾಗಿ ಪ್ರಾಧಿಕಾರ ರಚಿಸಲಾಗುವುದು' ಎಂದರು.

ಈ ಬಗ್ಗೆ ತಕ್ಷಣ ಸಮೀಕ್ಷೆ ನಡೆಸಿ, ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸುವಂತೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಎಂ.ಆರ್. ರವಿಕುಮಾರ್ ಅವರಿಗೆ ಸೂಚಿಸಿದರು.

ನೇತ್ರಾವತಿ ಸ್ನಾನಘಟ್ಟದ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿಗೆ ₹ 5 ಕೋಟಿ ಅನುದಾನವನ್ನು ಈ ತಿಂಗಳ ಅಂತ್ಯದೊಳಗೆ ಬಿಡುಗಡೆ ಮಾಡಲಾಗುವುದು ಎಂದರು.

ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಮಾತನಾಡಿ, ತೀರ್ಥಕ್ಷೇತ್ರಗಳಲ್ಲಿ ವಾಣಿಜ್ಯ ಸಂಕೀರ್ಣಗಳು, ಮಾಂಸಾಹಾರಿ ಹೋಟೆಲ್‌ಗಳು, ಬಾರ್‌ಗಳನ್ನು ತೆರೆಯಲು ಸರ್ಕಾರ ಪರವಾನಗಿ ನೀಡಬಾರದು ಎಂದರು.

‘ಕೇಂದ್ರ ಗೃಹ ಸಚಿವರ ಸಭೆಗೆ ಸಿ.ಎಂ ತೆರಳಿದ್ದು ಪ್ರಮಾದ’

ಶಿರಸಿ: 'ಗಡಿ ವಿವಾದ ವಿಚಾರದಲ್ಲಿ ಕೇಂದ್ರ ಗೃಹ ಸಚಿವರು ಕರ್ನಾಟಕ ಮತ್ತು ಮಹಾರಾಷ್ಟ್ರ ಮುಖ್ಯಮಂತ್ರಿಗಳ ಸಭೆ ಕರೆದಿರುವುದು ಅಪರಾಧ. ಸಭೆಗೆ ತೆರಳಿದ್ದು ಮುಖ್ಯಮಂತ್ರಿ ಬೊಮ್ಮಾಯಿ ಮಾಡಿರುವ ಪ್ರಮಾದ' ಎಂದು ಶಾಸಕ ಎಚ್.ಕೆ.ಪಾಟೀಲ ಅಭಿಪ್ರಾಯಪಟ್ಟರು.

ಇಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗಡಿ ವಿವಾದ ವಿಚಾರದಲ್ಲಿ ಸುಪ್ರೀಂಕೋರ್ಟ್ ಮಹಾರಾಷ್ಟ್ರದ ವಾದವನ್ನು ಎರಡು ಬಾರಿ ತಳ್ಳಿಹಾಕಿದೆ. ಇಂತಹ ಸಂದರ್ಭದಲ್ಲಿ ಅಶಾಂತಿ ಇದೆ ಎಂಬುದನ್ನು ಬಿಂಬಿಸಲು ಪ್ರಯತ್ನ ನಡೆದಿದೆ. ಅದಕ್ಕಾಗಿ ಕೇಂದ್ರ ಸರ್ಕಾರ ಸಮಿತಿ ರಚಿಸಲು ಹೊರಟಿದೆ. ಇದಕ್ಕೆ ರಾಜ್ಯ ಸರ್ಕಾರ ಸಮ್ಮತಿಸಬಾರದು' ಎಂದು ಒತ್ತಾಯಿಸಿದರು.

'ಗಡಿ ವಿಚಾರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಅಥವಾ ಮಹಾಜನ ಆಯೋಗದ ವರದಿಯನ್ನು ಜಾರಿಗೊಳಿಸಬೇಕು ಎಂಬುದು ಕರ್ನಾಟಕದ ಧ್ಯೇಯವಾಗಿದೆ. ಅದಕ್ಕೆ ರಾಜ್ಯ ಸರ್ಕಾರ ಬದ್ಧವಾಗಿರಬೇಕು. ಅದರ ಹೊರತಾದ ಯಾವುದೇ ಪ್ರಕ್ರಿಯೆ ಸರ್ಕಾರ ಒಪ್ಪಬಾರದು. ಈ ಅಂಶಗಳನ್ನೇ ಪ್ರಧಾನಮಂತ್ರಿ, ಕೇಂದ್ರ ಗೃಹ ಸಚಿವರಿಗೆ ಸ್ಪಷ್ಟಪಡಿಸಬೇಕು' ಎಂದರು.

ಸಂಕ್ಷಿಪ್ತ ಸುದ್ದಿ

ಬಿಜೆಪಿ ಪದಾಧಿಕಾರಿಗಳ ಸಭೆ ಡಿ.20, 21ಕ್ಕೆ

ಕಾರವಾರ: 'ಬಿ.ಜೆ.ಪಿ ಪಕ್ಷದ ಪದಾಧಿಕಾರಿಗಳ ಸಭೆ ಡಿ.20 ಮತ್ತು 21ರಂದು ಮುರುಡೇಶ್ವರದಲ್ಲಿ ನಿಗದಿಯಾಗಿದೆ. ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ನೇತೃತ್ವದಲ್ಲಿ ನಡೆಯಲಿರುವ ಸಭೆಯಲ್ಲಿ 166 ಪದಾಧಿಕಾರಿಗಳು ಭಾಗವಹಿಸಲಿದ್ದಾರೆ' ಎಂದು ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ವೆಂಕಟೇಶ ನಾಯಕ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮುರುಡೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ನಡೆಯುವ ಸಭೆಯಲ್ಲಿ ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ರಾಜ್ಯದ ಸಚಿವರು ಭಾಗವಹಿಸುವ ನಿರೀಕ್ಷೆಯಿದೆ. ಚುನಾವಣೆ ಹೊಸ್ತಿಲಿನಲ್ಲಿ ಪಕ್ಷದ ಸಂಘಟನಾತ್ಮಕ ವಿಷಯಗಳ ಬಗ್ಗೆ ಸಭೆಯಲ್ಲಿ ನಿರ್ಣಯಿಸಲಾಗುತ್ತದೆ' ಎಂದರು.


ವಿಶಾಲ ರಘು


ವಿನಯ್ ಮಂಗಳೇಕರ್

ರಾಜ್ಯ ವಕೀಲರ ಪರಿಷತ್‌ಗೆ ಆಯ್ಕೆ

ಬೆಂಗಳೂರು: ರಾಜ್ಯ ವಕೀಲರ ಪರಿಷತ್ ನೂತನ ಅಧ್ಯಕ್ಷರಾಗಿ ವಿಶಾಲ ರಘು, ಉಪಾಧ್ಯಕ್ಷರಾಗಿ ವಿನಯ ಮಂಗಳೇಕರ್ ಆಯ್ಕೆಯಾಗಿದ್ದಾರೆ. ಈ ಕುರಿತಂತೆ ನಡೆದ ಚುನಾವಣೆಯಲ್ಲಿ ಇಬ್ಬರೂ ಬಹುಮತಗಳಿಂದ ಆಯ್ಕೆಯಾಗಿದ್ದಾರೆ ಎಂದು ಪರಿಷತ್ ಸದಸ್ಯ ಎಸ್.ಹರೀಶ್ ತಿಳಿಸಿದ್ದಾರೆ.

ಕಾಫಿನಾಡಿನಲ್ಲಿ ಕಂಪನ ಶುರು

ಬಹಳಷ್ಟು ತೋಟಗಳಲ್ಲಿ ಅರೆಬಿಕಾ ಕಾಫಿ ಹಣ್ಣಾಗಿದ್ದು ಕೊಯ್ಲು ಆರಂಭವಾಗಿದೆ. ಅಕಾಲಿಕವಾಗಿ ಬರುತ್ತಿರುವ ಮಳೆಯಿಂದಾಗಿ ಬಹುತೇಕ ತೋಟಗಳಲ್ಲಿ ಕಾಫಿ ಹಣ್ಣುಗಳು ಬಿರಿದು, ಉದುರಿ, ಮಣ್ಣು ಪಾಲಾಗುತ್ತಿವೆ. ಇನ್ನು ಕೊಯ್ಲು ಮಾಡಿರುವ ಕಾಫಿಯನ್ನೂ ಸಂಸ್ಕರಿಸಿ, ಒಣಗಿಸಲು ಮಳೆ, ಮೋಡ ಕವಿದ ವಾತಾವರಣ ಅಡ್ಡಿಪಡಿಸುತ್ತಿದೆ.

ಒಂದನೇ ಪುಟದಿಂದ...

ಅಪಾರ ಬೆಳೆ ಹಾನಿ: ರಾಜ್ಯದಲ್ಲಿ ಕಾಫಿ ಬೆಳೆಯುವ ಪ್ರಮುಖ ಜಿಲ್ಲೆಗಳಾದ ಚಿಕ್ಕಮಗಳೂರು, ಕೊಡಗು ಹಾಗೂ ಹಾಸನದ ಮಲೆನಾಡು ಭಾಗದಲ್ಲಿ ಈ ಬಾರಿ ಮುಂಗಾರು ಮತ್ತು ಹಿಂಗಾರಿನಲ್ಲಿ ಸುರಿದ ಭಾರಿ ಮಳೆ, ಪ್ರವಾಹ, ಭೂಕುಸಿತದಿಂದ ಕಾಫಿ ತೋಟಗಳು ತತ್ತರಿಸಿವೆ. ಈ ಸಲ ಕಾಫಿ – ಕಾಳುಮೆಣಸು ಫಸಲು ಅರ್ಧದಷ್ಟು ಕೈತಪ್ಪುವ ಆತಂಕ ಬೆಳೆಗಾರರದು.

ಹಲವು ಕಡೆ ತೋಟಗಳಲ್ಲಿ ಈಗಲೂ ಜಿನುಗುತ್ತಿರುವ ಒರತೆ, ಹೆಚ್ಚಿದ ಶೀತ ಕಾಫಿ ಗಿಡಗಳ ಎಲೆ ಉದುರಿಸಿದೆ. ರೆಕ್ಕೆಗಳಲ್ಲಿ ತುಂಬಿದ್ದ ಕಾಯಿಗಳಲ್ಲಿ ಒಂದಷ್ಟು ನೆಲ ಕಂಡಿದ್ದರೆ, ಮತ್ತಷ್ಟು ಕಪ್ಪಾಗಿ ಜೊಳ್ಳಾಗಿವೆ. ಶೀತ ಮತ್ತು ಶೀಘ್ರ ಹರಡುವ ಸೊರಗು ರೋಗಕ್ಕೆ ತುತ್ತಾದ ತೋಟಗಳಲ್ಲಿ ಕಾಳು ಮೆಣಸಿನ ಬೀಳುಗಳೂ ಸತ್ತು ಹೋಗಿವೆ. 'ಕಪ್ಪು ಬಂಗಾರ'ವೆನಿಸಿದ್ದ ಉಪಬೆಳೆ ಕಾಳುಮೆಣಸು ಒಂದರ್ಥದಲ್ಲಿ ತೋಟಗಳ ನಿರ್ವಹಣೆಯಲ್ಲಿ ಬೆಳೆಗಾರರಿಗೆ ವರದಾನವೆನಿಸಿತ್ತು.

'ಕಳೆದ ವರ್ಷವೂ ಕಾಫಿ ಫಸಲು ಕಾಲುಭಾಗದಷ್ಟು ಮಣ್ಣು ಪಾಲಾಗಿತ್ತು. ಕೈಗೆ ಸಿಕ್ಕಷ್ಟು ಬೆಳೆಯಿಂದಲೇ ಬೆಳೆಗಾರರು, ಬಂಪರ್ ಬೆಳೆಗೆ ತೃಪ್ತರಾಗಿದ್ದರು. ಕಾಳುಮೆಣಸು ಅಷ್ಟೇನೂ ನಷ್ಟವಾಗಿರಲಿಲ್ಲ. ಇಳುವರಿಯೂ ಚೆನ್ನಾಗಿತ್ತು. ಆದರೆ, ಈ ಬಾರಿ ಕಾಫಿ ಕಾಯಿಕಟ್ಟುವಾಗ, ಕಾಳು ಮೆಣಸು ಗರಿ ಬಿಡುವಾಗ ಸುರಿದ ನಿರಂತರ ಮಳೆ ಬಂಪರ್ ಬೆಳೆಯ ಕನಸುಗಳನ್ನು ಭಗ್ನಗೊಳಿಸಿದೆ' ಎನ್ನುತ್ತಾರೆ ಕಾಫಿ ಮಂಡಳಿ ಮಾಜಿ ಸದಸ್ಯ, ಬೆಳೆಗಾರ ಕೈಮರ ಮನುಕುಮಾರ್.

ಸಾಂಪ್ರದಾಯಿಕವಾಗಿ ಕಾಫಿ ಮತ್ತು ಕಾಳುಮೆಣಸು ಬೆಳೆಯುವ ಪ್ರಮುಖ ಮೂರು ಜಿಲ್ಲೆಗಳಲ್ಲಿ ಸುಮಾರು 90 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಕಾಫಿ ಬೆಳೆ ಹಾನಿಯನ್ನು ಕಾಫಿ ಮಂಡಳಿ ಅಂದಾಜು ಮಾಡಿದೆ. ಬೆಳೆ ಹಾನಿಯಾಗದಿದ್ದರೆ ಈ ಬಾರಿ ಅಂದಾಜು ಮೀರಿ ದಾಖಲೆಯ ಪ್ರಮಾಣದಲ್ಲಿ ಕಾಫಿ ಉತ್ಪಾದನೆಯಾಗುವ ನಿರೀಕ್ಷೆ ಇತ್ತು.

ಇನ್ನು 11 ಸಾವಿರ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಕಾಳುಮೆಣಸು ಹಾನಿಯಾಗಿರುವುದಾಗಿ ತೋಟಗಾರಿಕೆ ಇಲಾಖೆ ಅಂದಾಜಿಸಿದೆ. ಕಳೆದ ವರ್ಷ 1.31 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 46,541 ಟನ್ ಕಾಳುಮೆಣಸು ಉತ್ಪಾದನೆಯಾಗಿತ್ತು. ಈ ಬಾರಿ ಉತ್ಪಾದನೆ ತಗ್ಗಬಹುದು. ಬೆಳೆ ನಷ್ಟದ ಸಮೀಕ್ಷೆಯ ಅಂತಿಮ ವರದಿ ಇನ್ನಷ್ಟೇ ಬರಬೇಕಿದೆ ಎನ್ನುತ್ತಾರೆ ಕರ್ನಾಟಕ ರಾಜ್ಯ ಸಾಂಬಾರ ಪದಾರ್ಥಗಳ ಅಭಿವೃದ್ಧಿ ಮಂಡಳಿ ಅಧಿಕಾರಿಗಳು.

ಕಪ್ಪು ಬಂಗಾರಕ್ಕೆ ಆಮದು ಕಂಟಕ: ವಿದೇಶಗಳಿಂದ ಕಡಿಮೆ ಬೆಲೆಗೆ ಆಮದು ಮಾಡಿಕೊಳ್ಳುತ್ತಿರುವ ಕಾಳು ಮೆಣಸು ದೇಶೀಯ ಕಾಳುಮೆಣಸಿಗೆ ಕಂಟಕವಾಗಿದೆ.

'ಕಾಳುಮೆಣಸು ಆಮದು ಆಗುವುದಕ್ಕಿಂತ ಮೊದಲು ದೇಶದ ಕಾಳುಮೆಣಸು ಕೆ.ಜಿಗೆ ₹ 700 ಇತ್ತು. ವಿಯೆಟ್ನಾಂ, ಬ್ರೆಜಿಲ್, ಮಲೇಷ್ಯಾದಿಂದ ಕಾಳುಮೆಣಸನ್ನು ಪ್ರತಿ ಕೆ.ಜಿ.ಗೆ ₹ 180 ರಿಂದ ₹200 ಅಗ್ಗದ ದರದಲ್ಲಿ ಆಮದು ಮಾಡಿಕೊಂಡು, ಸ್ಥಳೀಯ ಕಾಳು ಮೆಣಸಿನೊಂದಿಗೆ ಕಲಬೆರಕೆ ಮಾಡುವ ಜಾಲ ದೇಸಿ ಬಂಗಾರದ ಗುಣಮಟ್ಟ



ಚಿಕ್ಕಮಗಳೂರು ಜಿಲ್ಲೆಯ ಕಳಸದ ತೋಟವೊಂದರಲ್ಲಿ ಕಾಳು ಮೆಣಸಿನ ಬಳ್ಳಿ ನಾಶವಾಗಿರುವುದು.

ಹಾಳುಮಾಡುತ್ತಿದೆ' ಎನ್ನುತ್ತಾರೆ ಹಾಸನ ಜಿಲ್ಲಾ ಪ್ಲಾಂಟರ್ಸ್ ಸಂಘದ ಅಧ್ಯಕ್ಷ ಕ್ಯಾನಹಳ್ಳಿ ಸುಬ್ರಹ್ಮಣ್ಯ.

ಮಾರ್ಚ್‌ನಲ್ಲಿ ಕಾಳು ಮೆಣಸು ಕೆ.ಜಿ.ಗೆ ₹550–₹600ರವರೆಗೆ ಬೆಲೆ ಇತ್ತು. ಈಗ ₹480–₹500ಕ್ಕೆ ಇಳಿದಿದೆ. ಬೆಲೆ ಕುಸಿತಕ್ಕಿಂತಲೂ ತೋಟಗಳಲ್ಲಿ ಬಳ್ಳಿಗಳೇ ಸತ್ತುಹೋಗಿರುವುದು ದೊಡ್ಡ ನಷ್ಟ. ಮತ್ತೆ ಹೊಸದಾಗಿ ಮೆಣಸು ಬುಟ್ಟಿ ನೆಟ್ಟು ಪೋಷಿಸಿದರೆ ಫಲ ಸಿಗುವುದು ಮೂರು ವರ್ಷಗಳ ನಂತರವೇ.

ಕಾಫಿಗೆ ಮಾರಕವಾದ ಮುಕ್ತ ಮಾರುಕಟ್ಟೆ: 'ಮುಕ್ತ ಮಾರುಕಟ್ಟೆ ಶುರುವಾದ ಮೇಲೆ ಕಾಫಿ ಬೆಲೆ ಸ್ಥಿರತೆ ಕಳೆದುಕೊಂಡಿದೆ. ದೇಶಿ ಮಾರುಕಟ್ಟೆಯಲ್ಲಿನ ದರ ನಿಗದಿ ಅಂತರರಾಷ್ಟ್ರೀಯ ಮಾರುಕಟ್ಟೆ ಅವಲಂಬಿಸಿದೆ. ಅಂತರರಾಷ್ಟ್ರೀಯವಾಗಿ ಬೆಲೆ ಹೆಚ್ಚಿದ್ದಾಗಲೂ ಮಧ್ಯವರ್ತಿಗಳು, ಬೆಳೆಗಾರರಿಂದ ಕಡಿಮೆ ಬೆಲೆಗೆ ಕಾಫಿ ಖರೀದಿಸಿ ಬಹುರಾಷ್ಟ್ರೀಯ ಕಂಪನಿಗಳಿಗೆ ಹೆಚ್ಚಿನ ಬೆಲೆಗೆ ಮಾರುತ್ತಿದ್ದಾರೆ. ವ್ಯಾಪಾರಿಗಳಿಂದ ಶೋಷಣೆ ನಿಂತಿಲ್ಲ' ಎನ್ನುವುದು ಹಲವು ಬೆಳೆಗಾರರ ಅಳಲು.

ರಾಜ್ಯವಾರು ಉತ್ಪಾದನೆಯ ಅಂದಾಜು

*(2022-23ರ ಸಾಲಿಗೆ ಹೂವಾದ ನಂತರ ವಿವರ ಟನ್‌ಗಳಲ್ಲಿ)

(ಮಾಹಿತಿ: ಭಾರತೀಯ ಕಾಫಿ ಮಂಡಳಿ)

ರಾಜ್ಯ	ಅರೆಬಿಕಾ	ರೊಬಸ್ಟಾ	ಒಟ್ಟು
ಕರ್ನಾಟಕ	86,150	1,99,000	2,85,150
ಕೇರಳ	2,060	72,275	74,335
ತಮಿಳುನಾಡು	14,450	5,590	20,040

ದೇಶದಲ್ಲಿ ಕಾಫಿ ಉತ್ಪಾದನೆ (ಟನ್‌ಗಳಲ್ಲಿ)

ವರ್ಷ	ಅರೆಬಿಕಾ	ರೊಬಸ್ಟಾ	ಒಟ್ಟು
2021-22	95,000	2,47,000	3,42,000
2022-23	1,16,400	2,77,000	3,93,400

ಕರ್ನಾಟಕದಲ್ಲಿ ಉತ್ಪಾದನೆ (ಟನ್‌ಗಳಲ್ಲಿ) (2022–23)*

ಜಿಲ್ಲೆ	ಅರೆಬಿಕಾ	ರೊಬಸ್ಟಾ	ಒಟ್ಟು
ಚಿಕ್ಕಮಗಳೂರು	43,225	52,955	96,180
ಕೊಡಗು (ಚಾಮರಾಜನಗರ ಸೇರಿ)	22,725	1,22,720	1,45,445
ಹಾಸನ	20,200	23,325	43,525

● ರಫ್ತು (ಟನ್) ● ಮೌಲ್ಯ (₹ ಕೋಟಿಗಳಲ್ಲಿ)

ವರ್ಷ	ರಫ್ತು (ಟನ್)	ಮೌಲ್ಯ (₹ ಕೋಟಿಗಳಲ್ಲಿ)
2021	3,93,709	6,984
2022	1,90,084	3,985

'ಕಾಫಿ ಮುಕ್ತ ಮಾರುಕಟ್ಟೆಗೆ ಮೊದಲು ಎಸಿ 50 ಕೆ.ಜಿ.ಗೆ ₹ 3 ಸಾವಿರ ಇತ್ತು. ಇದು 2000ರ ಹೊತ್ತಿಗೆ ₹ 450ಕ್ಕೆ ಕುಸಿದಿತ್ತು. ಬ್ರೆಜಿಲ್‌ನಲ್ಲಿ ಕಾಫಿ ಬೆಳೆ ವಿಫಲವಾದಾಗ, ಬೆಲೆ ಚೇತರಿಕೆಯಾಗುತ್ತಿತ್ತು' ಎನ್ನುತ್ತಾರೆ ಕೊಡಗು ಬೆಳೆಗಾರರ ಒಕ್ಕೂಟದ ಕಾರ್ಯದರ್ಶಿ ಹರೀಶ್ ಮಾದಪ್ಪ.



ಹರೀಶ್ ಮಾದಪ್ಪ

'ಜಾಗತಿಕ ಮಾರುಕಟ್ಟೆಯಲ್ಲಿ ಕೆ.ಜಿ ಕಾಫಿಗೆ 245 ಸೆಂಟ್ಸ್ ಇದ್ದ ದರವು ಈಗ 156 ಸೆಂಟ್ಸ್‌ಗೆ ಇಳಿದಿದೆ. ಡಾಲರ್ ಮೌಲ್ಯ ವೃದ್ಧಿಸದಿದ್ದರೆ 50 ಕೆ.ಜಿ ಕಾಫಿ ಧಾರಣೆಯು ₹9,500ರ ಆಸುಪಾಸಿಗೆ ಬರುತ್ತಿತ್ತು' ಎನ್ನುತ್ತಾರೆ ಚಿಕ್ಕಮಗಳೂರಿನ ಸಾರಥಿ ಕಾಫಿ ಕ್ಯೂರಿಂಗ್ ವರ್ಕ್ಸ್ ಮಾಲೀಕ ಎ.ಎನ್. ದೇವರಾಜ್.

'ಚಿಕ್ಕಮಗಳೂರು, ಹಾಸನ, ಕೊಡಗು, ದಕ್ಷಿಣ ಕನ್ನಡ, ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅತಿ ಹೆಚ್ಚು ಕಾಳುಮೆಣಸು ಬೆಳೆಯುತ್ತಿದ್ದರೂ, ಅಂತರರಾಷ್ಟ್ರೀಯ ಕರಿಮೆಣಸು ವಿನಿಮಯ ಕೇಂದ್ರವು ಕೊಚ್ಚಿಯಲ್ಲಿರುವ ಕಾರಣಕ್ಕೆ ಕೇಂದ್ರ ಸರ್ಕಾರ ಕೇರಳಕ್ಕೆ ಹೆಚ್ಚು ಉತ್ತೇಜನ ನೀಡುತ್ತಿದೆ' ಎಂಬುದು ಇಲ್ಲಿನ ಬೆಳೆಗಾರರ ಗಂಭೀರ ಆಪಾದನೆ.

ಹವಾಮಾನ ಬದಲಾವಣೆ– ಅಕಾಲಿಕ ಮಳೆ ನಿರಂತರ: ಜಾಗತಿಕ ಹವಾಮಾನ ಬದಲಾವಣೆ ಕಾಫಿ ಕೃಷಿ ಮೇಲೆ ಹೆಚ್ಚಿನ ಪ್ರತಿಕೂಲ ಪರಿಣಾಮ ಬೀರುತ್ತಿದೆ. ತಾಪಮಾನದ ಹೆಚ್ಚಳ ಮಳೆಗಾಲ, ಚಳಿಗಾಲ, ಬೇಸಿಗೆ ಕಾಲದ ವ್ಯತ್ಯಾಸಗಳ ಗೆರೆಯನ್ನೇ ತೆಳುವಾಗಿಸುತ್ತಿದೆ. ಪರಿಣಾಮ ಕಾಫಿ ಅಕಾಲಿಕವಾಗಿ ಹೂವಾಗುವುದು, ಅಕಾಲಿಕವಾಗಿ ಹಣ್ಣಾಗುವುದು ಸಾಮಾನ್ಯವಾಗಿದೆ.

ಇಂಗಾಲ ಹೊರಸೂಸುವಿಕೆ ಪ್ರಮಾಣ ತಗ್ಗಿಸುವ ಗುರಿಯನ್ನು ಮೂರು ದಶಕಗಳೊಳಗೆ ಸಾಧಿಸದಿದ್ದರೆ, 2050ರ ವೇಳೆಗೆ ಜಗತ್ತಿನಲ್ಲಿ ಕಾಫಿ ಬೆಳೆಯುವ ಸಾಂಪ್ರದಾಯಿಕ ಪ್ರದೇಶಗಳಲ್ಲಿ ಅರ್ಧದಷ್ಟು ಕಾಫಿ ಕೃಷಿಗೆ ಯೋಗ್ಯವಾಗಿ ಉಳಿಯುವುದಿಲ್ಲ. ಬ್ರೆಜಿಲ್ ಒಂದೇ ಶೇ 79ರಷ್ಟು ಕಾಫಿ ಕೃಷಿಭೂಮಿ ಕಳೆದುಕೊಳ್ಳಲಿದೆ. ಇಂತಹ ಪರಿಸ್ಥಿತಿ ಈಗಾಗಲೇ ಪೆರುವಿನಲ್ಲಿ ಕಾಣಲಾರಂಭಿಸಿದೆ ಎನ್ನುತ್ತವೆ ವೈಜ್ಞಾನಿಕ ವರದಿಗಳು.

ಲಂಡನ್‌ನ ಕೀವ್ ಗಾರ್ಡನ್ಸ್ ಕೀವ್ ಕಾಫಿ ಸಂಶೋಧನಾ ಕೇಂದ್ರದ ಮುಖ್ಯಸ್ಥ ಡಾ. ಆರನ್ ಡೇವಿಸ್ ಮತ್ತು ಐಯುಸಿಎನ್ ರೆಡ್ ಲಿಸ್ಟ್ ಮುಖ್ಯಸ್ಥರಾದ ಕ್ರೇಗ್ ಹಿಲ್ಟನ್ ಟೇಲರ್ ಅವರು ತಮ್ಮ ಅಧ್ಯಯನ ವರದಿಗಳಲ್ಲಿ ಕಾಫಿಯೂ ಅಳಿವಿನಂಚಿಗೆ ಬಂದಿದೆ. ಭವಿಷ್ಯದಲ್ಲಿ ಕಾಫಿ ಉಳಿಸಿಕೊಳ್ಳಬೇಕಾದರೆ ರೋಗ ನಿರೋಧಕ ಶಕ್ತಿಯ ಮತ್ತು ಪ್ರತಿಕೂಲ ಹವಾಮಾನಕ್ಕೂ ಒಗ್ಗುವಂತಹ ಹೊಸ ತಳಿಗಳ ಕಾಫಿ ಸಂಶೋಧನೆಯ ಅಗತ್ಯವಿದೆ ಎಂದು ಒತ್ತಿ ಹೇಳಿದ್ದಾರೆ.

ಹವಾಮಾನ ಬದಲಾವಣೆಯು ಕೆಲವು ದೇಶಗಳಿಗೆ ಮೊದಲ ಬಾರಿಗೆ ಕಾಫಿ ಉತ್ಪಾದಿಸಲು ಸಾಧ್ಯವಾಗಬಹುದು. ಕಾಫಿ ಬೆಳೆಯಲು ಸುಸ್ಥಿರವೆನಿಸಲಿರುವ ದೇಶಗಳ ಸಾಲಿನಲ್ಲಿ ಚೀನಾ ಮತ್ತು ಅಮೆರಿಕ ಸೇರಿವೆ. 'ಮಾನ್ಸೂನ್ ಜತೆಗಿನ ಜೂಜಾಟ' ಎಂದೇ ಪರಿಗಣಿಸಿರುವ ಭಾರತದ ಕೃಷಿಯಲ್ಲಿ, ಪ್ರತಿಕೂಲ ಹವಾಮಾನ, ಕೀಟ ಬಾಧೆ ನಡುವೆಯೂ ಉಳಿಯಬಲ್ಲ ಕಾಫಿ ತಳಿಗಳನ್ನು ಅಭಿವೃದ್ಧಿಪಡಿಸಬೇಕಾದ ಸವಾಲು ಸಂಶೋಧಕರ ಮುಂದಿದೆ.

(ಪೂರಕ ಮಾಹಿತಿ: ವಿಶ್ವನಾಥ ಎಸ್., ಬಿ.ಜೆ. ಧನ್ಯಪ್ರಸಾದ್, ಗಿರೀಶ್ ಕೆ.ಎಸ್., ಚಿದಂಬರ ಪ್ರಸಾದ್)

ಚಳಿಗಾಲದಲ್ಲೂ ಮಳೆ. ಮೋಡ ಕವಿದ ವಾತಾವರಣದಿಂದಾಗಿ ಕಾಫಿ ಒಣಗಿಸುವುದು ಹರಸಾಹಸ. ಕಾಫಿ ಒಣಗಿಸುವ ಯಂತ್ರ (ಡ್ರೈಯರ್) ಖರೀದಿಗೆ ಸಬ್ಸಿಡಿ ಒದಗಿಸಬೇಕು

ಡಾ.ಎಚ್.ಟಿ.ಮೋಹನಕುಮಾರ್, ಅಧ್ಯಕ್ಷ, ಕರ್ನಾಟಕ ಬೆಳೆಗಾರರ ಒಕ್ಕೂಟ (ಕೆಜಿಎಫ್), ಚಿಕ್ಕಮಗಳೂರು



ಕಾಫಿ, ಕಾಳುಮೆಣಸು ಬೆಳೆಗಾರರಿಗೆ ಪ್ರೋತ್ಸಾಹ ಧನ ನೀಡಬೇಕು. ಬೆಲೆ ಕುಸಿತದಾಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಫಿಗೂ ಬೆಂಬಲ ಬೆಲೆ ಘೋಷಿಸಬೇಕು

ಕ್ಯಾನಹಳ್ಳಿ ಸುಬ್ರಹ್ಮಣ್ಯ, ಹಾಸನ ಜಿಲ್ಲಾ ಪ್ಲಾಂಟರ್ಸ್ ಸಂಘದ ಅಧ್ಯಕ್ಷ

ಹೆಚ್ಚು ಮಳೆಯಿಂದ ಕಾಫಿ ಹಣ್ಣುಗಳು ನೀರ್ಚಿಯಾಗಿ ನೆಲಕಚ್ಚುತ್ತಿವೆ. ಕೊಯ್ಲು ಸಾಗುತ್ತಿಲ್ಲ. ಕಾಫಿ ಗಿಡ, ಮೆಣಸಿನ ಬಳ್ಳಿ ಉಳಿಸಿಕೊಳ್ಳುವುದೇ ಸವಾಲಾಗಿದೆ. ಅರ್ಧದಷ್ಟು ಫಸಲು ನಷ್ಟವಾಗಿದೆ.

ಡಾ.ಕೃಷ್ಣಾನಂದ, ಬೆಳಗಾರ, ಕಾಫಿ ಮಂಡಳಿ ಸದಸ್ಯ, ಹೇರೂರು, ಕೊಪ್ಪ ತಾಲ್ಲೂಕು

ಏರುತ್ತಿರುವ ಕೃಷಿ ವೆಚ್ಚ

ತೋಟಗಳಲ್ಲಿ ಬರುವ ವಾರ್ಷಿಕ ಆದಾಯಕ್ಕಿಂತ ಖರ್ಚಿನ ಬಾಬತ್ತೇ ಹೆಚ್ಚಾಗುತ್ತಿದೆ. ದಶಕದಿಂದ ಕಾಫಿ ಕೃಷಿ ವೆಚ್ಚ ಅಂದಾಜು ಮೀರಿ ಏರುತ್ತಿದೆ. ಕಾಫಿ ಹಣ್ಣುಕೊಯ್ಲಿಗಾಗಿ ಕೂಲಿ ದರ ಏರಿಕೆಯ ಪೈಪೋಟಿ. ಬ್ಯಾಂಕುಗಳಲ್ಲಿ ಏರುತ್ತಿರುವ ಸಾಲದ ಬಡ್ಡಿ ಬೆಳೆಗಾರರ ಆದಾಯ ಖೋತಾ ಮಾಡುತ್ತಿದೆ.

1995–2000 ಅವಧಿಯಲ್ಲಿ ಒಂದು ಎಕರೆ ಅರೆಬಿಕಾ ತೋಟದಲ್ಲಿ ಸರಾಸರಿ 600ರಿಂದ 700 ಕೆ.ಜಿ ಫಸಲು ಬರುತ್ತಿತ್ತು. ಈಗ ಎಕರೆಗೆ 200 ರಿಂದ 300 ಕೆ.ಜಿಗೆ ಕುಸಿದಿದೆ. ಹಾಗೆಯೇ ಈ ಅವಧಿಯಲ್ಲಿ ಪ್ರತಿ ಎಕರೆ ಅರೆಬಿಕಾ ತೋಟ ನಿರ್ವಹಣೆಗೆ ವಾರ್ಷಿಕ ₹35 ಸಾವಿರದಿಂದ ₹45 ಸಾವಿರ ಸಾಕಾಗುತ್ತಿತ್ತು. ಆದರೆ, ಈಗ ₹80 ಸಾವಿರದಿಂದ ₹90 ಸಾವಿರಕ್ಕೆ ಏರಿದೆ. ನಿರ್ವಹಣೆ ಸುಲಭ ಎನಿಸಿದ್ದ ರೊಬಸ್ಟಾ ತೋಟದ ನಿರ್ವಹಣೆಯೂ ಎಕರೆಗೆ ₹55 ಸಾವಿರ ದಾಟಿ, ಅದೂ ದುಬಾರಿಯಾಗಿ ಪರಿಣಮಿಸಿದೆ.

2007ರಲ್ಲಿ ಎಂಒಪಿ (ಪೊಟ್ಯಾಷ್) ರಸಗೊಬ್ಬರ 50 ಕೆ.ಜಿಗೆ ₹ 275 ಇತ್ತು. ಈಗ ಇದರ ಬೆಲೆ ₹1,700ಕ್ಕೆ ಏರಿದೆ. ಡಿಎಪಿ ರಸಗೊಬ್ಬರ ₹490ರಿಂದ ₹1,350ಕ್ಕೆ ಜಿಗಿದಿದೆ. ಇನ್ನು ಬೆಳೆಗಾರರು ಹೆಚ್ಚು ಅವಲಂಬಿಸಿದ್ದ 19:19:19 ರಸಗೊಬ್ಬರ (ಎನ್‌ಪಿಕೆ–ಸಂಪೂರ್ಣ) ಸಿಗುತ್ತಲೇ ಇಲ್ಲ. ನಕಲಿ ರಸಗೊಬ್ಬರದ ಹಾವಳಿಯಿಂದಲೂ ಬೆಳೆ ಹಾಳಾಗುತ್ತಿದೆ ಎಂದು ಬೆಳೆಗಾರರ ಸಮಸ್ಯೆ ತೆರೆದಿಡುತ್ತಾರೆ.

ಅನುಮೋದನೆಯಿಲ್ಲದೆ ತಾತ್ಕಾಲಿಕ ಆಯ್ಕೆ ಪಟ್ಟಿ ಬಿಡುಗಡೆ

ಕೆಪಿಎಸ್‌ಸಿ– ಕಾರ್ಯದರ್ಶಿ ಮಧ್ಯೆ ಭಿನ್ನಮತ?

● ರಾಜೇಶ್ ರೈ ಚಟ್ಲ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಆಡಳಿತ ಮಂಡಳಿಯ ಅನುಮೋದನೆ ಇಲ್ಲದೇ ಮೊದಲ ಬಾರಿಗೆ ಆಯ್ಕೆ ಪಟ್ಟಿ ಬಿಡುಗಡೆ ಮಾಡಿರುವುದು ಅಧ್ಯಕ್ಷರು ಮತ್ತು ಕಾರ್ಯದರ್ಶಿ ಮಧ್ಯದ ಭಿನ್ನಮತಕ್ಕೆ ಕಾರಣವಾಗಿದೆ.

ಲೋಕೋಪಯೋಗಿ ಇಲಾಖೆಯ (ಪಿಡಬ್ಲ್ಯುಡಿ) ಗ್ರೂಪ್ 'ಸಿ' ವೃಂದದ ಕಿರಿಯ ಎಂಜಿನಿಯರ್ (ಜೆಇ) 330 ಹುದ್ದೆಗಳಿಗೆ ಆಯ್ಕೆಯಾದವರ ತಾತ್ಕಾಲಿಕ ಪಟ್ಟಿಯನ್ನು ಆಯೋಗದ ಒಪ್ಪಿಗೆ ಇಲ್ಲದೆ, ಕೆಪಿಎಸ್‌ಸಿ ಕಾರ್ಯದರ್ಶಿ ವಿಕಾಸ್ ಕಿಶೋರ್ ಸುರಳ್ಕರ್ ಪ್ರಕಟಿಸಿದ್ದಾರೆ. ಅಲ್ಲದೆ, ಪಟ್ಟಿ ಅನುಮೋದನೆಗಾಗಿ ಆಯೋಗದ ಅಧ್ಯಕ್ಷರಿಗೆ ಈಗಾಗಲೇ ರವಾನಿಸಿದ್ದ ಇತರ ಕಡತಗಳ ಮಾಹಿತಿಯನ್ನೂ ವೆಬ್‌ಸೈಟ್‌ನಲ್ಲಿ ನೀಡಿದ್ದಾರೆ.

ಕಾರ್ಯದರ್ಶಿಯ ಈ ನಡೆ ಆಯೋಗವನ್ನು (ಅಧ್ಯಕ್ಷರು ಮತ್ತು ಸದಸ್ಯರು) ಕೆರಳಿಸಿದೆ. 'ಅನುಮೋದನೆ ಪಡೆಯದೆ ಪಟ್ಟಿ ಬಿಡುಗಡೆ ಕುರಿತ ಬಗ್ಗೆ ಚರ್ಚಿಸಲು ಸೋಮವಾರ (ಡಿ.19) ಆಯೋಗದ ಸಭೆ ನಡೆಸುವ ಚಿಂತನೆ ಇದೆ' ಎಂದು ಸದಸ್ಯರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಜೆಇ ಹುದ್ದೆಗೆ ಆಯ್ಕೆಯಾದವರ ಪಟ್ಟಿಯನ್ನು ಅನುಮೋದನೆಗೆ ನ. 30ರಂದೇ ಕಾರ್ಯದರ್ಶಿ ಸಲ್ಲಿಸಿದ್ದರು. 15 ದಿನ ಕಳೆದರೂ ಅನುಮೋದನೆ ನೀಡಿರಲಿಲ್ಲ. 'ಅಭ್ಯರ್ಥಿಗಳ ಮಾಹಿತಿಗೆ ಮಾತ್ರ' ಎಂದು ಉಲ್ಲೇಖಿಸಿ ತಾತ್ಕಾಲಿಕ ಪಟ್ಟಿಯನ್ನು ಕಾರ್ಯದರ್ಶಿ ಶುಕ್ರವಾರ ಬಿಡುಗಡೆ ಮಾಡಿದ್ದಾರೆ.

'ಕಾನೂನಿನ ಪ್ರಕಾರ ಈ ಪಟ್ಟಿಗೆ ಯಾವುದೇ ಮಾನ್ಯತೆ ಇಲ್ಲ. ಆಯೋಗದಿಂದ ನ್ಯಾಯಸಮ್ಮತವಾದ ಆಕ್ಷೇಪಣೆಗಳಿದ್ದರೆ ಪಟ್ಟಿ ಬದಲಾವಣೆಗೆ ಒಳಪಡುತ್ತದೆ. ಅಭ್ಯರ್ಥಿಗಳು ಅಂತಿಮ ಅನುಮೋದನೆ ಪಡೆಯುವವರೆಗೆ ನಿರೀಕ್ಷಿಸಬೇಕು' ಎಂದೂ ಕಾರ್ಯದರ್ಶಿ ಉಲ್ಲೇಖಿಸಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ' ಜೊತೆ ಮಾತನಾಡಿದ ಕಾರ್ಯದರ್ಶಿ, 'ಆಯೋಗಕ್ಕೆ ಪಟ್ಟಿ ರವಾನಿಸಿ 15 ದಿನ ಕಳೆದಿದೆ. ಎರಡು ಸಭೆಗಳಾದರೂ ಅನುಮೋದನೆ ಆಗಿಲ್ಲ. ಅಭ್ಯರ್ಥಿಗಳ ಒತ್ತಡ ಹೆಚ್ಚಿದ್ದರಿಂದ, ಅಂತಿಮ ಅನುಮೋದನೆಯ ಷರತ್ತಿನಲ್ಲಿ ಪಟ್ಟಿ ಬಿಡುಗಡೆ ಮಾಡಿದ್ದೇನೆ. ಮುಂದೆಯೂ ಆಯೋಗಕ್ಕೆ ರವಾನಿಸಿ 15 ದಿನ ಕಳೆದರೂ ಅನುಮೋದನೆ ಸಿಗದಿದ್ದರೆ ತಾತ್ಕಾಲಿಕ ಆಯ್ಕೆ ಪಟ್ಟಿ ಬಿಡುಗಡೆ ಮಾಡಲಾಗುವುದು' ಎಂದರು.

'ಈ ನಡೆ ಆಯೋಗಕ್ಕೆ ವಿರುದ್ಧ ಅಲ್ಲವೇ?' ಎಂಬ ಪ್ರಶ್ನೆಗೆ ಅವರು, 'ಈಗಾಗಲೇ 1:3 ಅನುಪಾತದಲ್ಲಿ ಅರ್ಹರಾದವರ ಅಂಕಗಳನ್ನು ಬಿಡುಗಡೆ ಮಾಡಲಾಗಿದೆ. ಅಲ್ಲದೆ, ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಯೋಗ ವ್ಯಕ್ತಪಡಿಸಿದ್ದ ಆಕ್ಷೇಪಣೆಗಳಿಗೂ ಉತ್ತರಿಸಿದ್ದೇನೆ. ಅಧ್ಯಕ್ಷರಿಗೆ ಲಿಖಿತವಾಗಿ ಮಾಹಿತಿ ನೀಡಿಯೇ ಪಟ್ಟಿ ಬಿಡುಗಡೆ ಮಾಡಿದ್ದೇನೆ. ಆದರೆ, ಅವರು ಬಿಡುಗಡೆ ಮಾಡಬೇಡಿ ಎಂದಿದ್ದರು' ಎಂದರು.

'ಮುಂದೆ ಸಂದರ್ಶನ ಇಲ್ಲದ ಎಲ್ಲ ಹುದ್ದೆಗಳಿಗೆ 1:3 ಅನುಪಾತದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಹೆಸರಿನ ಜೊತೆಗೆ ಅಂಕಗಳನ್ನೂ ಬಿಡುಗಡೆ ಮಾಡುತ್ತೇನೆ. ಅರ್ಹರ ಅಂಕ ಗೊತ್ತಾದರೆ ಕೆಲ ಅಭ್ಯರ್ಥಿಗಳು ಕೋರ್ಟ್ ಮೆಟ್ಟಿಲೇರುತ್ತಾರೆ ಎಂದು ಹಿಂದೆ ಈ ರೀತಿ ಮಾಡುತ್ತಿರಲಿಲ್ಲ. ನಮ್ಮ ತಪ್ಪುಗಳು ಗೊತ್ತಾದರೆ ತಿದ್ದಿಕೊಳ್ಳಬಹುದು. ನಮ್ಮದು ಸರಿ ಎಂಬ ಖಚಿತತೆ ಇರುವುದರಿಂದ ಕೋರ್ಟ್‌ನಲ್ಲಿ ನಮಗೇ ಗೆಲುವು ಆಗಬಹುದು. ಪಾರದರ್ಶಕತೆ ಕಾಪಾಡಲು ಅರ್ಹರ ಅಂಕಗಳು ಮತ್ತು ಆಯ್ಕೆ ಪಟ್ಟಿಯನ್ನು ಆದಷ್ಟು ಬೇಗ ಬಿಡುಗಡೆ ಮಾಡುವುದು ನನ್ನ ಉದ್ದೇಶ' ಎಂದರು.

'ಜೆಇ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಅನುಮೋದನೆ ನೀಡಲು ವಿಳಂಬ ಏಕೆ ಎನ್ನುವುದು ನನಗೆ ಗೊತ್ತಿಲ್ಲ. ತಾತ್ಕಾಲಿಕ ಆಯ್ಕೆ ಪಟ್ಟಿ ಸರಿಯಿದೆ ಎಂಬ ಖಚಿತತೆ ನನಗಿದೆ. ಹಾಗೆಂದು, ಆಯೋಗದ ಅಧಿಕಾರ ಮೀರಿ ನಾನು ಈ ಕೆಲಸ ಮಾಡಿಲ್ಲ. ಅಭ್ಯರ್ಥಿಗಳ ಹಿತದೃಷ್ಟಿಯಿಂದ ಬಿಡುಗಡೆ ಮಾಡಿದ್ದೇನೆ' ಎಂದೂ ಹೇಳಿದರು.

ಈ ಬಗ್ಗೆ ಪ್ರತಿಕ್ರಿಯೆಗೆ ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ ಅವರಿಗೆ ಹಲವು ಬಾರಿ ಕರೆ, ಸಂದೇಶ ಕಳುಹಿಸಿದರೂ ಅವರು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

ಎರಡೂ ಪಟ್ಟಿಯಲ್ಲಿ 161 ಅಭ್ಯರ್ಥಿಗಳು

ಜೆಇ 330 ಹುದ್ದೆಗಳಿಗೆ 1:3 ಅನುಪಾತದಲ್ಲಿ 977 ಹಾಗೂ ಸಹಾಯಕ ಎಂಜಿನಿಯರ್ (ಎಇ) 660 ಹುದ್ದೆಗಳಿಗೆ 1:3 ಅನುಪಾತದಲ್ಲಿ 1,974 ಅಭ್ಯರ್ಥಿಗಳು ಅರ್ಹರಾಗಿದ್ದಾರೆ. ಎರಡೂ ಹುದ್ದೆಗಳಿಗೆ ಅರ್ಹರಾದವರ ಪಟ್ಟಿಯಲ್ಲಿ 161 ಅಭ್ಯರ್ಥಿಗಳ ಹೆಸರಿವೆ. ಜೆಇಗೆ ಸಂದರ್ಶನ ಇಲ್ಲದೇ ಇರುವುದರಿಂದ ಆಯ್ಕೆ ಪಟ್ಟಿಗೆ ಅನುಮೋದನೆ ನೀಡದಿರಲು ಯಾವುದೇ ಸಕಾರಣ ಇಲ್ಲ. ಎಇ ಹುದ್ದೆಗಳಿಗೆ 50 ಅಂಕಗಳಿಗೆ ಸಂದರ್ಶನವಿದ್ದು, 40ಕ್ಕಿಂತ ಹೆಚ್ಚು, 20ಕ್ಕಿಂತ ಕಡಿಮೆ ಅಂಕ ನೀಡಿದರೆ ಸಂದರ್ಶನ ಮಂಡಳಿ ಸ್ಪಷ್ಟವಾದ ಕಾರಣ ನೀಡಬೇಕು. ಎಇ ಹುದ್ದೆಗಳ ಆಯ್ಕೆ ಪಟ್ಟಿಯ ಜೊತೆಗೇ ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಗಳಿಸಿದ ಮತ್ತು ಸಂದರ್ಶನದ ಅಂಕ ನೀಡಲಾಗುವುದು' ಎಂದು ಸುರಳ್ಕರ್ ತಿಳಿಸಿದರು.



ನನಗೆ ಆಯೋಗ ಸಂಪೂರ್ಣ ಸಹಕಾರ ನೀಡುತ್ತಿದೆ. ಆದರೆ, ಪಿಡಬ್ಲ್ಯುಡಿ ಸಂದರ್ಶನ ಅಂಕ ನಿಗದಿ, ಜೆಇ ಪಟ್ಟಿ ಬಿಡುಗಡೆ ಸೇರಿದಂತೆ ಕೆಲವು ವಿಷಯಗಳಲ್ಲಿ ಅಭಿಪ್ರಾಯ ವ್ಯತ್ಯಾಸ ಇರುವುದು ನಿಜ

ವಿಕಾಸ್ ಕಿಶೋರ್ ಸುರಳ್ಕರ್, ಕಾರ್ಯದರ್ಶಿ, ಕೆಪಿಎಸ್‌ಸಿ

'ನೇಕಾರರಿಗೆ ಶೇ 50 ಸಹಾಯಧನ'

ಬೆಂಗಳೂರು: ನೇಕಾರಿಕೆಗೆ ಸಂಬಂಧಿಸಿದ ಉದ್ಯಮಗಳನ್ನು ಆರಂಭಿಸಲು ನೇಕಾರರಿಗೆ ನೀಡುವ ಸಹಾಯಧನದ ಮೊತ್ತವನ್ನು ಶೇಕಡ 30ರಿಂದ ಶೇ 50ಕ್ಕೆ ಹೆಚ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಶನಿವಾರ ಉನ್ನತ ಮಟ್ಟದ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ವೃತ್ತಿಪರ ನೇಕಾರರಿಗೆ ಸರ್ಕಾರದಿಂದ ಹೆಚ್ಚಿನ ನೆರವು ಒದಗಿಸಲಾಗುವುದು. ವಿದ್ಯುತ್ ಮಗ್ಗಗಳಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರಿಗೂ ನೇಕಾರ್ ಸಮ್ಮಾನ್ ಯೋಜನೆ ವಿಸ್ತರಣೆ, ಜನವಸತಿ ಪ್ರದೇಶದಲ್ಲಿರುವ ನೇಕಾರರಿಗೆ ವಾಸ್ತವ್ಯ ಪ್ರಮಾಣಪತ್ರ ನೀಡಲಾಗುವುದು. ಮಗ್ಗದ ಮೂಲಕ ನೇಕಾರಿಕೆ ನಡೆಸುವುದನ್ನು ಗುಡಿ ಕೈಗಾರಿಕೆ ಎಂದು ಪರಿಗಣಿಸಿ, ಮಾಲಿನ್ಯ ನಿಯಂತ್ರಣ ಮಂಡಳಿ ಅನುಮತಿ ಪಡೆಯುವುದರಿಂದ ವಿನಾಯ್ತಿ ನೀಡಲು ಆದೇಶ ಹೊರಡಿಸಲಾಗುವುದು' ಎಂದು ತಿಳಿಸಿದರು.


ನೇಕಾರರಿಗೆ ₹ 2 ಲಕ್ಷದವರೆಗೆ ಬಡ್ಡಿರಹಿತ ಸಾಲ ವಿತರಿಸುವುದು, ಐದು ಅಶ್ವಶಕ್ತಿ (ಎಚ್.ಪಿ) ಸಾಮರ್ಥ್ಯದವರೆಗಿನ ವಿದ್ಯುತ್ ಮಗ್ಗ ಮತ್ತು ಮಗ್ಗ ಪೂರ್ವ ಘಟಕಗಳಿಗೆ ತಮಿಳುನಾಡು ಮಾದರಿಯಲ್ಲಿ ಉಚಿತ ವಿದ್ಯುತ್ ಪೂರೈಕೆ, ವಿದ್ಯುತ್ ಬಿಲ್‌ನ ನಿಶ್ಚಿತ ಶುಲ್ಕದಲ್ಲಿ ಶೇ 50ರಷ್ಟು ರಿಯಾಯ್ತಿ, ನೇಕಾರರನ್ನು ಅಸಂಘಟಿತ ವಲಯದ ಕಾರ್ಮಿಕರ ವ್ಯಾಪ್ತಿಗೆ ಸೇರಿಸಿ ಸೌಲಭ್ಯ ನೀಡಲು ನಿರ್ಧರಿಸಲಾಗಿದೆ ಎಂದರು.

ಜವಳಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಸಿದ್ದು ಸವದಿ, ಶಾಸಕರಾದ ಅಭಯ ಪಾಟೀಲ, ಮಹದೇವಪ್ಪ ಯಾದವಾಡ, ಬಿಜೆಪಿ ಮುಖಂಡ ಎಂ.ಡಿ. ಲಕ್ಷ್ಮೀನಾರಾಯಣ ಹಾಗೂ ಇತರರು ಸಭೆಯಲ್ಲಿದ್ದರು.

ಮಗ್ಗಗಳಿಂದ ಬಟ್ಟೆ ಖರೀದಿಸಲು ಡಿಸೆಂಬರ್‌ನಲ್ಲೇ ಕಾರ್ಯಾದೇಶ ನೀಡಲಾಗುವುದು. ವಿವಿಧ ಇಲಾಖೆಗಳಲ್ಲಿ ಸಮವಸ್ತ್ರ ಅಗತ್ಯವಿರುವ ಬಟ್ಟೆಯ ಶೇ 25ರಷ್ಟನ್ನು ಕೈಮಗ್ಗ ನಿಗಮದ ಮೂಲಕ ಖರೀದಿಗೆ ನಿರ್ಧರಿಸಲಾಗಿದೆ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 18-12-1997

● **ತಮಿಳುನಾಡು: ಎಐಎಡಿಎಂಕೆ ಜೊತೆ ಬಿಜೆಪಿ ಒಪ್ಪಂದ**

ಚೆನ್ನೈ, ಡಿಸೆಂಬರ್ 17 (ಪಿಟಿಐ, ಯುಎನ್‌ಐ)– ಮುಂಬರುವ ಲೋಕಸಭೆ ಚುನಾವಣೆಯಲ್ಲಿ ತಮಿಳುನಾಡು ಮತ್ತು ಪುದುಚೇರಿಗಳಲ್ಲಿ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳಲು ಬಿಜೆಪಿ ಮತ್ತು ಎಐಎಡಿಎಂಕೆ ಒಪ್ಪಂದವನ್ನು ಮಾಡಿಕೊಂಡಿವೆ. ಇಂದು ಬೆಳಿಗ್ಗೆ ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಜಯಲಲಿತಾ ಮತ್ತು ಹಿರಿಯ ಬಿಜೆಪಿ ನಾಯಕರು ಈ ಬಗ್ಗೆ ಚರ್ಚೆ ನಡೆಸಿ,ಸ್ಥಾನ ಹೊಂದಾಣಿಕೆಗೆ ಸಮ್ಮತಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 18-12-1972

● **ಜಮ್ಮು ವಿಭಾಗದ ಎರಡು ಗ್ರಾಮಗಳಿಂದ ಭಾರತ ಸೈನಿಕರ ವಾಪಸಾತಿ**

ಚೋಟಾಚೌಕ್ (ಜಮ್ಮು) ಡಿಸೆಂಬರ್ 17– ಪುಟ್ಟ ಗ್ರಾಮಗಳಾದ ಚೋಟಾಚೌಕ್ ಮತ್ತು ಚುಂಬಿಯಾನಗಳಿಂದ ಭಾರತದ ಸೈನಿಕರು ಇಂದು ವಾಪಸ್ ಆದರು. ಜಮ್ಮು ಮತ್ತು ಕಾಶ್ಮೀರದಲ್ಲಿ ಹತೋಟಿ ರೇಖೆ ಗುರುತಿಸಲು ಆಗಿರುವ ಭಾರತ–ಪಾಕಿಸ್ತಾನ ಒಪ್ಪಂದದ ಪ್ರಕಾರ ಇವೆರಡರ ವಿಸ್ತೀರ್ಣ ನಾಲ್ಕೂವರೆ ಚದರ ಕಿಲೋಮೀಟರ್.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಡಿಸೆಂಬರ್ 18, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಕೃಷ್ಣ ದಶಮಿ ಗಂ. 27-33 ನಕ್ಷತ್ರ: ಹಸ್ತ ಗಂ. 10-18 ಯೋಗ: ಸೌಭಾಗ್ಯ ಗಂ. 06-47, ಶೋಭನ ಗಂ. 29-24 ಕರಣ: ವಣಿಜ ಗಂ. 15-43, ಧನುರ್ ಮಾಸದ 02 ನೇ ದಿನ.
ರಾಹುಕಾಲ : ಸಾಯಂಕಾಲ 04-30 –06-00
ಸೂರ್ಯೋದಯ : 06-51 ಸೂರ್ಯಾಸ್ತ : 06-04 ಮುಸ್ಲಿಂ ದಿನಾಂಕ : 23
ಜುಮಾದುಲ್ಲಾವಲ್ ದಿನ ವಿಶೇಷ : ಪಾರ್ಶ್ವನಾಥರ ಜನ್ಮ ದಿನ (ಜೈನ್)
ಅದೃಷ್ಟ ಸಂಖ್ಯೆ : 1, 12

ಮೇಷ: ನಾಳೆಯ ಕೆಲಸಗಳ ಬಗ್ಗೆ ಇಂದಿನ ದಿನವೇ ತಯಾರಿಯನ್ನು ನಡೆಸಿಕೊಳ್ಳುವುದು ಯಶಸ್ಸಿಗೆ ಸಹಾಯವಾಗುವುದು. ಏರುಪೇರಾಗಿದ್ದ ಆರ್ಥಿಕ ಪರಿಸ್ಥಿತಿಯನ್ನು ಸರಿದಾರಿಗೆ ತಂದ ನೆಮ್ಮದಿ ನಿಮ್ಮಲ್ಲಿಂದು ಕಾಣಲಿದೆ.

ವೃಷಭ: ಹಲವು ದಿನದಿಂದ ಮನೆಯವರಲ್ಲಿ ಕಾಣಿಸಿಕೊಂಡಿದ್ದ ಇರಿಸು ಮುರಿಸುಗಳು ಸರಿಹೋಗಲಿದೆ. ಅನಿರೀಕ್ಷಿತ ಪ್ರಯಾಣದಿಂದ ಮುಖ್ಯವ್ಯಕ್ತಿಗಳ ಪರಿಚಯ. ಗುತ್ತಿಗೆದಾರರಿಗೆ ಹೆಚ್ಚಿನ ಕಾರ್ಯಭಾರ ವಹಿಸುವರು.

ಮಿಥುನ: ಸಕಾರಾತ್ಮಕ ನಡವಳಿಕೆಗಳಿಂದಾಗಿ ಲಾಭ ಕಂಡುಕೊಳ್ಳಲಿದ್ದೀರಿ. ನಿಮ್ಮ ಸಲಹೆ ಸೂಚನೆಗಳನ್ನು ಒಪ್ಪುವಂತೆ ವ್ಯಕ್ತಿಯ ಮನಃ ಪರಿವರ್ತನೆ ಮಾಡುವಲ್ಲಿ ಸಫಲರಾಗುತ್ತೀರಿ. ಅಕ್ಕ ಪಕ್ಕದ ವ್ಯಕ್ತಿಗಳ ಬಗ್ಗೆ ಎಚ್ಚರವಹಿಸಿ.

ಕರ್ಕಾಟಕ: ಹವ್ಯಾಸಿ ಬರಹಗಾರರಿಗೆ ಹೇರಳ ಅವಕಾಶ. ಶ್ವಾಸಕೋಶ ಸಂಬಂಧಿತ ಕಾಯಿಲೆಗಳ ಬಗ್ಗೆ ನಿಗಾ ಇರಲಿ. ದೂರ ಪ್ರಯಾಣ ಮಾಡಬೇಕಾದ ಸಂದರ್ಭ ಬರಲಿದೆ. ಹಾಲು ಉತ್ಪನ್ನ ವಸ್ತುಗಳ ಮಾರಾಟಗಾರರಿಗೆ ಲಾಭ.

ಸಿಂಹ: ಸಂಸಾರದ ಜವಾಬ್ದಾರಿ ಸುಗಮವಾಗಿ ನಿಭಾಯಿಸುವಿರಿ. ಸಹನೆಯಿಂದ ಆಡಿದ ಮಾತುಗಳಿಗೆ ಗೌರವ ಲಭ್ಯ. ಮಕ್ಕಳ ಮನಸ್ಸಿಗೆ ನೋವಾಗದಂತೆ ನಡೆದುಕೊಳ್ಳುವುದು ನಿಮಗೆ ಕಷ್ಟವಾದರೂ ಅನಿವಾರ್ಯವಾಗಿ ನಡೆದುಕೊಳ್ಳಿರಿ.

ಕನ್ಯಾ: ಸ್ವಂತ ಉದ್ಯಮದಲ್ಲಿರುವವರು ತಮ್ಮ ಕಾರ್ಯ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದರಲ್ಲಿ ಬಹಳ ಉತ್ಸಾಹವನ್ನು ತೋರಿ ಅದರಲ್ಲಿ ಸಫಲತೆಯನ್ನು ಹೊಂದಬಹುದು. ಆಯ್ಕೆಯಲ್ಲಿ ಗೊಂದಲಗಳು ಎದುರಾಗಬಹುದು.

ತುಲಾ: ರಾಜಕೀಯ ವ್ಯಕ್ತಿಗಳು ಪ್ರಚಾರಕ್ಕಾಗಿ ದೂರ ಪ್ರಯಾಣವನ್ನು ಕೈಗೊಳ್ಳಬೇಕಾಗಲಿದೆ. ಉದ್ಯೋಗ ನಿಮಿತ್ತ ವಿದೇಶಕ್ಕೆ ಹೋಗುವ ಕನಸು ಚಿಗುರೊಡೆಯಲಿದೆ. ಗಣಪತಿಯನ್ನು ಆರಾಧಿಸುವುದರಿಂದ ವಿಘ್ನ ನಿವಾರಣೆ.

ವೃಶ್ಚಿಕ: ನಿಮ್ಮ ಕೆಲಸಕ್ಕೆ ಹತ್ತಿರದವರಿಂದ ಅಡೆತಡೆ ಉಂಟಾಗಲಿದೆ. ಸಂಸಾರದಲ್ಲಿ ಅಂತಃಕಲಹಗಳು ನಡೆದು, ಅಸಮಾಧಾನಕ್ಕೆ ಕಾರಣವಾಗಲಿದೆ. ಮಕ್ಕಳ ಜೊತೆಯಲ್ಲಿ ಸಮಯ ಕಳೆಯುವಂತಾಗುವುದು.

ಧನು: ನಿಮ್ಮ ಮನಸ್ಥಿತಿಗೆ, ನಿಮ್ಮ ಆಲೋಚನೆಗಳಿಗೆ ಸರಿಯಾದ ವಾತಾವರಣ ದೊರಕುವ ಲಕ್ಷಣಗಳಿವೆ. ಸಾಂಸ್ಕೃತಿಕ ವಿಭಾಗದ ವ್ಯಕ್ತಿಗಳಿಗೆ ಕಾರ್ಯದೊತ್ತಡ ಎದುರಾಗುವುದು. ವಿದ್ಯಾರ್ಥಿಗಳಿಗೆ ಏಕಾಗ್ರತೆ ಹೆಚ್ಚಾಗಲಿದೆ.

ಮಕರ: ನಿಮ್ಮ ಆಲೋಚನೆಗಳಿಗೆ ಗ್ರಹಣ ಸಂಭವಿಸಿದಂತಾಗುವುದರಿಂದ ಅಸಮಾಧಾನ, ಹೆದರಿಕೆ, ಧೈರ್ಯಗೆಡುವಂತೆ ಆಗಲಿದೆ. ಕಾರ್ಮಿಕ ವರ್ಗದವರಿಗೆ ನೀವಾಡಿದ ಮಾತುಗಳು ನೋವಾಗುವಂತಾಗಬಹುದು.

ಕುಂಭ: ಸಕುಟುಂಬದ, ಸ್ನೇಹಿತರ ನಡುವಿನ ಸಂಬಂಧಗಳು ಈ ದಿನ ನಡೆಯುವ ವಿಚಾರದಿಂದ ಇನ್ನಷ್ಟು ಉತ್ತಮಗೊಳ್ಳುವುದು. ಔದ್ಯೋಗಿಕ ವ್ಯವಹಾರದವರಿಗೆ ನಿರೀಕ್ಷೆಗೆ ತಕ್ಕ ಫಲಗಳು ದೊರೆತು ಹೆಚ್ಚಿನ ನೆಮ್ಮದಿ ಕಾಣುವರು.


ಮೀನ: ಮನೆಯವರ ಸಹಾಯದಿಂದ ನಿಮ್ಮ ಹಣಕಾಸಿನ ತೊಂದರೆಗಳು ದೂರವಾಗಿ ಈ ದಿನ ಹೊಸ ಯೋಜನೆಗೆ ಚಾಲನೆಯು ದೊರೆಯಲಿದೆ. ನೀವು ತೆಗೆದುಕೊಂಡಿರುವ ನಿರ್ಣಯಗಳಿಗೆ ಸಕಾರಾತ್ಮಕ ಬೆಂಬಲ ದೊರೆಯಲಿದೆ.

ಪದಬಂಧ 5172

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಗಣಿಯಲ್ಲಿ ಹುಟ್ಟಿದುದು (3)
4.ಹಸನ್ಮುಖ ವದನವಿದು (4)
6.ಭೇದಿಯಾಗಲು ಕೊಡುವ ಔಷದ (4)
8.ಈತ ಮುಸಲ್ಮಾನ ದೊರೆ (3)
11.ಇದು ಬಹಳ ಶ್ರೇಷ್ಠ (3)
13.ಸಮಾಧಾನವನ್ನು ಹೊಂದಿರುವವ (4)
17.ಮಂದಿ ನೀಡಿರುವ ಓಟು (4)
18.ರಜದಲ್ಲಿ ಬಂದಿರುವ ಅಗಸ (3)

ಮೇಲಿಂದ ಕೆಳಕ್ಕೆ
1.ಆಕಾಶದಲ್ಲಿ ಸಂಚರಿಸುವಂಥದ್ದು (3)
2.ಮಂದಿಯ ಮನಸ್ಸಿದು (4)
3.ಕಚಡದ ಹತ್ತಿರವಿದ್ದಾನಲ್ಲಾ ಈ ರೊಡ್ಡ! (3)
5.ಅಂಗವಿಕಲನು ನೋಡಿರುವ ಗುಹೆ (2)
7.ಉಸುಕು ತೂರಿ ತೋರಿದ ಬಲ (3)
9.ಸ್ಲೇಟಿನ ಮೇಲೆ ಬರೆಯುವ ಸಾಧನ (3)
10.ಏನೂ ಸತ್ವ ಇಲ್ಲದಿರುವುದು (3)
12.ಪರಿವರ್ತನೆಯ ಕಾಲವಿದು (4)
14.ಮಾವನಲ್ಲಿರುವ ಕೋಮಲತೆ ಕಾಣುತ್ತಿದೆಯೇ? (3)
15.ಜನನಿಗೆ ತಿಳಿಸಿದ ಸತ್ಯ (2)
16.ಕುತೂಹಲಕಾರಿಯಾದುದು ಇದು (3)



5171ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಎಗರಿಸು 5.ವಾತಾಯನ
6.ಜಾಣ 7.ಲಿಖಾವಟ್ಟು
10.ವನವಾಸ 13.ತಳಿ
14.ಅಂತರಂಗ 15.ಜಮಖಾನ

ಮೇಲಿಂದ ಕೆಳಕ್ಕೆ:
1.ಕವಾಯಿತು 2.ಜಯಶಾಲಿ
3.ಎಡವಟ್ಟು 4.ಸುಗುಣ
6.ಜಾಣ್ಣುಡಿ 8.ವದನ
9.ಅಗಳಿ 10.ವರ್ತಮಾನ
11.ಸನಾತನ 12.ಅಜಗರ
13.ತನುಜ

ಸುಡೊಕು 5558

	3		4			2		7
7		4		3			5	
			1			8		3
		7		4				
3		2	9		1			
				6				2
1		8	3		4			5
	2					9	7	8
6		9		2			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5557 ಸುಡೊಕು

8	4	5	1	2	6	7	9	3
6	2	9	5	3	7	1	4	8
1	3	7	9	8	4	6	2	5
2	7	8	4	9	1	5	3	6
5	9	3	6	7	8	2	1	4
4	1	6	2	5	3	8	7	9
7	6	4	8	1	9	3	5	2
9	5	1	3	6	2	4	8	7
3	8	2	7	4	5	9	6	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಗುಜರಾತ್ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನೀಡಿದ್ದ ಆದೇಶ ಮರುಪರಿಶೀಲನೆಗೆ ಕೋರಿಕೆ

ಬಿಲ್ಕಿಸ್ ಬಾನು ಸಲ್ಲಿಸಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ಸಾಮೂಹಿಕ ಅತ್ಯಾಚಾರ ಮತ್ತು ಹತ್ಯೆ ಪ್ರಕರಣದ ಅಪರಾಧಿಯೊಬ್ಬ ಶಿಕ್ಷೆಯನ್ನು ಕಡಿಮೆ ಮಾಡಲು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಪರಿಶೀಲಿಸಿ ಎಂದು ಗುಜರಾತ್ ಸರ್ಕಾರಕ್ಕೆ ನೀಡಿದ್ದ ಆದೇಶವನ್ನು ಮರುಪರಿಶೀಲಿಸಿ ಎಂದು ಬಿಲ್ಕಿಸ್ ಬಾನು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶನಿವಾರ ತಳ್ಳಿ ಹಾಕಿದೆ.

2002ರ ಗುಜರಾತ್ ಗಲಭೆ ಸಂದರ್ಭದಲ್ಲಿ ಬಿಲ್ಕಿಸ್ ಅವರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಲಾಗಿತ್ತು ಮತ್ತು ಅವರ ಕುಟುಂಬದ ಏಳು ಮಂದಿಯನ್ನು ಹತ್ಯೆ ಮಾಡಲಾಗಿತ್ತು.

ಮರುಪರಿಶೀಲನೆಗೆ ಕೋರಲಾದ ತೀರ್ಪನ್ನು ನೀಡಿದ್ದ ನ್ಯಾಯಮೂರ್ತಿಗಳು ಅರ್ಜಿಯನ್ನು ಪರಿಶೀಲನೆಗೆ ಒಳಪಡಿಸಬೇಕು ಮತ್ತು ನ್ಯಾಯಮೂರ್ತಿಗಳ ಕೊಠಡಿಯಲ್ಲಿಯೇ ತೀರ್ಮಾನವನ್ನೂ ಕೈಗೊಳ್ಳಬೇಕು ಎಂಬುದು ನಿಯಮ. ಬಿಲ್ಕಿಸ್ ಅವರ ಅರ್ಜಿ ಕೂಡ ಡಿ.13ರಂದು ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ವಿಕ್ರಮ್ ನಾಥ್ ಅವರ ಪೀಠದ ಮುಂದೆ ಬಂದಿತ್ತು.

> ಸುಪ್ರೀಂ ಕೋರ್ಟ್‌ನಲ್ಲಿಯೂ ನ್ಯಾಯ ಸಿಗುವುದಿಲ್ಲ ಎಂದಾದರೆ, ನ್ಯಾಯ ಪಡೆಯಲು ಜನರು ಎಲ್ಲಿಗೆ ಹೋಗಬೇಕು
>
> **ಸ್ವಾತಿ ಮಾಲೀವಾಲ್**
> ಅಧ್ಯಕ್ಷೆ ದೆಹಲಿ ಮಹಿಳಾ ಆಯೋಗ

'ಮೇಲೆ ಹೇಳಿದ ಮರುಪರಿಶೀಲನೆ ಅರ್ಜಿಯನ್ನು 2022ರ ಡಿ. 13ರಂದು ವಜಾ ಮಾಡಲಾಗಿದೆ ಎಂದು ನಿಮಗೆ ತಿಳಿಸುವಂತೆ ನನಗೆ ನಿರ್ದೇಶನ ಬಂದಿದೆ' ಎಂದು ಸುಪ್ರೀಂ ಕೋರ್ಟ್‌ನ ಸಹಾಯಕ ರಿಜಿಸ್ಟ್ರಾರ್ ಅವರು ಬಿಲ್ಕಿಸ್ ಅವರ ವಕೀಲೆ ಶೋಭಾ ಗುಪ್ತಾ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಅಪರಾಧಿಗಳಲ್ಲಿ ಒಬ್ಬ ಸಲ್ಲಿಸಿದ್ದ ಅರ್ಜಿಗೆ ಸುಪ್ರೀಂ ಕೋರ್ಟ್ ಮೇ 13ರಂದು ನೀಡಿದ್ದ ಆದೇಶವನ್ನು ಮರುಪರಿಶೀಲಿಸಬೇಕು ಎಂದು ಬಿಲ್ಕಿಸ್ ಕೇಳಿಕೊಂಡಿದ್ದರು. ಅಪರಾಧಿಗಳನ್ನು ಅವಧಿಗೆ ಮುನ್ನವೇ ಬಿಡುಗಡೆ ಮಾಡಬೇಕು ಎಂದು ಅಪರಾಧಿಗಳಲ್ಲಿ ಒಬ್ಬ ಅರ್ಜಿ ಸಲ್ಲಿಸಿದ್ದ. ಅದನ್ನು ಪರಿಶೀಲನೆಗೆ ಒಳಪಡಿಸಬೇಕು ಎಂದು ಸುಪ್ರೀಂ ಕೋರ್ಟ್ ಆದೇಶ ನೀಡಿತ್ತು. ಹಾಗಾಗಿ, ಎಲ್ಲ 11 ಅರಪರಾಧಿಗಳನ್ನು ಆಗಸ್ಟ್ 15ರಂದು ಗುಜರಾತ್ ಸರ್ಕಾರವು ಬಿಡುಗಡೆ ಮಾಡಿತ್ತು.

ಆದೇಶವನ್ನು ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಇನ್ನೂ ಪ್ರಕಟಿಸಿಲ್ಲ. ಆದೇಶ ಪ್ರಕಟವಾದ ಬಳಿಕ ಅದನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಶೋಭಾ ಅವರು ತಿಳಿಸಿದ್ದಾರೆ.

ಸಾಮೂಹಿಕ ಅತ್ಯಾಚಾರ ನಡೆದಾಗ ಬಿಲ್ಕಿಸ್ ಅವರಿಗೆ 21 ವರ್ಷ ವಯಸ್ಸಾಗಿತ್ತು. ಆಗ ಅವರು 5 ತಿಂಗಳ ಗರ್ಭಿಣಿಯಾಗಿದ್ದರು. ಹತ್ಯೆಯಾದ ಏಳು ಮಂದಿಯಲ್ಲಿ ಬಿಲ್ಕಿಸ್ ಅವರ ಮೂರು ವರ್ಷದ ಮಗಳೂ ಸೇರಿದ್ದಾಳೆ.

ಅಪರಾಧಿ ಸಲ್ಲಿಸಿದ್ದ ಅರ್ಜಿಯಲ್ಲಿ ಬಿಲ್ಕಿಸ್ ಅವರನ್ನು ಪ್ರತಿವಾದಿ ಮಾಡಿಲ್ಲ. ಈ ಅಪರಾಧಿ ಮತ್ತು ಇತರ 10 ಮಂದಿ ಅಪರಾಧಿಗಳನ್ನು ಈಗ ಜಾರಿಯಲ್ಲಿ ಇಲ್ಲದ ನೀತಿಯ ಅಡಿಯಲ್ಲಿ ಬಿಡುಗಡೆ ಮಾಡಲಾಗಿದೆ ಎಂದು ಬಿಲ್ಕಿಸ್ ಅವರ ಪರ ಸಲ್ಲಿಕೆಯಾಗಿರುವ ಅರ್ಜಿಯಲ್ಲಿ ವಾದಿಸಲಾಗಿದೆ.

'1992ರ ಜುಲೈ 9ರಂದು ರೂಪಿಸಿದ್ದ ನೀತಿಯನ್ನು ಸರ್ಕಾರವು 2003ರಲ್ಲಿ ಸುತ್ತೋಲೆ ಹೊರಡಿಸಿ ರದ್ದುಪಡಿಸಿದೆ. ಹಾಗಾಗಿ, 1992ರ ನೀತಿಯು ಈಗಲೂ ಜಾರಿಯಲ್ಲಿ ಇದೆಯೇ ಎಂಬುದನ್ನು ಪರಿಶೀಲನೆಗೆ ಒಳಪಡಿಸಬೇಕಿದೆ' ಎಂದೂ ಅರ್ಜಿಯಲ್ಲಿ ಹೇಳಲಾಗಿದೆ.

ಬಿಡುಗಡೆ ಪ್ರಶ್ನಿಸಿದ ಅರ್ಜಿ ಜೀವಂತ

11 ಅಪರಾಧಿಗಳನ್ನು ಬಿಡುಗಡೆ ಮಾಡಿರುವುದನ್ನು ಪ್ರಶ್ನಿಸಿ ಬಿಲ್ಕಿಸ್ ಅವರು ಅರ್ಜಿಯೊಂದನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದಾರೆ. ಈ ಅಪರಾಧಿಗಳ ಬಿಡುಗಡೆಯು ಸಮಾಜದ ಆತ್ಮಸಾಕ್ಷಿಯನ್ನು ಕಲಕಿದೆ ಎಂದು ಅರ್ಜಿಯಲ್ಲಿ ಅವರು ಹೇಳಿದ್ದಾರೆ.

ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ಬೇಲಾ ಎಂ. ತ್ರಿವೇದಿ ಅವರ ಪೀಠದ ಮುಂದೆ ಈ ಅರ್ಜಿಯು ಇದೇ 13ರಂದು ವಿಚಾರಣೆಗೆ ಬಂದಿತ್ತು. ಆದರೆ, ಬೇಲಾ ತ್ರಿವೇದಿ ಅವರು ವಿಚಾರಣೆಯಿಂದ ಹಿಂದೆ ಸರಿದರು. ಹಾಗಾಗಿ, ಬೇರೊಂದು ಪೀಠ ರಚಿಸುವಂತೆ ಮುಖ್ಯ ನ್ಯಾಯಮೂರ್ತಿಯವರನ್ನು ಕೋರಲಾಗಿದೆ. ವಿಚಾರಣೆಯಿಂದ ಹಿಂದಕ್ಕೆ ಸರಿಯಲು ಕಾರಣವೇನು ಎಂಬುದನ್ನು ಬೇಲಾ ಎಂ. ತ್ರಿವೇದಿ ಅವರು ತಿಳಿಸಿಲ್ಲ.

ಸಿಪಿಎಂ ನಾಯಕಿ ಸುಭಾಷಿಣಿ ಅಲಿ, ಪತ್ರಕರ್ತೆ ರೇವತಿ ಲೋಲ್, ಲಖನೌ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ರೂಪ ರೇಖಾ ವರ್ಮಾ, ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರು ಹಂತಕರ ಬಿಡುಗಡೆ ಪ್ರಶ್ನಿಸಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿಯೂ ಸುಪ್ರೀಂ ಕೋರ್ಟ್‌ನಲ್ಲಿ ಇದೆ.



ಮಹಾರಾಷ್ಟ್ರ ಸರ್ಕಾರದ ವಿರುದ್ಧ ಶನಿವಾರ ಮುಂಬೈನಲ್ಲಿ ಮಹಾ ವಿಕಾಸ್ ಅಘಾಡಿ ನೇತೃತ್ವದಲ್ಲಿ ರ‍್ಯಾಲಿ ನಡೆಯಿತು –ಪಿಟಿಐ ಚಿತ್ರ

ರಾಜ್ಯಪಾಲ ಕೋಶಿಯಾರಿ ಪದಚ್ಯುತಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಮುಂಬೈ: ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಪದಚ್ಯುತಿ ಹಾಗೂ ಕರ್ನಾಟಕ ಜತೆಗಿನ ಗಡಿ ವಿವಾದ ಸೇರಿದಂತೆ ಅನೇಕ ವಿಷಯಗಳಲ್ಲಿ ಏಕನಾಥ್ ಶಿಂದೆ-ದೇವೇಂದ್ರ ಫಡಣವೀಸ್ ಸರ್ಕಾರದ ನಿಲುವು ಖಂಡಿಸಿ ಪ್ರತಿಪಕ್ಷ ಮಹಾ ವಿಕಾಸ್ ಅಘಾಡಿ ಶನಿವಾರ ಶಕ್ತಿ ಪ್ರದರ್ಶನ ನಡೆಸಿತು.

ಭಾಯ್ಖಳಾ ಜೆಜೆ ಆಸ್ಪತ್ರೆಯಿಂದ ಆರಂಭಗೊಂಡ ಮೆರವಣಿಗೆ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಲ್‌ನಲ್ಲಿ ಅಂತ್ಯಗೊಂಡಿತು. ಸುಮಾರು ಮೂರು ಕಿ.ಮೀ.ವರೆಗೂ ಮೆರವಣಿಗೆ ಸಾಗಿತು.

ಕೋಶಿಯಾರಿ ಮತ್ತು ಮೂವರು ಸಚಿವರಾದ ಚಂದ್ರಕಾಂತ್ ಪಾಟೀಲ್, ಅಬ್ದುಲ್ ಸತ್ತಾರ್ ಮತ್ತು ಮಂಗಳಪ್ರಭಾತ್ ಲೋಧಾ ಅವರು ಇತ್ತೀಚೆಗೆ ಪ್ರಮುಖ ನಾಯಕರನ್ನು ಸಾರ್ವಜನಿಕವಾಗಿ ನಿಂದಿಸಿದ್ದಾರೆ ಎಂದು ನಾಯಕರು ಆರೋಪಿಸಿದರು.

'ಶಿವಾಜಿ ಅವರು ಹಳೆ ಕಾಲದ ಐಕಾನ್' ಎಂದು ಹೇಳಿಕೆ ನೀಡಿರುವ ರಾಜ್ಯಪಾಲ ಕೋಶಿಯಾರಿ ಅವರನ್ನು ಕೇಂದ್ರವು ವಾಪಸ್ ಕರೆಸಿಕೊಳ್ಳಬೇಕು' ಎಂದು ಪವಾರ್ ಆಗ್ರಹಿಸಿದರು.

ಪತ್ರಿಕೋದ್ಯಮ ಕುಂಠಿತವಾದರೆ, ಪ್ರಜಾಪ್ರಭುತ್ವ ಕುಸಿತ: ನ್ಯಾ.ಶ್ರೀಕೃಷ್ಣ



ಮುಂಬೈ (ಪಿಟಿಐ): 'ದೇಶದಲ್ಲಿ ಪ್ರಜಾಪ್ರಭುತ್ವ ಸುಗಮವಾಗಿ ನಡೆಯಲು ಪತ್ರಕರ್ತರ ಸ್ವಾತಂತ್ರ್ಯವನ್ನು ಕಾಪಾಡಬೇಕಾದ ಅಗತ್ಯವಿದೆ' ಎಂದು ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ಪ್ರತಿಪಾದಿಸಿದರು.

ಮುಂಬೈನ ಪ್ರೆಸ್‌ಕ್ಲಬ್ ಸ್ಥಾಪಿಸಿರುವ 'ರೆಡ್‌ಇಂಕ್' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶುಕ್ರವಾರ ರಾತ್ರಿ ಅವರು ಮಾತನಾಡಿದರು. ಹಿರಿಯ ಪತ್ರಕರ್ತ ಟಿ.ಜೆ.ಎಸ್. ಜಾರ್ಜ್ ಅವರಿಗೆ ಜೀವಮಾನ ಶ್ರೇಷ್ಠ ಸಾಧನೆಗಾಗಿ 'ರೆಡ್‌ಇಂಕ್' ಪ್ರಶಸ್ತಿ ಪ್ರದಾನ ಮಾಡಲಾಯಿತು.

'ಒಂದು ವೃತ್ತಿಯಾಗಿ ಪತ್ರಿಕೋದ್ಯಮ ಕುಂಠಿತವಾದರೆ, ಪ್ರಜಾಪ್ರಭುತ್ವವೇ ಕುಸಿಯುತ್ತದೆ' ಎಂದ ಅವರು, 'ಸತ್ಯ ಮಾತನಾಡಿ' ಎಂದರು.

'ನ್ಯಾಯಾಧೀಶರ ಮತ್ತು ಪತ್ರಕರ್ತರ ವೃತ್ತಿಗಳು ಸ್ವತಂತ್ರವಾಗಿ ಇರಬೇಕು. ಈ ವೃತ್ತಿಗಳು ಎಡವಿದರೆ ಪ್ರಜಾಪ್ರಭುತ್ವ ಕುಸಿಯುತ್ತದೆ' ಎಂದು ಹೇಳಿದರು.

'ಸ್ವಾತಂತ್ರ್ಯ ಕಳೆದುಕೊಂಡ ಪತ್ರಕರ್ತ ಸ್ವಾತಂತ್ರ್ಯ ಕಳೆದುಕೊಂಡ ನ್ಯಾಯಾಧೀಶನಷ್ಟೇ ಕೆಟ್ಟವರಾಗಿರುತ್ತಾರೆ' ಎಂದರು.

'ಪ್ರಾಮಾಣಿಕತೆಯು ಉತ್ತಮ ನೀತಿಯಾಗಿರುವ ವೃತ್ತಿಯಲ್ಲಿ ನೀವೆಲ್ಲ ಇದ್ದೀರಿ ಎಂಬುದನ್ನು ನೆನಪಿಡಿ' ಎಂದು ಅವರು ಪತ್ರಕರ್ತರಿಗೆ ತಿಳಿಸಿದರು.

'ಪ್ರಜಾಪ್ರಭುತ್ವದಲ್ಲಿ ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗ ಸಮರ್ಪಕವಾಗಿ ಕಾರ್ಯ ನಿರ್ವಹಿಸದೇ ಇದ್ದರೆ, ಈ ಮೂರೂ ಅಂಗಗಳನ್ನು ತರಾಟೆಗೆ ತೆಗೆದುಕೊಳ್ಳುವ ನಾಲ್ಕನೇ ಅಂಗವೇ ಪತ್ರಿಕಾ ರಂಗ' ಎಂದು ಅವರು ಹೇಳಿದರು.

ಅಂಬೇಡ್ಕರ್, ಹಿಂದೂ ದೇವರಿಗೆ ಅವಮಾನ: ಬಿಜೆಪಿ ಪ್ರತಿಭಟನೆ

ಮುಂಬೈ (ಪಿಟಿಐ): ಹಿಂದೂ ದೇವರಿಗೆ ಅವಮಾನ ಹಾಗೂ ಶಿವಸೇನಾ ನಾಯಕರು ಬಿ.ಆರ್.ಅಂಬೇಡ್ಕರ್ ಅವರ ಜನ್ಮಸ್ಥಳದ ಬಗ್ಗೆ ವಿವಾದ ಸೃಷ್ಟಿಸುವ ಪ್ರಯತ್ನದ ವಿರುದ್ಧ ಬಿಜೆಪಿ ಶನಿವಾರ ಮುಂಬೈನ ಆರು ಲೋಕಸಭಾ ಕ್ಷೇತ್ರಗಳಲ್ಲಿ ಪ್ರತಿಭಟನೆ ನಡೆಸಿತು.

ಶಿವಸೇನಾ (ಉದ್ಧವ್ ಬಣ) ಉಪ ನಾಯಕಿ ಸುಷ್ಮಾ ಅಂಧಾರೆ ಅವರು ಹಿಂದೂ ದೇವರುಗಳು ಮತ್ತು ಸಂತರನ್ನು ಅವಮಾನಿಸಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ಅಂಬೇಡ್ಕರ್ ಅವರು ಮಹಾರಾಷ್ಟ್ರದಲ್ಲಿ ಜನಿಸಿದ್ದಾರೆ ಎಂದು ಹೇಳಿಕೆ ನೀಡಿರುವ ಶಿವಸೇನೆ ಸಂಸದ ಸಂಜಯ್ ರಾವುತ್ ವಿರುದ್ಧವೂ ವಾಗ್ದಾಳಿ ನಡೆಸಿತು. ಅಂಧಾರೆ ಮತ್ತು ರಾವುತ್ ಅವರ ಹೇಳಿಕೆಗಳಿಗೆ ಮಹಾ ವಿಕಾಸ್ ಅಘಾಡಿ ನಾಯಕರು ಕ್ಷಮೆಯಾಚಿಸಬೇಕೆಂದು ಒತ್ತಾಯಿಸಿದರು.

ಬಿಲಾವಲ್ ಭುಟ್ಟೊ ವಿರುದ್ಧ ಬೃಹತ್ ಪ್ರತಿಭಟನೆ

ಪ್ರಧಾನಿ ಮೋದಿ ವಿರುದ್ಧ ಅವಹೇಳನಕಾರಿ ಹೇಳಿಕೆ: ದೇಶದ ವಿವಿಧೆಡೆ ಬಿಲಾವಲ್ ಪ್ರತಿಕೃತಿ ದಹನ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಪಾಕಿಸ್ತಾನದ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ವಿರುದ್ಧ ದೇಶದ ಬಿಜೆಪಿ ನೇತೃತ್ವದಲ್ಲಿ ಶನಿವಾರ ಪ್ರತಿಭಟನೆಗಳು ನಡೆದವು. ಭುಟ್ಟೊ ಅವರ ಪ್ರತಿಕೃತಿ ದಹಿಸಿ ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಭುಟ್ಟೊ ಹೇಳಿಕೆಯನ್ನು ಖಂಡಿಸಿ ಜಮ್ಮು ಮತ್ತು ಕಾಶ್ಮೀರದ ಬಿಜೆಪಿ ಘಟಕವು ಶ್ರೀನಗರದಲ್ಲಿ ಪ್ರತಿಭಟನೆ ನಡೆಸಿತು. 'ಭುಟ್ಟೊ ಕೂಡಲೇ ಕ್ಷಮೆ ಯಾಚಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಮಹಾರಾಷ್ಟ್ರದ ಪುಣೆಯಲ್ಲೂ ಪ್ರತಿಭಟನೆ ನಡೆಸಿದ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು, ಪಾಕಿಸ್ತಾನದ ಧ್ವಜವನ್ನು ದಹಿಸಿ, ಪಾಕ್ ವಿರುದ್ಧ ಘೋಷಣೆಗಳನ್ನು ಕೂಗಿದರು.

ತಿಲಕ್ ಚೌಕದಲ್ಲಿ ನಡೆದ ಪ್ರತಿಭಟನೆಯಲ್ಲಿ ಬಿಜೆಪಿಯ ಮಹಾರಾಷ್ಟ್ರ ಘಟಕದ ಅಧ್ಯಕ್ಷ ಚಂದ್ರಶೇಖರ್ ಬಾವನಕುಳೆ, ಪಕ್ಷದ ಹಲವು ಶಾಸಕರು, ಬಿಜೆಪಿಯ ಮಹಿಳಾ ಘಟಕ ಮತ್ತು ಇತರ ನಾಯಕರು ಪಾಲ್ಗೊಂಡಿದ್ದರು.

'ನಮ್ಮ ಪ್ರಧಾನಿ ಮೋದಿ ಅವರು ಹಿಂದೂ ಧರ್ಮ ರಕ್ಷಿಸುತ್ತಿದ್ದಾರೆ. ಇದನ್ನು ಅರಗಿಸಿಕೊಳ್ಳಲು ಆಗದ ಪಾಕಿಸ್ತಾನ ಇಲ್ಲಸಲ್ಲದ ಹೇಳಿಕೆ ನೀಡುತ್ತಿದೆ. ಪಾಕಿಸ್ತಾನದ ವಿದೇಶಾಂಗ ಸಚಿವರ ಹೇಳಿಕೆಯನ್ನು ಸಹಿಸಲಾಗದು' ಎಂದು ಬಾವನಕುಳೆ ಹೇಳಿದರು.



ಬಿಲಾವಲ್ ಭುಟ್ಟೊ ಹೇಳಿಕೆ ಖಂಡಿಸಿ ಉತ್ತರ ಪ್ರದೇಶದ ಲಖನೌನಲ್ಲಿ ಶನಿವಾರ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಉತ್ತರ ಪ್ರದೇಶದ ಬಹುತೇಕ ಜಿಲ್ಲೆಗಳಲ್ಲಿ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಪಾಕ್ ವಿದೇಶಾಂಗ ಸಚಿವರ ವಿರುದ್ಧ ಪ್ರತಿಭಟನೆ ನಡೆಸಿದರು.

ಸೂಫಿ ಸಮಿತಿ ಖಂಡನೆ: ಭುಟ್ಟೊ ಅವರ ಹೇಳಿಕೆಯನ್ನು ಅಖಿಲ ಭಾರತ ಸೂಫಿ ಸಜ್ಜದನಾಶಿನ್ ಸಮಿತಿಯ ಮುಖ್ಯಸ್ಥ ನಾಸಿರುದ್ದಿನ್ ಚಿಸ್ತಿ ಅವರು ತೀವ್ರವಾಗಿ ಖಂಡಿಸಿದ್ದಾರೆ.

'ಮೋದಿ ಅವರ ಬಗ್ಗೆ ಭುಟ್ಟೊ ಬಳಸಿರುವ ಭಾಷೆಯಿಂದಾಗಿ ಅವರ ಹುದ್ದೆಯಷ್ಟೇ ಅಲ್ಲದೆ ಇಡೀ ಪಾಕಿಸ್ತಾನದ ಸ್ಥಾನಮಾನವೇ ಕೆಳಮಟ್ಟಕ್ಕೆ ಕುಸಿದಂತಾಗಿದೆ' ಎಂದಿದ್ದಾರೆ.

'ನಮ್ಮ ತಾಯಿನಾಡಿನ ಪ್ರಧಾನಿಯ ಬಗ್ಗೆ ಪಾಕ್ ವಿದೇಶಾಂಗ ಸಚಿವರು ತುಚ್ಛವಾಗಿ ಮಾತನಾಡಿರುವುದನ್ನು ಬಲವಾಗಿ ಖಂಡಿಸುತ್ತೇನೆ' ಎಂದಿದ್ದಾರೆ.

'ಪಾಕಿಸ್ತಾನಕ್ಕಿಂತ ಭಾರತದಲ್ಲಿ ಮುಸ್ಲಿಮರು ಹೆಚ್ಚು ಸುರಕ್ಷಿತ ಮತ್ತು ಉತ್ತಮ ಸ್ಥಿತಿಯಲ್ಲಿದ್ದಾರೆ. ಭಾರತದ ಸಂವಿಧಾನವೇ ನಮಗೆಲ್ಲ ಧಾರ್ಮಿಕ ಸ್ವಾತಂತ್ರ್ಯವನ್ನು ಖಾತರಿಪಡಿಸಿದೆ. ಹೀಗಿರುವಾಗ ಭುಟ್ಟೊ ಅವರು ಭಾರತವನ್ನು ಪಾಕಿಸ್ತಾನದ ಅಸ್ಥಿರ ಸರ್ಕಾರದ ಜತೆ ಹೋಲಿಸಿ ನೋಡಬಾರದು' ಎಂದು ಹೇಳಿದ್ದಾರೆ.

'ಭುಟ್ಟೊ ತಲೆಗೆ ₹ 2ಕೋಟಿ ಬಹುಮಾನ'

ಬಾಗ್‌ಪತ್, ಉತ್ತರ ಪ್ರದೇಶ: ಪಾಕಿಸ್ತಾನದ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ಜರ್ದಾರಿ ಅವರ ಶಿರಚ್ಛೇದ ಮಾಡಿದವರಿಗೆ ₹ 2 ಕೋಟಿ ಬಹುಮಾನ ನೀಡುವುದಾಗಿ ಉತ್ತರ ಪ್ರದೇಶದ ಸ್ಥಳೀಯ ಬಿಜೆಪಿ ನಾಯಕರೊಬ್ಬರು ಶನಿವಾರ ಘೋಷಿಸಿದ್ದಾರೆ.

ಬಿಲಾವಲ್ ಹೇಳಿಕೆ ವಿರೋಧಿಸಿ ಜಿಲ್ಲಾಧಿಕಾರಿ ಕಚೇರಿ ಮುಂದೆ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಬಾಗ್‌ಪತ್ ಜಿಲ್ಲಾ ಪಂಚಾಯ್ತಿಯ ಬಿಜೆಪಿ ಸದಸ್ಯ ಮನುಪಾಲ್ ಬನ್ಸಾಲ್ ಈ ಘೋಷಣೆ ಮಾಡಿದ್ದಾರೆ.

'ಸಚಿವ ಬಿಲಾವಲ್ ಭುಟ್ಟೊ ಶಿರಚ್ಛೇದ ಮಾಡುವವರು ಯಾರೇ ಆಗಲಿ ಅವರಿಗೆ ನಾನು ₹ 2 ಕೋಟಿ ಬಹುಮಾನ ನೀಡುತ್ತೇನೆ ಎಂದು ಘೋಷಿಸುತ್ತೇನೆ' ಎಂದು ಬನ್ಸಾಲ್ ಹೇಳಿದ್ದಾರೆ. ಈ ಘೋಷಣೆಗೆ ಮೆಚ್ಚುಗೆ ಸೂಚಿಸಿರುವ ನೆರೆದಿದ್ದ ಗುಂಪು 'ಮನುಪಾಲ್ ಬನ್ಸಾಲ್ ಜಿಂದಾಬಾದ್' ಎಂದು ಘೋಷಣೆ ಕೂಗಿದೆ.

ಬಳಿಕ ತಮ್ಮ ಘೋಷಣೆ ಕುರಿತು ಸುದ್ದಿಸಂಸ್ಥೆಯ ಜತೆಗೆ ಮಾತನಾಡಿದ ಬನ್ಸಾಲ್, 'ನಾನು ಆ ರೀತಿ ಘೋಷಿಸಿರುವುದು ನಿಜ. ನಾವು ಅತ್ಯಂತ ಗೌರವಿಸುವ ನಮ್ಮ ಪ್ರಧಾನಿ ಅವರ ಬಗ್ಗೆ ಯಾರೇ ಆಗಲಿ ಈ ರೀತಿ ಮಾತನಾಡಿದರೆ ಅಂಥ ವ್ಯಕ್ತಿಯನ್ನು ನಾವು ಸಹಿಸಿಕೊಳ್ಳುವುದಿಲ್ಲ. ಪ್ರಧಾನಿ ಅವರೊಂದಿಗೆ ನಮಗೆ ನಿಕಟ ಬಾಂಧವ್ಯವಿದೆ. ಅವರಿಗಾಗಿ ನಾವು ಏನು ಮಾಡಲೂ ಸಿದ್ಧ. ನಮಗೆ ಯಾವುದೇ ತೊಂದರೆಯಾಗದು' ಎಂದಿದ್ದಾರೆ.

ದೊಡ್ಡಮ್ಮನ ಕೊಂದು, ಮೃತದೇಹ ಕತ್ತರಿಸಿ ಎಸೆದ!

ಜೈಪುರ (ಪಿಟಿಐ): ಶ್ರದ್ಧಾ ವಾಲಕರ್ ಹತ್ಯೆ ಪ್ರಕರಣ ಹೋಲುವ ಮತ್ತೊಂದು ಪ್ರಕರಣ ರಾಜಸ್ಥಾನದ ಜೈಪುರದಲ್ಲಿ ನಡೆದಿದೆ.

ವ್ಯಕ್ತಿಯೊಬ್ಬ ತನ್ನ ದೊಡ್ಡಮ್ಮನನ್ನು ಕೊಲೆ ಮಾಡಿ, ದೇಹವನ್ನು ಹಲವು ತುಂಡುಗಳಾಗಿ ಕತ್ತರಿಸಿ ಇಲ್ಲಿಗೆ ಸಮೀಪದ ದೆಹಲಿ ಹೆದ್ದಾರಿಯ ವಿವಿಧೆಡೆ ಎಸೆದ ಘಟನೆ ಪತ್ತೆಯಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಸರೋಜ್ ಶರ್ಮಾ (65) ಮೃತ ಮಹಿಳೆ. ಅಂಜು ಶರ್ಮಾ ಅಲಿಯಾಸ್ ಅಚಿಂತ್ಯ ಗೋವಿಂದ ದಾಸ್ (33) ಬಂಧಿತ ಆರೋಪಿ.

ಅಂಜು ಶರ್ಮಾ, ತಂದೆ ಹಾಗೂ ತಂದೆಯ ಅಣ್ಣನ ಹೆಂಡತಿ ಸರೋಜ್ ಶರ್ಮಾ ಅವರೊಂದಿಗೆ ವಾಸಿಸುತ್ತಿದ್ದ. ಡಿ. 11ರಂದು ತಂದೆ ಇಂದೋರ್‌ಗೆ ತೆರಳಿದ್ದರು. ಇದೇ ಸಂದರ್ಭದಲ್ಲಿ ಅಂಜು ಶರ್ಮಾ ದೆಹಲಿಗೆ ಹೋಗಬೇಕೆಂದು ಬಯಸಿದ್ದ. ಇದಕ್ಕೆ ದೊಡ್ಡಮ್ಮ ನಿರಾಕರಿಸಿದ್ದರು. ಈ ವಿಷಯವಾಗಿ ಆರಂಭವಾದ ವಾಗ್ವಾದ ತಾರಕಕ್ಕೇರಿ ಅಂಜು ಶರ್ಮಾ ಸುತ್ತಿಗೆಯಿಂದ ದೊಡ್ಡಮ್ಮನ ತಲೆಗೆ ಹೊಡೆದಿದ್ದ. ಮೃತದೇಹವನ್ನು ಸ್ನಾನದ ಗೃಹಕ್ಕೆ ಎಳೆದೊಯ್ದು ಮಾರ್ಬಲ್ ಕತ್ತರಿಸುವ ಯಂತ್ರ ಬಳಸಿ, ಎಂಟರಿಂದ ಹತ್ತು ತುಂಡುಗಳಾಗಿ ಕತ್ತರಿಸಿದ್ದ. ಬಳಿಕ ಸೂಟ್‌ಕೇಸ್‌ನಲ್ಲಿ ಅವುಗಳನ್ನು ತುಂಬಿ ಹೆದ್ದಾರಿಯ ವಿವಿಧೆಡೆ ಎಸೆದಿದ್ದ. ನಂತರ ಪೊಲೀಸ್ ಠಾಣೆಯಲ್ಲಿ ನಾಪತ್ತೆ ದೂರು ದಾಖಲಿಸಿದ್ದ.

ಪೊಲೀಸರು ತನಿಖೆ ಕೈಗೊಂಡಾಗ, ಸೂಟ್‌ಕೇಸ್ ಹಿಡಿದು ಅಂಜು ಶರ್ಮಾ ಮನೆಯಿಂದ ತೆರಳುವ ದೃಶ್ಯ ಸಿ.ಸಿ. ಟಿ.ವಿ ಕ್ಯಾಮರಾದಲ್ಲಿ ಪತ್ತೆಯಾಗಿತ್ತು. ಇದರ ಆಧಾರದಲ್ಲಿ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಹತ್ಯೆ ಬಗ್ಗೆ ಬಾಯ್ಬಿಟ್ಟಿದ್ದಾನೆ. ಪ್ರಕರಣ ಸಂಬಂಧ ಅಂಜು ಶರ್ಮಾನನ್ನು ಗುರುವಾರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಾಲಾ ಪ್ರವಾಸದ ಬಸ್ ಉರುಳಿ ಇಬ್ಬರು ವಿದ್ಯಾರ್ಥಿಗಳ ಸಾವು

ಪ್ರಯಾಗ್‌ರಾಜ್ (ಪಿಟಿಐ): ಪ್ರವಾಸಕ್ಕೆಂದು ತೆರಳುತ್ತಿದ್ದ ಜಿಲ್ಲೆಯ ಜೌನ್‌ಪುರ್ ಶಾಲಾ ವಿದ್ಯಾರ್ಥಿಗಳಿದ್ದ ಬಸ್ಸೊಂದು ಹಂದಿಆ ಪೊಲೀಸ್ ಠಾಣೆ ವ್ಯಾಪ್ತಿಯ ಭೆಸ್ಕಿ ಎಂಬಲ್ಲಿ ಮುಗುಚಿ ಬಿದ್ದ ಅಪಘಾತದಲ್ಲಿ ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟಿದ್ದು, 12ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ.

ಬಸ್‌ನಲ್ಲಿ 75 ವಿದ್ಯಾರ್ಥಿಗಳು ಪ್ರಯಾಣಿಸುತ್ತಿದ್ದರು. ಸೈಕಲ್‌ಗೆ ಡಿಕ್ಕಿ ತಪ್ಪಿಸಲು ಚಾಲಕ ಯತ್ನಿಸಿದಾಗ ಅವಘಡ ಸಂಭವಿಸಿದೆ.

ಸಂಕ್ಷಿಪ್ತ ಸುದ್ದಿ

ಮುಂಬೈ: ಕಟ್ಟಡದಲ್ಲಿ ಬೆಂಕಿ, ವ್ಯಕ್ತಿ ಸಾವು

ಮುಂಬೈ (ಪಿಟಿಐ): ಇಲ್ಲಿನ ಘಾಟ್ಕೋಪರ್ ಪ್ರದೇಶದಲ್ಲಿ ಆಸ್ಪತ್ರೆ ಸಮೀಪದ ಕಟ್ಟಡವೊಂದರಲ್ಲಿ ಶನಿವಾರ ಮಧ್ಯಾಹ್ನ ಅಗ್ನಿ ಅವಘಡ ಸಂಭವಿಸಿದ್ದು, 46 ವರ್ಷದ ವ್ಯಕ್ತಿ ಮೃತಪಟ್ಟಿದ್ದು, ಇಬ್ಬರು ಮಹಿಳೆಯರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುನ್ನೆಚ್ಚರಿಕಾ ಕ್ರಮವಾಗಿ ಆಸ್ಪತ್ರೆಯಲ್ಲಿದ್ದ 22 ಮಂದಿ ರೋಗಿಗಳನ್ನು ಇನ್ನೊಂದು ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಆರು ಅಂತಸ್ತಿನ ವಿಶ್ವಾಸ್ ಬಿಲ್ಡಿಂಗ್‌ನ ಕೆಳಮಹಡಿಯ ಹೋಟೆಲ್‌ನ ವಿದ್ಯುತ್ ಮೀಟರ್ ಇರುವ ಕೊಠಡಿಯಲ್ಲಿ ಮಧ್ಯಾಹ್ನ ಎರಡು ಗಂಟೆ ವೇಳೆಗೆ ಬೆಂಕಿ ಕಾಣಿಸಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಹಾರ ಕಳ್ಳಬಟ್ಟಿ: ಮತ್ತೆ ಎಂಟು ಮಂದಿ ಸಾವು

ಪಟ್ನಾ (ಪಿಟಿಐ): ಬಿಹಾರದ ಸಾರಣ್ ಜಿಲ್ಲೆಯಲ್ಲಿ ಕಳ್ಳಬಟ್ಟಿ ಸಾರಾಯಿ ದುರಂತದಲ್ಲಿ 30 ಮಂದಿ ಮೃತಪಟ್ಟಿರುವ ಬೆನ್ನಲ್ಲೇ, ಇತರ ಎರಡು ಜಿಲ್ಲೆಗಳಲ್ಲೂ ಕಳ್ಳಬಟ್ಟಿ ಸಾರಾಯಿ ಸೇವಿಸಿ ಎಂಟು ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಸಿವಾನ್ ಜಿಲ್ಲೆಯಲ್ಲಿ ಆರು ಮಂದಿ ಹಾಗೂ ಬೇಗುಸರೈ ಜಿಲ್ಲೆಯಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ ಎಂದೂ ವಿವರಿಸಿದ್ದಾರೆ.

ಸಾರಣ್ ಜಿಲ್ಲೆಯಲ್ಲಿ ಕಳ್ಳಬಟ್ಟಿ ಸಾರಾಯಿ ದುರಂತದಲ್ಲಿ 60 ಮಂದಿ ಮೃತಪಟ್ಟಿದ್ದಾರೆ ಎಂದು ದೃಢೀಕರಿಸದ ಮೂಲಗಳು ತಿಳಿಸಿವೆ. ಆದರೆ 30 ಜನರಷ್ಟೇ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

'ಕಳ್ಳಬಟ್ಟಿ ಸಾರಾಯಿ ಮಾರಾಟ ಮಾಡುವುದನ್ನು ಪತ್ತೆ ಹಚ್ಚಲು ಶೋಧ ಕಾರ್ಯ ಮುಂದುವರಿಸಿದ್ದೇವೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಬೇಗುಸರೈನಲ್ಲಿ ಇಬ್ಬರು ಯುವಕರು ವಿಷಕಾರಿ ರಾಸಾಯನಿಕ ಸೇವಿಸಿ ಸಾವನ್ನಪ್ಪಿದ್ದಾರೆ. ಅವರ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದು, ತನಿಖೆ ನಡೆಯುತ್ತಿದೆ' ಎಂದು ಅಲ್ಲಿನ ಅಧಿಕಾರಿಗಳು ತಿಳಿಸಿದ್ದಾರೆ.

ಅಂಕಿತಾ ಕೊಲೆ: 500 ಪುಟಗಳ ಆರೋಪಪಟ್ಟಿ

ಡೆಹ್ರಾಡೂನ್ (ಪಿಟಿಐ): ಪೌರಿ ಜಿಲ್ಲೆಯ ಋಷಿಕೇಶ ಬಳಿಯ ರೆಸಾರ್ಟ್‌ವೊಂದರಲ್ಲಿ ಸ್ವಾಗತಕಾರಿಣಿಯಾಗಿದ್ದ ಅಂಕಿತಾ ಭಂಡಾರಿ ಹತ್ಯೆಗೆ ಸಂಬಂಧಿಸಿದಂತೆ ಉತ್ತರಾಖಂಡ ಪೊಲೀಸರು ಆರೋಪಿಗಳ ವಿರುದ್ಧ 500 ಪುಟಗಳ ಆರೋಪಪಟ್ಟಿ ಸಿದ್ಧಪಡಿಸಿದ್ದು, ಶೀಘ್ರದಲ್ಲೇ ಕೋರ್ಟ್‌ಗೆ ಸಲ್ಲಿಸಲಿದ್ದಾರೆ.

'ಚೀನಾ ಪೇ ಚರ್ಚಾ' ಯಾವಾಗ?

ಪ್ರಧಾನಿ ಮೋದಿಗೆ ಕಾಂಗ್ರೆಸ್ ಅಧ್ಯಕ್ಷ ಖರ್ಗೆ ಪ್ರಶ್ನೆ

ನವದೆಹಲಿ (ಪಿಟಿಐ): ಅರುಣಾಚಲ ಪ್ರದೇಶದ ತವಾಂಗ್‌ನಲ್ಲಿ ಭಾರತ–ಚೀನಾ ನಡುವಿನ ಸಂಘರ್ಷ ಕುರಿತು ಸಂಸತ್ತಿನಲ್ಲಿ ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಅವಕಾಶ ನೀಡುತ್ತಿಲ್ಲ ಎಂದು ಶನಿವಾರ ಆರೋಪಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಈ ವಿಷಯದಲ್ಲಿ ದೇಶವು 'ಯಾವಾಗ ಚೀನಾ ಪೇ ಚರ್ಚೆ ನಡೆಸಲಿದೆ' ಎಂದು ಮೋದಿ ಅವರನ್ನು ಪ್ರಶ್ನಿಸಿದ್ದಾರೆ.

'ಡೋಕ್ಲಾಮ್‌ನಲ್ಲಿ ಸಿಲಿಗುರಿ ಕಾರಿಡಾರ್‌ನ ಸಮೀಪದ ಜಂಫೇರಿ ಪರ್ವತದವರೆಗೆ ಚೀನಾದ ಸೇನಾ ಪಡೆಗಳು ತಮ್ಮ ನೆಲೆ ನಿರ್ಮಿಸುತ್ತಿರುವುದು ದೇಶದ ಭದ್ರತೆಯ ದೃಷ್ಟಿಯಿಂದ ಕಳವಳಕಾರಿಯಾದ ಸಂಗತಿ. ಈ ವಿಚಾರದಲ್ಲಿ ಪ್ರಧಾನಿ ಅವರು ಯಾವಾಗ ಚರ್ಚೆ ನಡೆಸುತ್ತಾರೆ' ಎಂದು ಖರ್ಗೆ ಟ್ವೀಟ್‌ನಲ್ಲಿ ಕೇಳಿದ್ದಾರೆ.

'ಕಾಂಗ್ರೆಸ್ ಕೇಳಿರುವ ಏಳು ಪ್ರಶ್ನೆಗಳಿಗೆ ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಉತ್ತರಿಸುವುದು ಪ್ರಧಾನಿ ಅವರ ರಾಜಕೀಯ ಕರ್ತವ್ಯ ಮತ್ತು ನೈತಿಕ ಜವಾಬ್ದಾರಿಯಾಗಿದೆ' ಎಂದು ಕಾಂಗ್ರೆಸ್‌ನ ಸಂವಹನ ವಿಭಾಗದ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಅವರು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಗಡಿ ವಿಚಾರವಾಗಿ ಭಾರತವು ಚೀನಾದಿಂದ ಎದುರಿಸುತ್ತಿರುವ ಸವಾಲುಗಳ ಕುರಿತು ಸಂಸತ್ತಿನಲ್ಲಿ ಚರ್ಚಿಸಬಾರದು ಎಂದು ಪ್ರಧಾನಿ ಅವರು ಏಕೆ ನಿರ್ಬಂಧ ವಿಧಿಸಿದ್ದಾರೆ ಎಂಬುದನ್ನು ರಾಷ್ಟ್ರವು ತಿಳಿಯಲು ಬಯಸುತ್ತಿದೆ' ಎಂದೂ ಅವರು ಹೇಳಿದ್ದಾರೆ.

'ನೀವು ಚೀನಾದ ಉನ್ನತ ನಾಯಕರನ್ನು ಸುಮಾರು 18 ಬಾರಿ ಭೇಟಿ ಮಾಡಿದ್ದೀರಿ. ಅಷ್ಟೇ ಅಲ್ಲ, ಇತ್ತೀಚೆಗಷ್ಟೇ ಬಾಲಿಯಲ್ಲಿ ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರನ್ನು ಭೇಟಿ ಮಾಡಿ, ಹಸ್ತಲಾಘವ ಕೂಡಾ ಮಾಡಿದ್ದೀರಿ. ಚೀನಾವು ತವಾಂಗ್ ಅನ್ನು ಅತಿಕ್ರಮಿಸಲು ಯತ್ನಿಸುವ ಮೂಲಕ ಗಡಿಯಲ್ಲಿ ಬೆದರಿಕೆ ಒಡ್ಡುವ ತಂತ್ರ ರೂಪಿಸುತ್ತಿದೆ. ಈ ವಿಚಾರದಲ್ಲಿ ನೀವು ಏಕೆ ರಾಷ್ಟ್ರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ' ಎಂದು ಅವರು ಪ್ರಶ್ನಿಸಿದ್ದಾರೆ.

'2020ರ ಜೂನ್ 20ರಂದು ಪೂರ್ವ ಲಡಾಖ್‌ನ ಭಾರತದ ಭೂ ಪ್ರದೇಶದ ಮೇಲೆ ಚೀನಾವು ಯಾವ ಆಕ್ರಮಣವನ್ನೂ ನಡೆಸಿಲ್ಲ ಎಂದು ಪ್ರಧಾನಿ ಅವರು ಏಕೆ ಹೇಳಿದರು? ಪಿ.ಎಂ ಕೇರ್ಸ್ ಫಂಡ್‌ಗೆ ಕೊಡುಗೆ ನೀಡಲು ಚೀನಾದ ಕಂಪನಿಗಳಿಗೆ ಏಕೆ ಅವಕಾಶ ನೀಡಿದ್ದೀರಿ?' ಎಂದೂ ಅವರು ಪ್ರಶ್ನಿಸಿದ್ದಾರೆ.

'ಚೀನಾವು ಯುದ್ಧಕ್ಕೆ ತಯಾರಿ ನಡೆಸುತ್ತಿರುವಾಗ ಕೇಂದ್ರವು ನಿದ್ರಿಸುತ್ತಿದೆ' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಹೇಳಿಕೆ ನೀಡಿದ್ದರು. ಈ ಹೇಳಿಕೆಗೆ ಬಿಜೆಪಿಯು ತೀವ್ರ ಖಂಡನೆ ವ್ಯಕ್ತಪಡಿಸಿ, ಪ್ರತಿಕ್ರಿಯೆಗಳನ್ನು ನೀಡಿತ್ತು.

ಉದ್ಯಮ ಒಕ್ಕೂಟ ಫಿಕ್ಕಿಯ ಸಭೆಯಲ್ಲಿ ಸಚಿವ ರಾಜನಾಥ್ ಸಿಂಗ್ ಹೇಳಿಕೆ

'ಯೋಧರ ಶೌರ್ಯವನ್ನು ಎಷ್ಟು ಹೊಗಳಿದರೂ ಸಾಲದು'

ನವದೆಹಲಿ (ಪಿಟಿಐ): ಚೀನಾದ ಸೈನಿಕರ ಜೊತೆಗೆ, ಗಾಲ್ವನ್ ಕಣಿವೆಯಲ್ಲಿ ನಡೆದ ಸಂಘರ್ಷ ಮತ್ತು ಅರುಣಾಚಲ ಪ್ರದೇಶದ ತವಾಂಗ್ ವಲಯದಲ್ಲಿ ನಡೆದ ಜಟಾಪಟಿಯಲ್ಲಿ ಭಾರತದ ಯೋಧರು ತೋರಿದ ದಿಟ್ಟತನ ಮತ್ತು ಶೌರ್ಯವನ್ನು ಎಷ್ಟು ಹೊಗಳಿದರೂ ಸಾಲದು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಶನಿವಾರ ಹೇಳಿದ್ದಾರೆ.

ಉದ್ಯಮ ಒಕ್ಕೂಟ ಫಿಕ್ಕಿಯ ಸಭೆಯೊಂದರಲ್ಲಿ ಅವರು ಮಾತನಾಡಿದರು.

ಜಾಗತಿಕ ಸಮೃದ್ಧಿಗಾಗಿ ಸೂಪರ್ ಪವರ್ ಆಗಲು ಭಾರತ ಬಯಸುತ್ತಿದೆ. ಆದರೆ, ಬೇರೊಂದು ದೇಶದ ಮೇಲೆ ದಬ್ಬಾಳಿಕೆ ನಡೆಸಲು ಅಥವಾ ಒಂದು ಇಂಚಿನಷ್ಟಾದರೂ ನೆಲವನ್ನು ಕಬಳಿಸಲು ಭಾರತ ಬಯಸುವುದಿಲ್ಲ ಎಂದು ಅವರು ಹೇಳಿದ್ದಾರೆ. ಗಡಿಯಲ್ಲಿ ಚೀನಾ ನಡೆಸುತ್ತಿರುವ ಅತಿಕ್ರಮಣವನ್ನು ಪರೋಕ್ಷವಾಗಿ ಉಲ್ಲೇಖಿಸಿ ಅವರು ಹೀಗೆ ಹೇಳಿದ್ದಾರೆ.

ಚೀನಾದೊಂದಿಗಿನ ಗಡಿಯಾಗಿರುವ ವಾಸ್ತವ ನಿಯಂತ್ರಣ ರೇಖೆಯಲ್ಲಿ (ಎಲ್‌ಎಸಿ) ಚೀನಾದಿಂದ ಇರುವ ಅಪಾಯವನ್ನು ಸರ್ಕಾರ ನಿರ್ಲಕ್ಷಿಸುತ್ತಿದೆ ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಶುಕ್ರವಾರ ಹೇಳಿದ್ದಕ್ಕೆ ರಾಜನಾಥ್ ಅವರು ಪರೋಕ್ಷವಾಗಿ ತಿರುಗೇಟು ನೀಡಿದ್ದಾರೆ.

'ವಿರೋಧ ಪಕ್ಷದ ಯಾವುದೇ ನಾಯಕನ ಉದ್ದೇಶವನ್ನು ನಾವು ಎಂದೂ ಪ್ರಶ್ನಿಸಿಲ್ಲ. ನೀತಿಗಳ ನೆಲೆಗಟ್ಟು ಏನು ಎಂಬುದನ್ನು ಮಾತ್ರ ನಾವು ಚರ್ಚಿಸಿದ್ದೇವೆ. ರಾಜಕಾರಣವು ಸತ್ಯವನ್ನು ಆಧರಿಸಿ ಇರಬೇಕು. ಸುಳ್ಳನ್ನೇ ಆಧಾರವಾಗಿ ಇರಿಸಿರುವ ರಾಜಕಾರಣ ಬಹಳ ಕಾಲ ಬಾಳುವುದಿಲ್ಲ' ಎಂದು ರಾಜನಾಥ್ ಹೇಳಿದ್ದಾರೆ.

ಭಾರತ ಮತ್ತು ಚೀನಾ ಸೈನಿಕರ ನಡುವೆ ಅರುಣಾಚಲ ಪ್ರದೇಶದ ತವಾಂಗ್‌ನಲ್ಲಿ ಡಿಸೆಂಬರ್ 9ರಂದು ಸಂಘರ್ಷ ನಡೆದಿತ್ತು.

ಕಾಂಗ್ರೆಸ್‌ನಿಂದ ಉಚ್ಚಾಟಿಸಿ: ನಡ್ಡಾ

ರಾಹುಲ್ ಗಾಂಧಿ ಅವರನ್ನು ಕಾಂಗ್ರೆಸ್ ಪಕ್ಷದಿಂದ ಉಚ್ಚಾಟಿಸಬೇಕು ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಆಗ್ರಹಿಸಿದ್ದಾರೆ.

ರಾಹುಲ್ ಅವರು ಚೀನಾ ಮತ್ತು ಪಾಕಿಸ್ತಾನದ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ. ಅವರು ಸಶಸ್ತ್ರ ಪಡೆಗಳ ನೈತಿಕತೆ ಕುಸಿಯುವಂತೆ ಮಾಡಿದ್ದಾರೆ. ಅವರ ನಡವಳಿಕೆ ಖಂಡನಾರ್ಹ ಮತ್ತು ಅಕ್ಷಮ್ಯ ಎಂದು ನಡ್ಡಾ ಹೇಳಿದ್ದಾರೆ.

'ಅವರ ದೇಶಭಕ್ತಿಯ ಬಗ್ಗೆಯೇ ಪ್ರಶ್ನೆಗಳು ಹುಟ್ಟಿವೆ. ಅವರು ನಿರ್ದಿಷ್ಟ ದಾಳಿ ಮತ್ತು ಬಾಲಾಕೋಟ್ ಮೇಲೆ ನಡೆಸಿದ ವಾಯುದಾಳಿಯನ್ನೂ ಪ್ರಶ್ನಿಸಿದ್ದರು. ಇದು ಅವರ ಮಾನಸಿಕ ದಿವಾಳಿತನವನ್ನು ತೋರಿಸುತ್ತದೆ' ಎಂದು ನಡ್ಡಾ ಆಪಾದಿಸಿದ್ದಾರೆ.

ರಾಹುಲ್ ಗಾಂಧಿ ಅವರು ಭಾರತದ ಸೇನೆಯನ್ನು ಅವಮಾನಿಸಿದ್ದಷ್ಟೇ ಅಲ್ಲದೆ, ದೇಶದ ವರ್ಚಸ್ಸಿಗೆ ಧಕ್ಕೆ ತಂದಿದ್ದಾರೆ. ಅವರು ಕಾಂಗ್ರೆಸ್‌ಗಷ್ಟೇ ಸಮಸ್ಯೆ ಅಲ್ಲ, ದೇಶಕ್ಕೇ ಮುಜುಗರ
ಕಿರಣ್ ರಿಜಿಜು,
ಕೇಂದ್ರದ ಕಾನೂನು ಸಚಿವ

ಇದು ನೆಹರೂ ಅವರ 1962ರ ಭಾರತ ಅಲ್ಲ, ಇದು ನವಭಾರತ. ಇದು ಮೋದಿ ಅವರ ಭಾರತ. ಈಗ ಭಾರತದ ಮೇಲೆ ಕಣ್ಣುಹಾಕಿದವರಿಗೆ ತಕ್ಕ ಉತ್ತರ ನೀಡಲಾಗುತ್ತದೆ
ರಾಜ್ಯವರ್ಧನ್ ಸಿಂಗ್ ರಾಥೋಡ್,
ಬಿಜೆಪಿ ವಕ್ತಾರ

ಗಾಲ್ವನ್ ಕಣಿವೆಯಲ್ಲಿ 2020ರಲ್ಲಿ ಎರಡೂ ಕಡೆಯ ಸೈನಿಕರ ನಡುವೆ ಭಾರಿ ಜಟಾಪಟಿ ನಡೆದಿತ್ತು.

ವಯನಾಡ್‌ನಿಂದ ರಾಹುಲ್ ಸ್ಪರ್ಧೆ ಪ್ರಶ್ನಿಸಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 2019ರಲ್ಲಿ ಕೇರಳದ ವಯನಾಡ್‌ನಿಂದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ವಯನಾಡ್ ಮತ್ತು ಎರ್ನಾಕುಳಂ ಲೋಕಸಭಾ ಕ್ಷೇತ್ರಗಳಿಗೆ ನಡೆದಿದ್ದ ಚುನಾವಣೆಯನ್ನು ಪ್ರಶ್ನಿಸಿ ಸರಿತಾ ಎಸ್. ನಾಯರ್ ಸಲ್ಲಿಸಿದ್ದ ಅರ್ಜಿಯನ್ನು 2019ರಲ್ಲಿ ಕೇರಳ ಹೈಕೋರ್ಟ್ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಸುಪ್ರೀಂ ಕೋರ್ಟ್ 2020 ನವೆಂಬರ್ 2ರಂದು ವಜಾಗೊಳಿಸಿತ್ತು. ಅರ್ಜಿಯನ್ನು ಮರುಪರಿಶೀಲಿಸಬೇಕೆಂದು ಕೋರಿ ಸರಿತಾ ಅವರು ಮತ್ತೆ ಅರ್ಜಿ ಸಲ್ಲಿಸಿದ್ದರು.



ಸಿನಿಮೋತ್ಸವ ಕೋಲ್ಕತ್ತದಲ್ಲಿ ಶನಿವಾರ ನಡೆದ 28ನೇ ಕೋಲ್ಕತ್ತ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಸಿನಿಮಾ ಅಭಿಮಾನಿಯೊಬ್ಬರು ಮೈಗೆ ಚಿನ್ನದ ಬಣ್ಣ ಬಳಿದುಕೊಂಡು ಸಿನಿಮಾಗಳ ಭಿತ್ತಿಚಿತ್ರಗಳನ್ನು ಪ್ರದರ್ಶಿಸಿದರು –ಪಿಟಿಐ ಚಿತ್ರ

2012ರಿಂದಲೂ ಕೃತ್ಯ • 20 ಸಾವಿರ ಮಂದಿಗೆ ವಂಚನೆ?

ವಂಚನೆ: ಭಾರತ ಮೂಲದ ನಾಲ್ವರ ಬಂಧನ

ವಾಷಿಂಗ್ಟನ್ (ಪಿಟಿಐ): ಕಂಪ್ಯೂಟರ್ ದುರಸ್ತಿ ಹಾಗೂ ತಾಂತ್ರಿಕ ನೆರವು ಒದಗಿಸುವ ಆಮಿಷವೊಡ್ಡಿ 10 ವರ್ಷಗಳಲ್ಲಿ ಹಲವು ನಾಗರಿಕರಿಗೆ, ಮುಖ್ಯವಾಗಿ ಹಿರಿಯ ನಾಗರಿಕರನ್ನೇ ಗುರಿಯಾಗಿಸಿ ವಂಚಿಸಿದ್ದ ಪ್ರಕರಣದಲ್ಲಿ ಇಬ್ಬರು ಭಾರತೀಯರನ್ನು ಎಫ್‌ಬಿಐ ಬಂಧಿಸಿದೆ.

ನವದೆಹಲಿಯ ಹರ್ಷದ್ ಮದನ್ (34) ಮತ್ತು ಫರಿದಾಬಾದ್‌ನ ವಿಕಾಸ್ ಗುಪ್ತಾ (33) ಬಂಧಿತರು. ಸಿಬಿಐ ಮತ್ತು ದೆಹಲಿ ಪೊಲೀಸರ ಸಹಕಾರದಲ್ಲಿ ಇಬ್ಬರನ್ನೂ ತನಿಖಾ ಸಂಸ್ಥೆ ಎಫ್‌ಬಿಐ ಬಂಧಿಸಿದೆ. ಮೂರನೇ ಆರೋಪಿ, ನವದೆಹಲಿಯ ಗಗನ್ ಲಂಬಾ ತಲೆಮರೆಸಿಕೊಂಡಿದ್ದಾನೆ.

ಮೂರನೇ ಆರೋಪಿಯ ಸಹೋದರ ಜತಿನ್ ಲಂಬಾ ಪೊಲೀಸರ ವಶದಲ್ಲಿದ್ದಾನೆ. ಈ ಎಲ್ಲರ ವಿರುದ್ಧ ಆನ್‌ಲೈನ್ ವಂಚನೆ, ಕಂಪ್ಯೂಟರ್ ಮೂಲಕ ವಂಚನೆಗೆ ಸಂಚು ಆರೋಪದಡಿ ಪ್ರಕರಣ ದಾಖಲಿಸಲಾಗಿದೆ ಎಂದು ಅಮೆರಿಕದ ಅಟಾರ್ನಿ ಫಿಲಿಪ್ ಆರ್.ಸೆಲ್ಲಿಂಗೆರ್ ತಿಳಿಸಿದ್ದಾರೆ.

ಈ ವಂಚಕರ ಜಾಲವು ಕಳೆದ ಹತ್ತು ವರ್ಷಗಳಲ್ಲಿ ಸುಮಾರು 20 ಸಾವಿರ ನಾಗರಿಕರಿಗೆ ವಂಚಿಸಿದೆ ಹಾಗೂ ₹ 82.73 ಕೋಟಿಗೂ ಹೆಚ್ಚಿನ ಮೊತ್ತವನ್ನು (10 ಮಿಲಿಯನ್ ಡಾಲರ್) ಸಂಗ್ರಹಿಸಿತ್ತು ಎಂದು ಎಫ್‌ಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ಆರು ಮಂದಿಯ ಜಾಲ: ಒಂಟಾರಿಯೊ ನಿವಾಸಿ, ಭಾರತ ಮೂಲದ ಜಯಂತ್ ಭಾಟಿಯಾ (33), ನ್ಯೂಯಾರ್ಕ್‌ನ ರಿಚ್‌ಮಂಡ್ ಹಿಲ್ ನಿವಾಸಿ ಕುಲ್ವಿಂದರ್ ಸಿಂಗ್ (34) ಅವರನ್ನು ಕೆನಡಾದ ಅಧಿಕಾರಿಗಳು ಇದೇ ವಾರ ಬಂಧಿಸಿದ್ದರು.

ಈ ಆರು ಜನರು ಅಮೆರಿಕ, ಭಾರತ, ಕೆನಡಾ ಕಾರ್ಯಕ್ಷೇತ್ರವಾಗಿಸಿ ಆನ್‌ಲೈನ್ ವಂಚನೆಯನ್ನು 2012ರಿಂದಲೂ ನಡೆಸುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅನುವಂಶೀಯತೆ ಪತ್ತೆ ಹಗರಣ: ಭಾರತೀಯ ಉದ್ಯಮಿಗೆ ಸಜೆ

ವಾಷಿಂಗ್ಟನ್ (ಪಿಟಿಐ): ಅನುವಂಶೀಯತೆ ತಪಾಸಣೆಗೆ ಸಂಬಂಧಿಸಿದ ಬಹುಕೋಟಿ ಹಗರಣಕ್ಕೆ ಸಂಬಂಧಿಸಿದಂತೆ ಭಾರತ ಮೂಲದ ಅಮೆರಿಕನ್ನರಾದ, ಇಲ್ಲಿನ ಅಟ್ಲಾಂಟಾದ ಪ್ರಯೋಗಾಲಯವೊಂದರ ಮಾಲೀಕನಿಗೆ ಸ್ಥಳೀಯ ನ್ಯಾಯಾಲಯ ಸಜೆ ವಿಧಿಸಿದೆ.

ಇಲ್ಲಿನ ಲ್ಯಾಬ್ ಸಲ್ಯೂಷನ್ಸ್ ಎಲ್‌ಎಲ್‌ಸಿ ಮಾಲೀಕ ಮಿನಲ್ ಪಟೇಲ್ (44) ಶಿಕ್ಷೆಗೊಳಗಾದವರು. ಇವರು ಸುಮಾರು ₹ 3,698 ಕೋಟಿ ಮೊತ್ತದ ಹಗರಣದಲ್ಲಿನ (447 ಮಿಲಿಯನ್ ಡಾಲರ್) ಆರೋಪಿಯೊಬ್ಬರಾಗಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚೀನಾ: ಕೋವಿಡ್ ಸಾವು ಗಣನೀಯ ಏರಿಕೆ?

ಬೀಜಿಂಗ್ (ಎ.ಪಿ): ಚೀನಾದಲ್ಲಿ ಕೋವಿಡ್ ಸೋಂಕು ಏರಿಕೆ ಹಿಂದೆಯೇ, ಅದರಿಂದ ಮೃತಪಡುತ್ತಿರುವವರ ಸಂಖ್ಯೆಯೂ ಹೆಚ್ಚುತ್ತಿದೆ ಎಂದು ವರದಿಗಳು ತಿಳಿಸಿವೆ.

ಇಲ್ಲಿನ ಚಿತಾಗಾರದ ಬಳಿ ಅಂತ್ಯಕ್ರಿಯೆಗೆ ಚಳಿಯಲ್ಲೂ ಸಂಬಂಧಿಕರು ಕಾಯುತ್ತಿರುವ ದೃಶ್ಯ ಸಾಮಾನ್ಯವಾಗಿದೆ.

ಚಿತಾಗಾರದ ಸಿಬ್ಬಂದಿ ಮೃತಪಟ್ಟವರ ಹೆಸರು ಕೂಗಿದ ಹಿಂದೆಯೇ, ಸಂಬಂಧಿಕರು ಅಂತ್ಯಕ್ರಿಯೆ ವಿಧಿವಿಧಾನ ನಡೆಸಲು ಧಾವಿಸಿ ಬರುವ ದೃಶ್ಯಗಳಿವೆ. ಹೀಗೆ, ಕಾಯುತ್ತಿದ್ದ ಸಂಬಂಧಿಯೊಬ್ಬರು ಮೃತಪಟ್ಟಿರುವ ನಮ್ಮ ಸಂಬಂಧಿಕರಿಗೆ ಸೋಂಕು ತಗುಲಿತ್ತು ಎಂದು ಸ್ಪಷ್ಟಪಡಿಸಿದ್ದಾರೆ.

ಚಿತಾಗಾರವಿರುವ ಸಂಕೀರ್ಣದಲ್ಲಿಯೇ ಮಳಿಗೆ ಹೊಂದಿರುವ ವ್ಯಾಪಾರಿಯೊಬ್ಬರ ಪ್ರಕಾರ, ಇತ್ತೀಚಿನ ದಿನಗಳಲ್ಲಿ ಚಿತಾಗಾರಕ್ಕೆ ಬರುತ್ತಿರುವ ಶವಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗಿದೆ. ಸಾಮಾನ್ಯವಾಗಿ ನಿತ್ಯ ಸರಾಸರಿ 12 ಶವಗಳ ಅಂತ್ಯಕ್ರಿಯೆ ನಡೆಯುತ್ತಿದೆ. ಇತ್ತೀಚಿನ ದಿನಗಳಲ್ಲಿ ನಿತ್ಯ ಅಂತ್ಯಕ್ರಿಯೆಗೆ ತರಲಾಗುತ್ತಿರುವ ಶವಗಳ ಸಂಖ್ಯೆ ಸರಾಸರಿ 150 ಆಗಿದೆ ಎಂದು ತಿಳಿಸಿದರು.

ಡೊಂಗಜಿಯಾವೊ ಚಿತಾಗಾರದ ಬಳಿ ಸುಮಾರು 12 ಶವಗಳು, ಅಂತ್ಯಕ್ರಿಯೆಯ ಸರದಿಯಲ್ಲಿ ಇದ್ದುದನ್ನು ಎ.ಪಿ ಸುದ್ದಿ ಸಂಸ್ಥೆಯ ವರದಿಗಾರರು ಸ್ವತಃ ಗಮನಿಸಿದ್ದಾರೆ.

ಚೀನಾ ಸರ್ಕಾರ ಡಿ.4ರಂದು ಕೋವಿಡ್ ಸಾವಿನ ಒಂದು ಪ್ರಕರಣವನ್ನು ಅಧಿಕೃತವಾಗಿ ವರದಿ ಮಾಡಿಲ್ಲ. ಚೀನಾ ಸದ್ಯ ಅಧಿಕೃತವಾಗಿ ಪ್ರಕಟಿಸಿರುವಂತೆ ಕೋವಿಡ್‌ನಿಂದಾಗಿ 5,235 ಮಂದಿ ಮೃತಪಟ್ಟಿದ್ದಾರೆ.

ಗಡಿ ಭದ್ರತೆ: ರಾಜ್ಯಗಳಿಗೂ ಜವಾಬ್ದಾರಿ ಹಂಚಿಕೆ– ಶಾ

ಕೋಲ್ಕತ್ತ: 'ಭಾರತದ ಗಡಿ ಪ್ರದೇಶಗಳಲ್ಲಿ ಭದ್ರತೆಗಾಗಿ ಬಿಎಸ್‌ಎಫ್ ಜೊತೆಗೆ ರಾಜ್ಯಗಳು ಸಹ ಜವಾಬ್ದಾರಿಯನ್ನು ಹಂಚಿಕೊಳ್ಳುತ್ತವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶನಿವಾರ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಸೂಚಿಸಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇಲ್ಲಿಗೆ ಸಮೀಪದ ಪಶ್ಚಿಮ ಬಂಗಾಳದ ಸೆಕ್ರೆಟರಿಯೇಟ್‌ನಲ್ಲಿ ಶಾ ಅವರ ಅಧ್ಯಕ್ಷತೆಯಲ್ಲಿ ನಡೆದ 25ನೇ ಪೂರ್ವ ವಲಯ ಕೌನ್ಸಿಲ್ (ಇಝಡ್‌ಸಿ) ಸಭೆಯಲ್ಲಿ ಅಕ್ರಮ ಒಳನುಸುಳುವಿಕೆ, ಗಡಿಯಾಚೆಗಿನ ಕಳ್ಳಸಾಗಾಣಿಕೆ ಮತ್ತು ಭಾರತ-ಬಾಂಗ್ಲಾದೇಶ ಗಡಿಯ ವಿಷಯಗಳ ಕುರಿತು ಚರ್ಚಿಸಲಾಗಿದೆ ಎಂದೂ ಅವರು ಹೇಳಿದ್ದಾರೆ.

ಸಭೆಯಲ್ಲಿ ಪಾಲ್ಗೊಂಡಿದ್ದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಜಾರ್ಖಂಡ್‌ನ ಮುಖ್ಯಮಂತ್ರಿ ಹೇಮಂತ್ ಸೊರೇನ್, ಬಿಹಾರ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಮತ್ತು ಒಡಿಶಾ ಸಚಿವ ಪ್ರದೀಪ್ ಅಮತ್ ಅವರೊಂದಿಗೆ ರಾಜ್ಯಗಳ ನಡುವೆ ಸಾರಿಗೆ ಸೌಲಭ್ಯಗಳು ಮತ್ತು ನೀರು ಹಂಚಿಕೆ ಕುರಿತು ಮಾತುಕತೆ ನಡೆಯಿತು ಎಂದೂ ಮೂಲಗಳು ತಿಳಿಸಿವೆ.

ದೇಶಮುಖ್ ಜಾಮೀನು ಪ್ರಶ್ನಿಸಿದ ಸಿಬಿಐ

ನವದೆಹಲಿ (ಪಿಟಿಐ): ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧಿತರಾಗಿದ್ದ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರಿಗೆ ಬಾಂಬೆ ಹೈಕೋರ್ಟ್ ಜಾಮೀನು ನೀಡಿದ್ದನ್ನು ಪ್ರಶ್ನಿಸಿ ಸಿಬಿಐ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಮಹಡಿಯಿಂದ ಮಗು ಎಸೆದ ತಂದೆ

ನವದೆಹಲಿ (ಪಿಟಿಐ): ಕುಡಿದ ಮತ್ತಿನಲ್ಲಿದ್ದ ವ್ಯಕ್ತಿಯೊಬ್ಬ ಪತ್ನಿಯೊಂದಿಗೆ ಜಗಳವಾಡಿ ಎರಡು ವರ್ಷದ ಮಗುವನ್ನು ಮೊದಲನೇ ಮಹಡಿಯಿಂದ ಎಸೆದು, ತಾನೂ ಹಾರಿದ ಘಟನೆ ದೆಹಲಿಯ ಕಾಲ್‌ಕಾಜೀ ಪ್ರದೇಶದಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ಆರೋಪಿ ಮನ್ ಸಿಂಗ್ (30) ಮತ್ತು ಪುತ್ರ ಇಬ್ಬರೂ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಶನಿವಾರ ಪೊಲೀಸರು ತಿಳಿಸಿದ್ದಾರೆ.

'ಕುಡಿದು ಬಂದ ಆರೋಪಿ ಪತ್ನಿಯೊಂದಿಗೆ ಜಗಳ ಆರಂಭಿಸಿ, ಮೊದಲನೇ ಮಹಡಿಗೆ ಮಗುವನ್ನು ಹೊತ್ತೊಯ್ದು 21 ಅಡಿ ಎತ್ತರದಿಂದ ಹೊರಗೆ ಎಸೆದ, ಬಳಿಕ ತಾನೂ ಹೊರಗೆ ಜಿಗಿದ' ಎಂದು ಪೊಲೀಸರು ತಿಳಿಸಿದ್ದಾರೆ.

ವಿವಿಧೆಡೆ ಕ್ಷಿಪಣಿ ದಾಳಿ: ಗಣಿಯಲ್ಲಿ ಸಿಕ್ಕಿಬಿದ್ದ 600 ಕಾರ್ಮಿಕರು

ಕೀವ್ (ಎ.ಪಿ): ಉಕ್ರೇನ್‌ನ ರಾಜಧಾನಿ ಕೀವ್ ಸೇರಿದಂತೆ ವಿವಿಧ ನಗರಗಳ ಮೇಲೆ ರಷ್ಯಾ ಕ್ಷಿಪಣಿ ದಾಳಿಯನ್ನು ಮುಂದುವರಿಸಿದೆ. ಶುಕ್ರವಾರ ಕೀವ್ ನಗರವನ್ನೇ ಗುರಿಯಾಗಿಸಿ 12ಕ್ಕೂ ಹೆಚ್ಚು ಕ್ಷಿಪಣಿ ದಾಳಿ ನಡೆದಿದೆ.

ಕೀವ್, ಹಾರ್ಕಿವ್, ಝಪೋರ್ಝಿಯಾ ನಗರಗಳಲ್ಲಿ ವಿದ್ಯುತ್ ವ್ಯತ್ಯಯ ಮುಂದುವರಿದಿದೆ. ನೀರು ಮತ್ತು ವಿದ್ಯುತ್ ಸಂಪರ್ಕ ಸೌಲಭ್ಯಗಳನ್ನೇ ಗುರಿಯಾಗಿಸಿ ರಷ್ಯಾ ದಾಳಿ ನಡೆಸುತ್ತಿದೆ ಎಂದು ಉಕ್ರೇನ್ ಹೇಳಿದೆ. ಚಳಿಗಾಲ ಆವರಿಸುತ್ತಿದ್ದಂತೆ ಇದರಿಂದ ಜನರ ಸಂಕಷ್ಟವೂ ಹೆಚ್ಚುತ್ತಿದೆ.

ಕ್ಷಿಪಣಿ ದಾಳಿ ಹಿನ್ನೆಲೆಯಲ್ಲಿ ಕ್ರಿವಿರಿಹ್ ನಗರದ ಗಣಿಯೊಂದರಲ್ಲಿ ಸುಮಾರು 600 ಕಾರ್ಮಿಕರು ರಕ್ಷಣೆ ಪಡೆದಿದ್ದಾರೆ. ಈ ಪೈಕಿ 250 ಜನರನ್ನು ರಕ್ಷಿಸಿದ್ದು, ಉಳಿದವರ ರಕ್ಷಣಾ ಕಾರ್ಯಾಚರಣೆ ನಡೆದಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ರಷ್ಯಾ ಅತಿಕ್ರಮಣ ನಡೆಸಿದ ಕಳೆದ 10 ತಿಂಗಳಲ್ಲಿ ಕೀವ್ ನಗರದ ಮೇಲೆ ಇತ್ತೀಚಿನ ದಿನಗಳಲ್ಲಿಯೇ ದೊಡ್ಡ ಪ್ರಮಾಣದ ದಾಳಿ ನಡೆದಿದೆ. 40 ಕ್ಷಿಪಣಿಗಳ ಪೈಕಿ 37 ಅನ್ನು ಉಕ್ರೇನ್ ವಾಯುರಕ್ಷಣೆ ವ್ಯವಸ್ಥೆಯು ಹೊಡೆದುರುಳಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕ್ಷಿಪಣಿ ದಾಳಿಯಿಂದ ವಸತಿ ಸಂಕೀರ್ಣವು ಜಖಂಗೊಂಡಿದೆ. ಮೂವರು ಮೃತಪಟ್ಟಿದ್ದು, 13 ಜನರು ಗಾಯಗೊಂಡರು. ಅವಶೇಷಗಳಡಿ ತಾಯಿ, ಮಗು ಸಿಕ್ಕಿಬಿದ್ದಿದ್ದು, ರಕ್ಷಣಾ ಕಾರ್ಯ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಹಾರ್ಕಿವ್‌ನಲ್ಲಿ ಕ್ಷಿಪಣಿ ದಾಳಿಯಿಂದ ಧ್ವಂಸವಾಗಿರುವ ಕಟ್ಟಡದ ಅವಶೇಷಗಳನ್ನು ರಕ್ಷಣಾ ಸಿಬ್ಬಂದಿ ಗಮನಿಸಿದರು —ಎಎಫ್‌ಪಿ ಚಿತ್ರ

ಪ್ರೊ ಕಬಡ್ಡಿ: ಜೈಪುರ ಚಾಂಪಿಯನ್

ಫೈನಲ್ ಪಂದ್ಯದಲ್ಲಿ ಪುಣೇರಿ ಪಲ್ಟನ್ ಎದುರು 33–29 ರಲ್ಲಿ ರೋಚಕ ಜಯ



ಫೈನಲ್ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡದ ಅಜಿತ್ ಕುಮಾರ್ ರೇಡಿಂಗ್– ಟ್ವಿಟರ್ ಚಿತ್ರ

ಮುಂಬೈ: ಜಿದ್ದಾಜಿದ್ದಿನ ಹೋರಾಟದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು ಪುಣೇರಿ ಪಲ್ಟನ್ ತಂಡಕ್ಕೆ ಸೋಲುಣಿಸಿ ಒಂಬತ್ತನೇ ಆವೃತ್ತಿಯ ಪ್ರೊ ಕಬಡ್ಡಿ ಲೀಗ್ ಟೂರ್ನಿಯ ಚಾಂಪಿಯನ್ ಆಗಿ ಹೊರಹೊಮ್ಮಿತು.

ಇಲ್ಲಿ ಎನ್‌ಎಸ್‌ಸಿಐ ಸರ್ದಾರ್ ವಲ್ಲಭಭಾಯ್ ಪಟೇಲ್ ಒಳಾಂಗಣದಲ್ಲಿ ಶನಿವಾರ ರಾತ್ರಿ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಜೈಪುರ 33–29ರಿಂದ ಪುಣೇರಿ ತಂಡವನ್ನು ಮಣಿಸಿತು.

ಜೈಪುರ ತಂಡಕ್ಕೆ ಇದು ಎರಡನೇ ಪ್ರಶಸ್ತಿಯಾಗಿದೆ. 2014ರಲ್ಲಿ ನಡೆದ ಟೂರ್ನಿಯ ಮೊದಲ ಆವೃತ್ತಿಯಲ್ಲಿ ತಂಡವು ಚಾಂಪಿಯನ್ ಆಗಿತ್ತು.

ಜಿದ್ದಾಜಿದ್ದಿನ ಹಣಾಹಣಿಯಲ್ಲಿ ವಿಜೇತ ಜೈಪುರ ಪರ ರೇಡರ್‌ಗಳಾದ ಅರ್ಜುನ್ ದೇಸ್ವಾಲ್, ವಿ. ಅಜಿತ್ ಕುಮಾರ್ ಮತ್ತು ಡಿಫೆಂಡರ್ ಸುನಿಲ್ ಕುಮಾರ್ ತಲಾ ಆರು ಪಾಯಿಂಟ್ಸ್ ಗಳಿಸಿದರು. ಪುಣೇರಿ ತಂಡಕ್ಕಾಗಿ ಆದಿತ್ಯ ಶಿಂಧೆ (5 ಪಾಯಿಂಟ್ಸ್), ಆಕಾಶ್ ಶಿಂಧೆ (4), ಅಭಿಷೇಕ್ ನಂದರಾಜನ್ (4) ಮತ್ತು ಮೊಹಮ್ಮದ್ ನಬಿಬಕ್ಷ್ (4) ಆಟ ವ್ಯರ್ಥವಾಯಿತು.

ತೀವ್ರ ಪೈಪೋಟಿ ನಡೆದ ಪಂದ್ಯದ ಮೊದಲಾರ್ಧದಲ್ಲಿ ಜೈಪುರ 14–12ರಿಂದ ಮುಂದಿತ್ತು. ಅದೇ ಲಯ ಮುಂದುವರಿಸಿಕೊಂಡು ದ್ವಿತೀಯಾರ್ಧದಲ್ಲೂ 19–17ರಿಂದ ಮುನ್ನಡೆ ಗಳಿಸಿ ಜಯ ಮತ್ತು ಟ್ರೋಫಿ ತನ್ನದಾಗಿಸಿಕೊಂಡಿತು.

ಪುಣೇರಿ ತಂಡವು ಇದೇ ಮೊದಲ ಬಾರಿಗೆ ಫೈನಲ್ ತಲುಪಿತ್ತು. ಆದರೆ ಟ್ರೋಫಿ ಜಯದ ಆಸೆ ಈಡೇರಲಿಲ್ಲ.

ಅಂಧರ ಟಿ20 ಕ್ರಿಕೆಟ್: ಕಿಣಿ..ಕಿಣಿಗುಟ್ಟುವ ಚೆಂಡಿಗೆ ಮನಸೋತರು

ಭಾರತ ಮುಕುಟಕ್ಕೆ ಮೂರನೇ ಕಿರೀಟ

ಪ್ರಜಾವಾಣಿ ವಾರ್ತೆ



ಅಂಧರ ಟಿ20 ವಿಶ್ವಕಪ್ ಗೆದ್ದ ಭಾರತ ತಂಡದ ಆಟಗಾರರು ಸಂಭ್ರಮಿಸಿದರು

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪ್ರತಿನಿತ್ಯ ನಡೆಯುವ ಕ್ರಿಕೆಟ್ ಚಟುವಟಿಕೆಗಳಿಗೂ ಶನಿವಾರ ನಡೆದ ಪಂದ್ಯಕ್ಕೂ ಅಪಾರ ವ್ಯತ್ಯಾಸವಿತ್ತು. ಇಲ್ಲಿ ಸೋಲು–ಗೆಲುವುಗಳ ಲೆಕ್ಕಾಚಾರಕ್ಕಿಂತಲೂ ಕ್ರೀಡಾಂಗಣದಲ್ಲಿ ತಮ್ಮ ಸಾಮರ್ಥ್ಯ ಮೀರಿ ಆಡುತ್ತಿದ್ದವರ ಛಲ ಮತ್ತು ಆಸಕ್ತಿಗೆ ಎಲ್ಲರೂ ಮನಸೋತರು.

ಹೌದು; ಇಲ್ಲಿ ನಡೆದ ಅಂಧರ ಟಿ20 ವಿಶ್ವಕಪ್ ಫೈನಲ್ ಪಂದ್ಯ ಇಂತಹದೊಂದು ವಿಶಿಷ್ಟ ಅನುಭವ ನೀಡಿತು. ಈ ಪಂದ್ಯದಲ್ಲಿ ಭಾರತ ತಂಡವು ಬಾಂಗ್ಲಾ ವಿರುದ್ಧ 120 ರನ್‌ಗಳಿಂದ ಜಯಿಸಿತು. ಸತತ ಮೂರನೇ ವಿಶ್ವಕಪ್ ವಿಜಯ ಸಾಧಿಸಿತು.

ಟಾಸ್ ಗೆದ್ದ ಭಾರತ ತಂಡ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಸುನೀಲ್ ರಮೇಶ್ (136; 63ಎಸೆತ, 4X23, 1X6) ಮತ್ತು ಅಜಯ್ ಕುಮಾರ್ ರೆಡ್ಡಿ (100; 50ಎ, 4X18) ಗಳಿಸಿದ ಶತಕಗಳ ಬಲದಿಂದ ತಂಡವು 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 277 ರನ್ ಗಳಿಸಿತು. ಆದರೆ ಬಾಂಗ್ಲಾ ದೇಶ ತಂಡವು ಈ ಗುರಿ ಮುಟ್ಟುವಲ್ಲಿ ವಿಫಲವಾಯಿತು. ತಂಡದ ಆಲ್‌ರೌಂಡರ್ ಸಲ್ಮಾನ್ (77; 66ಎ, 4X5) ಅರ್ಧಶತಕ ಗಳಿಸಿದರು. ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 157 ರನ್ ಗಳಿಸಿ ಸೋಲನುಭವಿಸಿತು.

ಕಿಣಿ..ಕಿಣಿ..ಸದ್ದು ಮಾಡುತ್ತ ಬರುವ ಚೆಂಡನ್ನು ಶಬ್ದದ ಮೂಲಕ ಗುರುತಿಸಿ ಹೊಡೆಯುವ ಬ್ಯಾಟರ್‌ಗಳು, ಸದ್ದು ಮಾಡುತ್ತ ಸಾಗುವ ಚೆಂಡನ್ನು ಹಿಡಿದು ಥ್ರೋ ಮಾಡುವ ಫೀಲ್ಡರ್‌ಗಳ ಸಾಮರ್ಥ್ಯಕ್ಕೆ ನೋಡುಗರು ಬೆರಗಾದರು. ಅಂಧರ ಕ್ರಿಕೆಟ್ ನಿಯಮದಂತೆ (4–4–3) ಉಭಯ ತಂಡಗಳನ್ನು ಕಣಕ್ಕಿಳಿಸಲಾಗಿತ್ತು. ಪ್ರತಿ ತಂಡದ ಹನ್ನೊಂದು ಜನರಲ್ಲಿ 4 ಮಂದಿ ಪೂರ್ಣ ಅಂಧತ್ವ(ಬಿ1) , 4 ಜನ ಭಾಗಶಃ ಅಂಧತ್ವ ಅಥವಾ ಮೂರು ಮೀಟರ್‌ನಷ್ಟು ದೂರ ನೋಡುವ ಶಕ್ತಿ (ಬಿ2) ಹಾಗೂ ಭಾಗಶಃ ಅಂಧತ್ವ ಅಥವಾ 5 ಮೀಟರ್ ದೂರದವರೆಗೂ ನೋಡುವ ಶಕ್ತಿಯಿರುವವರು (ಬಿ3) ಇದ್ದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 277 (ಸುನೀಲ್ ರಮೇಶ್ 136, ಅಜಯಕುಮಾರ್ ರೆಡ್ಡಿ 100, ಸಲ್ಮಾನ್ 41ಕ್ಕೆ2) ಬಾಂಗ್ಲಾದೇಶ: 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 157 (ಸಲ್ಮಾನ್ 77, ಅಜಯಕುಮಾರ್ ರೆಡ್ಡಿ 12ಕ್ಕೆ1, ಲಲಿತ್ ಮೀನಾ 49ಕ್ಕೆ1) ಫಲಿತಾಂಶ: ಭಾರತ ತಂಡಕ್ಕೆ120 ರನ್‌ಗಳ ಜಯ ಮತ್ತು ವಿಶ್ವಕಪ್.

ಟೆಸ್ಟ್ ಕ್ರಿಕೆಟ್: ಬಾಂಗ್ಲಾ ಹೋರಾಟಕ್ಕೆ ಅಕ್ಷರ್ ಅಡ್ಡಗಾಲು

ಜಯದ ಸನಿಹ ಭಾರತ ತಂಡ



ಅಕ್ಷರ್ ಪಟೇಲ್ ಸಂಭ್ರಮ –ಎಪಿ/ಪಿಟಿಐ ಚಿತ್ರ

ಚಟ್ಟೊಗ್ರಾಮ್(ಪಿಟಿಐ): ಬೃಹತ್ ಗೆಲುವಿನ ಗುರಿಯನ್ನು ಬೆನ್ನಟ್ಟಿರುವ ಬಾಂಗ್ಲಾದೇಶದ ಝಾಕೀರ್ ಹಸನ್ ಅಮೋಘ ಶತಕ ಬಾರಿಸಿದರು.

ಆದರೆ, ಆತಿಥೇಯರ ದಿಟ್ಟ ಹೋರಾಟಕ್ಕೆ ಭಾರತದ ಸ್ಪಿನ್ನರ್ ಅಕ್ಷರ್ ಪಟೇಲ್ ಕಡಿವಾಣ ಹಾಕಿದರು. ಅದರೊಂದಿಗೆ ಇಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡದ ಜಯದ ಅವಕಾಶವನ್ನು ಹೆಚ್ಚಿಸಿದರು.

ಝಹೂರ್ ಅಹಮದ್ ಚೌಧರಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದಲ್ಲಿ ಬಾಂಗ್ಲಾ ತಂಡಕ್ಕೆ ಶುಕ್ರವಾರ ಭಾರತವು 513 ರನ್‌ಗಳ ಗುರಿಯೊಡ್ಡಿತ್ತು. ಶನಿವಾರ ಬಾಂಗ್ಲಾ ತಂಡವು 102 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 272 ರನ್ ಗಳಿಸಿದೆ. ಕೊನೆಯ ದಿನವಾದ ಭಾನುವಾರ ಇನ್ನೂ 241 ರನ್‌ಗಳನ್ನು ಗಳಿಸಬೇಕಾದ ಒತ್ತಡದಲ್ಲಿದೆ. ಕ್ರೀಸ್‌ನಲ್ಲಿ ಶಕೀಬ್ ಅಲ್ ಹಸನ್ (ಬ್ಯಾಟಿಂಗ್ 40) ಮತ್ತು ಏಕದಿನ ಸರಣಿಯಲ್ಲಿ ಮಿಂಚಿದ್ದ ಮೆಹದಿ ಹಸನ್ ಮಿರಾಜ್ (ಬ್ಯಾಟಿಂಗ್ 9) ಇದ್ದಾರೆ.

ಆದರೆ, ಸ್ಪಿನ್ನರ್‌ಗಳಿಗೆ ಹೆಚ್ಚು ನೆರವು ಒದಗಿಸುತ್ತಿರುವ ಪಿಚ್‌ನಲ್ಲಿ ಕೊನೆಯ ದಿನ ಬೆಳಿಗ್ಗೆಯ ಅವಧಿಯಲ್ಲಿ ಬ್ಯಾಟಿಂಗ್ ಮಾಡುವುದು ಕಠಿಣ ಸವಾಲಾಗುವ ಸಾಧ್ಯತೆ ಇದೆ. ಆದ್ದರಿಂದ ಭಾರತದ ಪಾಳೆಯದಲ್ಲಿ ಗೆಲುವಿನ ನಿರೀಕ್ಷೆ ಗರಿಗೆದರಿದೆ.

ಮೂರನೇ ದಿನದಾಟದ ಕೊನೆಗೆ ಕ್ರೀಸ್‌ನಲ್ಲಿ ಉಳಿದಿದ್ದ ಆರಂಭಿಕ ಜೋಡಿ ನಜ್ಮುಲ್ ಹಾಗೂ ಹಸನ್ ನಾಲ್ಕನೇ ದಿನದಾಟದ ಮೊದಲ ಅವಧಿಯಲ್ಲಿ ಉತ್ತಮವಾಗಿ ಆಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 124 ರನ್‌ಗಳನ್ನು ಸೇರಿಸಿದರು. ನಜ್ಮುಲ್ ಅರ್ಧಶತಕ ಗಳಿಸಿದರು. ವೇಗಿ ಉಮೇಶ್ ಬೌಲಿಂಗ್‌ನಲ್ಲಿ ನಜ್ಮುಲ್ ಔಟಾಗುವುದರೊಂದಿಗೆ ಜೊತೆಯಾಟ ಮುರಿದುಬಿತ್ತು. ಆದರೆ ಹಸನ್ ಮಾತ್ರ ಹೋರಾಟ ಮುಂದುವರಿಸಿದರು.

ಇನ್ನೊಂದು ಬದಿಯಲ್ಲಿ ಬಂದ ಬ್ಯಾಟರ್‌ಗಳು ಕಾಲೂರಲು ಭಾರತದ ಸ್ಪಿನ್ನರ್‌ಗಳು ಬಿಡಲಿಲ್ಲ. ಎಡಗೈ ಸ್ಪಿನ್ನರ್ ಅಕ್ಷರ್ (50ಕ್ಕೆ3) ಯಾಸೀರ್ ಅಲಿ, ಮುಷ್ಫಿಕುರ್ ರಹೀಮ್ ಮತ್ತು ವಿಕೆಟ್‌ಕೀಪರ್–ಬ್ಯಾಟರ್ ನೂರುಲ್ ಹಸನ್ ಅವರನ್ನು ಪೆವಿಲಿಯನ್‌ಗೆ ಕಳಿಸಿದರು.

ಶತಕ ಗಳಿಸಿದ ಹಸನ್ (100; 224ಎ, 4X12, 6X1) ವಿಕೆಟ್ ಅನ್ನು 79ನೇ ಓವರ್‌ನಲ್ಲಿ ಅಶ್ವಿನ್ ಕಬಳಿಸಿದರು. ಕುಲದೀಪ್ ಯಾದವ್ ಕೂಡ ಲಿಟನ್ ದಾಸ್ ವಿಕೆಟ್ ಉರುಳಿಸಿದರು. ಆದರೆ ಇಂದೇ ಗೆಲುವಿನ ಕೇಕೆ ಹಾಕುವ ತವಕದಲ್ಲಿದ್ದ ಭಾರತ ಬಳಗಕ್ಕೆ ಶಕೀಬ್ ಅಡ್ಡಿಯಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ 404, ಬಾಂಗ್ಲಾದೇಶ: 150, ಎರಡನೇ ಇನಿಂಗ್ಸ್: ಭಾರತ 2 ವಿಕೆಟ್‌ಗೆ 258 ಡಿಕ್ಲೇರ್ಡ್, ಬಾಂಗ್ಲಾದೇಶ: 102 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 272 (ನಜ್ಮುಲ್ ಹುಸೇನ್ ಶಾಂತೊ 67, ಝಾಕೀರ್ ಹಸನ್ 100, ಶಕೀಬ್ ಅಲ್ ಹಸನ್ ಬ್ಯಾಟಿಂಗ್ 40, ಅಕ್ಷರ್ ಪಟೇಲ್ 50ಕ್ಕೆ3)

ಮಹಿಳಾ ಕ್ರಿಕೆಟ್: ಭಾರತಕ್ಕೆ ಸೋಲು

ಬ್ರೆಬೋರ್ನ್: ಭಾರತ ಮಹಿಳಾ ತಂಡವು ಆಸ್ಟ್ರೇಲಿಯಾ ಎದುರಿನ ಟಿ20 ಕ್ರಿಕೆಟ್ ಸರಣಿಯ ನಾಲ್ಕನೇ ಪಂದ್ಯದಲ್ಲಿ ಸೋಲು ಅನುಭವಿಸಿತು.

ಎಲಿಸಾ ಪೆರಿ ಅರ್ಧಶತಕ (72) ಮತ್ತು ಆ್ಯಶ್ಲಿ ಗಾರ್ಡನರ್ (42 ರನ್, 20ಕ್ಕೆ 2 ವಿಕೆಟ್) ಅವರ ಆಲ್‌ರೌಂಡ್ ಆಟದ ಬಲದಿಂದ ಆಸ್ಟ್ರೇಲಿಯಾ ಏಳು ರನ್‌ಗಳಿಂದ ಗೆದ್ದಿತು. ಇದರೊಂದಿಗೆ ಐದು ಪಂದ್ಯಗಳ ಸರಣಿಯಲ್ಲಿ 3–1ರ ಮುನ್ನಡೆ ಗಳಿಸಿತು.

ಮೊದಲ ಬ್ಯಾಟ್ ಮಾಡಿದ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 3 ವಿಕೆಟ್‌ಗೆ 188 ರನ್ ಗಳಿಸಿತು. ಭಾರತ 20 ಓವರ್‌ಗಳಲ್ಲಿ 181 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 3 ವಿಕೆಟ್‌ಗೆ 188 (ಅಲಿಸ್ಸಾ ಹೀಲಿ 30, ಆ್ಯಶ್ಲಿ ಗಾರ್ಡನರ್ 42, ಎಲಿಸಾ ಪೆರಿ ಔಟಾಗದೆ 72, ಗ್ರೇಸ್ ಹ್ಯಾರಿಸ್ 27; ದೀಪ್ತಿ ಶರ್ಮಾ 35ಕ್ಕೆ 2, ರಾಧಾ ಯಾದವ್ 26ಕ್ಕೆ 1). ಭಾರತ: 20 ಓವರ್‌ಗಳಲ್ಲಿ 181 (ಶಫಾಲಿ ವರ್ಮಾ 20, ಹರ್ಮನ್‌ಪ್ರೀತ್ ಕೌರ್ 46, ದೇವಿಕಾ ವೈದ್ಯ 32, ರಿಚಾ ಘೋಷ್ 40; ಡಾರ್ಸಿ ಬ್ರೌನ್ 33ಕ್ಕೆ 1, ಆ್ಯಶ್ಲಿ ಗಾರ್ಡನರ್ 20ಕ್ಕೆ 2, ಅಲಾನಾ ಕಿಂಗ್ 23ಕ್ಕೆ 2). ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ ಏಳು ರನ್‌ಗಳ ಜಯ

ಆಯುಷ್, ನಿಯೋಲ್ ಮಿಂಚು

ಪಿಯು ವಿದ್ಯಾರ್ಥಿಗಳ ರಾಜ್ಯಮಟ್ಟದ ಅಥ್ಲೆಟಿಕ್ ಕೂಟ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಕೆನರಾ ಕಾಲೇಜಿನ ಆಯುಷ್ ಆರ್.ದೇವಾಡಿಗ, ಪಿಯು ವಿದ್ಯಾರ್ಥಿಗಳ ರಾಜ್ಯಮಟ್ಟದ ಅಥ್ಲೆಟಿಕ್ ಕೂಟದ ವೇಗದ ಓಟಗಾರ ಎನಿಸಿಕೊಂಡರು. ಬಾಲಕಿಯರ ವಿಭಾಗದಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ನಿಯೋಲ್ ಅನಾ ಕಾರ್ನಿಲೊ ಮೊದಲಿಗರಾದರು.

ಮಂಗಳಾ ಕ್ರೀಡಾಂಗಣದಲ್ಲಿ ಶನಿವಾರ ಆರಂಭಗೊಂಡ ಕೂಟದ 100 ಮೀಟರ್ಸ್ ಓಟದಲ್ಲಿ ಗುರಿ ಮುಟ್ಟಲು ಆಯುಷ್ 11.40 ಸೆಕೆಂಡು ತೆಗೆದುಕೊಂಡರು.

ಬಾಲಕಿಯರ ವಿಭಾಗದಲ್ಲಿ ಅಂಕಿತಾ ದೇವಾಡಿಗ ಮತ್ತು ಮೈಸೂರಿನ ಹರ್ಷಿತಾ ಎಚ್.ಎಸ್ ಅವರನ್ನು ಹಿಂದಿಕ್ಕಿ ನಿಯೋಲ್ 12.53 ಸೆಕೆಂಡುಗಳ ಸಾಧನೆ ಮಾಡಿದರು.

ಫಲಿತಾಂಶಗಳು: ಬಾಲಕರ 100 ಮೀ ಓಟ: ಆಯುಷ್ ದೇವಾಡಿಗ (ದಕ್ಷಿಣ ಕನ್ನಡ)–1. ಕಾಲ: 11.40 ಸೆ, ಸುನಾಲ್ ಸುವರ್ಣ (ಉಡುಪಿ)–2, ಯತಿನ್ ನಾಯಕ್ (ಉಡುಪಿ)–3; 800 ಮೀ ಓಟ: ರಮೇಶ್ (ಕೊಡಗು)–1. ಕಾಲ: 1 ನಿ 59.23 ಸೆ, ಭುವನ್ ಪೂಜಾರಿ (ಬೆಳಗಾವಿ)–2, ಲೋಕೇಶ್ (ಬೆಂಗಳೂರು ದಕ್ಷಿಣ)–3; 3000 ಮೀ ಓಟ: ರೋಹನ್ ಬೇಕಲ್ (ಬೆಂಗಳೂರು ದಕ್ಷಿಣ)–1. ಕಾಲ: 9 ನಿ 5.46 ಸೆ, ಹನುಮಂತ ವರಾಲ್ಯಗೋಳ (ಬಾಗಲಕೋಟೆ)–2, ಗಣಪತಿ ಎಲ್ಲಪ್ಪ ಮಲಿಕ್ (ದಕ್ಷಿಣ ಕನ್ನಡ)–3; 400 ಮೀ ಹರ್ಡಲ್ಸ್: ದರ್ಶನ್ (ಉಡುಪಿ)–1. ಕಾಲ: 55.78 ಸೆ, ಧ್ರುವ ಸೂರ್ಯ (ಬೆಂಗಳೂರು ಉತ್ತರ)–2, ತೇಜಸ್ (ಉಡುಪಿ)–3; ಹೈಜಂಪ್: ಶಶಾಂಕ್ ಬಿ (ಉಡುಪಿ)–1. ಎತ್ತರ: 1.93 ಮೀ, ಜಾಗೃತ್ ಇ.ಇ (ಬೆಂಗಳೂರು ದಕ್ಷಿಣ)–2, ಆದರ್ಶ್ ಶೆಟ್ಟಿ (ದಕ್ಷಿಣ ಕನ್ನಡ)–3; ಟ್ರಿಪಲ್ ಜಂಪ್: ಪುನೀತ್ ಎಸ್ (ಕೊಡಗು)–1. ಅಂತರ: 13.32 ಮೀ, ಶಿವಲಾರ್ ಎಸ್ (ಕೋಲಾರ)–2, ಮಂಜುನಾಥ ಶ್ರೀಶೈಲ (ದಕ್ಷಿಣ ಕನ್ನಡ)–3; ಶಾಟ್ ಪಟ್: ಗಣೇಶ್ ನಾಗಪ್ಪ ಗೌಡ (ದಕ್ಷಿಣ ಕನ್ನಡ)–1. ದೂರ: 15.57 ಮೀ, ಗಣೇಶ್ ಹಣಮಂತ (ದಕ್ಷಿಣ ಕನ್ನಡ)–2, ಅಜಿಯಾನ್ ವರೇಮಣಿ (ಧಾರವಾಡ)–3; ಜಾವೆಲಿನ್: ಶಶಾಂಕ್ ಪಾಟೀಲ್ (ಬೆಳಗಾವಿ)–1. ದೂರ: 61.32 ಮೀ, ಸ್ವರೂಪ್ ಎಚ್.ಎ (ದಕ್ಷಿಣ ಕನ್ನಡ)–2, ಕುಲದೀಪ್ (ಉಡುಪಿ)–3.

ಬಾಲಕಿಯರ 100 ಮೀ ಓಟ: ನಿಯೋಲ್ ಅನಾ ಕಾರ್ನಿಲೊ (ಬೆಂ. ಉತ್ತರ)–1. ಕಾಲ: 12.53 ಸೆ, ಅಂಕಿತಾ ದೇವಾಡಿಗ (ಉಡುಪಿ)–2, ಹರ್ಷಿತಾ (ಮೈಸೂರು)–3; 800 ಮೀ ಓಟ: ಪ್ರಿಯಾಂಕಾ ಮಡಿವಾಳಪ್ಪ (ಬೆಂಗಳೂರು ಉತ್ತರ)–1. ಕಾಲ: 2 ನಿ 26.21 ಸೆ, ಖುಶುಶ್ರೀ (ದಕ್ಷಿಣ ಕನ್ನಡ)–2, ಶ್ರೀ ರಕ್ಷಾ (ಕೊಡಗು)–3; 3000 ಮೀ ಓಟ: ಪ್ರತಿಭಾ (ದಕ್ಷಿಣ ಕನ್ನಡ)–1. ಕಾಲ: 10 ನಿ 56.32 ಸೆ, ನಂದಿನಿ ಜಿ (ಉಡುಪಿ)–2, ಮಹಾಲಕ್ಷ್ಮಿ ಬಸಕಳಿ (ಬಾಗಲಕೋಟೆ)–3; 400 ಮೀ ಹರ್ಡಲ್ಸ್: ಅಮೂಲ್ಯ ಬಿ.ಎಂ (ದಕ್ಷಿಣ ಕನ್ನಡ)–1. ಕಾಲ: 1 ನಿ 6.2 ಸೆ, ಸಹನಾ ಜಿ.ಎಸ್ (ಕೊಡಗು)–2, ವೈಭವಿ ಭುಡರುಕ (ಬೆಳಗಾವಿ)–3; ಹೈಜಂಪ್: ಪಾವನ ಎನ್ (ಬೆಂಗಳೂರು ಉತ್ತರ)–1. ಎತ್ತರ: 1.60 ಮೀ, ಸಂಜನಾ (ದ.ಕನ್ನಡ)–2, ಲಿನ್ಯಾ ಮೇರಿ (ಮೈಸೂರು)–3; ಡಿಸ್ಕಸ್ ಥ್ರೋ: ಪ್ರಾಂಜಲಿ ಎ (ದಕ್ಷಿಣ ಕನ್ನಡ)–1. ದೂರ: 39.85 ಮೀ, ರೆಯಾ ಎಸ್.ಕೆ (ಮೈಸೂರು)–2, ರೋಷನಿ (ದಕ್ಷಿಣಕನ್ನಡ)–3.

ಹಾಕಿ: ಭಾರತ ಮಹಿಳಾ ತಂಡ ಚಾಂಪಿಯನ್

ವೆಲೆನ್ಸಿಯಾ, ಸ್ಪೇನ್ (ಪಿಟಿಐ): ಭಾರತ ತಂಡವು ಮೊದಲ ಬಾರಿ ನಡೆದ ಎಫ್‌ಐಎಚ್ ಮಹಿಳಾ ನೇಷನ್ಸ್ ಕಪ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಶನಿವಾರ ಇಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಭಾರತದ ಮಹಿಳೆಯರು 1–0ಯಿಂದ ಆತಿಥೇಯ ಸ್ಪೇನ್ ತಂಡವನ್ನು ಸೋಲಿಸಿದರು.

ಆರನೇ ನಿಮಿಷದಲ್ಲಿ ದೊರೆತ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗುರ್ಜಿತ್ ಕೌರ್ ಭಾರತ ತಂಡದ ಪರ ಗೋಲು ಗಳಿಸಿದರು. ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತ ಭಾರತ, ಈ ಟೂರ್ನಿಯಲ್ಲಿ ಸತತ ಐದು ಪಂದ್ಯಗಳನ್ನು ಗೆದ್ದಿತು.

ಟ್ರೋಫಿ ಗೆಲುವಿನೊಂದಿಗೆ ಭಾರತ ತಂಡವು 2023–24ರ ಎಫ್‌ಐಎಚ್ ಮಹಿಳಾ ಪ್ರೊ ಲೀಗ್‌ಗೆ ಬಡ್ತಿ ಪಡೆಯಿತು.

ನಗದು ಬಹುಮಾನ: ಚಾಂಪಿಯನ್ ಆದ ತಂಡದ ಆಟಗಾರ್ತಿಯರಿಗೆ ಹಾಕಿ ಇಂಡಿಯಾ ತಲಾ ₹ 2 ಲಕ್ಷ ಮತ್ತು ನೆರವು ಸಿಬ್ಬಂದಿಗೆ ₹ 1 ಲಕ್ಷ ಬಹುಮಾನ ಪ್ರಕಟಿಸಿದೆ.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹55,702
ಒಡವೆ ಚಿನ್ನ 1ಗ್ರಾಂ	₹5,124
ಬೆಳ್ಳಿ ಕೆ.ಜಿಗೆ	₹68,200

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹540
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹540

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1560 (1560)
ಸೋಯಾ (ರಿಫೈನ್ಡ್)	₹1235 (1232)
ಸೂರ್ಯಕಾಂತಿ (ರಿಫೈನ್ಡ್)	₹1320 (1320)
ಪಾಮೋಲಿನ್	₹935 (935)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹300-660
ದ್ವಿತಳಿ (ಬಿ.ವಿ)	₹341-866

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-2200
ಮಧ್ಯಮ	₹1000-1500
ಸಣ್ಣ	₹500-1000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್–4	₹137
ಆರ್‌ಎಸ್‌ಎಸ್–5	₹129
ಗುಡ್ ಲಾಟ್	₹122

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಪುತ್ತೂರು	₹5000-9500
ತಿಪಟೂರು	₹11400-12100
ಕೆ.ಆರ್. ಪೇಟೆ	---

ನಿಗೂಢ ಸಾವು: ಪತಿಯ ವಿರುದ್ಧವೇ ಆರೋಪ

ಕೋಟಯಂ (ಪಿಟಿಐ): ಬ್ರಿಟನ್‌ನಲ್ಲಿ ಕೇರಳದ ದಾದಿ ಮತ್ತು ಆಕೆಯ ಇಬ್ಬರು ಮಕ್ಕಳು ಸಾವನ್ನಪ್ಪಿದ್ದು, ಪತಿಯ ವಿರುದ್ಧವೇ ಆಕೆಯ ಪೋಷಕರು ಆರೋಪ ಮಾಡಿದ್ದಾರೆ.

ದಾದಿ ಅಂಜು ಅಶೋಕ್‌ಗೆ ಹಿಂದೆಯೂ ಪತಿ ಹಲ್ಲೆ ನಡೆಸಿದ್ದ ಎಂದು ಕೇರಳದ ವೈಕಂನಲ್ಲಿರುವ ಆಕೆಯ ಪೋಷಕರು ಶನಿವಾರ ಆರೋಪಿಸಿದ್ದಾರೆ.

ಈ ಮೊದಲು ಸೌದಿ ಅರೇಬಿಯಾದಲ್ಲಿದ್ದಾಗಲೂ ಅಂಜು ಮತ್ತು ಮಕ್ಕಳಿಕೆ ಆಕೆಯ ಪತಿ ಥಳಿಸುತ್ತಿದ್ದ ವಿಚಾರವನ್ನೂ ಅವರು ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ. ಹಗ್ಗ ಅಥವಾ ಬಟ್ಟೆಯಿಂದ ಅಂಜು ಅವರ ಕುತ್ತಿಗೆಗೆ ಬಿಗಿದು ಕೊಲೆ ಮಾಡಲಾಗಿದೆ ಎಂದು ಅಲ್ಲಿನ ಪೊಲೀಸರು ತಿಳಿಸಿರುವುದಾಗಿಯೂ ಅವರು ಹೇಳಿದ್ದಾರೆ.

35 ವರ್ಷದ ಅಂಜು, ಆಕೆಯ ಆರು ವರ್ಷದ ಮಗ ಮತ್ತು 4 ವರ್ಷದ ಮಗಳು ತೀವ್ರವಾಗಿ ಗಾಯಗೊಂಡಿದ್ದ ಸ್ಥಿತಿಯಲ್ಲಿ ಇಂಗ್ಲೆಂಡ್‌ನ ನಾರ್ಥಾಂಪ್ಟನ್ ಪ್ರದೇಶದ ಕೆಟ್ಟರಿಂಗ್‌ನಲ್ಲಿರುವ ಮನೆಯಲ್ಲಿ ಗುರುವಾರ ಪತ್ತೆಯಾಗಿದ್ದರು. ಅಂಜು ಮನೆಯಲ್ಲೇ ಮೃತಪಟ್ಟರೆ, ಮಕ್ಕಳು ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ ಎಂದು ಅಲ್ಲಿನ ಪೊಲೀಸರು ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿ ಅಂಜು ಪತಿ ಸಾಜು ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಕುದುರೆ ರೇಸ್, ಕ್ಯಾಸಿನೊಗೆ ತೆರಿಗೆ; ಚರ್ಚೆಯೇ ನಡೆದಿಲ್ಲ

ನವದೆಹಲಿ (ಪಿಟಿಐ): ಕ್ಯಾಸಿನೊ, ಕುದುರೆ ರೇಸ್ ಮತ್ತು ಆನ್‌ಲೈನ್ ಗೇಮಿಂಗ್ ಸೇವೆಗಳಿಗೆ ಜಿಎಸ್‌ಟಿ ವಿಧಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆಯಲಿಲ್ಲ ಎಂದು ರೆವಿನ್ಯು ಕಾರ್ಯದರ್ಶಿ ಸಂಜಯ್ ಮಲ್ಹೋತ್ರಾ ತಿಳಿಸಿದ್ದಾರೆ.

ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ ನೇತೃತ್ವದ ಸಮಿತಿಯು ಕೆಲವು ದಿನಗಳ ಹಿಂದೆಯಷ್ಟೇ ತನ್ನ ವರದಿ ಸಲ್ಲಿಸಿದೆ. ಹೀಗಾಗಿ ಆ ವರದಿಯು ಇನ್ನೂ ಮಂಡಳಿಯ ಸದಸ್ಯರ ಕೈಸೇರಿಲ್ಲ ಎಂದು ಅವರು ಹೇಳಿದ್ದಾರೆ. ಆನ್‌ಲೈನ್ ಆಟಗಳಿಗೆ ಶೇ 28ರಷ್ಟು ತೆರಿಗೆ ವಿಧಿಸುವಂತೆ ಸಮಿತಿಯು ಶಿಫಾರಸು ಮಾಡಿದೆ.

ಸಮಯದ ಅಭಾವ: ಸಮಯದ ಅಭಾವ ಇರುವುದರಿಂದ ಮಂಡಳಿಯು 15 ವಿಷಯಗಳಲ್ಲಿ ಕೇವಲ ಎಂಟು ವಿಷಯಗಳನ್ನು ಮಾತ್ರವೇ ಚರ್ಚೆಗೆ ಪರಿಗಣಿಸಿದೆ. ಹೀಗಾಗಿ ಪಾನ್ ಮಸಾಲಾ ಮತ್ತು ಗುಟ್ಕಾ ವಹಿವಾಟಿನಲ್ಲಿ ತೆರಿಗೆ ವಂಚನೆ ತಡೆಯಲು ವ್ಯವಸ್ಥೆ ರೂಪಿಸುವುದು ಮತ್ತು ಜಿಎಸ್‌ಟಿ ಮೇಲ್ಮನವಿ ನ್ಯಾಯಮಂಡಳಿ ರಚನೆ ಮಾಡುವ ಕುರಿತಾದ ವಿಷಯಗಳು ಸಭೆಯಲ್ಲಿ ಚರ್ಚೆಗೆ ಬರಲಿಲ್ಲ.

ಜಿಎಸ್‌ಟಿ ವ್ಯವಸ್ಥೆಯಲ್ಲಿ ತೆರಿಗೆ ಪಾವತಿದಾರರ ವ್ಯಾಪ್ತಿ ವಿಸ್ತರಿಸುವ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೆಲಸ ಮಾಡುತ್ತಿವೆ. ಜಿಎಸ್‌ಟಿ ಅಡಿ ನೋಂದಣಿ ಆಗದೇ ಇರುವ ಉದ್ದಿಮೆ ವಹಿವಾಟುಗಳನ್ನು ಗುರುತಿಸಲು ಡಿಸ್ಕಾಂ ಜೊತೆ ಮಾಹಿತಿ ಹಂಚಿಕೊಳ್ಳುವ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಮಧ್ಯಪ್ರದೇಶದಲ್ಲಿ ಜಾರಿಗೊಳಿಸಲಾಗಿದೆ. ಆಸ್ತಿ ತೆರಿಗೆ ವಿವರಗಳನ್ನೂ ಸಂಗ್ರಹ ಮಾಡಲಾಗುತ್ತಿದೆ ಎಂದು ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್‌ನ ಕೇಂದ್ರೀಯ ಮಂಡಳಿ (ಸಿಬಿಐಸಿ) ಹೇಳಿದೆ.

ಅಂಕಿ–ಅಂಶಗಳು

₹1.40 ಲಕ್ಷ ಕೋಟಿ
ಪ್ರತಿ ತಿಂಗಳು ಸಂಗ್ರಹ ಆಗುತ್ತಿರುವ ಜಿಎಸ್‌ಟಿಯ ಸರಾಸರಿ ಮೊತ್ತ

1.40 ಕೋಟಿ
ಜಿಎಸ್‌ಟಿ ಅಡಿ ನೋಂದಾಯಿಸಿಕೊಂಡಿರುವ ತೆರಿಗೆದಾರರ ಸಂಖ್ಯೆ

ಎಸ್‌ಯುವಿ ವ್ಯಾಖ್ಯೆ: ನಿರ್ಮಲಾ ಸ್ಪಷ್ಟನೆ

ಎಸ್‌ಯುವಿಗೆ (ಸ್ಪೋರ್ಟ್ಸ್ ಯುಟಿಲಿಟಿ ವೆಹಿಕಲ್) ಶೇ 22ರಷ್ಟು ಗರಿಷ್ಠ ಪ್ರಮಾಣದ ಪರಿಹಾರ ಸೆಸ್ ನಿಗದಿಪಡಿಸಿರುವುದಕ್ಕೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸ್ಪಷ್ಟನೆ ನೀಡಿದ್ದಾರೆ. ಎಂಜಿನ್ ಸಾಮರ್ಥ್ಯವು 1,500 ಸಿಸಿಗಿಂತಲೂ ಹೆಚ್ಚು ಇರುವ, 4 ಸಾವಿರ ಎಂಎಂಗಿಂತಲೂ ಅಧಿಕ ಉದ್ದ ಇರುವ ಹಾಗೂ 170 ಎಂಎಂ ಮತ್ತು ಅದಕ್ಕೂ ಹೆಚ್ಚು ಗ್ರೌಂಡ್ ಕ್ಲಿಯರೆನ್ಸ್ ಹೊಂದಿರುವ ವಾಹನವನ್ನು ಎಸ್‌ಯುವಿ ಎಂದು ಪರಿಗಣಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

ಸೆಡಾನ್ ಅನ್ನೂ ಎಸ್‌ಯುವಿ ವಿಭಾಗಕ್ಕೆ ಸೇರಿಸಬಹುದೇ ಎಂದು ಕೆಲವು ರಾಜ್ಯಗಳು ಕೇಳಿವೆ. ಹೀಗಾಗಿ ಎಂಯುವಿ (ಮಲ್ಟಿ ಯುಟಿಲಿಟಿ ವೆಹಿಕಲ್) ಬಗ್ಗೆ ಚರ್ಚೆ ನಡೆಯಿತು. ಎಂಯುವಿಗೆ ವ್ಯಾಖ್ಯೆ ನೀಡುವಂತೆಯೂ ರಾಜ್ಯಗಳು ಸಲಹೆ ನೀಡಿವೆ. ಬೇರೆ ಯಾವ ವಾಹನವನ್ನು ಶೇ 22ರ ಸೆಸ್ ವ್ಯಾಪ್ತಿಗೆ ಸೇರಿಸಬಹುದು ಎಂದು ರಾಜ್ಯ ತೆರಿಗೆ ಅಧಿಕಾರಿಗಳು ಪರಿಶೀಲಿಸಲಿದ್ದಾರೆ ಎಂದು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

17–12–2022

ಜಾವಾ 70/80(ಹೊಸ)	11850-11900
ಜಾವಾ 80/90(ಹೊಸ)	11550-11600
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1570 (1570)
ಒಂದು ವಾರದ ಡೆಲಿವರಿ	1565 (1565)
ಸೋಯಾ ಕಚ್ಚಾ	1155 (1155)
ಪಾಮ್ ವಾರದ ಡೆಲಿವರಿ	933 (933)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
53,950 (53,800)
ಬೆಳ್ಳಿ ಕೆ.ಜಿ 66,450 (66,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೊಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	490
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-54500
ಚಿತ್ರದುರ್ಗ	
ಅಪಿ	44639-45069
ಬೆಟ್ಟೆ	32119-32599
ಕೆಂಪುಗೋಟು	28100-28500
ರಾಶಿ	44129-44559
ಕಾರ್ಕಳ	
ಹೊಸತು	30000-37500
ಹಳತು	40000-49000
ಮಂಗಳೂರು	
ಹಳತು	52500-54500
ಹೊಸತು	31000-39000
ಕೋಕ	22000-27000
ಕುಂದಾಪುರ	
ಹಳೆಚಾಲಿ	40000-49000
ಹೊಸಚಾಲಿ	30000-37500
ಪುತ್ತೂರು	
ಕೋಕ	11000-26000
ಹೊಸತು	32000-38000
ಶಿರಸಿ	
ಬೆಟ್ಟೆ	36899-38899
ಬಿಳಿಗೋಟು	20899-34700
ಚಾಲಿ	28499-40300
ಕೆಂಪುಗೋಟು	24709-30169
ರಾಶಿ	37669-43851

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13100	13100	13200	168.15 ಸೆಂಟ್ಸ್
ಎಸಿ	6440	6700	6200	
ಆರ್‌ಪಿ	8000	8500	8500	ಲಂಡನ್
ಆರ್‌ಸಿ	4450	4200	4200	1915 ಡಾಲರ್ಸ್

ಮನೆಗೆ ಬೆಂಕಿ: 6 ಮಂದಿ ಸಜೀವ ದಹನ

ಕರೀಂನಗರ, ತೆಲಂಗಾಣ (ಪಿಟಿಐ): ಮಂಚೇರಿಯಲ್ ಜಿಲ್ಲೆಯ ವೆಂಕಟಾಪುರ ಗ್ರಾಮದ ಚಿಕ್ಕ ಹೆಂಚಿನ ಮನೆಯೊಂದಕ್ಕೆ ಶನಿವಾರ ಬೆಳಗಿನ ಜಾವ ಬೆಂಕಿ ಹೊತ್ತಿಕೊಂಡ ಪರಿಣಾಮ ಮನೆಯಲ್ಲಿ ಮಲಗಿದ್ದ ಇಬ್ಬರು ಮಕ್ಕಳು ಸೇರಿ ಆರು ಮಂದಿ ಸಜೀವ ದಹನಗೊಂಡಿದ್ದಾರೆ.

ಮೃತರಲ್ಲಿ ಒಬ್ಬರನ್ನು ಗ್ರಾಮ ಕಂದಾಯ ಸಹಾಯಕ ಮಾಸು ಶಿವಯ್ಯ (50) ಎಂದು ಗುರುತಿಸಲಾಗಿದೆ. ಅನುಮಾನಾಸ್ಪದವಾಗಿ ಮನೆಯಲ್ಲಿ ಬೆಂಕಿ ಹೊತ್ತಿಕೊಂಡಿದೆ. ತನಿಖೆಯ ಬಳಿಕವೇ ನಿಖರ ಕಾರಣ ತಿಳಿದು ಬರಬೇಕಿದೆ ಎಂದು ಡಿಸಿಪಿ ತಿಳಿಸಿದ್ದಾರೆ.

ಆರ್ಥಿಕ ಹಿಂಜರಿತದ ಭೀತಿ: ಬಡ್ಡಿದರ ಹೆಚ್ಚಳದ ಪರಿಣಾಮ

ಎಫ್‌ಐಐ: ಮುಂದುವರಿದ ಹೊರಹರಿವು

ಪ್ರಜಾವಾಣಿ ವಾರ್ತೆ



ಬೆಂಗಳೂರು: ದೇಶದ ಷೇರುಪೇಟೆಗಳಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಬಂಡವಾಳ ಹಿಂತೆಗೆತಕ್ಕೆ ಗಮನ ಹರಿಸಿದ್ದರೆ, ದೇಶಿ ಸಾಂಸ್ಥಿಕ ಹೂಡಿಕೆದಾರರು (ಡಿಐಐ) ಷೇರುಗಳನ್ನು ಖರೀದಿಸುತ್ತಿದ್ದಾರೆ.

ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಡಿಸೆಂಬರ್ ತಿಂಗಳಿನಲ್ಲಿ ಈವರೆಗೆ ದೇಶದ ಷೇರುಪೇಟೆಗಳಿಂದ ₹7,490 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ಇದೇ ವೇಳೆ ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 10,551 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಜಾಗತಿಕ ಆರ್ಥಿಕ ಹಿಂಜರಿತದ ಭೀತಿ, ಹಣದುಬ್ಬರದ ಏರಿಕೆ ಹಾಗೂ ವಿವಿಧ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ಹೆಚ್ಚಳ ಮಾಡುತ್ತಿರುವ ಕಾರಣಗಳಿಂದಾಗಿ ವಿದೇಶಿ ಹೂಡಿಕೆದಾರರು ಬಂಡವಾಳ ಹಿಂತೆಗೆತಕ್ಕೆ ಮುಂದಾಗಿದ್ದಾರೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಅಮೆರಿಕದಲ್ಲಿ ನವೆಂಬರ್ ತಿಂಗಳ ಚಿಲ್ಲರೆ ಹಣದುಬ್ಬರವು ಶೇ 7.1ಕ್ಕೆ ಇಳಿಕೆ ಕಂಡಿದೆ. ಹೀಗಾಗಿ ಫೆಡರಲ್ ರಿಸರ್ವ್ ಕಡಿಮೆ ಪ್ರಮಾಣದಲ್ಲಿ ಬಡ್ಡಿದರ ಹೆಚ್ಚಿಸಲಿದೆ ಎನ್ನುವ ನಿರೀಕ್ಷೆಯನ್ನು ಹೂಡಿಕೆದಾರರು ಹೊಂದಿದ್ದರು. ಆದರೆ, ಫೆಡರಲ್ ರಿಸರ್ವ್ ಶೇ 0.50ರಷ್ಟು ಬಡ್ಡಿದರ ಹೆಚ್ಚಳ ಮಾಡುವುದರ ಜೊತೆಗೆ ತನ್ನ ಬಿಗಿಯಾದ ಹಣಕಾಸು ನೀತಿಯನ್ನು ಮುಂದುವರಿಸುವುದಾಗಿಯೂ ಹೇಳಿದೆ. ಇದು ಹೂಡಿಕೆ ಚಟುವಟಿಕೆಯ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡಿತು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಪ್ರಜಾವಾಣಿಗೆ ತಿಳಿಸಿದರು.

ಜಾಗತಿಕ ಆರ್ಥಿಕತೆಯು ಹಿಂಜರಿತದ ಭೀತಿಯಲ್ಲಿ ಇರುವುದರಿಂದ ದೇಶದಲ್ಲಿ ಐ.ಟಿ. ಷೇರುಗಳು ಹೆಚ್ಚಿನ ನಷ್ಟ ಕಂಡಿವೆ. ಮುಂದಿನ ವಾರ ದೇಶದಲ್ಲಿ ಪ್ರಮುಖವಾದ ಯಾವುದೇ ವಿದ್ಯಮಾನಗಳು ಇಲ್ಲದೇ ಇರುವುದರಿಂದ ಜಾಗತಿಕ ವಿದ್ಯಮಾನಗಳು ಷೇರುಪೇಟೆಗಳ ವಹಿವಾಟಿನ ಮೇಲೆ ಪ್ರಭಾವ ಬೀರಲಿವೆ ಎಂದು ಅವರು ಹೇಳಿದರು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಮೌಲ್ಯವು ಇದೇ ರೀತಿಯಲ್ಲಿ ಹೆಚ್ಚಾಗುತ್ತಾ ಹೋದರೆ ಆಗ ಭಾರತದ ಕರೆನ್ಸಿಯು ಇನ್ನಷ್ಟು ಕುಸಿತ ಕಾಣುವ ಸಾಧ್ಯತೆ ಇದೆ. ಅಮೆರಿಕದ ಒಂದು ಡಾಲರ್‌ಗೆ ರೂಪಾಯಿಯು ₹ 84ರ ಮಟ್ಟವನ್ನೂ ತಲುಪಬಹುದು ಎಂದು ಅವರು ಹೇಳಿದರು.

ಇ–ಬಸ್ ತಯಾರಿಕೆ: ಸಾಲ ನೀಡಲು ಬ್ಯಾಂಕ್‌ಗಳ ಹಿಂದೇಟು



ನವದೆಹಲಿ (ರಾಯಿಟರ್ಸ್): ವಿದ್ಯುತ್ ಚಾಲಿತ ಬಸ್‌ಗಳನ್ನು ತಯಾರಿಸುವ ಕಂಪನಿಗಳಿಗೆ ಹಣಕಾಸಿನ ನೆರವು ಸಿಗದೆ ಇರುವುದೇ ಅವುಗಳ ಬೆಳವಣಿಗೆಗೆ ದೊಡ್ಡ ಸಮಸ್ಯೆ ಆಗಿದೆ. ಇದರಿಂದಾಗಿ ವಾಹನ ಮಾಲಿನ್ಯ ನಿಯಂತ್ರಣದ ಗುರಿ ಈಡೇರಿಕೆಗೆ ಅಡ್ಡಿಯಾಗುತ್ತಿದೆ ಎಂದು ಬ್ಯಾಂಕಿಂಗ್, ಉದ್ಯಮ ಮತ್ತು ಸರ್ಕಾರಿ ಮೂಲಗಳು ಹೇಳಿವೆ.

ರಾಜ್ಯ ಸಾರಿಗೆ ಸಂಸ್ಥೆಗಳಿಂದ ಸಾಲ ವಸೂಲಿ ಆಗುವ ಬಗ್ಗೆ ಅನುಮಾನ ಇರುವುದರಿಂದ ಭಾರತದ ಬ್ಯಾಂಕ್‌ಗಳು ಇ–ಬಸ್ ತಯಾರಿಕೆಗೆ ಸಾಲ ನೀಡಲು ಮುಂದಾಗುತ್ತಿಲ್ಲ ಎಂದು ಮೂಲಗಳು ತಿಳಿಸಿವೆ.

ಮುಂದಿನ ಐದರಿಂದ ಆರು ವರ್ಷಗಳಲ್ಲಿ 50 ಸಾವಿರ ಇ–ಬಸ್‌ಗಳು ಅಗತ್ಯ ಇದೆ. ಇವುಗಳ ಒಟ್ಟು ಮೌಲ್ಯ ₹99,300 ಕೋಟಿ ಆಗಲಿದೆ.

ಬಹಳಷ್ಟು ರಾಜ್ಯ ಸಾರಿಗೆ ಸಂಸ್ಥೆಗಳ ಹಣಕಾಸು ಸ್ಥಿತಿಯು ಉತ್ತಮವಾಗಿಲ್ಲ. ಹೀಗಾಗಿ ಇ–ಬಸ್ ತಯಾರಕರಿಗೆ ಸಾಲ ನೀಡುವುದು ಅಪಾಯ. ಏಕೆಂದರೆ ಸಾರಿಗೆ ಸಂಸ್ಥೆಗಳು ಪದೇ ಪದೇ ಕಡಿಮೆ ದರವನ್ನು ನಿಗದಿಪಡಿಸಬೇಕಾಗಿ ಬರುತ್ತಿದೆ ಎಂದು ಬ್ಯಾಂಕ್‌ನ ಹೆಸರು ಬಹಿರಂಗಪಡಿಸಲು ಬಯಸದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಜ್ಯ ಸಾರಿಗೆ ಸಂಸ್ಥೆಗಳು ಬಸ್ ಖರೀದಿಗಾಗಿ ಕಂಪನಿಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದಗಳು ಹೆಚ್ಚಿನ ಅಪಾಯ ಹೊಂದಿವೆ ಎಂದು ಬ್ಯಾಂಕ್‌ಗಳು ಪರಿಗಣಿಸುತ್ತವೆ. ಹೀಗಾಗಿ ಬಸ್ ತಯಾರಕರಿಗೆ ಪಾವತಿ ಭದ್ರತೆಯನ್ನು ಒದಗಿಸುವ ಅಗತ್ಯ ಇದೆ ಎಂದು ಇ–ಬಸ್ ತಯಾರಿಸುವ ಸ್ವಿಚ್ ಮೊಬಿಲಿಟಿಯ ಮುಖ್ಯ ಕಾರ್ಯನಿರ್ವಾಹಕ ಮಹೇಶ್ ಬಾಬು ಹೇಳಿದ್ದಾರೆ.

ಸಾಲ ಬಾಕಿ ಉಳಿಸಿಕೊಂಡಿರುವ ಉದಾಹರಣೆಗಳು ದೇಶದಲ್ಲಿ ಇಲ್ಲ. ಆದರೆ ಸಾಲ ಮರುಪಾವತಿ ವಿಳಂಬ ಆಗಿರುವುದಿದೆ ಎಂದು ಉತ್ತರ ಭಾರತದ ಸಾರಿಗೆ ಸಂಸ್ಥೆಯೊಂದರ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಒಂದು ಇ–ಬಸ್‌ನ ವೆಚ್ಚ ₹ 1 ಕೋಟಿ ಆಗುತ್ತದೆ. ಡೀಸೆಲ್ ಬಸ್‌ಗೆ ಹೋಲಿಸಿದರೆ ಇದು ಬಹಳ ಹೆಚ್ಚು. ಹೀಗಾಗಿ ಡೀಸೆಲ್ ಬಸ್‌ಗಳಿಗೆ ಸಾಲ ನೀಡುವುದು ಹೆಚ್ಚು ಸುರಕ್ಷಿತ. ಒಂದೊಮ್ಮೆ ಬಾಕಿ ಉಳಿಸಿಕೊಂಡರೆ, ಬಸ್‌ಗಳನ್ನು ಮುಟ್ಟುಗೋಲು ಹಾಕಿಕೊಂಡು ಮಾರಾಟ ಮಾಡಬಹುದು. ಆದರೆ, ಇ–ಬಸ್‌ಗಳಿಗೆ ಚಾರ್ಜಿಂಗ್ ಮತ್ತು ಇತರೆ ಮೂಲಸೌಕರ್ಯಗಳು ಅಗತ್ಯ. ಎಲ್ಲಾ ಕಡೆಗಳಲ್ಲಿಯೂ ಮೂಲಸೌಕರ್ಯಗಳು ಲಭ್ಯವಿಲ್ಲ ಎಂದು ಬ್ಯಾಂಕ್‌ನ ಅಧಿಕಾರಿಯೊಬ್ಬರು ಪರಿಸ್ಥಿತಿಯನ್ನು ವಿವರಿಸಿದ್ದಾರೆ.

ಇ–ಬಸ್‌ಗಳ ಬಳಕೆಗೆ ಉತ್ತೇಜನ ನೀಡುವ ಬೃಹತ್ ಕೈಗಾರಿಕೆಗಳ ಸಚಿವಾಲಯವು ಈ ಸಮಸ್ಯೆಗಳ ಕುರಿತು ಕೇಳಿದ ಪ್ರಶ್ನೆಗೆ ತಕ್ಷಣಕ್ಕೆ ಪ್ರತಿಕ್ರಿಯೆ ನೀಡಿಲ್ಲ.

ಇಂದು ಅಭಿವೃದ್ಧಿ ಯೋಜನೆಗಳಿಗೆ ಮೋದಿ ಚಾಲನೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣೆ ನಡೆಯಲಿರುವ ತ್ರಿಪುರಾ ಮತ್ತು ಮೇಘಾಲಯಕ್ಕೆ ಭಾನುವಾರ ಭೇಟಿ ನೀಡಿ ₹6,800 ಕೋಟಿಗೂ ಹೆಚ್ಚು ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ.

ಈಶಾನ್ಯ ಕೌನ್ಸಿಲ್‌ನ ಸುವರ್ಣ ಮಹೋತ್ಸವ ಸಂಭ್ರಮದಲ್ಲಿ ಭಾಗಿಯಾಗಲಿದ್ದಾರೆ. ಅಗರ್ತಲದಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆ ನಗರ ಮತ್ತು ಗ್ರಾಮೀಣ ಯೋಜನೆಯಡಿ ನಿರ್ಮಾಣಗೊಂಡಿರುವ ಎರಡು ಲಕ್ಷಕ್ಕೂ ಅಧಿಕ ಮನೆಗಳ ಗೃಹಪ್ರವೇಶಕ್ಕೆ ಚಾಲನೆ ನೀಡಲಿದ್ದಾರೆ ಎಂದು ಪ್ರಧಾನಮಂತ್ರಿ ಕಾರ್ಯಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಶಿಲ್ಲಾಂಗ್‌ನಲ್ಲಿ ನಡೆಯುವ ಸಾರ್ವಜನಿಕ ಕಾರ್ಯಕ್ರಮದಲ್ಲಿ ₹2,450 ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಲಿದ್ದಾರೆ. ಐಐಎಂನ ಹೊಸ ಕ್ಯಾಂಪಸ್, 320ಕ್ಕೂ ಹೆಚ್ಚು ಮೊಬೈಲ್ ಟವರ್, ಮೇಘಾಲಯದ ಅಣಬೆ ಅಭಿವೃದ್ಧಿ ಕೇಂದ್ರದಲ್ಲಿನ ಪ್ರಯೋಗಾಲಯ ಮತ್ತು ಜೇನು ಸಾಕಾಣಿಗೆ ಅಭಿವೃದ್ಧಿ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ.





ತವಾಂಗ್

ಕೊನೆಯ ಶಾಂಗ್ರಿ-ಲಾ



ಪದೇ ಪದೇ ಗಡಿ ತಂಟೆ ತೆಗೆಯುವ ಚೀನಾ ಇದೀಗ ತವಾಂಗ್ ಪ್ರದೇಶದಲ್ಲಿ ಮತ್ತೆ ಕಾಲು ಕೆದರಿ ಜಗಳಕ್ಕೆ ನಿಂತಿದೆ. ಹಿಮಾಚ್ಛಾದಿತ ನೀಲಿ ಶಿಖರಗಳ ನಡುವಿನ ಈ ಪಟ್ಟಣ ಭಾರತದ ಹೆಮ್ಮೆಯ ತಾಣ. ಹಿಮಾಲಯದ ಈ ಮುದ್ದಿನ ಮಗಳು ಹೇಗಿದ್ದಾಳೆ ಗೊತ್ತೆ? ತವಾಂಗ್‌ನಲ್ಲಿ ಒಮ್ಮೆ ಸುತ್ತಾಡಿದರೆ ಚೀನಾಕ್ಕೆ ಏಕೆ ಈ ಊರಿನ ಮೇಲೆ ಕಣ್ಣು ಎನ್ನುವುದು ಗೊತ್ತಾಗುತ್ತದೆ...

ಎಂ.ವೆಂಕಟಸ್ವಾಮಿ

ಹಿಮಾಲಯ ಪರ್ವತಗಳ ಮಧ್ಯೆ ಚೀನಾ ಗಡಿಯಲ್ಲಿರುವ ತವಾಂಗ್ ಪಟ್ಟಣ ಪ್ರಾಚೀನ ಬೌದ್ಧಾಶ್ರಮಗಳ ಒಂದು ಸುಂದರ ನಗರ. ಪಶ್ಚಿಮಕ್ಕೆ ಭೂತಾನ್, ಉತ್ತರಕ್ಕೆ ಚೀನಾ (1959ರವರೆಗೂ ಟಿಬೆಟ್) ಪೂರ್ವಕ್ಕೆ ಮ್ಯಾನ್ಮಾರ್ ದೇಶಗಳು ಈ ಪಟ್ಟಣವನ್ನು ಸುತ್ತುವರಿದಿವೆ. ಸಮುದ್ರ ಮಟ್ಟದಿಂದ ಹತ್ತು ಸಾವಿರ ಅಡಿಗಳಷ್ಟು ಎತ್ತರದಲ್ಲಿ ಹರಡಿಕೊಂಡಿರುವ ಈ ಪಟ್ಟಣದ ಸುತ್ತಲೂ ಸದಾ ಹಿಮಾಚ್ಛಾದಿತ ನೀಲಿ ಶಿಖರಗಳು ಮುತ್ತಿಗೆ ಹಾಕಿರುತ್ತವೆ.

ಬಹಳ ವರ್ಷಗಳಿಂದಲೂ ತವಾಂಗ್ ನೋಡುವ ಹಂಬಲವಿದ್ದ ನಾನು, ಶಿಲ್ಲಾಂಗ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ಒಂದು ದಿನ ಹಳೆ ಫಿರ್ಘ್ಲೊ ಎಂಜಿನ್ ಜೀಪ್‌ನಲ್ಲಿ ಸಹೋದ್ಯೋಗಿಯೊಬ್ಬರ ಜೊತೆಗೆ ಹೊರಟುಬಿಟ್ಟೆ. ಗುವಾಹಟಿಯಿಂದ ತವಾಂಗ್‌ಗೆ ಹೆಲಿಕಾಪ್ಟರ್ ಸಂಪರ್ಕವಿದ್ದರೂ ರಸ್ತೆಯ ಮೂಲಕ ಹಿಮಾಲಯ ಪರ್ವತಗಳ ಸೊಬಗನ್ನು ಸವಿಯಬೇಕಾಗಿತ್ತು. ತವಾಂಗ್‌ಗೆ ಹೋಗುವ ರಸ್ತೆಯನ್ನು ತೆರೆಯುವುದೇ ವರ್ಷಕ್ಕೆ 3-4 ತಿಂಗಳು ಮಾತ್ರ. ಉಳಿದ ಎಂಟು ತಿಂಗಳು ಮಳೆ ಮತ್ತು ಹಿಮಪಾತದ ಕಾರಣದಿಂದಾಗಿ ರಸ್ತೆಯನ್ನು ಮುಚ್ಚಿರಲಾಗುತ್ತದೆ.

ಮೇಘಾಲಯದ ರಾಜಧಾನಿ ಶಿಲ್ಲಾಂಗ್‌ನಿಂದ ಗುವಾಹಟಿ ಮೂಲಕ ನಮ್ಮ ಯಾನ. ಬ್ರಹ್ಮಪುತ್ರ ನದಿಯನ್ನು ದಾಟಿ 650 ಕಿ.ಮೀ. ದೂರದ ಭಯಂಕರ-ಬೀಭತ್ಸ ಮತ್ತು ದುರ್ಗಮ ಪರ್ವತಗಳ ರಸ್ತೆಯಲ್ಲಿ ಎರಡು ದಿನ ಪ್ರಯಾಣ ಮಾಡಿ, ಕತ್ತಲಲ್ಲಿ ತವಾಂಗ್ ತಲುಪಿದೆವು. ಬೆಳಗಿನ ಜಾವ, ಮದ್ದಳೆ ಸದ್ದು ಮಧುರವಾಗಿ ಕೇಳಿಸತೊಡಗಿತು. ಕನಸೋ ನನಸೋ ಸ್ವಲ್ಪ ಹೊತ್ತು ಗೊತ್ತಾಗಲಿಲ್ಲ. ಆದರೆ, ಕಿವಿಗಳಿಗೆ ಮಧುರವಾದ ಮದ್ದಳೆ ಸದ್ದು ಕೇಳಿಸುತ್ತಿತ್ತು. ಕಣ್ಣುಬಿಚ್ಚಿ ಕಿಟಕಿಗಳ ಕಡೆಗೆ ನೋಡಿದಾಗ ಬೆಳಕು ಮೂಡಿತ್ತು. ಗೋಡೆಯಲ್ಲಿದ್ದ ಗಡಿಯಾರ ಇನ್ನೂ 4:15 ಗಂಟೆ ತೋರಿಸುತ್ತಿತ್ತು. ಅರುಣ ಕಿರಣಗಳು ಮೊದಲಿಗೆ ಬೀಳುವುದು ಈಶಾನ್ಯ ಭಾರತದ ಅರುಣಾಚಲ ಪರ್ವತಗಳ ಮೇಲೆ.

ಬೇಗನೇ ಬಿಸಿನೀರು ಸ್ನಾನ ಮಾಡಿ ತವಾಂಗ್ ಬೌದ್ಧಾಶ್ರಮ ತಲುಪಿದೆವು. ಕೆಳಗೆ ಇಳಿಜಾರಿನಲ್ಲಿ ನಾಲ್ಕಾರು ಕಣಿವೆಗಳ ಮೇಲೆಲ್ಲ ಬೋಗುಣಿ ಆಕಾರದಲ್ಲಿ ಹರಡಿಕೊಂಡಿದ್ದ ತವಾಂಗ್ ಪಟ್ಟಣದ ಸುತ್ತಲೂ ಎತ್ತರೆತ್ತರ ನೀಲಿ-ಹಸಿರುಮಿಶ್ರಿತ ಪರ್ವತಶ್ರೇಣಿಗಳು. ತವಾಂಗ್ ಪಟ್ಟಣದ ಸುತ್ತಲಿನ ಪ್ರದೇಶ ಬೃಹತ್ ಗಾತ್ರದ ಕಮಲದಂತೆ ರೂಪುಗೊಂಡಿದ್ದು, ಸುತ್ತಲೂ ಹಿಮಾಚ್ಛಾದಿತ ಪರ್ವತಗಳು ದೃಷ್ಟಿ ಹಾಯುವಷ್ಟು ದೂರ ಹಾಸಿಕೊಂಡಿದ್ದವು.

ಇದೆಲ್ಲವನ್ನು ಎಷ್ಟೋ ವರ್ಷಗಳ ಹಿಂದೆ ನೋಡಿದ್ದ, ಬುಡಕಟ್ಟುಗಳ ಕಥೆಗಾರ ಡಾ. ವೆರಿಯರ್ ಎಲ್ವಿನ್ 'ನೇಫಾದಲ್ಲಿ (ನಾರ್ಥ್ ಈಸ್ಟರ್ನ್ ಫ್ರಾಂಟಿಯರ್) ಸ್ವರ್ಗವೆಂದರೆ ತವಾಂಗ್' ಎಂದು ಉದ್ಗರಿಸಿದ್ದ. ಇದನ್ನು The hidden paradise of last Shangri-La ಎಂದೂ ಕರೆಯುತ್ತಾರೆ. ಹಿಮಾಲಯದ ಮಡಿಲಲ್ಲಿರುವ ತವಾಂಗ್ ಮತ್ತು ಅದರ ಸುತ್ತಮುತ್ತಲಿರುವ ಪುರಾತನ ದೇವಾಲಯಗಳು, ಸ್ತೂಪಗಳು, ನದಿ ಸರೋವರಗಳು, ಹಿಮಾಚ್ಛಾದಿತ ಪರ್ವತಮಾಲೆಗಳು ನೋಡುಗರ ಮನಸೂರೆಗೊಳ್ಳುತ್ತವೆ. ಬೇಸಿಗೆ ಕಾಲದಲ್ಲಿ ಎಲ್ಲಿ ನೋಡಿದರೂ ಬಣ್ಣ ಬಣ್ಣದ ಹೂವಿನ ಹಾಸಿಗೆ ಕಂಗೊಳಿಸುತ್ತದೆ.

ಏಳನೇ ಶತಮಾನದಲ್ಲಿ ಈ ಪ್ರದೇಶವನ್ನು ಕಾಲಾವಾಗ್ಪೂ ಎಂಬ ರಾಜ ಆಳುತ್ತಿದ್ದನೆಂದು 'ಕೊಂಡೊ ಡ್ರೊವಾ ಸಂಗ್ಮೊ'ನ ಆತ್ಮಚರಿತ್ರೆಯಲ್ಲಿ ದಾಖಲಾಗಿದೆ. ತವಾಂಗ್ ಆಶ್ರಮ ಇರುವ ಗುಡ್ಡದ ಎದುರಿಗಿರುವ ತಪ್ಪಲಿನಲ್ಲಿ ದಮ್ಸೆ ಲೊಡೆ ಎಂಬ ಋಷಿ ತನ್ನ ಪತ್ನಿ ದಮ್ಸೆ ಜೆಮೆಳ ಜೊತೆಗೆ ವಾಸಿಸುತ್ತಿದ್ದನಂತೆ. ಮುಂದಿನ ದಿನಗಳಲ್ಲಿ ಈ ಪ್ರದೇಶ ತವಾಂಗ್ ಎಂದು ಖ್ಯಾತಿ ಪಡೆದು ಪ್ರಖ್ಯಾತ ಬೌದ್ಧರ ಯಾತ್ರಾ ಸ್ಥಳವಾಯಿತು. ಇದನ್ನು 'ಗೋಲ್ಡನ್ ನಾಮ್ಗಿಲ್ ಲಾಟ್ಸೆ' ಎಂದೂ ಕರೆಯುತ್ತಾರೆ. ಐದು ಶತಮಾನಗಳಷ್ಟು ಪುರಾತನವಾದ ಇಲ್ಲಿನ ಆಶ್ರಮ 17 ಗೋಂಪಾಗಳನ್ನು ನಡೆಸುತ್ತದೆ.

ತವಾಂಗ್‌ನ 'ಗೋಲ್ಡನ್ ಲಾಟ್ಸೆ' ಹೆಸರಿನ ಈ ಉಜ್ವಲ ಭವನದಲ್ಲಿ ಸುತ್ತಮುತ್ತಲಿನ ಹಳ್ಳಿಗಳ ಯುವಕ ಯುವತಿಯರಿಗೆ ಬೌದ್ಧ ಚರಿತ್ರೆ, ಸಂಸ್ಕೃತಿ ಮತ್ತು ಬದುಕನ್ನು ಕಲಿಸುತ್ತಾರೆ. ಈ ಬೌದ್ಧಾಶ್ರಮ ಗೆಲ್ಲೂಪ ಗುಂಪಿಗೆ ಸೇರಿದ ಮಹಾಯಾನ ಜನರ ಆಧ್ಯಾತ್ಮಿಕ ಕೇಂದ್ರವಾಗಿದ್ದು, ಬೌದ್ಧ ವಾರ್ಷಿಕದ 11ನೇ ತಿಂಗಳಲ್ಲಿ (ಡಿಸೆಂಬರ್-ಜನವರಿ) 'ಟೊಂಗ್ವೆ' ಜಾತ್ರೆ ನಡೆಯುತ್ತದೆ. ಇಲ್ಲಿ ಬೌದ್ಧ ಗ್ರಂಥಾಲಯ, ಶಾಲೆ, ವಿಶಾಲ ಪ್ರಾರ್ಥನಾ ಭವನ, ವಸ್ತುಸಂಗ್ರಹಾಲಯ ಮತ್ತು ಗೋಡೆಗಳ ಮೇಲೆಲ್ಲ ಬಣ್ಣಬಣ್ಣದ ಅಪರೂಪದ ಚಿತ್ರಕಲೆಯನ್ನು ಬಿಡಿಸಲಾಗಿದೆ.

ಈ ಭವನವನ್ನು ಟಿಬೆಟ್‌ನ ಲಾಸಾದಲ್ಲಿರುವ ಬೌದ್ಧ ಭವನದಂತೆ ನಿರ್ಮಿಸಲಾಗಿದ್ದು, ಮೂರು ಅಂತಸ್ತುಗಳ ಈ ಭವನದಲ್ಲಿ 600 ಸನ್ಯಾಸಿಗಳು ಮತ್ತು ಸನ್ಯಾಸಿನಿಯರು ತಂಗುವ ವ್ಯವಸ್ಥೆ ಇದೆ. ಈ ಹೊಸ ಭವನವನ್ನು ನಿರ್ಮಿಸಿದ ಮೇಲೆ ಮೆರೆ ಲಾಮಾ ಖುದ್ದಾಗಿ ದಲೈಲಾಮಾರನ್ನು ಸಂಧಿಸಿ ತವಾಂಗ್‌ಗೆ ಬಂದು ಆಶೀರ್ವಾದ ಮಾಡಲು ಆಹ್ವಾನಿಸಿದನಂತೆ. ಆದರೆ ದಲೈಲಾಮಾ ತವಾಂಗ್‌ಗೆ ಬರಲು ಒಪ್ಪದಿದ್ದರಿಂದ (ಬಹುಶಃ ಚೀನಾಗೆ ಹೆದರಿ) ಹಿಂದಕ್ಕೆ ಬಂದ ಮೆರೆ ಲಾಮಾ ತನ್ನ ರಕ್ತದಿಂದ ಚಂದ್ರಿಕೆಯಲ್ಲಿ ಒಂದು ಒಕ್ಕಣೆ ಬರೆದು ಅದನ್ನು ಉಣ್ಣೆ ಬಟ್ಟೆಯಲ್ಲಿ ಸುತ್ತಿ ಭವನದ ಮುಖ್ಯ ಗೋಪುರದಲ್ಲಿ ಇಟ್ಟಿರುವುದಾಗಿ ಹೇಳಲಾಗುತ್ತದೆ. ದಲೈಲಾಮಾ ಈ ಪ್ರದೇಶಕ್ಕೆ ಭೇಟಿ ನೀಡಿದಾಗಲೆಲ್ಲ ಚೀನಾ ಆಕ್ಷೇಪ ತೆಗೆಯುತ್ತಲೇ ಇರುತ್ತದೆ.

ಬೌದ್ಧಾಶ್ರಮದ ಸಣ್ಣ ಬಾಗಿಲಿನ ಮೂಲಕ ಒಳಕ್ಕೆ ಪ್ರವೇಶಿಸಿದ್ದೆ. ಒಳಗೆ ವಿಶಾಲ ಮತ್ತು ಎತ್ತರವಾದ ಸಭಾಂಗಣದಲ್ಲಿ ಸಾಲಾಗಿ ದೀಪಗಳು ಉರಿಯುತ್ತಿದ್ದವು. ಬೌದ್ಧ ಧರ್ಮವನ್ನು ಪ್ರತಿಬಿಂಬಿಸುವ ಚಿತ್ರಗಳನ್ನು ಇಡೀ ಸಭಾಂಗಣದ ಗೋಡೆ, ಕಂಬಗಳ ಮೇಲೆಲ್ಲ ಚಿತ್ರಿಸಲಾಗಿದೆ. ಎದುರಿಗೆ 50 ಅಡಿಗಳಷ್ಟು ಎತ್ತರದ, ಕುಳಿತಿರುವ ಬೌದ್ಧನ ಸೌಮ್ಯ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಮುಂದೆ ಕುಳಿತು ಪ್ರಾರ್ಥನೆ ಮಾಡಲು ಸಾಲುಸಾಲು ಬಿಳಿ ಗದ್ದಿಗಳನ್ನು ಹಾಕಲಾಗಿದೆ. ನಾವು ಸ್ವಲ್ಪ ಹೊತ್ತು ಕುಳಿತು ಪ್ರಾರ್ಥನೆ ಮಾಡಿ ಬುದ್ಧನನ್ನು ಕಣ್ಣುಗಳ ತುಂಬಾ ತುಂಬಿಕೊಂಡು ಹೊರಕ್ಕೆ ಬಂದೆವು.

ಈ ಆಶ್ರಮ ಪ್ರಪಂಚದಲ್ಲಿಯೇ ಒಂದು ಅದ್ಭುತ ಸುಂದರ ಬೌದ್ಧ ಆಶ್ರಮವಾಗಿದ್ದು ಜಗತ್ತಿನಾದ್ಯಂತ ಜನ ಬಂದು ವೀಕ್ಷಿಸಿ ಹೋಗುತ್ತಾರೆ. ಇಲ್ಲಿನ ಮೊಂಪಾಗಳು (ಅರುಣಾಚಲ ಪ್ರದೇಶದ ಒಂದು ಜನಾಂಗ) ಟಿಬೆಟ್‌ನ ಮಹಾಯಾನ ಬೌದ್ಧ ಪಂಥವನ್ನು ಅಪ್ಪಿಕೊಂಡಿದ್ದು ಮೂಲವಾಗಿ ಅದು ಜೆನ್ ಪಂಥಕ್ಕೆ ಸೇರಿದ್ದಾಗಿದೆ. ಜೆನ್ ಪಂಥ, ಟಿಬೆಟ್ ಮೂಲಜನರ ಧರ್ಮವಾಗಿದ್ದು, ನಿಸರ್ಗದ ಹಲವು ದೇವತೆಗಳ ಸಂಗಮವಾಗಿದೆ. ಅನಂತರ ನಿಧಾನವಾಗಿ ಈ ಪ್ರದೇಶವನ್ನೆಲ್ಲ ಬೌದ್ಧ ಧರ್ಮ ಆವರಿಸಿಕೊಂಡಿತು.

13ನೇ ಪುಟಕ್ಕೆ...

ನಾದದಲೆ ಎಬ್ಬಿಸುವ ಸಾಗರ ವೀಣೆ

ಸರಸ್ವತಿ ವೀಣೆ, ರುದ್ರ ವೀಣೆ (ಬೀನ್), ಚಿತ್ರ ವೀಣೆ (ಗೋಟುವಾದ್ಯ), ವಿಚಿತ್ರ ವೀಣೆ, ಮೋಹನ ವೀಣೆ... ಅರೆ ಎಷ್ಟೆಲ್ಲ ಬಗೆಯ ವೀಣೆಗಳಿವೆ! ಈ ವೀಣೆಗಳ ಸಾಲಿಗೆ ಸೇರುವ ತೀರಾ ಇತ್ತೀಚಿನ ಆವಿಷ್ಕಾರವೆಂದರೆ ಸಾಗರ ವೀಣೆ. ಇದು ಆವಿಷ್ಕಾರಗೊಂಡಿದ್ದು ಸಾಗರದಾಚೆಯಲ್ಲ, ನಮ್ಮ ಪಕ್ಕದ ಪಾಕಿಸ್ತಾನದಲ್ಲಿ. ಇದನ್ನು ನುಡಿಸುವ ಏಕೈಕ ಕಲಾವಿದೆ ನೂರ್ ಜೆಹರಾ ಕಾಜಿಮ್, ಸಾಗರ ವೀಣೆಯೊಂದಿಗಿನ ತಮ್ಮ ಸ್ವರಪಯಣವನ್ನು ಪದಗಳಲ್ಲಿ ಕಟ್ಟಿಕೊಟ್ಟಿದ್ದಾರೆ...

ಸುಮಂಗಲಾ

ಭಾರತದ ಲಖನೌದಲ್ಲಿ ಬೆಳೆದು, ಮುಂದೆ ಪಾಕಿಸ್ತಾನದ ಸುಪ್ರೀಂ ಕೋರ್ಟ್‌ನ ಹೆಸರಾಂತ ವಕೀಲರಾಗಿದ್ದ, ಮೊದಲು ಕಾಂಗ್ರೆಸ್ ಪಕ್ಷ, ತದನಂತರ ಮುಸ್ಲಿಂ ಲೀಗ್‌ನ ಕಾರ್ಯಕರ್ತರಾಗಿದ್ದ, ಎಡಪಂಥೀಯ ಚಿಂತಕರಾಗಿದ್ದು, ತತ್ವಶಾಸ್ತ್ರದ ವಿದ್ಯಾರ್ಥಿಯೂ ಆಗಿದ್ದ, ಸಂಗೀತದಲ್ಲಿ ಇದ್ದಷ್ಟೇ ಆಸಕ್ತಿಯನ್ನು ಫೋಟೊಗ್ರಫಿಯಲ್ಲೂ ಹೊಂದಿದ್ದ ಅಪರೂಪದ ವ್ಯಕ್ತಿತ್ವ ಪಾಕಿಸ್ತಾನದ ರಜಾ ಕಾಜಿಮ್ ಅವರದು.

ಕಾಜಿಮ್ ಅವರದು ಸಂಗೀತಗಾರರ ಮನೆತನವಲ್ಲದಿದ್ದರೂ, ಮಕ್ಕಳಿಗೆ ಹವ್ಯಾಸದ ಹಾಗೆ ಸಂಗೀತ ಕಲಿಸುವುದಕ್ಕೆ ಮನೆಗೆ ಒಬ್ಬರು ಗುರುಗಳು ಬರುತ್ತಿದ್ದರು. ಸಿತಾರ್ ಕಲಿಯುತ್ತಿದ್ದ ಇವರ ಹದಿಹರೆಯದ ಮಗಳು ನೂರ್ ಜೆಹರಾಗೆ ಗತ್‌ಗಿಂತ ಆಲಾಪ್ ನುಡಿಸುವುದು ಹೆಚ್ಚು ಮುದವೆನ್ನಿಸುತ್ತಿತ್ತು. ವಿಶೇಷವಾಗಿ ಮೀಂಡ್ ನುಡಿಸುವುದು ಹೆಚ್ಚು ಹಿತವೆನ್ನಿಸುತ್ತಿತ್ತು. ಮಗಳಿಗೆ ಆಲಾಪ್ ನುಡಿಸುವುದರಲ್ಲಿದ್ದ ಒಲವನ್ನು ಗಮನಿಸಿದ ರಜಾ ಒಂದು ಸುರಬಹಾರ್ ತರುವಂತೆ ಸಂಗೀತ ಮೇಷ್ಟ್ರಿಗೆ ಹೇಳಿದರು. ಸಿತಾರಿಗಿಂತ ಇದನ್ನು ನುಡಿಸುವುದು ಜೆಹರಾಗೆ ಇನ್ನಷ್ಟು ಖುಷಿಯೆನ್ನಿಸಿತು.



ಸಾಗರ ವೀಣೆಯೊಂದಿಗೆ ನೂರ್ ಜೆಹರಾ ಕಾಜಿಮ್

ಆಗೊಮ್ಮೆ ರಜಾ ಅವರು ವಿಚಿತ್ರ ವೀಣೆಯನ್ನು ನುಡಿಸುವವರು ಯಾರಾದರೂ ಗೊತ್ತಿದ್ದಾರೆಯೇ ಎಂದು ಮೇಷ್ಟ್ರಿಗೆ ಕೇಳಿದರು. ಅವರು ಅಬ್ದುರ್ ರಶೀದ್ ಖಾನರ ಹೆಸರನ್ನು ಸೂಚಿಸಿದರು. ಅದೃಷ್ಟವಶಾತ್ ಅದೇ ಸಮಯದಲ್ಲಿ ರಶೀದ್ ಖಾನರು ಲಾಹೋರಿಗೆ ಬಂದಿದ್ದರು. ರಶೀದ್ ಖಾನರನ್ನು ರಜಾ ಅವರು ಮನೆಗೆ ಊಟಕ್ಕೆ ಆಹ್ವಾನಿಸಿದರು.

'ನನಗೆ ನೆನಪಿರುವಂತೆ ಅವರು ಬೇರೆ ಬೇರೆ ರಾಗಗಳ ಆಲಾಪ್ ಮಾತ್ರ ನುಡಿಸಿ ತೋರಿಸಿದರು. ನಾನು ಅವರ ವೀಣೆಯನ್ನು ತೆಗೆದುಕೊಂಡು, ನುಡಿಸಲಿಕ್ಕೆ ಪ್ರಯತ್ನಿಸಿದೆ' ಎಂದು ಜೆಹರಾ ನೆನಪಿಸಿಕೊಳ್ಳುತ್ತಾರೆ. ಮರುದಿನವೇ ರಜಾ ಮಗಳಿಗಾಗಿ ಒಂದು ವಿಚಿತ್ರವೀಣೆಯನ್ನು ಆರ್ಡರ್ ಮಾಡಿಯೇಬಿಟ್ಟರು. ಅದನ್ನು ತಯಾರಿಸಲಿಕ್ಕೆ ತಿಂಗಳುಗಟ್ಟಲೇ ಸಮಯ ಹಿಡಿಯುತ್ತಿತ್ತು. ಆ ಸಮಯದಲ್ಲಿ ರಜಾ ಕಾಜಿಮರು ಸುರಬಹಾರಿನ ಮೆಟ್ಟಿಲುಗಳು ಅಥವಾ ಪರ್ದಾಹ್‌ಗಳನ್ನು ತೆಗೆದುಹಾಕಿ, ಅದರ ಒಂದು ಭಾಗವನ್ನು ಸ್ವಲ್ಪ ಎತ್ತರಿಸಿದರು. ಮಗಳ ಕಲಿಕೆಯಲ್ಲಿ ಸಮಯ ವ್ಯರ್ಥವಾಗಬಾರದೆಂದು ರಜಾ ಈ ಎಲ್ಲ ಕಸರತ್ತು ಮಾಡಿದರು. ಆದರೆ ಎಡಗೈಯಲ್ಲಿ ನುಡಿಸುವುದಕ್ಕೆ ತುಂಬ ಸಣ್ಣದಾದ ಗಾಜಿನ ಆ್ಯಶ್‌ಟ್ರೇಯನ್ನು ಕೊಟ್ಟರು. ಹೀಗೆ ಸಾಗರ ವೀಣೆಯ ಮೊದಲ ಮಾದರಿ ಅಥವಾ ಪ್ರೋಟೋಟೈಪ್ 1970ರ ಸುಮಾರಿಗೆ ರೂಪುಗೊಂಡಿತು.

ಆಲಾಪ ನುಡಿಸುವುದರಲ್ಲಿ ಮಗಳಿಗಿದ್ದ ತನ್ಮಯತೆ ಹಾಗೂ ತಂದೆಗೆ ಸಾಂಗೀತಿಕ ಧ್ವನಿ ಸಾಧ್ಯತೆಗಳ ಕುರಿತಾದ ಅನ್ವೇಷಕ ಮನೋಭಾವ, ಎರಡೂ ಸೇರಿ ಸಾಗರ ವೀಣೆಯ ಮಾದರಿಗಳ ಶೋಧನೆ ಹಾಗೂ ಅಭಿವೃದ್ಧಿಗೆ ಅಡಿಪಾಯವಾಯಿತು. ಜೆಹರಾ ತಾವು ಸುರಬಹಾರಿನಲ್ಲಿ ಅಭ್ಯಾಸ ಮಾಡುತ್ತಿದ್ದುದನ್ನೇ ರೂಪಾಂತರಗೊಂಡ ಸುರಬಹಾರ್ ಅಂದರೆ ಸಾಗರ ವೀಣಾದ ಮೊದಲ ಮಾದರಿಯಲ್ಲಿ (ಪ್ರೋಟೋಟೈಪ್) ಮುಂದುವರಿಸಿದರು. ಈ ಮೊದಲ ಮಾದರಿಯಲ್ಲಿ ಆಳವಾದ, ಘನವಾದ ಧ್ವನಿಗೆ ನಿರಂತರತೆಯ ನಾದಗುಣ ಲಭ್ಯವಾಗಿದ್ದರಿಂದ, ಜೆಹರಾರಿಗೆ ಇದನ್ನು ನುಡಿಸುವುದು ಮತ್ತಷ್ಟು ಆಹ್ಲಾದವೆನ್ನಿಸಿತು. ಜೊತೆಗೆ ಸುರಬಹಾರಿಗಿಂತ ಇದರಲ್ಲಿ ನಾದ ಇನ್ನಷ್ಟು ಉತ್ತಮವಾಗಿರುವಂತೆ ಅನ್ನಿಸಿತು.

ಆಗ ಬೇರೆಬೇರೆ ರಾಗಗಳನ್ನು ಹೇಗೆ ನುಡಿಸುವುದು ಎಂದು ಕಂಡುಕೊಳ್ಳುವುದಕ್ಕೆ ಜೆಹರಾರಿಗೆ ಇದ್ದ ಮುಖ್ಯವಾದ ಮೂಲ ಎಂದರೆ ಅಲೆನ್ ಡೇನಿಯಲೊ ಎಂಬ ಫ್ರೆಂಚ್ ಸಂಗೀತಶಾಸ್ತ್ರಜ್ಞನ ಒಂದು ಪುಸ್ತಕ. ಪಾಶ್ಚಾತ್ಯ ಶಾಸ್ತ್ರೀಯ ಸಂಗೀತ ಹಾಗೂ ನೃತ್ಯವನ್ನು ಕಲಿತಿದ್ದ ಅಲೆನ್ ಡೇನಿಯಲೊ 1932ರಲ್ಲಿ ಭಾರತಕ್ಕೆ ಬಂದು, ದಶಕಗಳ ಕಾಲ ಇಲ್ಲಿದ್ದುಕೊಂಡು ಸಂಸ್ಕೃತ, ಹಿಂದೂಸ್ತಾನಿ ಸಂಗೀತ, ತತ್ವಶಾಸ್ತ್ರ ಇತ್ಯಾದಿಯನ್ನು ಹದಿನೈದು ವರ್ಷಗಳ ಕಾಲ ಕಲಿತಿದ್ದರು. ಅಲೆನ್‌ರ 'ರಾಗಾಸ್ ಆಫ್ ನಾರ್ತ್ ಇಂಡಿಯನ್ ಕ್ಲಾಸಿಕಲ್ ಮ್ಯೂಸಿಕ್' ಕೃತಿಯಲ್ಲಿ ಪಾಶ್ಚಾತ್ಯ ನೊಟೇಶನ್ ಮೂಲಕವೇ ರಾಗಗಳ ಚಲನ್ ಹಾಗೂ ಪಕರ್ ತಾನ್‌ಗಳನ್ನೂ ನೀಡಿದ್ದರು.

11ನೇ ಪುಟಕ್ಕೆ...

ಸಾಹಿತ್ಯ ಮತ್ತು ಉತ್ಸವ

ವಸುಧೇಂದ್ರ

ಇತ್ತೀಚೆಗೆ ಮುಕ್ತಾಯಗೊಂಡ ಬೆಂಗಳೂರು ಸಾಹಿತ್ಯೋತ್ಸವ (Bangalore Literature Festival) ಬಹಳ ಯಶಸ್ವಿಯಾಗಿ ನಡೆಯಿತು. ಕಾರ್ಯಕ್ರಮಗಳನ್ನು ಸರಿಯಾದ ಸಮಯಕ್ಕೆ ನಡೆಸುವ, ಎಂತಹ ಹಿರಿಯ ಲೇಖಕರೇ ಆದರೂ 30-45 ನಿಮಿಷಕ್ಕಿಂತಲೂ ಹೆಚ್ಚಿನ ಸಮಯವನ್ನು ನೀಡದ ಕರಾರುವಾಕ್ಕು ಸಮಯಪಾಲನೆ ಆದರ್ಶವಾಗಿ ಕಂಡಿತು. ದೂಳು, ತಳ್ಳಾಟ ಇರದಿದ್ದರಿಂದ ಸಾವಿರಾರು ಜನ, ಅದರಲ್ಲೂ ಯುವಕರು-ಮಕ್ಕಳು-ಮಹಿಳೆಯರು, ಬಂದು ಭಾಗವಹಿಸಿದರು. ಕೋಟ್ಯಂತರ ರೂಪಾಯಿ ಮೌಲ್ಯದ ಪುಸ್ತಕಗಳನ್ನೂ ಖರೀದಿಸಿದರು.

ಪ್ರತೀ ಗೋಷ್ಠಿಯಲ್ಲಿ ಯಾವುದೋ ಪುಸ್ತಕದ ಬಗೆಗಿನ ಚರ್ಚೆಯೇ ಮುಖ್ಯವಾಗಿತ್ತು ಮತ್ತು ಆ ಚರ್ಚೆಯ ನೆಪದಲ್ಲಿ ದೇಶದ ಬಹಳಷ್ಟು ಸಮಸ್ಯೆಗಳ ಬಗ್ಗೆ ಚರ್ಚೆಗಳಾದವು. ಕಳೆದ ವರ್ಷದಲ್ಲಿ ಯಾರು ಮುಖ್ಯ ಪುಸ್ತಕ ಬರೆದಿದ್ದಾರೋ, ಅಂಥವರಿಗೆ ಮಾತ್ರ ಗೋಷ್ಠಿಯಲ್ಲಿ ಅವಕಾಶ ಮಾಡಿಕೊಟ್ಟಿದ್ದರು. ಗೋಷ್ಠಿ ಮುಗಿದ ತಕ್ಷಣ ಪುಸ್ತಕದ ಲೇಖಕರು ಓದುಗರ ಪ್ರತಿಗೆ ಸಹಿ ಮಾಡಿಕೊಡುವ ವ್ಯವಸ್ಥಿತ ಪದ್ಧತಿಯೂ ಇತ್ತು. ಓದುಗರು ಸರಣಿಯಲ್ಲಿ ನಿಂತು ತಮ್ಮ ಮೆಚ್ಚಿನ ಲೇಖಕರೊಡನೆ ಸಂಭ್ರಮದಿಂದ ಮಾತಾಡಿ, ಅವರ ಜೊತೆ ಫೋಟೊ ತೆಗೆಸಿಕೊಂಡು, ಹಸ್ತಾಕ್ಷರ ಪಡೆದರು.

ಎಲ್ಲಕ್ಕೂ ಮುಖ್ಯವಾಗಿ, ಉತ್ಸವದಲ್ಲಿ ಯಾವುದೇ ರಾಜಕೀಯ ವ್ಯಕ್ತಿಗಳ ಬ್ಯಾನರ್ ಇರಲಿಲ್ಲ. ರಾಜಕೀಯ-ಸಿನಿಮಾ-ಆಟೋಟದಲ್ಲಿ ಪ್ರಸಿದ್ಧರಾದವರು ಭಾಗವಹಿಸಿದರೂ ಅವರು ಯಾವುದಾದರೂ ಪುಸ್ತಕ ಬರೆದ ಕಾರಣಕ್ಕಾಗಿಯೇ ಗೋಷ್ಠಿಯ ಅರ್ಹತೆಯನ್ನು ಪಡೆದಿದ್ದರು. ಅನವಶ್ಯಕ ಗಲಾಟೆ ಎಬ್ಬಿಸುವ ಲೌಡ್ ಸ್ಪೀಕರ್‌ಗಳು, ವ್ಯಾಪಾರಿ ವಸ್ತುಗಳ ಮಾರಾಟ ಮಳಿಗೆಗಳು ಒಂದೂ ಇರಲಿಲ್ಲ. ಉತ್ಸವಕ್ಕೆ ಹಣ ಸಹಾಯ ಮಾಡಿದವರ ವಿವರಗಳನ್ನೆಲ್ಲ ಪ್ರತಿಯೊಬ್ಬರಿಗೂ ತಿಳಿಯುವಂತೆ ಕರಪತ್ರದಲ್ಲಿ ಪ್ರಕಟಿಸಿದ್ದರು.

ಸಾಹಿತ್ಯಪ್ರೀತಿಯ ಜನರು ಮಾತ್ರ ಸೇರಿದ ಈ ಇಂಗ್ಲಿಷ್ ಸಾಹಿತ್ಯೋತ್ಸವದಲ್ಲಿ ಕನ್ನಡದ ಸಾಕಷ್ಟು ಗೋಷ್ಠಿಗಳು ನಡೆದವು ಮತ್ತು ಕನ್ನಡ ಪುಸ್ತಕಗಳು ಮಾರಾಟವೂ ಆದವು. ಅರೆಭಾಷೆ, ಕೊಂಕಣಿ, ತುಳು, ಬ್ಯಾರಿ, ಸಂಕೇತಿ ಭಾಷೆಗಳ ಗೋಷ್ಠಿಗಳಿಗೂ ಆಯೋಜಕರು ಅವಕಾಶ ಮಾಡಿಕೊಟ್ಟಿದ್ದರು. ಕನ್ನಡ ಸಾಹಿತ್ಯಲೋಕದ ವಿಸ್ತಾರವನ್ನು ಗಮನಿಸಿದರೆ, ಕನ್ನಡದ ಇನ್ನಷ್ಟು ಗೋಷ್ಠಿಗಳಿಗೆ ಅವಕಾಶ ಇರಬೇಕಿತ್ತು ಎಂದು ನಮಗೆ ಅನ್ನಿಸಿದ್ದು ಸುಳ್ಳಲ್ಲ. ಮುಂದಿನ ವರ್ಷಗಳಲ್ಲಿ ಆ ಬೇಡಿಕೆ ಈಡೇರುತ್ತೆ ಎಂದು ಆಶಿಸೋಣ.

ಇನ್ನೇನು ಜನವರಿಯಲ್ಲಿ ನಮ್ಮ ಕನ್ನಡ ಸಾಹಿತ್ಯ ಸಮ್ಮೇಳನ ಬರುತ್ತಿದೆ. ಇಂತಹ ಯಶಸ್ವಿ ಉತ್ಸವಗಳಿಂದ ನಾವು ಕಲಿಯುವುದು ಸಾಕಷ್ಟಿದೆ. ಮೊತ್ತಮೊದಲಿಗೆ ಸಮಯ ಪರಿಪಾಲನೆ. ಎಲ್ಲಾ ಗೋಷ್ಠಿಗಳೂ ನಿಗದಿತ ಸಮಯಕ್ಕಿಂತಲೂ ಎರಡು ಮೂರು ಪಟ್ಟು ಹೆಚ್ಚಿಗೆ ತೆಗೆದುಕೊಳ್ಳುವ ಪರಿಪಾಟ ನಮ್ಮಲ್ಲಿದೆ. ಅದರಲ್ಲೂ ವಾಚಾಳಿ ಸಾಹಿತಿಗಳಂತೂ ಪರಿವೆಯಿಲ್ಲದೆ ಮಾತಾಡುತ್ತಲೇ ಹೋಗುತ್ತಾರೆ. ಗೋಷ್ಠಿಯ ಕೊನೆಯಲ್ಲಿ ಮಾತಾಡುವವರಿಗೆ ಸರಿಯಾಗಿ ಐದು ನಿಮಿಷದ ಸಮಯವೂ ಉಳಿಯುವುದಿಲ್ಲ. ಬಹುತೇಕ ನಮ್ಮ ಗೋಷ್ಠಿಗಳಿಗೂ ನಮ್ಮ ಸದ್ಯದ ಕನ್ನಡ ಪುಸ್ತಕಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ. ಇಡೀ ಸಮ್ಮೇಳನ ಮುಗಿದರೂ ಸಭಿಕರಿಗೆ ಇತ್ತೀಚೆಗೆ ಬಂದ ಒಳ್ಳೆಯ ಕನ್ನಡ ಪುಸ್ತಕ ಯಾವುದು ಎಂಬುದು ತಿಳಿಯುವುದಿಲ್ಲ. ಸಾಹಿತ್ಯ ಸಮ್ಮೇಳನವೊಂದು ಸಮಾಜಶಾಸ್ತ್ರ ಸಮ್ಮೇಳನವಾಗಿ ಮುಗಿದುಹೋಗುತ್ತದೆ.

ಇನ್ನು ರಾಜಕೀಯ ವ್ಯಕ್ತಿಗಳ ಮಾತಂತಿರಲಿ, ಊರಿನ ಪುಡಿ ರೌಡಿಗಳ ಬ್ಯಾನರ್‌ಗಳು ಯಾವ ರೀತಿ ಅಬ್ಬರದಿಂದ ಊರಿನ ತುಂಬಾ ರಾರಾಜಿಸುತ್ತಿರುತ್ತವೆಂದರೆ, 'ನಾವು ಏನು ಮಾಡಲು ಹೊರಟಿದ್ದೇವೆ' ಎಂಬ ಅನುಮಾನ ಶುರುವಾಗುತ್ತದೆ. ಸಮ್ಮೇಳನದ ಅಧ್ಯಕ್ಷರ ಸಪ್ಪೆ ಮೋರೆಯ ಫೋಟೊ ಮಾತ್ರ ನೆಪಕ್ಕೆ ಊಟದ ಎಲೆಯಲ್ಲಿ ಮೂಲೆಗೆ ಬಡಿಸಿದ ಉಪ್ಪಿನಂತೆ ಎಲ್ಲೋ ಆ ಬ್ಯಾನರ್‌ಗಳಲ್ಲಿ ಕಾಣುತ್ತಿರುತ್ತದೆ.

ಸರ್ಕಾರದಿಂದ ಕನ್ನಡ ಸಾಹಿತ್ಯೋತ್ಸವಕ್ಕೆ ಹಣ ಪಡೆಯುವುದು ಪ್ರಜೆಗಳ ಹಕ್ಕು. ಹಾಗಂತ ಎಲ್ಲವೂ ರಾಜಕೀಯ ವ್ಯಕ್ತಿಗಳ ಪ್ರದರ್ಶನಕ್ಕೆ ಸೀಮಿತವಾದರೆ, ಇಂತಹ ಉತ್ಸವದಲ್ಲಿ ನಿಜವಾದ ಸಾಹಿತ್ಯಪ್ರಿಯರಿಗೆ ಆಸಕ್ತಿ ಮುರುಟುತ್ತದೆ. ಸರ್ಕಾರದ ಹಣದ ಜೊತೆಯಲ್ಲಿ ನಮ್ಮದೇ ರೀತಿಯಲ್ಲಿ ಹಣವನ್ನು ಸಂಗ್ರಹ ಮಾಡಿಕೊಂಡು, ನಮ್ಮ ಧ್ವನಿ ಮತ್ತು ನಿರ್ಧಾರಗಳಿಗೆ ಶಕ್ತಿಯನ್ನು ತಂದುಕೊಳ್ಳುವ ಅವಶ್ಯಕತೆ ಇದೆ.

12ನೇ ಪುಟಕ್ಕೆ...

ಎಕ್ಕುಂಡಿ ಅವರೊಳಗೊಂದು ಬೆಳ್ಳಕ್ಕಿ ಇತ್ತು

ಜಿ.ಎನ್. ಮೋಹನ್

ಸುಬ್ಬಣ್ಣ ರಂಗನಾಥ ಎಕ್ಕುಂಡಿ ಅವರು ಕನ್ನಡ ಕಂಡ ಬಹುಮುಖ್ಯ ಕವಿ. 'ಭಾಗವತರು' ಸಾಂಸ್ಕೃತಿಕ ಸಂಘಟನೆ ಎಕ್ಕುಂಡಿಯವರ ಜನ್ಮ ಶತಮಾನೋತ್ಸವವನ್ನು ಇಂದು ಆಚರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಬಕುಲದ ಕವಿ ಎಂದೇ ಹೆಸರಾಗಿದ್ದ ಕಥನ ಕವಿ ಸು.ರಂ. ಎಕ್ಕುಂಡಿ ಅವರ ಬಗೆಗಿನ ಆಪ್ತ ನೋಟವೊಂದು ಇಲ್ಲಿದೆ

ದಶಕಗಳ ಕಾಲ ಕಾಂಕ್ರೀಟ್ ನಗರಿಯಲ್ಲಿ ಬೆಳೆದ ನನಗೆ ಕಡಲ ನಗರಿ ಇನ್ನಿಲ್ಲದಂತೆ ಆಕರ್ಷಿಸಿತ್ತು. ಅಲ್ಲಿ ಕಣ್ಣು ಹಾಯಿಸುವಷ್ಟು ದೂರಕ್ಕೂ ಹರಡಿಕೊಂಡಿದ್ದ ಹಸಿರು ಗದ್ದೆಗಳು, ಹರಿವ ತೊರೆ, ತೆಂಗು ಕಂಗುಗಳ ನಡುವೆ ಇದ್ದ ಮನೆಯನ್ನೇ ವಾಸಕ್ಕೆ ಆಯ್ಕೆ ಮಾಡಿಕೊಂಡಿದ್ದೆ. ಇಂತಹ ಮನೆಗೆ ಒಮ್ಮೆ ದಿಢೀರನೆ ಸು.ರಂ. ಎಕ್ಕುಂಡಿಯವರು ಬಂದರು.

ಮನೆಯ ಅಂಗಳದಲ್ಲಿ ಚಾಮರ ಬೀಸುತ್ತಿದ್ದ ತೆಂಗಿನ ಮರಗಳ ಕೆಳಗೆ ಮಾತನಾಡುತ್ತಾ ನಾವೆಲ್ಲಾ ಕುಳಿತಿದ್ದೆವು. ಆಗಲೇ ಒಂದು ಹಿಂಡು ಬೆಳ್ಳಕ್ಕಿಗಳು ಎಲ್ಲಿಂದಲೋ ಹಾರಿಬಂದು ನಮ್ಮ ಮನೆ ಎದುರಿಗಿನ ಗದ್ದೆಗಳಿಗೆ ಇಳಿದವು. ತೊರೆಯಲ್ಲಿದ್ದ ಮೀನುಗಳ ಮೇಲೆ ಒಂದು ಕಣ್ಣಿಟ್ಟೇ ಮಿಂಚುಳ್ಳಿಗಳೂ ಹಾರಿ ಬಂದು ಸೇತುವೆಯ ಮೇಲೆ ಕುಳಿತವು. ಒಂದರೆಕ್ಷಣ ಅಷ್ಟೇ. ಮೀನು ಬೇಟೆಯಾಡಿದ ಮಿಂಚುಳ್ಳಿಗಳು ಎಕ್ಕುಂಡಿಯವರು ಕುಳಿತಿದ್ದ ಎದುರಿನ ಹಲಸಿನ ಮರದ ಟೊಂಗೆಯ ಮೇಲೆ ಊಟಕ್ಕೆ ಕುಳಿತೇಬಿಟ್ಟವು.

ಅಷ್ಟೂ ಕಾಲ ಎಕ್ಕುಂಡಿ ಅವರು ತಮ್ಮ ಕಣ್ಣುಗಳನ್ನು ಅರಳಿಸಿ, ಬೊಚ್ಚು ಬಾಯನ್ನು ಅದಷ್ಟೂ ಅಗಲವಾಗಿಸಿ ಕಳೆದುಹೋಗಿಬಿಟ್ಟಿದ್ದರು. ನನಗೆ ಆ ವೇಳೆಗೆ ಬೆಳ್ಳಕ್ಕಿಗಳಿಗೂ ಎಕ್ಕುಂಡಿಯವರಿಗೂ ಇದ್ದ ನಂಟು ಗೊತ್ತಿತ್ತು.

ಹಾಗೆ ನೋಡಿದರೆ ಎಕ್ಕುಂಡಿಯವರು ನನಗೆ ಪರಿಚಯವಾದದ್ದೇ ಬೆಳ್ಳಕ್ಕಿಯ ಮೂಲಕ. 'ಪ್ರಜಾವಾಣಿ' ದೀಪಾವಳಿ ವಿಶೇಷಾಂಕ ಒಮ್ಮೆ ನಾಡಿನ ಗಣ್ಯ ಸಾಹಿತಿಗಳನ್ನು ನಿಮ್ಮ ಮನವ ಕಾಡುತ್ತಿರುವ ವಿಷಯವೇನು ಎಂದು ಕೇಳಿತ್ತು.

ಆಗ ಎಕ್ಕುಂಡಿಯವರು ಬೆಳ್ಳಕ್ಕಿಗಳನ್ನು ನೋಡುವ ಮನಸ್ಸನ್ನು, ಗಂಜಿಯ ಮಡಕೆಗಳು ಕಿತ್ತುಕೊಳ್ಳುತ್ತಿವೆ ಎಂದು ನಿಡುಸುಯ್ದಿದ್ದರು. ಅವರು ಬಂಕಿಕೊಡ್ಲದಲ್ಲಿರುವಾಗ ನಡೆದ ಘಟನೆ ಅದು. ಗದ್ದೆಯಲ್ಲಿ ಕೆಲಸ ಮಾಡುವ ತಂದೆಗಾಗಿ ಗಂಜಿ ಹೊತ್ತೊಯ್ಯುತ್ತಿದ್ದ ಹುಡುಗಿಯೊಬ್ಬಳು ಬೆಳ್ಳಕ್ಕಿ ಹಿಂಡನ್ನು ನೋಡುತ್ತಾ ಮೈ ಮರೆತುಬಿಡುತ್ತಾಳೆ. ಹಸಿವೆ ಹೆಚ್ಚಾದ ತಂದೆ ಮಗಳನ್ನು ಮಗೂ ಗಂಜಿಯ ಮಡಕೆ ಎಲ್ಲಿ ಎಂದು ಗದರಿಸುತ್ತಾನೆ. ಮಗು ತಬ್ಬಿಬ್ಬಾಗಿ ಬೆಳ್ಳಕ್ಕಿಗಳ ಲೋಕದಿಂದ ವಾಸ್ತವಕ್ಕೆ ಇಳಿಯುತ್ತದೆ.

ಎಕ್ಕುಂಡಿ ಕೇಳುತ್ತಾರೆ- 'ಈ ಗಂಜಿಯ ಮಡಕೆಯೇ ಕೊಕ್ಕರೆಗಳನ್ನೂ ನುಂಗುತ್ತದೆ. ಮಗುವಿನ ಮನಸ್ಸನ್ನೂ ನುಂಗುತ್ತದೆ. ಅಂದಿನಿಂದಲೂ ಈ ಸಮಸ್ಯೆ ನನ್ನನ್ನು ಕಾಡುತ್ತಿದೆ. ನಮ್ಮ ಮಕ್ಕಳು ದೊಡ್ಡವರಾಗುವ ಹೊತ್ತಿಗೆ ಗಂಜಿಯ ಮಡಕೆಗಾಗಿ ಕೊಕ್ಕರೆ ಬೆಳ್ಳಕ್ಕಿಗಳನ್ನು ತೊರೆಯಲೇಬೇಕೆ' ಎಂದು.

ಎಕ್ಕುಂಡಿ ಅವರೇ ಒಂದು ಬೆಳ್ಳಕ್ಕಿಯ ಹಾಗೆ ಎಂದು ನನಗೆ ಎಷ್ಟೋ ಬಾರಿ ಅನಿಸಿದ್ದುಂಟು. ಕಲಬುರ್ಗಿಯ ಮಣೂರ ಮೂಲದ ಎಕ್ಕುಂಡಿಯವರು, ಹುಟ್ಟಿ ಬೆಳೆದದ್ದು ರಾಣೇಬೆನ್ನೂರಿನಲ್ಲಿ. ತಮ್ಮ ಓದು ಮುಗಿದ ನಂತರ ಒಮ್ಮೆ ಗೆಳೆಯರೊಂದಿಗೆ ಗೋಕರ್ಣಕ್ಕೆ ಹೋದರು. ಮೊದಲ ಬಾರಿಗೆ ಕಡಲು, ತೆಂಗು, ಬೆಳ್ಳಕ್ಕಿ ನೋಡಿದ ಎಕ್ಕುಂಡಿಯವರು ನಂತರ ಅಲ್ಲಿಂದ ವಾಪಸ್ ಬಂದದ್ದು 35 ವರ್ಷಗಳ ದೀರ್ಘ ಕಾಲದ ನಂತರ. ಕಡಲಿಗೆ, ಅಲ್ಲಿನ ಹಾಲಕ್ಕಿ ಸಮುದಾಯಕ್ಕೆ, ಗುಮಟೆ ಪಾಂಗು ಹಾಡು ಕುಣಿತಕ್ಕೆ, ಬೆಳ್ಳಕ್ಕಿಗಳಿಗೆ ಮನಸೋತ ಎಕ್ಕುಂಡಿ ಬಂಕಿಕೊಡ್ಲದ ಆನಂದಾಶ್ರಮ ಶಾಲೆಯಲ್ಲಿಯೇ ಶಿಕ್ಷಕರಾಗಿ ಕೆಲಸ ಮಾಡಿದರು.

ನೂರರ ನೆನಪು

ಅಷ್ಟು ದೀರ್ಘ ವರ್ಷಗಳ ನಂತರ ಅವರು ಬೆಂಗಳೂರಿಗೆ ಬಂದಾಗ ನಾನು ಅವರ ಮನೆಯ ಬಾಗಿಲು ತಟ್ಟಿದ್ದೆ. ಇಬ್ಬರೂ ಮಾತನಾಡುತ್ತಾ ಕುಳಿತಿದ್ದಾಗ ಹೊರಗೆ ವಿಮಾನ ಹಾರಿದ ಶಬ್ದವಾಯಿತು. ಬುಡು ಬುಡು ಅಂಗಳಕ್ಕೆ ಓಡಿದವರೇ ವಿಮಾನ ಚುಕ್ಕಿ ಗಾತ್ರವಾಗಿ ಮರೆಯಾಗುವವರೆಗೂ ಅದನ್ನೇ ನೋಡುತ್ತಾ ನಿಂತಿದ್ದರು. ನಗೆ ತುಳುಕಿಸುತ್ತಾ ಒಳಬಂದ ಅವರು ಅದು ಈಗ ನನಗಿರುವ ಬೆಳ್ಳಕ್ಕಿ ಎಂದರು. ಆದರೆ ಅವರ ಒಳಗಣ್ಣು ಕಂಡ ನನಗೆ ಈಗಿರುವ ಕಾಂಕ್ರೀಟ್ ಕಾಡಿನಿಂದ ಮತ್ತೆ ಬಂಕಿಕೊಡ್ಲಕ್ಕೆ ಹಾರಲು ಸಜ್ಜಾಗಿ ನಿಂತಿರುವ ಬೆಳ್ಳಕ್ಕಿಯಂತೆ ಅವರು ನನಗೆ ಕಂಡಿದ್ದರು.

ಎಕ್ಕುಂಡಿ ಯಾವಾಗಲೂ ಹೇಳುತ್ತಿದ್ದರು. ನನ್ನ ಮನೆ ಬಡತನವನ್ನೇ ಉಂಡುಟ್ಟಿತ್ತು ಎಂದು. ಹಾಗಿರುವಾಗ ಒಂದು ದಿನ ಎಂದೂ ಹಾಡದ ತಾಯಿ ತಮ್ಮಷ್ಟಕ್ಕೆ ತಾವೇ ಒಂದು ಹಾಡನ್ನು ಹಾಡಿದರು. ನನ್ನ ತಾಯಿ ಅಕಸ್ಮಾತ್ ಆಗಿ ಹಾಡಿದ ಆ ಒಂದು ಹಾಡಿನಿಂದ ನಾನು ಈ ಜಗತ್ತನ್ನು ನೋಡುವ ಕಿಟಕಿಯನ್ನು ರೂಪಿಸಿಕೊಂಡೆ ಎಂದು.

ನನಗೆ ಅಂದಿನಿಂದಲೂ ಎಕ್ಕುಂಡಿಯವರು ರೂಪಿಸಿಕೊಂಡ ಕಿಟಕಿಯಿಂದ ಕಂಡಿರಬಹುದಾದ ಸಂಗತಿಗಳ ಬಗ್ಗೆ ಅದಮ್ಯ ಕುತೂಹಲ. ಅವರ ಕವಿತೆಗಳ ಕಿಟಕಿಯಲ್ಲಿ ಒಮ್ಮೆ ಇಣುಕಿ ನೋಡಿ ಅರೆ! ಎಷ್ಟೊಂದು ಜನ, ಎಷ್ಟೊಂದು ಸಂಗತಿಗಳು! ಅಲ್ಲಿ ಕಾರ್ಲ್ ಮಾರ್ಕ್ಸ್ ಆತನ ಹೆಂಡತಿ ಹೆಲೆನ್, ಗೆಳೆಯ ಎಂಗೆಲ್ಸ್, ಮಧ್ವ ಮುನಿ, ದಾಸಿಮಯ್ಯ, ಪುರಂದರ ದಾಸರು, ನಾಗಿ, ಏಸುಕ್ರಿಸ್ತ ಜಾಬಾಲ, ರಂತಿದೇವ, ಚಿನ್ನಮ್ಮನ ಕಂದ, ಎಸೆದ ಬ್ರೆಡ್ಡಿನ ತುಂಡನ್ನು ಆಯಲು ತೊಟ್ಟಿಯೊಳಗೆ ಇಳಿಯುವ ದುಡಿಯುವ ಕಸುವಿರುವ ಹಸಿದ ಕೈಗಳು, ಉಳ್ಳವರ ಎದೆಯಿಂದ ಬಂದಂಥ ಬೆಣಚು ಕಲ್ಲುಗಳ ಮೇಲೆ ಕಾಲಿಟ್ಟು ಗಾಯಗೊಂಡ ಕೂಲಿಕಾರರು, ಹಾಲೆಂದೇ ಹಿಟ್ಟು ನೀರು ಕುಡಿದ ಅಶ್ವತ್ಥಾಮ, ವಿಷಾದ ಬಟ್ಟಲಿಗೆ ಬಲಿಯಾದ ಸಾಕ್ರೆಟಿಸ್...

ಎಕ್ಕುಂಡಿಯವರ ಕವಿತೆಯ ಕಿಟಕಿಗೆ ನಾನು ಅಂದಿನಿಂದಲೂ ಆತುಕೊಂಡೇ ಇದ್ದೇನೆ. ಎಕ್ಕುಂಡಿಯವರನ್ನು ನನ್ನ ಮನೆಯಂಗಳದಿಂದ ಇಳಿಸಿಕೊಂಡು ಆ ಗದ್ದೆ ಬದುವಿನ ಮೇಲೆ ನಡೆಯುತ್ತಾ ಅಲ್ಲಿನ ವಿಶ್ವವಿದ್ಯಾಲಯ, ಕಾಲೇಜು, ಆಕಾಶವಾಣಿಗೆ ಕರೆದೊಯ್ದೆ. ಎಕ್ಕುಂಡಿ ಅವರು ತಮ್ಮ ಕವಿತೆಗಳ ಬಗ್ಗೆ ಮಾತನಾಡಿದ್ದೇ ಇಲ್ಲ ಎನ್ನುವಷ್ಟು ಅಪರೂಪ. ಆದರೆ ಎಕ್ಕುಂಡಿಯವರು ಆ ಬಾರಿ ತಮ್ಮ ಕವಿತೆಗಳು ಬಕುಲದ ಹೂಗಳಂತೆ ಅರಳಿದ್ದರ ಬಗ್ಗೆ ಮಾತೇ ಮಾತಾಡಿದರು.

ಅಷ್ಟು ದಿನ ಮಾತನಾಡದೆ ಹೋದದ್ದರ ಬಗ್ಗೆಯೂ ಮಾತನಾಡಿದರು. ನನ್ನೊಳಗೆ ನಾನು ಇಳಿಯಲು ಅಂಜುವುದಕ್ಕೆ ಕಾರಣಗಳಿವೆ. ನೆನಪು ಎನ್ನುವುದು ಗಣಿ ಕಾರ್ಮಿಕರನ್ನು ಗಣಿಯಾಳಕ್ಕೆ ಕರೆದೊಯ್ಯಲು ಇರುವ ತೊಟ್ಟಿಲುಗಳ ಹಾಗೆ. ಅವರು ಇಳಿದ ಗಣಿ ಚಿನ್ನದ್ದಿರಬಹುದು. ಆದರೆ ಅವರ ಬಡತನ ತಪ್ಪಿರುವುದಿಲ್ಲ. ಹಾಗೆ ನನ್ನೊಳಗೆ ನಾನು ಇಳಿದಾಗ ನನ್ನನ್ನು ಮೊದಲು ಮುತ್ತಿಕೊಳ್ಳುವುದೇ ನನ್ನ ಬದುಕಿನ ಅಧೀರ ಆರಂಭ ಎಂದು ತಮ್ಮ ಬದುಕಿನ ಅನೇಕ ಸಂಗತಿಗಳನ್ನು ಅದೇ ಮೊದಲ ಬಾರಿಗೆಂಬಂತೆ ಮಾತನಾಡುತ್ತಾ ಹೋದರು. ಹಾಗೆ ಹೇಳುವಾಗ ಒಮ್ಮೆ ಅವರು ಬದುಕಿಗೆ ಒಂದು ಕಿಟಕಿ ಇರಬೇಕು ಎಂದು ಒಬ್ಬ ಆಂಗ್ಲ ಲೇಖಕಿ ಹೇಳಿದ್ದಾಳೆ. ಆದರೆ ನಾನೋ ವಾಸ್ತವದೊಂದಿಗೆ ಹೋರಾಡುವ ಬಲದ ಸಂಗ್ರಹ ಅಸಾಧ್ಯವಿದ್ದರೂ ಗೆಳೆಯರ ಒಡನಾಟದ ಪ್ರೀತಿಯ ಪ್ರಪಂಚದಲ್ಲಿ ಬಂದುದೆಲ್ಲವನ್ನೂ ಬರಮಾಡಿಕೊಳ್ಳುವ ತೆರೆದ ಬಾಗಿಲನ್ನೇ ಹೊಂದಿದ್ದೆ ಎಂದು ಸಂಭ್ರಮಿಸಿದ್ದರು.

ಹಾಗೆ ಅವರು ಹೇಳಿದ ಕೆಲವೇ ವಾರಗಳ ಮೊದಲು ಅವರ 'ಬಕುಲದ ಹೂವುಗಳು' ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ಘೋಷಣೆಯಾಗಿತ್ತು. ಎಕ್ಕುಂಡಿಯವರ ಕಾವ್ಯದ ಬಗ್ಗೆ ಬಂದ ವಿಮರ್ಶೆಗಳು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಆ ಕೊರಗನ್ನು ಬಕುಲದ ಹೂವುಗಳು ಬಗ್ಗೆ ಬಂದ ಲೇಖನಗಳು ಸ್ವಲ್ಪವಾದರೂ ನೀಗಿಸಿದ್ದವು. ನಾನು ಎಕ್ಕುಂಡಿಯವರ ಬಗ್ಗೆ ಅದುವರೆಗೂ ಬಂದ ಲೇಖನಗಳನ್ನೆಲ್ಲ ಒಟ್ಟುಗೂಡಿಸಿ 'ಎಕ್ಕುಂಡಿ ನಮನ'ವನ್ನು ಸಂಪಾದಿಸಲು ಹೊರಟೆ. ಎಕ್ಕುಂಡಿಯವರನ್ನು ಮೇಲಿಂದ ಮೇಲೆ ಭೇಟಿ ಮಾಡಿ ಚರ್ಚಿಸಿದೆ. ಪುಸ್ತಕ ಬೋಳಂತಕೋಡಿ ಈಶ್ವರ ಭಟ್ಟರ ಪುತ್ತೂರು ಕರ್ನಾಟಕ ಸಂಘದಿಂದ ಸಿದ್ಧವಾಯಿತು. ಅದರ ಬಿಡುಗಡೆಗೆ ಕರೆಯಲು ಹೋಗಬೇಕೆನ್ನುವಷ್ಟರಲ್ಲಿ ಅವರು ಇಲ್ಲವಾದ ಸುದ್ದಿ ತಲುಪಿತು. ಎಕ್ಕುಂಡಿಯವರ ಅಭಿನಂದನಾ ಗ್ರಂಥವಾಗಬೇಕಿದ್ದ 'ಎಕ್ಕುಂಡಿ ನಮನ' ಅವರ ಸ್ಮರಣೆಯ ಗ್ರಂಥವಾಯಿತು.

ಕಡಲ ತಡಿಯಲ್ಲಿ ನಿಂತು ಹಾರುತ್ತಿದ್ದ ಬೆಳ್ಳಕ್ಕಿಯನ್ನೂ, ಅಬ್ಬರಿಸುತ್ತಿದ್ದ ಸಮುದ್ರವನ್ನೂ ಒಟ್ಟೊಟ್ಟಿಗೆ ಕಣ್ತುಂಬಿಕೊಳ್ಳುತ್ತಿದ್ದ ಎಕ್ಕುಂಡಿ ಕಡಲಿನ ಅಪಾರ ಹಾಗೂ ಆಗಸದ ಅನಂತತೆ ಎರಡಕ್ಕೂ ಬೆರಗಾಗಿ ನಿಂತಿದ್ದರು. ಆಗಲೇ ಅವರು ನನ್ನ ಕಿವಿಯಲ್ಲಿ 'ನನ್ನ ಕಾವ್ಯಕ್ಕೆ ಬೆಳ್ಳಕ್ಕಿಗಳ ರೆಕ್ಕೆಗಳಿವೆ' ಎಂದಿದ್ದು. ಆ ಮಾತು ಅಂದಿನಿಂದ ಇಂದಿನವರೆಗೂ ನನ್ನ ಕಿವಿಯಲ್ಲಿ ಅನುರಣಿಸುತ್ತಲೇ ಇದೆ.



ಚಿತ್ರ: ಎ.ಎನ್. ಮುಕುಂದ್

...ಸಾಗರ ವೀಣೆ

10ನೇ ಪುಟದಿಂದ...

ಅದನ್ನು ನೋಡಿಕೊಂಡು, ಅಪರಿಚಿತ ರಾಗಗಳ ಆರೋಹಣ-ಅವರೋಹಣಗಳನ್ನು ಮೆಟ್ಟಿಲುಗಳಿಲ್ಲದ ಜಾರು ತಂತಿಗಳ ವಾದ್ಯಗಳ ಮೇಲೆ ನುಡಿಸಲು ಕಲಿಯುವುದು 15-16ರ ಆಸುಪಾಸಿನಲ್ಲಿದ್ದ ಜೆಹರಾರಿಗೆ ತುಂಬ ಮುದವೆನ್ನಿಸುವ ಸಂಗತಿಯಾಗಿತ್ತು.

ಹೇಗೆ ನುಡಿಸಬೇಕು ಎಂಬುದನ್ನು ಜೆಹರಾರೇ ಕಂಡುಕೊಳ್ಳಬೇಕಿತ್ತು. ಏಕೆಂದರೆ ಸಂಗೀತದ ಮೇಷ್ಟ್ರು ಬಂದಿಶ್‌ಗಳನ್ನು ಹಾಡಿ ತೋರಿಸುತ್ತಿದ್ದರು, ಇವರು ಅದನ್ನು ನುಡಿಸಬೇಕಿತ್ತು. ಹಾಗೆ ನೋಡಿದರೆ ನಂತರ 1973ರವರೆಗೂ ಔಪಚಾರಿಕವಾದ ತರಬೇತಿ ಎನ್ನುವುದು ಶುರುವಾಗಲಿಲ್ಲ, ಅದು ಶುರುವಾಗಿದ್ದು ಉಸ್ತಾದ್ ಶರೀಫ್ ಖಾನ್ ಪೋಂಚ್‌ವಾಲೇ ಅವರು ಜೆಹರಾರಿಗೆ ಕಲಿಸಲು ಆರಂಭಿಸಿದಾಗ. ಈ ನಡುವೆ 1971ರಲ್ಲಿ ಲಂಡನ್ನಿನಲ್ಲಿರುವ ರಾಜೇಶ್ವರಿ ದತ್ತಾ ಅವರ ಬಳಿ ಸುಮಾರು ಒಂಬತ್ತು ತಿಂಗಳು, ತದನಂತರ ಅಮೆರಿಕದಲ್ಲಿ ಅಲಿಅಕ್ಬರ್ ಖಾನ್ ಸಾಹೇಬರ ಮ್ಯೂಸಿಕ್ ಕಾಲೇಜಿನಲ್ಲಿ ಆರು ತಿಂಗಳು ಕಳೆದಿದ್ದರೂ ನಿಜವಾದ ಅರ್ಥದಲ್ಲಿ ಸಾಗರ ವೀಣೆಯ ಮೇಲೆ ಅಭ್ಯಾಸ ಶುರುವಾಗಲೇ ಇಲ್ಲ.

1972ರಲ್ಲಿ ಸಾಗರ ವೀಣೆಯ ಇನ್ನೊಂದು ಮಾದರಿ ರೂಪುಗೊಂಡಿತು. ಮಗಳಿಗೇನೋ ಸಂಗೀತ ಕಲಿಕೆ ಮನಸ್ಸಿನ ಖುಷಿಗೆ ಎಂಬಂತಿದ್ದರೂ ರಜಾ ತುಂಬ ಗಂಭೀರವಾಗಿ ತಮ್ಮ ಮನಸ್ಸಿನಲ್ಲಿದ್ದ ಧ್ವನಿಕಲ್ಪನೆಯನ್ನು ಸಾಕಾರಗೊಳಿಸಬಲ್ಲ ಹೊಸ ವಾದ್ಯವೊಂದರ ಶೋಧದಲ್ಲಿದ್ದರು. ಸಂಗೀತ, ಕಲಾಮೀಮಾಂಸೆ, ವಾದ್ಯಗಳ ಧ್ವನಿಸಾಧ್ಯತೆ ಹಾಗೂ ನಾದದ ಗುಣಮಟ್ಟ ಇಂತಹ ವಿಚಾರಗಳ ಕುರಿತು ರಜಾ ಕಾಜಿಮರ ಚಿಂತನೆ ಪ್ರಖರವಾಗುತ್ತ ನಡೆದಂತೆ, ಸಾಗರ ವೀಣೆಯನ್ನು ಮಾರ್ಪಡಿಸುತ್ತ, ಮತ್ತಷ್ಟು ಅಭಿವೃದ್ಧಿಪಡಿಸುವ ಪ್ರಕ್ರಿಯೆಯೂ ಸಾಗಿತು.

ಸಾಗರ ವೀಣೆಯ ಮೇಲೆ ಅವರು ಕೆಲಸ ಮಾಡುತ್ತಿರುವಾಗ, ಅದನ್ನು ಆಗಾಗ ನುಡಿಸಿ ಪರೀಕ್ಷಿಸಲು ಹದಿನಾರರ ವಯಸ್ಸಿನ ಜೆಹರಾ ಅವರ ಜೊತೆಗೆ ಇರಬೇಕಾಗುತ್ತಿತ್ತು, ಹೀಗಾಗಿ ಕಾಲೇಜಿಗೆ ಸೇರಲಿಲ್ಲ. ರಜಾ ಒಮ್ಮೆ ಮಗಳಿಗೆ ಶಿಕ್ಷಣ ಅಥವಾ ಸಂಗೀತ, ಎರಡರಲ್ಲಿ ಒಂದನ್ನು ಆಯ್ಕೆ ಮಾಡಿಕೋ ಎಂದಿದ್ದರು. ಆದರೆ ನಿಜವೆಂದರೆ ಸಂಗೀತದ ಹೊರತಾಗಿ ಬೇರೆ ಆಯ್ಕೆ ಇರಲಿಲ್ಲ. ಜೆಹರಾ ಮುಂದೆ ಇಂಟರ್‌ಮೀಡಿಯಟ್ ಹಾಗೂ ಪದವಿ ಎರಡನ್ನೂ ಖಾಸಗಿಯಾಗಿ ಮಾಡಿಕೊಂಡರು.

ಸಾಗರ ವೀಣೆಯ ಪ್ರತಿಯೊಂದು ಮಾದರಿ ಹೊರಬಂದಾಗಲೂ, ರಾಗದ ಶೋಧನೆಗೆ ಇನ್ನಷ್ಟು ಅವಕಾಶವನ್ನು ಒದಗಿಸುತ್ತಿತ್ತು. ಅಲೆನ್ ಡೇನಿಯಲೊನ ಪುಸ್ತಕ ಬೆರಳು ಹಿಡಿದೊಯ್ದು ಕರೆದೊಯ್ಯುವ ಮಾರ್ಗದರ್ಶಿಯಾಗಿತ್ತು. ಸುರಬಹಾರ್ ಹಾಗೂ ಸಾಗರ ವೀಣೆಯ ಟಿಂಬರಲ್ ವ್ಯತ್ಯಾಸ ಅಂದರೆ ನಾದಗುಣದಲ್ಲಿದ್ದ ವ್ಯತ್ಯಾಸ ಜೆಹರಾಗೊಂದು ಅನುಕೂಲ ಒದಗಿಸಿತ್ತು. ಧ್ವನಿಯು ಮೊದಲಿಗಿಂತ ಹೆಚ್ಚು ಘನವಾಗಿ, ಆಳವಾಗಿ, ಹೆಚ್ಚು ಸಮಯ ವಾದ್ಯದೊಳಗೆ ಅನುರಣಿಸುತ್ತಿತ್ತು, ಹೀಗಾಗಿ ಭೈರವದಂತಹ ರಾಗಗಳು ಬಡಿದೆಬ್ಬಿಸುವ ಭಾವನೆಗಳ ಜೊತೆಗೆ ತುಸು ಹೆಚ್ಚು ಸಮಯ ನೆಲೆಗೊಳ್ಳಲು ಸಾಧ್ಯವಾಗುತ್ತಿತ್ತು.

'ನಾನು ಶಿವ ಭೈರವ್ ಎಂಬ ರಾಗವನ್ನು ಮೊದಲು ಕೇಳಿರಲಿಲ್ಲ. ಅಲೆನ್ ಪುಸ್ತಕದಲ್ಲಿ ಅದರ ಆರೋಹಣ, ಅವರೋಹಣವನ್ನು ಕೊಟ್ಟಿದ್ದರು. ಇದರಲ್ಲಿ ಕೋಮಲ ಧ, ರೆ ಸ್ವರಗಳಲ್ಲಿ ನಿಂತು, ನಂತರ ಎರಡೂ ನಿಷದ್ ಬಳಸುವುದು ಎಂದರೆ ಅಪರಿಚಿತ ಲೋಕದೊಳಗೆ ಸಾಗಿದಂತೆ ಎನ್ನಬಹುದು. ನಾನು ನನ್ನದೇ ವಿಧಾನವೊಂದನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿದ್ದೆ. ನಾನೇನು ಮಾಡುತ್ತಿದ್ದೇನೆ ಎಂಬುದನ್ನು ಯಾವುದೇ ಸಂಗೀತ ಗುರುಗಳೂ ನನ್ನ ಪ್ರಶ್ನಿಸಲಾರದ ದಾರಿಯಲ್ಲಿದ್ದೆ. ನಮ್ಮ ತಂದೆಯವರೂ ಅದನ್ನು ಪೂರ್ಣವಾಗಿ ಪ್ರೋತ್ಸಾಹಿಸಿದರು' ಎಂದು ಜೆಹರಾ ಸ್ಮರಿಸುತ್ತಾರೆ.

'ಸಾಗರ ವೀಣೆಯ ಘನವಾದ, ನಿರಂತರವಾದ ಧ್ವನಿ ತಂದೆಯವರಿಗೆ ನಿದ್ದೆ ತರಿಸುತ್ತಿತ್ತು. ನಿಜವೆಂದರೆ ನಾನು ಬೆಳಗ್ಗೆ ಶಿವ ಭೈರವ್ ರಾಗವನ್ನು ಅಭ್ಯಾಸ ಮಾಡುತ್ತಿದ್ದರೆ, ನಮ್ಮ ತಂದೆ ನಿದ್ದೆಗೆ ಜಾರುತ್ತಿದ್ದರು. ನಾನು ವೀಣೆ ನುಡಿಸೋದನ್ನು ನಿಲ್ಲಿಸಿದಾಗಲೇ ಅವರಿಗೆ ಎಚ್ಚರವಾಗುತ್ತಿತ್ತು. ವೀಣೆಯನ್ನು ರೂಪಿಸುತ್ತ ಹೋದ ಈ ಪ್ರಕ್ರಿಯೆ ನನ್ನತನದ ವಿವಿಧ ಮಗ್ಗುಲುಗಳನ್ನು ಅರಿಯುತ್ತ ಸಾಗುವುದಕ್ಕೆ ಸಹಾಯ ಮಾಡಿತು. ಬೇರೆ ರೀತಿಯಲ್ಲಿ ಇದೆಲ್ಲ ಸಾಧ್ಯವಾಗುತ್ತಿತ್ತು ಅಂತ ನಂಗನ್ನಿಸೋದಿಲ್ಲ' ತಾವು ಸಾಗಿ ಬಂದ ದಾರಿಯನ್ನು ಅವಲೋಕಿಸುತ್ತ ಜೆಹರಾ ಚಿಂತನಾಮಗ್ನರಾಗಿ ಹೇಳುತ್ತಾರೆ.

1973ರಲ್ಲಿ ಉಸ್ತಾದ್ ಶರೀಫ್ ಖಾನ್ ಸಾಹೇಬರಲ್ಲಿ ಔಪಚಾರಿಕ ತರಬೇತಿಯ ಹಾಗೆ ಕಲಿಯಲು ಶುರು ಮಾಡಿದೊಡನೆ, ತುಂಬ ಕಟ್ಟುನಿಟ್ಟಿನ ಅಭ್ಯಾಸ ದಿನಚರಿ ಶುರುವಾಯಿತು. 'ಅವರು ಬಹಳ ಶಿಸ್ತಿನ ಗುರು. ಸ್ವರಗಳ ನಿಖರತೆಯಲ್ಲಿ ಯಾವುದೇ ರಾಜಿಗೆ ಆಸ್ಪದವಿಲ್ಲ. ಆಲಾಪದಿಂದ ಶುರು ಮಾಡಿ, ದ್ರುತ್ ಗತ್‌ವರೆಗೆ ಅವರು ಕಲಿಸಿದ ಕ್ರಮದಲ್ಲಿಯೇ ಸಾಗಬೇಕಿತ್ತು. ಅವರು ಬಹುಶಃ ಮೂರು ರಾಗಗಳನ್ನು ಕಲಿಸಿದರು ಎನ್ನಿಸುತ್ತೆ. ಒಂದೆರಡು ರಾಗಗಳ ಕಿರು ಆವೃತ್ತಿಗಳು. ಎರಡು ವರ್ಷಗಳ ಕಠಿಣ ಅಭ್ಯಾಸದ ನಂತರ ಇನ್ನು ಸಾಧ್ಯವಿಲ್ಲ ಎನ್ನಿಸಿ ನಾನು ಕೈಬಿಟ್ಟೆ' ಎಂದು ನಸುನಗುತ್ತಾರೆ ಜೆಹರಾ.

ಸಾಗರ ವೀಣೆಯ ರಚನೆ: ಸಾಗರವೀಣೆಯು ಮೇಲ್ನೋಟಕ್ಕೆ ಎರಡು ಕೊಡಗಳಿರುವ ವೀಣೆಯಂತೆಯೇ ಇದ್ದರೂ ರಾಚನಿಕವಾಗಿ ತುಂಬ ಭಿನ್ನತೆಯಿಂದ ಕೂಡಿದೆ. ಈ ರಾಚನಿಕ ಭಿನ್ನತೆಯೇ ಇದನ್ನು, ಕಂಪನಗಳನ್ನು ಹುಟ್ಟುಹಾಕುವ ಇನ್ನಿತರ ತಂತಿ ವಾದ್ಯಗಳಿಂದ ಪ್ರತ್ಯೇಕಿಸಿ, ಅನುರಣನಗೊಳ್ಳುವ ವಾದ್ಯವನ್ನಾಗಿ ರೂಪಿಸಿದೆ. 1994ರಲ್ಲಿ ಸಾಗರವೀಣೆಯ ನಾಲ್ಕನೆಯ ಪ್ರೋಟೋಟೈಪ್ ಅಭಿವೃದ್ಧಿಪಡಿಸಿದರು. ಇದರಲ್ಲಿ ಕಂಪಿಸುವ ಹಾಗೂ ಅನುರಣನಗೊಳ್ಳುವ ಭಾಗಗಳು ಪ್ರತ್ಯೇಕವಾಗಿವೆ, ಹೀಗಾಗಿ ನಾದವು ತುಂಬ ಘನವಾಗಿದ್ದು, ಸಾತತ್ಯ ಹಾಗೂ ಸ್ಪಷ್ಟತೆ ಎರಡೂ ವೃದ್ಧಿಸುವಂತೆ ಮಾಡಿದೆ.

ಮಿಜ್ರಬ್‌ನಿಂದ ತಂತಿಯನ್ನು ಮೀಟಿದಾಗ ಆ ಸ್ವರ ಹಿಂದೆ ಉಳಿದು, ಅದರ ಕಂಪನಗಳು ಪ್ರತಿಧ್ವನಿಸುವ ರೀತಿಯಲ್ಲಿ ಅನುರಣಿಸುವ ಕೋಶಗಳನ್ನು (ಎರಡು ತುಂಬ್ಬಾಗಳು, ಒಂದು ದಂತಿ, 2 ಅನುರಣಿಸುವ ಪಾದ ಅಥವಾ ಬೇಸ್) ವಿನ್ಯಾಸಪಡಿಸಿ, ಪರಸ್ಪರ ಜೋಡಿಸಲಾಗಿದೆ.

ಜವಾರಿಯ (ಬ್ರಿಜ್) ಮೇಲಿರುವ ತಂತಿಯನ್ನು ಮೀಟಿದಾಗ, ಹೇಗೆ ವರ್ತಿಸುತ್ತದೆ, ಅದು ಹೊರಹೊಮ್ಮಿಸುವ ಶಬ್ದದ ಗುಣಲಕ್ಷಣಗಳೇನು ಎಂಬುದನ್ನು ಕಂಡುಕೊಳ್ಳುವುದಕ್ಕೆ ರಜಾ ತುಂಬ ಸಮಯ ಕಳೆದರು. ವಾದ್ಯದ ಈ ಬಹುಮುಖ್ಯವಾದ ಭಾಗದ ಮೇಲೆ ಅವರೇ ಸ್ವತಃ ಕಡಿಮೆಯೆಂದರೂ ನಲ್ವತ್ತು ವರ್ಷ ಕಾಲ ಕೆಲಸ ಮಾಡಿದ್ದಾರೆ. ಈ ಭಾಗಕ್ಕೆ ಬಳಸುವುದಕ್ಕೆ ವಿವಿಧ ವಸ್ತುಗಳ ಕುರಿತು ಶೋಧನೆ ನಡೆಸಿದ್ದಾರೆ.

ಈಗ ಬಳಸುತ್ತಿರುವ ಜವಾರಿಯು ಬೇರೆ ಬೇರೆ ಸಾಮಗ್ರಿ ಹಾಗೂ ಅಂಟುಪದಾರ್ಥಗಳ (ಅಡ್ಹೆಸಿವ್) ಸಮ್ಮಿಶ್ರಣವಾಗಿದ್ದು, ಇದು ಶಬ್ದದ ಶಕ್ತಿಯನ್ನು ವಾದ್ಯದೊಳಗೆ ಪರಿಣಾಮಕಾರಿಯಾಗಿ ವರ್ಗಾಯಿಸುತ್ತದೆ. ವಾದ್ಯದ ಕೆಳಭಾಗದ ಕೊಡದ ಆಕೃತಿಯು ಸಂಕೀರ್ಣ ಅನುರಣನಗಳನ್ನು ಹುಟ್ಟುಹಾಕಲು ಸಹಾಯಕವಾಗಿದೆ. ಇದೇ ನಾವು ಕೇಳುವ ಸಂಗೀತಕ್ಕೆ ಮೂಲಸಾಮಗ್ರಿಯಾಗುವ ಒಂದು ಸ್ವರವಾಗುತ್ತದೆ. ಎಡಗೈಯಲ್ಲಿ ನುಡಿಸುವುದಕ್ಕೆ ಬಳಸುವ ಹಿತ್ತಾಳೆಯ 'ವಾಟ್ಟ'ವನ್ನು ಕೂಡ ರಜಾ ಅವರೇ ಅಭಿವೃದ್ಧಿಪಡಿಸಿದ್ದಾರೆ.

1994ರಲ್ಲಿ ವಾದ್ಯದ ಗಾತ್ರ, ಬಳಸುವ ಸಾಮಗ್ರಿ ಇತ್ಯಾದಿಗಳನ್ನು ಪ್ರಮಾಣೀಕರಣಗೊಳಿಸಿದ ನಂತರ 2015-16ರವರೆಗೂ ರಜಾ ಅನಾರೋಗ್ಯಕ್ಕೀಡಾಗುವವರೆಗೂ ಚಿಕ್ಕಪುಟ್ಟ ಮಾರ್ಪಾಡುಗಳೊಡನೆ ಒಂದರ ನಂತರ ಇನ್ನೊಂದರಂತೆ 17 ಆವೃತ್ತಿಗಳನ್ನು ಸಿದ್ಧಪಡಿಸಿದರು. ಆಯಾ ಹಂತದಲ್ಲಿ ರೂಪುಗೊಂಡ ವಾದ್ಯದಲ್ಲಿ ಜೆಹರಾ ಆಗೀಗ ಸಾರ್ವಜನಿಕ ಕಛೇರಿಗಳನ್ನು ನೀಡುತ್ತಿದ್ದರು. ಭಾರತದಲ್ಲಿಯೂ ನಾಲ್ಕಾರು ಕಡೆ ನಡೆದ ಅವರ ಕಛೇರಿಯನ್ನು ಕಲಾರಸಿಕರು ಬಹುವಾಗಿ ಮೆಚ್ಚಿಕೊಂಡಿದ್ದರು.

ಅಂದಹಾಗೆ ತುಮ್ಬಾ ಅಥವಾ ಕೊಡಗಳಿಗಾಗಿ ರಜಾ ಅವರ ಹುಡುಕಾಟ ಮಿರಜಿನವರೆಗೂ ನಡೆದಿತ್ತು. ತೊಂಬತ್ತರ ದಶಕದ ಆರಂಭದಲ್ಲಿ ರಜಾ ಅವರ ಹೆಂಡತಿ ಮಿರಜಿಗೆ ಭೇಟಿ ನೀಡಿ, ಮರದ ಕೊಡಗಳನ್ನು ತೆಗೆದುಕೊಂಡು ಹೋಗಿದ್ದರು. ಆದರೆ ಆ ಕೊಡಗಳ ಆಕಾರ ಹಾಗೂ ನಾದವನ್ನು ಹುಟ್ಟುಹಾಕುವ ಗುಣ ರಜಾ ಅವರಿಗೆ ಅಗತ್ಯವಾಗಿದ್ದ ರೀತಿಯಲ್ಲಿರಲಿಲ್ಲ, ಹೀಗಾಗಿ ಅವುಗಳನ್ನು ಬಳಸಿಕೊಳ್ಳಲು ಆಗಲಿಲ್ಲ.

'ಸಾಗರ ವೀಣೆಯನ್ನು ರೂಪುಗೊಳಿಸುವ ಪ್ರಕ್ರಿಯೆ ತುಂಬ ತೀವ್ರವಾಗಿ ನಡೆದಿದ್ದು ಕಳೆದ 10-12 ವರ್ಷಗಳಲ್ಲಿ. ಈ ಕಾಲಘಟ್ಟದಲ್ಲಿ ನನ್ನ ಸ್ವಂತ ನುಡಿಸಾಣಿಕೆಯೂ ಹಿಂದೆ ಸರಿಯಿತು. ಕಠಿಣವಾದ ಸಮಯ... ಆದರೆ ಹೊಂದಿಕೊಳ್ಳಬೇಕಿತ್ತು. ದಶಕಗಳ ಅವಧಿಯಲ್ಲಿಯೇ ವಾದ್ಯವೊಂದು ಅಭಿವೃದ್ಧಿಯಾಗುವುದನ್ನು ನೋಡುವ ಸುಯೋಗ ಯಾರಿಗೆ ಲಭಿಸುತ್ತದೆ! ವಾದ್ಯಗಳು ವಿಕಾಸಗೊಳ್ಳುತ್ತ, ರೂಪುಗೊಳ್ಳುವುದಕ್ಕೆ ಶತಮಾನಗಳೇ ಬೇಕಾಗುತ್ತವೆ. ಕೊನೆಯದಾಗಿ ಮಾರ್ಪಾಟುಗೊಂಡ ಈ ವಾದ್ಯವನ್ನು ಮುಂದಿನ ದಿನಗಳಲ್ಲಿ ಶ್ರುತಿ ಸಾಗರ್ ಎಂದು ಕರೆಯಬೇಕೆಂದು ರಜಾ ಬಯಸಿದ್ದಾರೆ. ಕಳೆದೆರಡು ವರ್ಷಗಳಿಂದ ಇದರ ನುಡಿಸಾಣಿಕೆಯಲ್ಲಿ ಹೆಚ್ಚು ಸಮಯವನ್ನು ಕಳೆಯುತ್ತಿದ್ದೇನೆ, ವಾದ್ಯದೊಂದಿಗೆ, ರಾಗಗಳೊಂದಿಗೆ ಮತ್ತೆ ನಂಟು ಗಟ್ಟಿಗೊಳಿಸಿಕೊಳ್ಳುತ್ತಿದ್ದೇನೆ' ಎನ್ನುತ್ತಾರೆ ಜೆಹರಾ.

ಲಾಹೋರಿನಲ್ಲಿ ವಾಸಿಸುವ ನೂರ್ ಜೆಹರಾರೊಂದಿಗೆ ಮಾತನಾಡುವುದೇ ಒಂದು ಆಪ್ತಭಾವದ, ಅಕ್ಕರೆಯ ಸಿಂಚನದ ಅನುಭವ. ಯಾವುದೇ ಹಮ್ಮುಬಿಮ್ಮುಗಳಿಲ್ಲದೇ, ಸಹಜವಾಗಿ, ಸರಳವಾಗಿ ಸಾಗರ ವೀಣೆಯು ಅಭಿವೃದ್ಧಿಗೊಳ್ಳುತ್ತ ಸಾಗಿದ ಪ್ರಕ್ರಿಯೆಯನ್ನು, ತಮ್ಮ ಕಲ್ಪನೆಯ ಸ್ವರದ, ನಾದದ ಹುಡುಕಾಟದಲ್ಲಿ ದಣಿವರಿಯದೇ ದುಡಿದ ರಜಾ ಕಾಜಿಮರ ಬದ್ಧತೆ, ಶ್ರದ್ಧೆಯನ್ನು ಮಾತಿನಲ್ಲಿ ಕಟ್ಟಿಕೊಡುತ್ತಾರೆ.

ಸುರಬಹಾರಿನಿಂದ ಆರಂಭಗೊಂಡ ತಂದೆ-ಮಗಳ ಸ್ವರಪಯಣ, ನಾದಶೋಧ ಸಾಗರ ವೀಣೆಯ ಆವಿಷ್ಕಾರದವರೆಗೆ ಹಲವು ಪದರಗಳಲ್ಲಿ ಹುದುಗಿದೆ. ಇಂಥದೊಂದು ಅಪೂರ್ವ, ಅಪರೂಪದ ವಾದ್ಯವೊಂದು ನಮ್ಮ ಪಕ್ಕದ ದೇಶದಲ್ಲಿಯೇ ರೂಪುಗೊಂಡಿರುವುದು ಉಪಖಂಡದ ಸಂಗೀತ ಪರಂಪರೆ ಅವಿಚ್ಛಿನ್ನವಾಗಿ ಸಾಗಿಬರುತ್ತಿರುವುದಕ್ಕೆ ಸಾಕ್ಷಿಯಾಗಿದೆ.



ಇಳಿವಯಸ್ಸಿನಲ್ಲೂ ರಜಾ ಕಾಜಿಮ್ ಸಾಗರೋತ್ಸಾಹ... ಸಾಗರ ವೀಣೆಯ ಅಭಿವೃದ್ಧಿಯ ಆರಂಭಿಕ ಹಂತ

ಮುನ್ನೋಟ 18-12-2022 ರಿಂದ 24-12-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮದೇ ನಡೆಯಬೇಕೆನ್ನುವ ಹಠ ನಿಮ್ಮಲ್ಲಿ ಇರುತ್ತದೆ. ದೂರ ಪ್ರಯಾಣದ ವಿಹಾರವನ್ನು ಏರ್ಪಾಡು ಮಾಡಿ ಖರ್ಚು ಮತ್ತು ವ್ಯಸನವನ್ನು ತಂದುಕೊಳ್ಳುವಿರಿ. ಕಚೇರಿಯಲ್ಲಿ ನಿಮ್ಮ ಸ್ಥಾನದ ಜವಾಬ್ದಾರಿಯನ್ನು ಅರಿತು ನಡೆಯಿರಿ. ಹಣದ ಒಳಹರಿವು ಕಡಿಮೆ ಇರುವುದರಿಂದ ಆರ್ಥಿಕ ಸಂಗ್ರಹಣೆಗಾಗಿ ಮಾರ್ಗಗಳನ್ನು ಹುಡುಕುವಿರಿ. ಎತ್ತರದ ಸ್ಥಳಗಳಲ್ಲಿ ಕೆಲಸ ಮಾಡುವವರು ಜಾಗ್ರತೆವಹಿಸಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಸಿನಿಮಾ ನಟರಿಗೆ ಉತ್ತಮ ಅವಕಾಶ ಸಿಗುವ ಸಾಧ್ಯತೆ ಇದೆ. ಕೆಲವೊಂದು ವಿಚಾರಗಳ ಬಗ್ಗೆ ಮನಸ್ಸಿನಲ್ಲಿ ಆತಂಕವಿರುತ್ತದೆ. ಅದನ್ನು ದೂರ ಮಾಡಿ ಮುಂದುವರಿಯಿರಿ. ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುವ ಕಾಲವಿದು. ಕೆಲವರಿಗೆ ವಾಸಸ್ಥಾನ ಬದಲಾಗಬಹುದು. ಕುಟುಂಬದವರ ಮಾತಿಗೆ ಬೆಲೆ ಕೊಡುವುದು ಬಹಳ ಉತ್ತಮ. ಭಾಷಣಕಾರರಿಗೆ ಉತ್ತಮ ವೇದಿಕೆ ದೊರೆಯುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ನಿಮ್ಮ ವ್ಯಾಪಾರ ವ್ಯವಹಾರಗಳಲ್ಲಿ ಸಾಕಷ್ಟು ಹಿಡಿತ ಸಾಧಿಸುವಿರಿ. ಮೋಸಗಾರರನ್ನು ಹುಡುಕಿ ವ್ಯವಹಾರಗಳಿಂದ ಹೊರಗಿಡುವಿರಿ. ನಿಮ್ಮ ನಿರ್ಧಾರಗಳು ಸರಿಯೆಂದು ಪಾಲುದಾರರಿಗೆ ಅರಿವು ಮೂಡುತ್ತದೆ. ರಕ್ತ ಸಂಬಂಧಿ ತೊಂದರೆ ಇರುವವರು ಚಿಕಿತ್ಸೆ ತೆಗೆದುಕೊಳ್ಳುವುದು ಒಳ್ಳೆಯದು. ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಕೆಲಸದ ಒತ್ತಡ ಹೆಚ್ಚಾಗಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಸಂಸಾರದಲ್ಲಿನ ಜವಾಬ್ದಾರಿ ಹೆಚ್ಚಾಗಲಿದೆ. ಧನ ಆದಾಯ ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ಗೃಹ ಸಾಮಗ್ರಿಗಳ ಖರ್ಚು ಹೆಚ್ಚಾಗುತ್ತದೆ. ಹೊಸ ಜನರ ಸಂಪರ್ಕದಿಂದ ನಿಮ್ಮ ವ್ಯವಹಾರ ವಿಸ್ತರಿಸುತ್ತದೆ. ಚರ್ಮದ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವವರಿಗೆ ಲಾಭ ಹೆಚ್ಚುತ್ತದೆ. ತಂದೆಯಿಂದ ಮತ್ತು ಹಿರಿಯರಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಹೆಚ್ಚಿನ ಸಹಾಯ ದೊರೆಯುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಗಣ್ಯ ವ್ಯಕ್ತಿಗಳಿಗೆ ಸಮಾಜದಲ್ಲಿ ಗೌರವ ದೊರೆಯುತ್ತದೆ. ಕೆಲವರಿಗೆ ರಾಜಕೀಯ ಪ್ರವೇಶ ದೊರೆಯುವ ಸಾಧ್ಯತೆ ಇದೆ. ನಿಮ್ಮ ವ್ಯವಹಾರಗಳಲ್ಲಿ ಆತ್ಮೀಯರ ಸಲಹೆಗಳನ್ನು ಪರಿಗಣಿಸುವುದು ಬಹಳ ಉತ್ತಮ. ಜಮೀನು ಅಭಿವೃದ್ಧಿಪಡಿಸುವವರಿಗೆ ಈಗ ಉತ್ತಮ ಸಹಕಾರ ದೊರೆಯುತ್ತದೆ. ದೈವದ ಹರಕೆ ತೀರಿಸಲು ಕುಟುಂಬ ಸಮೇತ ಹೊರಡುವಿರಿ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಆಭರಣ ಕೊಳ್ಳುವಾಗ ಮೋಸ ಹೋಗುವ ಸಾಧ್ಯತೆಗಳಿವೆ, ಎಚ್ಚರ ವಹಿಸಿರಿ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕ ವೃತ್ತಿ ಮಾಡುವವರು ಸಾಕಷ್ಟು ತಯಾರಿಯನ್ನು ಮಾಡಿಕೊಳ್ಳಬೇಕಾಗುತ್ತದೆ. ಕೆಲವು ದುಂದುವೆಚ್ಚಗಳಿಂದ ಸಂಸಾರ ನಿರ್ವಹಣೆಯ ವೆಚ್ಚ ಹೆಚ್ಚಾಗುತ್ತದೆ. ಧನ ಆದಾಯ ಅಗತ್ಯಕ್ಕಿಂತ ಕಡಿಮೆ ಇರುತ್ತದೆ. ವಿವಾಹ ಆಕಾಂಕ್ಷಿಗಳಿಗೆ ಸಂಗಾತಿ ಒದಗುವ ಸಾಧ್ಯತೆ ಇದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಬರಹಗಾರರಿಗೆ ಹೆಚ್ಚು ಪ್ರಾಮುಖ್ಯ ದೊರೆಯುತ್ತದೆ. ಸಂಶೋಧಕರಿಗೆ ಅತಿ ಅಗತ್ಯವಿದ್ದ ಮಾಹಿತಿಯ ಪುಸ್ತಕ ದೊರೆಯುತ್ತದೆ. ಸನ್ನಿವೇಶಕ್ಕೆ ತಕ್ಕಂತೆ ಬದಲಾಗುವ ನಿಮ್ಮ ಗುಣ ಕೆಲವರಿಗೆ ಬೇಸರ ತರಿಸಬಹುದು. ತೆರಿಗೆ ಅಧಿಕಾರಿಗಳಿಗೆ ಹೆಚ್ಚು ಒತ್ತಡದ ಕೆಲಸಗಳಿರುತ್ತವೆ. ಕುಟುಂಬದಲ್ಲಿ ಮನಃಸ್ತಾಪ ಬರುವ ಸಂಭವವಿದೆ. ಬಯಸಿದ್ದ ಊರಿನ ಬದಲು ದೂರದೂರಿಗೆ ವರ್ಗಾವಣೆ ಆಗಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಆತ್ಮಗೌರವ ಹೆಚ್ಚಾಗುತ್ತದೆ. ಯಾವುದೇ ಅಪೇಕ್ಷೆ ಇಲ್ಲದೆ ಮಾಡುವ ಕೆಲಸಗಳಿಗೆ ಉತ್ತಮ ಫಲ ದೊರೆಯುತ್ತದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಶತ್ರುಗಳನ್ನು ಪತ್ತೆ ಮಾಡಲು ಹಲವಾರು ತಂತ್ರಗಳನ್ನು ಬಳಸುವಿರಿ. ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ದೊರೆಯುವ ಕಾಲ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ನಿಮ್ಮ ಕಾರ್ಯದೊತ್ತಡದ ನಡುವೆ ಕುಟುಂಬದ ಕಡೆಗೂ ಗಮನಹರಿಸಿರಿ. ಗೃಹ ತಾಪತ್ರಯಗಳೆಲ್ಲ ನಿಧಾನವಾಗಿ ಕರಗುತ್ತವೆ. ಸೋದರಿಯರು ಸಂಬಂಧ ವೃದ್ಧಿಸಿಕೊಳ್ಳಲು ಬರುವರು. ರಾಜಕೀಯದಲ್ಲಿರುವ ಮಹಿಳೆಯರಿಗೆ ಹೆಚ್ಚಿನ ಪ್ರಾಮುಖ್ಯ ಬರುತ್ತದೆ. ಪ್ರಮುಖ ವಿಷಯಗಳ ಬಗ್ಗೆ ಗಂಭೀರವಾಗಿ ಚಿಂತಿಸಿದಾಗ ಪರಿಹಾರ ದೊರೆಯುತ್ತದೆ. ನಿಮ್ಮೆಲ್ಲಾ ಅಭಿವೃದ್ಧಿಗೆ ಸ್ನೇಹಿತರು ಸಹಕಾರ ನೀಡುವರು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ನಿಮ್ಮ ಕೆಲಸ ಕಾರ್ಯಗಳಿಗೆ ಹಿರಿಯರ ಆಶೀರ್ವಾದ ಇರುತ್ತದೆ. ದೂರ ಪ್ರಯಾಣದಿಂದ ನಿಮಗೆ ಲಾಭವಿರುತ್ತದೆ. ಸೂಕ್ಷ್ಮ ವಿಚಾರಗಳಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಹೆಚ್ಚು ಎಚ್ಚರವಹಿಸಿರಿ. ಸಹೋದ್ಯೋಗಿಗಳು ನಿಮ್ಮ ಬಗ್ಗೆ ಕಾಳಜಿ ತೋರುವರು. ಕೋರ್ಟ್ ಕಚೇರಿ ವ್ಯವಹಾರಗಳಲ್ಲಿ ನಿಮಗೆ ಮುನ್ನಡೆ ಇರುತ್ತದೆ. ಔಷಧ ವ್ಯಾಪಾರಿಗಳಿಗೆ ವ್ಯಾಪಾರ ವೃದ್ಧಿಯಾಗುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಹೊಸ ಸ್ಥಳದಲ್ಲಿ ಶಿಕ್ಷಕ ವೃತ್ತಿ ಆರಂಭಿಸುವವರಿಗೆ ಸೂಕ್ತ ಅನುಕೂಲ ದೊರೆಯುತ್ತದೆ. ಬಾಕಿ ಇರುವ ಕೆಲಸಗಳನ್ನು ಈಗ ಮುಗಿಸಿಕೊಳ್ಳಬಹುದು. ಬಟ್ಟೆ ಉದ್ದಿಮೆದಾರರಿಗೆ ಹೆಚ್ಚು ತಯಾರಿಕಾ ಆದೇಶಗಳು ಬರುವ ಸಾಧ್ಯತೆಗಳಿವೆ. ಧನಾದಾಯವು ನಿಮ್ಮ ನಿರೀಕ್ಷೆಗೆ ಮೀರಿ ಇರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಅದಿರು ಮಾರಾಟಗಾರರಿಗೆ ವ್ಯವಹಾರ ವಿಸ್ತರಣೆಯಾಗುವ ಸಂದರ್ಭವಿದೆ. ಆಮದು ಮತ್ತು ರಫ್ತು ವ್ಯವಹಾರವನ್ನು ಮಾಡುವವರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ವಿದೇಶಗಳಿಗೆ ಹಣ ವರ್ಗಾವಣೆ ಮಾಡುವವರಿಗೆ ಹೆಚ್ಚು ಕೆಲಸವಿರುತ್ತದೆ. ಕಿರಿಕಿರಿ ಎನ್ನುವ ವಾತಾವರಣ ಸಹೋದ್ಯೋಗಿಗಳ ನಡುವೆ ಇರುತ್ತದೆ. ನಿಮ್ಮ ಸ್ವಂತ ವ್ಯವಹಾರಗಳಿಗಾಗಿ ಒಡಹುಟ್ಟಿದವರನ್ನು ಹೆಚ್ಚು ಒಲೈಕೆ ಮಾಡುವಿರಿ.

ಪದಬಂಧ 2768



ಮೇಲಿನಿಂದ ಕೆಳಕ್ಕೆ

1. ಒಂದು ರೀತಿಯಲ್ಲಿ ಮಾಲೆಯಂತಿರುವ ನಮ್ಮ ಸುತ್ತಮುತ್ತ 4
2. ನೀರಿನಲ್ಲಿ ಉಸಿರಾಡುವ ಪ್ರಾಣಿ 4
4. ಆರೋಗ್ಯದ ಐಶ್ವರ್ಯವನ್ನು ಕೊಡುವ ಕಾಳುಗಳು 4
5. ಎಲ್ಲವನ್ನೂ ಬಲ್ಲವ 4
7. ಬರದಿಂದ ಬಾಧೆಗೊಳಗಾದ ಪ್ರದೇಶ 5
8. ಮಳೆಗೆ ಹಿಡಿವ ಅಲ್ಪಪ್ರಾಣದ ಕೊಡೆ 2
9. ಆಸಮಾನ್‌ಗೆ ನಂಟಾಗಿರುವ ಹಿಂದಿಯವರ ಭೂಮಿ ಒತ್ತರಿಸಿದೆ 2
10. ಆಂತರ್ಯದ ಅನಿಸಿಕೆ ಅಲೆಅಲೆಯಾಗಿ ತೇಲಿದೆ 5
12. ಮುಕುತಿಗೆ ಮಾರ್ಗವಾಗಿರುವ ನಾಸಿಕದ ನತ್ತು 3
13. ನೀವು ಮನಸಿಟ್ಟು ಬಿಡಿಸುತ್ತಿರುವ ಈ ಚೌಕದಾಟದ ಮೂಲವಸ್ತು 2
14. ನಾಗರಪಂಚಮಿಗೆ ಎರೆಯುವ ಹಾಲಿನ ಹನಿ 2
15. ಮಹಾಭಾರತದ ಯುದ್ಧದ ಆರಂಭದಲ್ಲಿ ಕೃಷ್ಣನಿಂದ ಹರಿದ ಹಾಡಿನ ಸುಧೆ 4
16. ಮಧ್ಯಪ್ರದೇಶದ ಬೆಟ್ಟ 4
18. ಗೌಜು ಗದ್ದಲಗಳ ಆತಂಕ ಸ್ಥಿತಿ 4
19. 'ಹರಹರ' ಎಂದೊಡನೆ ಸಿಗುವ ದೊಡ್ಡ ಆರಾಧ್ಯ ಮೂರ್ತಿ 4

ಎಡದಿಂದ ಬಲಕ್ಕೆ

1. ಒಂದು ರೀತಿಯಲ್ಲಿ ಸರ್ವವನ್ನು ತೊರೆದ ಸನ್ಯಾಸಿ 5
3. ಸಸ್ಯ ಸಂಪತ್ತನ್ನು ಉಳಿಸಲು ನಡೆದ ಮಹಾಸಂಗ್ರಾಮ 5
6. ಪೆಟ್ಟು ಬೀಳುವುದನ್ನು ತಡೆಯಲು ಧರಿಸುವ ಉಡುಗೆ 5
9. ತೃಪ್ತಿಯಿಂದ ಹೊಮ್ಮುವ ಕೃತಾರ್ಥ ಭಾವ 5
11. ಬ್ರಹ್ಮ ವಿಷ್ಣು ಮಹೇಶ್ವರರ ಸಮ್ಮಿಲನ 3
13. ಗಂಡನಿಂದ ಕೆಳಕ್ಕೆ ಬಿದ್ದವ ಪಾವನನಾಗಬೇಕಾಗಿದೆ 3
15. ಸಂಸ್ಕೃತ ಕವಿ ಜಯದೇವನ ಹಾಡಿಗೆ ಕೃಷ್ಣನೇ ನಾಯಕ 5
17. ಆಡಳಿತ ವ್ಯವಸ್ಥೆಯ ಮೇಲೆ ನಿಗಾ ಇಟ್ಟಾಗ ವೇದದ ಆಗಮ ಸಿಗುತ್ತೆ 5
20. ನಿಧಾನವಾಗಿ ಮದುವೆಯಾಗು 5
21. ಕಿಷ್ಕಿಂಧೆಯಲ್ಲಿ ತಾರಾಳಿಗಾಗಿ ಜಗಳವಾಡಿದ ಸೋದರರು 5

ಪದಬಂಧ ಉತ್ತರ -2767

ಮೇಲಿಂದ ಕೆಳಕ್ಕೆ

1. ಜಲಾಶಯ 2.ನವಸಾಗರ 3.ಸವಿನೆನಪು 4.ಮನೋರಮ 6.ರಸಿಕ 8.ಚರಣ 9.ಪ್ರೇಮಮಿಲನ 11.ತಾರಕಾಸು 13.ಬೀಗತಿ 15.ರಾಧೇಯ 16.ಅಂಕುರ 17.ಮನುಜಮತ 18.ಬಳಸುಮಾತು 19.ಕೆಸರು 21. ಸುಧಾರಕ 23.ಮಣಿಪುರ

ಎಡದಿಂದ ಬಲಕ್ಕೆ

1. ಜನಮನ 3.ಸರಿಗಮ 5.ಶರ 7.ಸಾಧನೆ 8.ಚರ 9.ಪ್ರೇಯಸಿ 10.ರಮತಾ 12.ಕಬೀರ 14.ಪುರಾಣ 16.ಅಂತಿಮ 18.ಬಯಕೆ 20.ನಸುಕು 22.ಸಮರ 24.ಧಾರ 25.ಜಯಿಸು 26.ರುಣಿ 27.ಕಲುಷಿತ 28.ತುಲಾಧರ

ತುಳು ಸಾಂಸ್ಕೃತಿಕ ಪಠ್ಯಗಳ ವಿವೇಚನೆ


ಬಿ. ಜನಾರ್ದನ ಭಟ್

'ಕರಾವಳಿ ಕಥನಗಳು' ಜಾನಪದ ವಿದ್ವಾಂಸ ಡಾ.ಕೆ. ಚಿನ್ನಪ್ಪ ಗೌಡರ ಅಧ್ಯಯನ ಮತ್ತು ಚಿಂತನೆಗಳ ಫಲವಾಗಿ ರೂಪುಗೊಂಡ ಒಂದು ಅಧ್ಯಯನಶೀಲ ಕೃತಿ. ತುಳು ಸಾಹಿತ್ಯದ ಅಕ್ಷರ ಸಂಪತ್ತಿನ ವಿವಿಧ ಪ್ರಕಾರಗಳನ್ನು ಸಾಂಸ್ಕೃತಿಕ ಪಠ್ಯಗಳಾಗಿ ವಿಶ್ಲೇಷಿಸಿರುವ ಪ್ರಬಂಧಗಳಿವು.

ಒಂದು ನಕ್ಷೆಯ ರೂಪದಲ್ಲಿ ಈ ಗ್ರಂಥದ ಎಂಟು ಲೇಖನಗಳ ವ್ಯಾಪ್ತಿಯನ್ನು ತೋರಿಸಬಹುದು: ಪಾಡ್ದನಗಳು ಬಗೆದು ಕಟ್ಟಿದ ಲೋಕದೃಷ್ಟಿ, ತುಳುವಿನ ಅಜ್ಜಿ ಕಥೆಗಳು (ಆಯುಧ-ಕನ್ನಡಿ-ಕಿಟಕಿ), ಕೆಲಸ ಮತ್ತು ಕುಣಿತಗಳ ಹಾಡುಗಳು (ಹೆಣ್ಣು ಮತ್ತು ನೆಲ-ಕನಸುಗಳ ಮೆರವಣಿಗೆ), ಉಳ್ಳಾಲ್ತಿ ಪರಂಪರೆ (ಇತಿಹಾಸ ಕಥನ), ತುಳು ಕಾವ್ಯ, ತುಳು ಕಥೆಗಳು, ಅನುವಾದ (ತುಳು ತಲೆಯೆತ್ತಿ ನಿಲ್ಲುವ ಬಗೆ) ಹಾಗೂ ಯಕ್ಷಗಾನ ಪ್ರದರ್ಶನ (ಇತಿಹಾಸ ಕಟ್ಟುವ ಕಷ್ಟದ ಕೆಲಸ).

ಜಾನಪದ ಅಧ್ಯಯನದ ನೆಲೆಯಿಂದ ಪ್ರದರ್ಶನ, ಆಚರಣೆ ಮತ್ತು ಅಕ್ಷರ ಪಠ್ಯಗಳನ್ನು ಗ್ರಹಿಸುವಲ್ಲಿ ಒಂದು ಜನಪದ ಕ್ಷೇತ್ರವು ನಾಲ್ಕು ಘಟ್ಟಗಳನ್ನು ಹಾದುಬರುವುದು ಎನ್ನುವುದು ಚಿಂತಕರ ಅಭಿಪ್ರಾಯ. ಇಲ್ಲಿನ ಆ ನಾಲ್ಕು ಘಟ್ಟಗಳು ಹೀಗಿವೆ: 1.ಪಾಡ್ದನಗಳ ಸಂಗ್ರಹ, ಪ್ರಕಟಣೆ 2.'ಸಾಹಿತ್ಯ ಪಠ್ಯ'ವಾಗಿ ಅವಲೋಕನ 3.'ಜನಪದ ಪಠ್ಯ'ವಾಗಿ ವಿಶ್ಲೇಷಣೆ 4.'ಸಾಂಸ್ಕೃತಿಕ ಪಠ್ಯ'ವಾಗಿ ಪರಿಗಣಿಸಿ ಅಧ್ಯಯನ. ಈ ಕೃತಿಯಲ್ಲಿ ನಾಲ್ಕನೆಯ ಹಂತದ ಪರಿಶೀಲನೆ ಇದೆ. ಆ ಮಟ್ಟಿಗೆ ತುಳು ಸಾಹಿತ್ಯದ ಮತ್ತು ಅಧ್ಯಯನದ ಒಂದು ಬಹುಮುಖ್ಯ ಆಕರ ಗ್ರಂಥವಾಗಿದೆ ಈ ಕೃತಿ.

ಮೊದಲನೆಯ ಲೇಖನದಲ್ಲಿ ನಾಲ್ಕು ಪಾಡ್ದನಗಳನ್ನು ಸಾಂಸ್ಕೃತಿಕ ಪಠ್ಯವಾಗಿ ವಿಶ್ಲೇಷಿಸಲಾಗಿದೆ. 'ಪಾಡ್ದನವನ್ನು 'ಸಾಂಸ್ಕೃತಿಕ ಪಠ್ಯ' ಎಂದು ಪರಿಗಣಿಸಿ ಕೆಲವು ಪಾಡ್ದನಗಳನ್ನು ವಿಶ್ಲೇಷಿಸಲು ಪ್ರಯತ್ನಿಸಿದ್ದೇನೆ. ಈ ಪಾಡ್ದನಗಳಲ್ಲಿ ದುಡಿಯುವ ಸಮುದಾಯಗಳ ಧ್ವನಿಗಳಿವೆ. ಅನ್ಯಾಯ, ಮೋಸ, ವಂಚನೆ, ಅವಮಾನಗಳ ವಿರುದ್ಧ ನಡೆದ ಪ್ರತಿಭಟನೆ ಮತ್ತು ಹೋರಾಟಗಳ ನಿರೂಪಣೆಯಿದೆ. ಪಾಡ್ದನಗಳಲ್ಲಿ ಬರುವ ಪಾತ್ರಗಳು ಸಾಂಸ್ಕೃತಿಕ ನಾಯಕರಾಗಿ ಬೆಳೆದು ನಿಂತ ವಿನ್ಯಾಸಗಳಿವೆ.



ಕರಾವಳಿ ಕಥನಗಳು
ಲೇ: ಡಾ.ಕೆ.ಚಿನ್ನಪ್ಪ ಗೌಡ
ಪ್ರ: ಸಂತ ಅಲೋಶಿಯಸ್ ಪ್ರಕಾಶನ, ಮಂಗಳೂರು.
ಸಂ: 0824 4117701
ಪು: 300 ₹350

ಒಳನೋಟ

ಇವುಗಳಲ್ಲಿ ನಿರ್ದಿಷ್ಟ ಚಾರಿತ್ರಿಕ ಕಾಲಘಟ್ಟದ ಇತಿಹಾಸವಿದೆ. ಈ ಇತಿಹಾಸವನ್ನು ಜನರೇ ಕಟ್ಟಿದ್ದಾರೆ' ಎಂದು ಲೇಖಕರು ಹೇಳುತ್ತಾರೆ.

ಹಿಂದೆ ಭೂತಾರಾಧನೆಯ ಕುರಿತಾದ ಅಧ್ಯಯನದಲ್ಲಿ, ಪಾಡ್ದನವನ್ನು (ದೈವಗಳ ಹುಟ್ಟು, ಪ್ರಸಾರ ಮತ್ತು ಕಾರ್ಣಿಕಗಳ ಕಥೆಯನ್ನು ಹೇಳುವ ಲಾವಣಿಯ ರೂಪದ ತುಳು ಹಾಡುಗಳು) ಸಾಂದರ್ಭಿಕ ಪಠ್ಯವಾಗಿ ಅಧ್ಯಯನ ಮಾಡಿದ್ದ ಲೇಖಕರು ಇಲ್ಲಿ ನಾಲ್ಕನೆಯ ವಿಧಾನವನ್ನು ಅನುಸರಿಸಿ, ಕಲ್ಕುಡ – ಕಲ್ಲುರ್ಟಿ, ಕೊರಗ ತನಿಯ, ಬಿಲ್ಲರಾಯ ಬಿಲ್ಲಾರ್ತಿ ಮತ್ತು ಪಂಜುರ್ಲಿ – ಈ ನಾಲ್ಕು ಪಾಡ್ದನಗಳನ್ನು ಪರಿಶೀಲಿಸಿದ್ದಾರೆ. ಈ ಗ್ರಂಥದ ದೊಡ್ಡ ಪ್ರಬಂಧಗಳಲ್ಲಿ ಇದೂ ಒಂದು. ಇದೇ ರೀತಿಯ, ಉಳ್ಳಾಲ್ತಿ ಪರಂಪರೆಯ ಕುರಿತಾದ ಒಂದು ಪ್ರತ್ಯೇಕ ಲೇಖನ ಕೂಡ ಇದೆ.

'ಕೆಲಸ ಮತ್ತು ಕುಣಿತಗಳ ಹಾಡುಗಳು' ಒಂದು ಮುಖ್ಯ ಪ್ರಬಂಧವಾಗಿದೆ. ತುಳು ಜಾನಪದ ಹಾಡುಗಳ ಅರ್ಥವಂತಿಕೆಯನ್ನು ಪರಿಚಯ ಮಾಡುವ ಜತೆಗೆ ವಿಶ್ಲೇಷಣೆಯನ್ನೂ ಮಾಡುತ್ತದೆ. ಈ ಕವಿತೆಗಳ ಸಾಂಕೇತಿಕತೆ ಅದ್ಭುತವಾಗಿದೆ; ಜಗತ್ತಿನ ಯಾವ ಭಾಗದ ಕಾವ್ಯಕ್ಕಿಂತಲೂ ಕಡಿಮೆಯಿಲ್ಲದೆ ಪ್ರತಿಮಾಲೋಕ ತುಳು ಜಾನಪದ ಕಾವ್ಯಗಳಲ್ಲಿದೆ. ಚಿನ್ನಪ್ಪ ಗೌಡರ ಒಂದು ವಿಶ್ಲೇಷಣೆ ನೋಡಿ:

'ಸಮಾಜದಲ್ಲಿ ಅಂಗೀಕೃತವಲ್ಲದ ನಡವಳಿಕೆ ಮತ್ತು ಅನಧಿಕೃತ ಆಕ್ರಮಣವನ್ನು ಸಾಂಕೇತಿಕ ಪ್ರತಿಮೆಗಳ ಮೂಲಕ ಪ್ರಶ್ನಿಸುವ ಹಲವು ಕಬಿತಗಳಿವೆ. ಬೇಲಿ, ಬೇಲಪ್ಪ, ಜಗ್ಗಯಿನೇರ್ಯಾ (ಬೇಲಿ ಮುಳ್ಳಿನ ಬೇಲಿ ತಗ್ಗಿಸಿದವರು ಯಾರು?) ಕಬಿತವು ಸಮಾಜದಲ್ಲಿ ಇರುವ ಮಾನವ ನಿರ್ಮಿತ ಬೇಲಿಗಳ ಬಗ್ಗೆ ಮಾತನಾಡುತ್ತದೆ. ಗಂಡಸರು ಬೇಲಿಗಳನ್ನು ಹಾಕುತ್ತಾರೆ. ಅದನ್ನು ಎತ್ತರಕ್ಕೆ ಏರಿಸುತ್ತಾರೆ, ಅದನ್ನು ಕೆಳಕ್ಕೆ ತಗ್ಗಿಸುತ್ತಾರೆ. ಅದೇ ಬೇಲಿಯನ್ನು ಅವರಿಗೆ ಬೇಕಾದಾಗ ಅವರ ಆಕಾಂಕ್ಷೆಯಂತೆ ದಾಟುತ್ತಾರೆ. ಬೇಲಿ ಮುರಿಯುವುದು ಅವರಿಗೆ ಅಭ್ಯಾಸವಾಗಿಬಿಟ್ಟಿದೆ.

ಸೂಳೆಗೆ ತಲೆಗೆ ಎಣ್ಣೆ ಕೊಡಿಸಿದವರು ಯಾರು / ಸೂಳೆಗೆ ಬಾಚಣಿಗೆ ಕೊಡಿಸಿದವರು ಯಾರು / ಸೂಳೆಗೆ ಮಲ್ಲಿಗೆ ಕೊಡಿಸಿದವರು ಯಾರು........ /ಸೂಳೆಗೆ ಶೇಂದಿ ಕುಡಿಸಿದವರು ಯಾರು?

ಮುಖ್ಯವಾದ ಸಂಗತಿ ಕಾಮದ ತೀಟೆಯನ್ನು ತೀರಿಸಲು ಹೆಣ್ಣನ್ನು ಸೂಳೆಯನ್ನಾಗಿ ಮಾಡಿದವರು ಯಾರೆಂದರೆ ಜಗ್ಗ ಬೈಲಿನ ಜವ್ವನಿಗರು! ಜಗ್ಗ ಬೈಲಿನ ಜವ್ವನಿಗರೇ ಬೇಲಿಯನ್ನು ಏರಿಸುತ್ತಾರೆ, ಏರಿಸಿದ ಬೇಲಿಯನ್ನು ತಗ್ಗಿಸುತ್ತಾರೆ. ಈ ಯುವಕರು ಅವಳಿಗೆ ಬೇರೆ ಬೇರೆ ಹೂಗಳನ್ನು, ದೇಹದ ವಿವಿಧ ಭಾಗಗಳಿಗೆ ಧರಿಸುವ ಆಭರಣಗಳನ್ನು ತಂದುಕೊಡುತ್ತಾರೆ. ಕೊನೆಗೆ ಮದ್ಯಪಾನದ ಅಭ್ಯಾಸವನ್ನೂ ಮಾಡಿಸುತ್ತಾರೆ. ಸಮಾಜದ ರಕ್ಷಣೆಗೆ ಕಾನೂನುಗಳ ಬೇಲಿ ಕಟ್ಟುವ ಊರ ಗಂಡಸರು ಅದನ್ನು ಕಟ್ಟುನಿಟ್ಟುಗೊಳಿಸುವ ಮತ್ತು ತಮ್ಮ ಸ್ವಾರ್ಥಕ್ಕೆ ಸಡಿಲಿಸುವ ಕೆಲಸವನ್ನು ಅವರೇ ಮಾಡುತ್ತಾರೆ. ಕಾನೂನು ಮಾಡುವವರೇ ಅದರ ಉಲ್ಲಂಘನೆ ಮಾಡಿ ಬಚಾವಾಗುವ ದುರಂತವನ್ನು ಈ ಕಬಿತೆ ಧ್ವನಿಸುತ್ತದೆ.'

'ತುಳು ಅಜ್ಜಿಕಥೆಗಳು ಸಾಂಸ್ಕೃತಿಕ ಪಠ್ಯಗಳಾಗಿ ಮುಖ್ಯವಾಗುತ್ತವೆ. ಅಜ್ಜಿ ಹೇಳುವ ಮಕ್ಕಳ ಕಥೆಗಳು ಬಡವರ ಮತ್ತು ಅಶಕ್ತರ ಆಯುಧಗಳು. ಅವು ಅವುಗಳನ್ನೇ ಸೃಷ್ಟಿಸಿದ ಸಮಾಜಕ್ಕೆ ಕನ್ನಡಿ ಹಿಡಿಯುತ್ತವೆ. ಈ ಕನ್ನಡಿಗಳು ಕಿಟಕಿಗಳೂ ಆಗಬಲ್ಲುವು' – ಎನ್ನುವ ಚಿಂತನೆಯ ದೀರ್ಘ ಪ್ರಬಂಧ ಮಾಹಿತಿಪೂರ್ಣವೂ, ಸಾಂಸ್ಕೃತಿಕ ಪಠ್ಯ ಪರಿಕಲ್ಪನೆಯ ವಿಶ್ಲೇಷಣೆಗಳನ್ನು ಒಳಗೊಂಡದ್ದೂ ಆಗಿದೆ.

ಆಧುನಿಕ ಕಾಲಘಟ್ಟದಲ್ಲಿ ರಚನೆಯಾಗುತ್ತಿರುವ ತುಳು ಕಾವ್ಯ ಮತ್ತು ಸಣ್ಣಕಥೆಗಳ ಕುರಿತಾದ ಬರಹ ಮತ್ತು ಅನುವಾದದ ದೃಷ್ಟಿಯಿಂದ ತುಳು ಸಾಹಿತ್ಯದಲ್ಲಿ ನಡೆಯುತ್ತಿರುವ ಕೊಡುಕೊಳ್ಳುವಿಕೆಗಳು ಮತ್ತು ಅವುಗಳ ಮೂಲಕ ತುಳು ಭಾಷೆ-ಸಾಹಿತ್ಯ ತಲೆ ಎತ್ತಿ ನಿಲ್ಲಲು ಸಾಧ್ಯ ಎಂಬ ವಿಶಿಷ್ಟ – ಚಾರಿತ್ರಿಕ ಗ್ರಹಿಕೆಯನ್ನು ಇಲ್ಲಿನ ಮೂರು ಪ್ರಬಂಧಗಳು ಪ್ರತಿಪಾದಿಸುತ್ತವೆ. ಸ್ವತಃ ತುಳು ಸಾಹಿತ್ಯವನ್ನು ಇಂಗ್ಲಿಷಿಗೆ ಅನುವಾದಿಸಿ ಜಾಗತಿಕ ಅಧ್ಯಯನಕ್ಕೆ ತುಳು ಸಾಹಿತ್ಯವನ್ನು ತೆರೆದಿಟ್ಟ ಚಿನ್ನಪ್ಪ ಗೌಡರು ತಮ್ಮ ಅನುವಾದದ ಹಿಂದಿರುವ ಗ್ರಹಿಕೆಗಳು, ವಿಮರ್ಶನ ಪ್ರಜ್ಞೆ ಮತ್ತು ಉದ್ದೇಶಗಳನ್ನು ಇಲ್ಲಿ ದಾಖಲಿಸಿದ್ದಾರೆ. ತುಳು ಸಾಹಿತ್ಯದಲ್ಲಿ ನಡೆದಿರುವ ವಿವಿಧ ಭಾಷೆಗಳ ನಡುವೆ ನಡೆದಿರುವ ಕೊಡು-ಕೊಳು ಭಾಷಾಂತರ ಚಟುವಟಿಕೆಗಳನ್ನೆಲ್ಲ ದಾಖಲಿಸಿದ್ದಾರೆ.

ಕನ್ನಡ ಸಾಹಿತ್ಯದ ಚರಿತ್ರಕಾರರು ಕನ್ನಡ ಸಾಹಿತ್ಯದ ಆಧುನಿಕ ಪೂರ್ವ ಯುಗವನ್ನು ಕನ್ನಡ ಸಾಹಿತ್ಯದ ಕತ್ತಲಯುಗ ಎಂದು ಕರೆಯಲು, ಯಕ್ಷಗಾನ ಕಾವ್ಯದ ಕುರಿತು ಹೊಂದಿದ್ದ ಅವಜ್ಞೆಯೇ ಕಾರಣ. ಯಕ್ಷಗಾನ ಪ್ರಸಂಗ ಸಾಹಿತ್ಯವನ್ನು ಪರಿಗಣಿಸಿ ನೋಡಿದರೆ ಆಧುನಿಕ ಪೂರ್ವ ಯುಗವನ್ನು ಕನ್ನಡ ಸಾಹಿತ್ಯದ ಕತ್ತಲಯುಗ ಎಂದು ಕರೆಯಲು ಸಾಧ್ಯವಿಲ್ಲ ಎಂದು ಗೌಡರು ಹೇಳುತ್ತಾರೆ. ದಾಸ ಸಾಹಿತ್ಯ - ಭಾಗವತ ಸಂಪ್ರದಾಯದ ಕೃತಿಗಳ ಮುಂದುವರಿಕೆಯಾಗಿ ರಚಿತವಾದ ಪಠ್ಯಗಳನ್ನು ಜನರ ನಡುವೆ ಒಯ್ಯುವ ಪ್ರದರ್ಶನ ಕಲೆಯಾಗಿ ಯಕ್ಷಗಾನ ಕಲೆ (ರಂಗಕಲೆ) ರೂಪುಗೊಂಡಿತು ಎನ್ನುವುದು ಅವರ ಅಭಿಮತ.

ಹೀಗೆ ಪ್ರಸ್ತುತ ಗ್ರಂಥವು ತುಳು ಭಾಷೆ-ಸಾಹಿತ್ಯ-ಜಾನಪದ ಕ್ಷೇತ್ರಗಳಲ್ಲಿ ಆಸಕ್ತಿಯಿರುವವರೆಲ್ಲರೂ ಓದಬೇಕಾದ ಕೃತಿಯಾಗಿದೆ. ❖

ಮಕ್ಕಳಿಗಾಗಿ ರೇಖೆಯಿಂದೆದ್ದ ಗಾಂಧೀಜಿ

ಅಭಿಲಾಷ್ ಪಿ.ಎಸ್.

ಮಗುವೊಂದು ಸ್ಟ್ಯಾಂಡಿಂಗ್ ಲೈನ್, ಸ್ಲೀಪಿಂಗ್ ಲೈನ್, ಜಿಗ್‌ಜಾಗ್ ಲೈನ್ ಎನ್ನುತ್ತಾ ಬೆರಳಾಡಿಸುವಾಗ ಮನಸ್ಸಿನಲ್ಲಿ ಉಳಿಯುವ ರೇಖೆಯ ನೆನಪು ಶಾಶ್ವತ. ರೇಖೆಗಳಲ್ಲಿ ಸಾವಿರಾರು ಪದಗಳು ಅಡಗಿರುತ್ತವೆ. ಇವನ್ನು ಹುಡುಕುವ ಆಸಕ್ತಿ ಇರಬೇಕಷ್ಟೆ. ಹೀಗಾಗಿಯೇ ಚಿತ್ರವೊಂದು ಸಾವಿರ ಪದಗಳಿಗೆ ಸಮ ಎನ್ನುವುದು. ಇಂತಹ ರೇಖೆಗಳಿಂದಲೇ ಮಹಾತ್ಮ ಗಾಂಧಿಯ ಅಥವಾ ಮಕ್ಕಳ ನೆಚ್ಚಿನ ಬಾಪುವಿನ ಕಥೆಯನ್ನು ಹೇಳಲು ಹೊರಟಿದ್ದಾರೆ ಬಿ.ಜಿ.ಗುಜ್ಜಾರಪ್ಪ.

ಗುಜ್ಜಾರ್ ಎಂದೇ ಪ್ರಸಿದ್ಧಿ ಪಡೆದಿರುವ ರೇಖೆಗಳ ಜತೆ ಆಟವಾಡುವ ಈ ಕಲೆಗಾರ, ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ರೇಖೆಗಳ ಲೋಕಕ್ಕೆ ಧುಮುಕಿದವರು. 'ಪ್ರಜಾವಾಣಿ' ಸೇರಿದಂತೆ ಮಾಧ್ಯಮ ಲೋಕದಲ್ಲಿ 37 ವರ್ಷ ರೇಖೆಗಳೊಳಗೆ ಕಥೆಗಳನ್ನು ಹೇಳುತ್ತಾ ಹೊರಟ ಇವರು ಸದ್ಯ ಚಿತ್ರಕಲೆ ಲೋಕದಲ್ಲಿ ಈಜುತ್ತಿದ್ದಾರೆ. ಮಕ್ಕಳಿಗಾಗಿ ಕಾಮಿಕ್ಸ್, ಸಚಿತ್ರ ಪುಸ್ತಕಗಳನ್ನು ರೂಪಿಸಿರುವ ಇವರ ಹೊಸ ಸಾಹಸವೇ ಗಾಂಧೀಜಿಯನ್ನು ರೇಖೆಗಳಲ್ಲಿ ಕಟ್ಟಿರುವುದು.

ಗಾಂಧೀಜಿಯ ಬಾಲ್ಯದ ಕಥೆ, ಅವರ ಹೋರಾಟದ ಬದುಕು, ಜೀವನವೃತ್ತಾಂತಗಳ ಕುರಿತ ನೂರಾರು ಕೃತಿಗಳು ಈಗಾಗಲೇ ಬಂದಿವೆ. ಆದರೆ ಇವುಗಳನ್ನು ಮಕ್ಕಳ ಕೈಗಿಟ್ಟರೆ ಇವು ಆ ಕೈಗಳಿಗೆ, ಮನಸ್ಸಿಗೆ ಭಾರವಾದೀತೇ ಹೊರತು ಗಾಂಧೀಜಿಯತ್ತ ಆಕರ್ಷಿಸಲಾರವು. ಹೀಗಾಗಿಯೇ ಮಕ್ಕಳನ್ನು ಸೆಳೆಯುವ ವಸ್ತುವನ್ನಿಟ್ಟುಕೊಂಡೇ ಗುಜ್ಜಾರ್, ಕಿಂದರಿ ಜೋಗಿಯಂತೆ ರೇಖೆಗಳನ್ನೆಳೆಯುತ್ತಾ ಸಾಗಿದ್ದಾರೆ. ಈ ಕೃತಿ ಒಂದು ರೀತಿಯಲ್ಲಿ ಗಾಂಧೀಜಿಯ ಉಕ್ತಿಗಳ ಸಂಗ್ರಹ. ಹೀಗಿದ್ದರೂ ಆತ್ಮಕಥೆಯ ಸಾರಾಂಶದಂತೆ ಇದು ಮೂಡಿಬಂದಿದೆ. ಮಕ್ಕಳ ಬದುಕಿಗೆ ಗಾಂಧೀಜಿಯ ಪ್ರವೇಶಿಕೆಯಂತೆ ಈ ಕೃತಿ ರೂಪುಗೊಂಡಿದೆ. ಗಾಂಧೀಜಿಯ ಸರಳ ಮಾತುಗಳೇ ಇಲ್ಲಿನ ಪಾಠ. ಇದಕ್ಕೆ ಪೂರಕವಾಗಿ ಗುಜ್ಜಾರ್ ಅವರ ಕಲೆ, ಪುಟಗಳನ್ನು ಮತ್ತಷ್ಟು ಆಕರ್ಷಕವಾಗಿಸಿದೆ.

ಒಟ್ಟು 95 ಚಿತ್ರಗಳು ಇಲ್ಲಿವೆ. ಆದರೆ ವಿಶೇಷವಾಗಿ ಗಮನಿಸಬೇಕಾಗಿರುವುದು ಗಾಂಧೀಜಿಯ ಗೈರುಹಾಜರಿ! ಕೃತಿಯನ್ನು ಮಕ್ಕಳಿಗಾಗಿ ಸಿದ್ಧಪಡಿಸಿರುವ ಗುಜ್ಜಾರ್, ತಮ್ಮ ರೇಖೆಗಳಲ್ಲಿ ಗಾಂಧೀಜಿಯ ನೀತಿಪಾಠ ಹೇಳಲು ಮಕ್ಕಳನ್ನೇ ಆಯ್ದುಕೊಂಡಿದ್ದಾರೆ. ಹೀಗಾಗಿ ಗಾಂಧೀಜಿಯನ್ನು ಕೆಲವೆಡೆಯಷ್ಟೇ ರೇಖೆಗಿಳಿಸಿದ್ದಾರೆ. ಮಕ್ಕಳ ಮನಸ್ಸನ್ನು ಹತ್ತಿರದಿಂದ ಅರ್ಥ ಮಾಡಿಕೊಂಡ ಕಲಾವಿದನಿಗಷ್ಟೇ ಇದು ಸಾಧ್ಯ. ಪ್ರಸ್ತುತ ಸಮಾಜದಲ್ಲಿ ಇರುವ ಧರ್ಮದ್ವೇಷ, ಪ್ರಕೃತಿಯ ಮೇಲಿನ ಅತ್ಯಾಚಾರ, ಹಿಂಸೆಯ ಹುಳುಕನ್ನು ಸರಿಪಡಿಸುವ ದೃಷ್ಟಿಯಿಂದ ಕೂಡಿದ ಉಕ್ತಿಗಳನ್ನೂ ಕೃತಿ ಹೊಂದಿದೆ.

ಕೃತಿಯ ಅಂತ್ಯದಲ್ಲಿ 'ನನ್ನ ಜೀವನವೇ ನನ್ನ ಸಂದೇಶ' ಎನ್ನುತ್ತಾ ಉಕ್ತಿಗಳಿಂದಲೇ ಸುದೀರ್ಘವಾದ ಮೌಲ್ಯ ಶಿಕ್ಷಣವನ್ನು ನೀಡಲಾಗಿದೆ. ಕೊನೆಯಲ್ಲಿ ಇಳಿಸಂಜೆಯಲ್ಲಿ ಗಾಂಧೀಜಿ ಏಕಾಂತದಲ್ಲಿ ಹೆಜ್ಜೆ ಹಾಕುತ್ತಿರುವುದು, ಎಳೆಯ ಮನಸ್ಸುಗಳನ್ನು ಬಾಪೂ ತನ್ನ ವಿಚಾರಗಳತ್ತ ಕರೆದೊಯ್ಯುತ್ತಿರುವಂತಿದೆ. ❖



ಮಕ್ಕಳಿಗಾಗಿ ಗಾಂಧೀಜಿ
ರಚನೆ: ಗುಜ್ಜಾರ್
ಅನುವಾದ: ಜಿ.ಡಬ್ಲ್ಯು. ಕಾರ್ಲೊ
ಪ್ರ: ಬಹುರೂಪಿ
ಸಂ: 7019182729
ಪು: 100 ₹200

ಅವಲೋಕನ

ಸಾಹಿತ್ಯ ಮತ್ತು ಉತ್ಸವ

10ನೇ ಪುಟದಿಂದ...


ಇಂಗ್ಲಿಷ್ ಸಾಹಿತ್ಯೋತ್ಸವಕ್ಕೆ ಅವರು ಸಂಗ್ರಹಿಸಿ ವೆಚ್ಚ ಮಾಡಿದ್ದು ಕೇವಲ ಒಂದೂವರೆ ಕೋಟಿ ರೂಪಾಯಿ. ನಮಗೆ ಈಗಾಗಲೇ ಸರ್ಕಾರ ಬಿಡುಗಡೆ ಮಾಡಿರುವುದು ಇಪ್ಪತ್ತು ಕೋಟಿ ರೂಪಾಯಿ. ಹಾಗಂತ ಎರಡನ್ನೂ ಹೋಲಿಸುವುದು ತಪ್ಪು. ಕನ್ನಡ ಸಾಹಿತ್ಯ ಸಮ್ಮೇಳನ ಲಕ್ಷಾಂತರ ಜನರು ಭಾಗವಹಿಸುವ ಮಹಾಕೂಟ. ಆದರೆ ನಾವು ಹಣವನ್ನು ಸಾಹಿತ್ಯದ ಸಂಗತಿಗಳಿಗೆ ಬಳಸುತ್ತಿದ್ದೇವೆಯೇ ಅಥವಾ ಸಾಹಿತ್ಯೇತರ ಸಂಗತಿಗಳಿಗೆ ಬಳಸುತ್ತಿದ್ದೇವೆಯೇ ಎನ್ನುವುದನ್ನು ಅವಲೋಕನ ಮಾಡಿಕೊಳ್ಳುವ ಅವಶ್ಯಕತೆ ಇದೆ.

ನಮ್ಮ ಸಮ್ಮೇಳನಗಳ ಗೋಷ್ಠಿಗಳನ್ನು ನಾವು ಕನ್ನಡ ಲೇಖಕರಿಗೆ ಸೀಮಿತವಾಗಿಡುತ್ತೇವೆ. ಆದರೆ, ನೆರೆಹೊರೆಯ ಸಾಹಿತಿಗಳನ್ನೂ ಕರ್ನಾಟಕದ ಮುಖ್ಯ ಇಂಗ್ಲಿಷ್ ಲೇಖಕರನ್ನೂ ಆಹ್ವಾನಿಸಿ ಗೋಷ್ಠಿಗಳನ್ನು ನಡೆಸುವ ಅವಶ್ಯಕತೆ ಇದೆ. ಕೇವಲ ಕನ್ನಡತಿ ಎನ್ನುವ ಕಾರಣಕ್ಕೆ ಕನ್ನಡ ಮಾತಾಡಲೂ ಬರದ ಸಿನಿಮಾ ತಾರೆಯನ್ನು ದುಂದುವೆಚ್ಚ ಮಾಡಿ ಕರೆಸುವುದಕ್ಕಿಂತಲೂ, ಕನ್ನಡ ಬರದಿದ್ದರೂ ನೆರೆಹೊರೆಯ ಭಾಷೆಯ ಸಾಹಿತ್ಯದಲ್ಲಿ ಸಾಧನೆ ಮಾಡಿದ ಲೇಖಕರನ್ನು ಆಹ್ವಾನಿಸುವುದು ಹೆಚ್ಚು ಸಮಂಜಸ.

ಕನ್ನಡೇತರರರನ್ನು ಒಳಗೊಳ್ಳುವ ಸತ್ಸಂಪ್ರದಾಯವನ್ನು ನಾವು ಶುರುವಿಟ್ಟರೆ, ಆ ಕಡೆಯಿಂದಲೂ ನಮ್ಮ ಕುರಿತು ಗೌರವ ಮೂಡುತ್ತದೆ ಮತ್ತು ಕೊಡು–ಕೊಳ್ಳುವಿಕೆಯಾಗುತ್ತದೆ. ಕನ್ನಡದಂತೆ ಭರ್ಜರಿಯಾಗಿ ಸಾಹಿತ್ಯ ಸಮ್ಮೇಳನ ಮಾಡುವ ಭಾಷೆ ಮತ್ತೊಂದಿಲ್ಲ. ಆ ಸಂಗತಿಯೂ ಹೊರಗಿನವರಿಗೆ ತಿಳಿಯಬೇಕಾಗಿದೆ. ಬೇರೆ ಭಾಷೆಯ ಗೋಷ್ಠಿಗಳನ್ನು ಕನ್ನಡಕ್ಕೆ ತಕ್ಷಣ ಅನುವಾದ ಮಾಡಿ, ನಮ್ಮ ಸಭಿಕರಿಗೆ ತಿಳಿಸುವ ಸಮರ್ಥ ಅನುವಾದಕರು ನಮ್ಮಲ್ಲಿ ಇದ್ದಾರೆ. ಆದ್ದರಿಂದ ಬೇರೆ ಭಾಷೆಯ ಗೋಷ್ಠಿಗಳನ್ನು ನಡೆಸುವುದು ಕಷ್ಟವಾಗುವುದಿಲ್ಲ.

ಇಂಗ್ಲಿಷ್ ಸಾಹಿತ್ಯೋತ್ಸವದಲ್ಲಿ ಕನ್ನಡಕ್ಕೆ ಹೆಚ್ಚಿನ ಅವಕಾಶ ಬೇಕು ಎಂದು ಆಶಿಸುವ ನಾವು, ನಮ್ಮ ಸಾಹಿತ್ಯೋತ್ಸವದಲ್ಲಿ ಅವರಿಗೆ ಎಷ್ಟು ಅವಕಾಶ ಮಾಡಿಕೊಟ್ಟಿದ್ದೇವೆ ಎಂಬ ಮರುಪ್ರಶ್ನೆ ಹಾಕಿಕೊಳ್ಳಬೇಕಾಗುತ್ತದೆ. ಹೊರರಾಜ್ಯದ ಇಂಗ್ಲಿಷ್ ಲೇಖಕರನ್ನು ಪರಿಗಣಿಸುವ ಅವಶ್ಯಕತೆ ಇಲ್ಲ. ಆದರೆ, ನಮ್ಮ ರಾಜ್ಯದಲ್ಲಿಯೇ ಎಷ್ಟೊಂದು ಇಂಗ್ಲಿಷ್ ಲೇಖಕರಿದ್ದಾರಲ್ಲವೆ? ಮರಾಠಿ, ತೆಲುಗು, ತಮಿಳು, ಮಲಯಾಳಂ ಲೇಖಕರೂ ಇಲ್ಲಿದ್ದಾರೆ. ಅವರನ್ನಾದರೂ ನಾವು ಗೋಷ್ಠಿಗಳಿಗೆ ಆಹ್ವಾನಿಸಬೇಕಲ್ಲವೆ? ಹಿಂದೊಮ್ಮೆ ಆರ್.ಕೆ.ನಾರಾಯಣರನ್ನು ಸಮ್ಮೇಳನಾಧ್ಯಕ್ಷರಾಗಿ ಮಾಡಿದ ಮೇಲ್ಪಂಕ್ತಿ ನಮಗಿದೆ.

ಯಾವುದೇ ಸಮ್ಮೇಳನ/ ಸಂಘಟನೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದರೆ ಅದನ್ನು 'ಕಾರ್ಪೊರೇಟ್' ಅಥವಾ 'ಎಲೈಟ್' ಎಂದು ಕರೆಯುವ ಪದ್ಧತಿ ಕನ್ನಡ ಸಾಹಿತ್ಯಲೋಕದಲ್ಲಿ ವಿಪರೀತವಾಗಿ ಕಾಣುತ್ತಿದೆ. ಈ ಬೆಂಗಳೂರು ಸಾಹಿತ್ಯೋತ್ಸವಕ್ಕೂ ಅದು ತಪ್ಪಲಿಲ್ಲ. ಬಹುತೇಕ ಕನ್ನಡ ಸಾಹಿತಿಗಳು ಅದನ್ನು 'ಎಲೈಟ್' ಜನರ ಉತ್ಸವ ಎಂದೇ ಕರೆದರು. ಮೊದಲಿಗೆ ಈ ಸಾಹಿತ್ಯೋತ್ಸವಗಳನ್ನು ನಾವು ನಿರ್ಲಕ್ಷಿಸುತ್ತಿದ್ದೆವು, ಈಗ ವಿರೋಧಿಸುತ್ತಿದ್ದೇವೆ.



ಇತ್ತೀಚೆಗೆ ನಡೆದ ಬೆಂಗಳೂರು ಸಾಹಿತ್ಯ ಉತ್ಸವದ 11ನೇ ಆವೃತ್ತಿಯಲ್ಲಿ ಸಾಹಿತ್ಯ ಸಮುದ್ರದಲ್ಲಿ ಈಜಾಡಿದ ಪುಸ್ತಕ ಪ್ರೇಮಿಗಳು...
ಚಿತ್ರ: ಪ್ರಶಾಂತ್ ಎಚ್.ಜಿ.

ಪಂಚತಾರಾ ಹೋಟೆಲು ನಮ್ಮ ಮಧ್ಯಮ ವರ್ಗದ ಮನಃಸ್ಥಿತಿಗೆ ಕಸಿವಿಸಿ ಉಂಟು ಮಾಡುವುದು ಸತ್ಯ. ಆಧುನಿಕ ವಸ್ತ್ರಗಳನ್ನು ಧರಿಸಿ, ಗಂಡು-ಹೆಣ್ಣುಗಳು ನಿರ್ಭಿಡೆಯಿಂದ ಮೈಗೆ ಮೈ ತಾಕಿಸಿಕೊಂಡು ನಗುನಗುತ್ತಾ ಇಂಗ್ಲಿಷ್‌ನಲ್ಲಿ ಮಾತಾಡುತ್ತಾ ಅಡ್ಡಾಡುವುದು ಬಹುತೇಕರಿಗೆ ಹೊಂದಾಣಿಕೆಯಾಗುವುದಿಲ್ಲ. ಇದು ನಮ್ಮ ಕೀಳರಿಮೆಯೋ ಅಥವಾ 'ಎಲೈಟ್' ಜನರ ಲೋಪವೋ ನನಗೆ ಗೊತ್ತಿಲ್ಲ. ಇಂಥವನ್ನು ಕನ್ನಡದ ಉತ್ಸವಗಳಿಂದ ಸದ್ಯಕ್ಕೆ ದೂರವಿಡಬಹುದು, ಅನುಕರಿಸಬೇಕಿಲ್ಲ. ಆದರೆ ಉಳಿದ ಸಂಗತಿಗಳು ಉತ್ತಮವಾಗಿದ್ದವಲ್ಲವೆ?

ಮಕ್ಕಳಿಗೂ ಕತೆ ಹೇಳಿ, ಆಟ ಆಡಿಸಿ ಖುಷಿಪಡಿಸುವ ಎರಡು ವೇದಿಕೆಗಳನ್ನು ಮಾಡಿದ್ದರು. ನಮ್ಮ ಸಾಹಿತ್ಯ ಸಮ್ಮೇಳನದಲ್ಲಿ ಮಕ್ಕಳಿಗೆಂದೇ ಮಾಡಿದ ವೇದಿಕೆ ನೋಡಿದ್ದು ನನಗಂತೂ ನೆನಪಿಲ್ಲ. ಪ್ರತ್ಯೇಕ ವೇದಿಕೆ ಮಾಡಿಕೊಡುವುದಿರಲಿ, ಅಪರೂಪಕ್ಕೆ ಸಣ್ಣವರು ಏಕಾಂಗಿಯಾಗಿ ಸಮ್ಮೇಳನಕ್ಕೆ ಬಂದರೆ ಆ ನೂಕು ನುಗ್ಗಲಿನಲ್ಲಿ ಸುರಕ್ಷಿತವಾಗಿ ಮನೆಗೆ ವಾಪಸು ಹೋಗುವುದೂ ಅನುಮಾನ.

ಧಾರವಾಡದ ಸಾಹಿತ್ಯ ಸಮ್ಮೇಳನವನ್ನು ನೆನೆಸಿಕೊಂಡರೆ ನನಗೆ ಈಗಲೂ ಭಯವಾಗುತ್ತದೆ. ಆ ಸಮ್ಮೇಳನದ ವ್ಯವಸ್ಥೆ ಎಷ್ಟು ಅಧ್ವಾನವಾಗಿತ್ತೆಂದರೆ, ಯಾವುದೇ ಹೊತ್ತಿನಲ್ಲಿಯೂ ಕಾಲ್ತುಳಿತವಾಗಿ ಹಲವಾರು ಮಕ್ಕಳು-ಹೆಂಗಸರಿಗೆ ಅಪಾಯವಾಗುವ ಭೀತಿ ಅಲ್ಲಿತ್ತು. ಆದರೆ, ಅಂತಹ ಹೊತ್ತಿನಲ್ಲಿಯೂ ನಮ್ಮ ಸಾಹಿತಿಗಳು ಯೋಚಿಸುವ ಕ್ರಮ ಸೋಜಿಗವೆನ್ನಿಸುತ್ತದೆ. ವೇದಿಕೆಯಲ್ಲಿ ಯಾವ ಸಾಹಿತಿಯೂ ಈ ಅವ್ಯವಸ್ಥೆಯ ವಿಷಯವನ್ನು ಪ್ರಸ್ತಾಪಿಸಲಿಲ್ಲ. ಅದಕ್ಕೆ ಬದಲು ಬೆಳಿಗ್ಗೆ ಮೆರವಣಿಗೆಯಲ್ಲಿ ಹೆಂಗಸರು ಕಳಸ ಹೊತ್ತು ಬಂದಿದ್ದಕ್ಕೆ ವಿರೋಧ ವ್ಯಕ್ತಪಡಿಸುವುದಕ್ಕೆ ವೇದಿಕೆಯನ್ನು ಬಳಸಿಕೊಂಡು, ಚಪ್ಪಾಳೆ ಗಿಟ್ಟಿಸಿಕೊಂಡರು. ಸಾಹಿತಿಗಳ ಆದ್ಯತೆಗಳು ನನಗೆ ಕೆಲವೊಮ್ಮೆ ಭಯ ಹುಟ್ಟಿಸುತ್ತವೆ.

ಬೆಂಗಳೂರು ಸಾಹಿತ್ಯೋತ್ಸವದಲ್ಲಿ ಆಹ್ವಾನಿತ ಲೇಖಕರಿಗೆ ಕೊಟ್ಟ ಉಡುಗೊರೆ ಸಾಕಷ್ಟು ಉಪಯೋಗಿಯಾಗಿದ್ದವು. ಸಾಹಿತ್ಯೋತ್ಸವದ ಲೋಗೊ ಇರುವ ಜೋಳಿಗೆ, ಅದರಲ್ಲಿ ಕಾಫಿ ಪುಡಿ, ಟೀ ಪುಡಿ, ಚಾಕೊಲೇಟ್, ಚಕ್ಕುಲಿ, ಕೋಡುಬಳೆ, ಮಸಾಲೆ ಕಡಲೆಬೀಜ, ಮೈಸೂರು ಪಾಕ್, ಅಲಂಕಾರದ ಮೋಂಬತ್ತಿ ಇತ್ಯಾದಿಗಳಿದ್ದವು. ಮನೆಯವರೆಲ್ಲಾ ಉಪಯೋಗಿಸಬಹುದಾದ ವಸ್ತುಗಳಿವು.

ನಮ್ಮ ಸಮ್ಮೇಳನಗಳಲ್ಲಿ ಕೊಟ್ಟ ನೆನಪಿನ ಕಾಣಿಕೆಗಳನ್ನು ಮರೆಯುವಂತಿಲ್ಲ. ಕ್ಯಾಸೆಟ್ ಬಳಕೆಯೇ ನಿಂತು ಹೋದಮೇಲೆ, ಯಾರೋ ಕ್ಯಾಸೆಟ್ ವ್ಯಾಪಾರಿಯೊಬ್ಬ ತನ್ನ ಹಳೆಯ ಮಾಲನ್ನು ಖಾಲಿ ಮಾಡಿಕೊಳ್ಳುವ ಸಲುವಾಗಿ ಸರ್ಕಾರದ ಮನವೊಲಿಸಿ 20 ಕ್ಯಾಸೆಟ್ಟುಗಳನ್ನು ಪ್ರತಿಯೊಬ್ಬ ಆಹ್ವಾನಿತರಿಗೂ ಕೊಡುವಂತೆ ಒತ್ತಾಯ ಮಾಡಿ ಹಣ ಮಾಡಿಕೊಂಡಿದ್ದ. ಇನ್ನು ಮನೆಗೆ ಹೊತ್ತುಕೊಂಡು ಬರಲೂ ಭಾರವಾಗುವಂತಹ ಫಲಕವೊಂದನ್ನು ಕೊಡುತ್ತಾರೆ. ಇಲ್ಲದಿದ್ದರೆ ಮಾರಾಟವಾಗದೆ ಉಳಿದ ಪುಸ್ತಕಗಳ ಕಟ್ಟು ಕೊಟ್ಟುಬಿಡುತ್ತಾರೆ.

ಏನೇನೋ ಸಾಧಿಸಲಾಗದ ಗುರಿಗಳನ್ನು ನಾವು ಸಮ್ಮೇಳನದ ಕೊನೆಯ ದಿನ ಪಟ್ಟಿ ಮಾಡುತ್ತೇವೆ. ಅವನ್ನು ಯಾರೂ ಮುಂದಿನ ವರ್ಷ ನೆನಪಿಸಿಕೊಳ್ಳುವುದೂ ಇಲ್ಲ. ಅದರ ಬದಲು 'ಈ ಸಲಕ್ಕಿಂತಲೂ ಮುಂದಿನ ಸಮ್ಮೇಳನ ಚೆನ್ನಾಗಿ ಮಾಡುತ್ತೇವೆ' ಎನ್ನುವ ಗುರಿಯೊಂದನ್ನು ಹಾಕಿಕೊಂಡರೂ ಸಾಕು. ಸತತವಾಗಿ ಎಂಟು-ಹತ್ತು ವರ್ಷಗಳ ಕಾಲ ನಾವು ಈ ಗುರಿಯನ್ನು ಸಾಧಿಸಿದರೆ, ನಮ್ಮ ಸಾಹಿತ್ಯ ಸಮ್ಮೇಳನ ತಾನೇತಾನಾಗಿ ಉತ್ತಮವಾಗುತ್ತಾ ಹೋಗುತ್ತದೆ. ❖

ಮೊದಲ ಓದು


ಹೃದಯದ ಕೂಗಿಗೆ ಬರಹ ಚಿಕಿತ್ಸೆ

ಹೃದಯ ವೈದ್ಯರ ಅನುಭವ ಕಥನದೊಂದಿಗೆ ಲೇಖಕರ ಸ್ವಾನುಭವವೂ ಸೇರಿ ಇಲ್ಲಿ ಮಾತುಗಳು ಹರಿದಿವೆ. ಬೇರೆ ಬೇರೆ ಲೇಖನಗಳ ಗುಚ್ಛವಿದಲ್ಲ. ಹೃದಯಕ್ಕೆ ಸಂಬಂಧಿಸಿದ ಆಚೆ ಈಚೆಗಿನ ಸಂಗತಿಗಳನ್ನು ಒಟ್ಟುಗೂಡಿಸಿ ಹಲವು ಪ್ರಶ್ನೆಗಳನ್ನು ಖ್ಯಾತ ಹೃದಯ ತಜ್ಞ, ಜಯದೇವ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರ ಮುಂದಿಟ್ಟಿದ್ದಾರೆ. ಪ್ರತಿಯೊಂದಕ್ಕೂ 'ಟು ದಿ ಪಾಯಿಂಟ್' ಅನ್ನುವ ಹಾಗೆ ವೈದ್ಯರು ಹೃದಯದಿಂದಲೇ ಮಾತನಾಡಿದ್ದಾರೆ.

ಕೋವಿಡ್ ನಂತರ ಹೃದಯ ಸಮಸ್ಯೆಗಳ ಸಂಖ್ಯೆ ಹೆಚ್ಚಾಗಿರುವುದು, ನಟ ಪುನೀತ್ ರಾಜ್‌ಕುಮಾರ್ ಅವರ ಹಠಾತ್ ನಿಧನ, ತಪಾಸಣೆಗಳ ಸಂಖ್ಯೆ ಹೆಚ್ಚಾಗಿರುವುದು ಇತ್ಯಾದಿ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಈ ಕೃತಿ ಹೆಚ್ಚು ಮಾತನಾಡಿದೆ. ಆ ದೃಷ್ಟಿಯಲ್ಲೇ ಈ ಕೃತಿ ಹೆಚ್ಚು ಪ್ರಸ್ತುತವೂ ಹೌದು.

ಹೃದಯ ಕಸಿ, ದೇಹದಿಂದ ಹೊರಗಿದ್ದ ಹೃದಯಕ್ಕೆ ಚಿಕಿತ್ಸೆ ಕೊಟ್ಟಿರುವುದು, ಅಪರಿಚಿತರು ಹೃದಯಾಘಾತಕ್ಕೆ ಒಳಗಾದ ಸಂದರ್ಭಗಳು, ವೈದ್ಯರ ತಂಡದ ಪರಿಶ್ರಮದ ಹೃದಯ ತಟ್ಟುವ ಘಟನೆಗಳನ್ನು ಉದಾಹರಣೆಗಳ ಸಹಿತ ಕೃತಿ ಕಟ್ಟಿಕೊಟ್ಟಿದೆ.

ಹೃದಯ ಸಂಬಂಧಿತ ವಿಷಯಗಳ ಮಿಥ್ಯೆಗಳತ್ತಲೂ ಬೆಳಕು ಚೆಲ್ಲಿದೆ. ಅನಗತ್ಯ ಔಷಧ ತೆಗೆದುಕೊಳ್ಳದಂತೆಯೂ ಎಚ್ಚರಿಕೆ ಇದೆ. ಮಹಿಳೆಯರೇಕೆ ಹೃದಯದ ವಿಚಾರದಲ್ಲಿ ಅಲಕ್ಷ್ಯ ವಹಿಸುತ್ತಾರೆ ಎಂಬ ಚರ್ಚೆಯೂ ಇಲ್ಲಿದೆ. ಹಲವು ಪುಟ್ಟ ಪುಟ್ಟ 'ಹೃದಯದ' ಕಥೆಗಳಿವೆ. ಎಲ್ಲ ವಯೋಮಾನದವರು, ಆಧುನಿಕ ಜೀವನಶೈಲಿಗೆ ಒಗ್ಗಿಕೊಂಡಿರುವವರು ಓದಬೇಕಾದ ಕೃತಿ.



ಹೃದಯದ ಮಾತು
ಲೇ: ಮಂಜುನಾಥ ಚಾಂದ್
ಪ್ರ: ವೀರಲೋಕ ಬುಕ್ಸ್ ಪ್ರೈವೇಟ್ ಲಿಮಿಟೆಡ್
ಸಂ: 7022122121
ಪು: 144 ₹150


ಕಥಾರೂಪ ತಾಳಿದ ಅನುಭವಗಳು

ವೃತ್ತಿಯಲ್ಲಿ ಪತ್ರಕರ್ತರಾಗಿ, ಪ್ರವೃತ್ತಿಯಲ್ಲಿ ಲೇಖಕರಾಗಿ ವಾಸ್ತವ ಮತ್ತು ಕಲ್ಪನೆಗಳ ಮಿಶ್ರಿತ ಲೇಖನಿ ಹಿಡಿಯುವ ಕಂ.ಕ.ಮೂರ್ತಿ ಅವರ ಹದಿನೈದು ಕಥೆಗಳ ಗುಚ್ಛ ಈ ಕೃತಿ.

ಕೆಲವು ಕಥೆಗಳಲ್ಲಿ ಮೂರ್ತಿ ಅವರ ಬಾಲ್ಯದ ನೆನಪುಗಳೇ ಕಥಾವಸ್ತುಗಳು. ಹೀಗಾಗಿಯೇ ಇರಬಹುದು ಒಂದು ತಿಂಗಳ ಅವಧಿಯಲ್ಲಿ ಈ ಕಥೆಗಳನ್ನು ಲೇಖಕರು ಬರೆದು ಮುಗಿಸಿದ್ದಾರೆ. ಪತ್ರಕರ್ತರಾಗಿ, ಸಂವೇದನಾಶೀಲ ವ್ಯಕ್ತಿಯಾಗಿ ಮೂರ್ತಿ ಅವರು ಅನುಭವಿಸಿದ ಅನುಭಾವವೇ ಕಥೆಗಳೊಳಗೆ ಹರಡಿವೆ. ಮಲೆನಾಡಿನ ಜೀವನ ಇಲ್ಲಿನ ಹಲವು ಕಥೆಗಳಲ್ಲಿ ತುಂಬಿವೆ. ಪಾತ್ರಗಳ ಮಾತು ಸರಳ. ಹೀಗಾಗಿ ಓದುಗನಿಗೆ ಬೇಗನೇ ಹತ್ತಿರವಾಗುವ ಸಾಮರ್ಥ್ಯ ಕಥೆಗಳಿಗಿವೆ. 'ಕಥೆಗಳಲ್ಲಿನ ಪಾತ್ರಗಳು ಗ್ರಾಮಭಾರತದ ಬದುಕಿನ ಅವಿಭಾಜ್ಯ ಅಂಗವೇ ಆಗಿರುವುದರಿಂದ ಓದುಗ ಅವುಗಳೊಂದಿಗೆ ತಾದ್ಯಾತ್ಮವನ್ನು ಸಾಧಿಸಬಲ್ಲ' ಎಂದು ಮುನ್ನುಡಿಯಲ್ಲಿ ಬರೆಯುತ್ತಾರೆ ಕೇಶವ ಮಳಗಿ.

ಉದಾಹರಣೆಗೆ, ಸಂಕಲನದ ಮೊದಲ ಕಥೆಯಲ್ಲಿ 'ಶ್ರೀಗಂಧ' ಸೂಸುವ ಸ್ಮೃತಿಯೇ ಕಥೆಯ ಜೀವಾಳ. ತಂದೆಯ ಸಾವಿನ ದುಃಖದ ನಡುವೆಯೂ 'ನಾಗೇಶ' ಮಲೆನಾಡಿನ ಚಿತ್ರಣವನ್ನು ಕಣ್ಣಲ್ಲಿ ತುಂಬಿಕೊಳ್ಳುತ್ತಾ ಸಾಗುವ ಕಥಾಪ್ರವೇಶ ಇಲ್ಲಿ ಉಲ್ಲೇಖಾರ್ಹ. ಶ್ರೀಗಂಧದ ಕೊರಡಿನ ಮೇಲೆ ಅಕ್ಷರರೂಪದಲ್ಲಿದ್ದ 'ಸೀನ', ಅಕ್ಷರಶಃ ಕಥೆಯಲ್ಲಿ ಬಿಚ್ಚಿಕೊಳ್ಳುತ್ತಾ ಹೋದಾಗ 'ನಾಗೇಶ' ಕನಸು, ಭ್ರಮೆಯ ಸುಳಿಯೊಳಗೆ ಸಿಲುಕುತ್ತಾನೆ. ಇಲ್ಲಿನ ಕಥನಕೌಶಲ ಮೆಚ್ಚುವಂಥದು.

ಅದೇ ರೀತಿ 'ಮುಸ್ಸಂಜೆ' ಕಥೆಯಲ್ಲಿನ ನಾರಾಯಣರಾವ್ ಪಾತ್ರ ಓದುಗರನ್ನು ಆರ್ದ್ರಗೊಳಿಸಬಲ್ಲದು. ಮುಸ್ಸಂಜೆ ಕೊನೆಗೊಳ್ಳುತ್ತಿದ್ದಂತೆಯೇ ಕಣ್ಣಂಚೂ ಒದ್ದೆಯಾದೀತು. ಕುಟುಂಬಗಳಲ್ಲಿ ಇರುವ ಪ್ರಸ್ತುತ ಸ್ಥಿತಿಗೆ ಕೈಗನ್ನಡಿ ಈ ಕಥೆ. ಕಥೆಯ ನಿರೂಪಣೆಯೂ ಚೊಕ್ಕ, ಅಷ್ಟೇ ತೀಕ್ಷ್ಣ. ಲೇಖಕರ ವೃತ್ತಿಯ ತುಣುಕೂ ಇಲ್ಲಿದೆ. ಕೃತಿಯ ಶೀರ್ಷಿಕೆ ಹೊತ್ತ ಕಥೆಗೂ ಈ ಕಥೆಗೂ ಸಾಮ್ಯತೆ ಇದೆ. ಪಾತ್ರಗಳು ಬೇರೆ ಬೇರೆಯಾದರೂ ತಿರುಳು ಅದೇ ಆಗಿದೆ. ಒಟ್ಟು, ಇಲ್ಲಿನ ಕಥೆಗಳು, ಅದರೊಳಗಿನ ಪಾತ್ರಗಳು ವಿವಿಧ ಸ್ತರದ ಬದುಕಿನ ಚಿತ್ರಣವನ್ನು ಧಾರಾಳವಾಗಿ ನೀಡಬಲ್ಲದು.




ಅಮೃತ ಬಳ್ಳಿ ಮತ್ತು ಇತರ ಕಥೆಗಳು
ಲೇ: ಕಂ.ಕ.ಮೂರ್ತಿ
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್
ಸಂ: 9945939436
ಪು: 158 ₹190

ನೇಪಥ್ಯದ ಮಾಸದ ಪರದೆ

ಕನ್ನಡ ರಂಗಭೂಮಿಯ ಇತಿಹಾಸದಲ್ಲಿ 1900ರಿಂದ 1950ರ ಅವಧಿ ರಂಗಭೂಮಿಯ ಸುವರ್ಣಯುಗ ಎಂದು ಗುರುತಿಸಲ್ಪಟ್ಟಿದೆ. ಈ ಕಾಲಘಟ್ಟದಲ್ಲಿ ಅಂದರೆ 1925ರಲ್ಲಿ ಪ್ರಾರಂಭವಾದ 'ರಂಗಭೂಮಿ' ಮಾಸಪತ್ರಿಕೆಯ ಆಯ್ದ ಲೇಖನಗಳನ್ನು ಒಂದು ಸಂಪುಟದಲ್ಲಿ ಕಟ್ಟಿಕೊಡುವ ಯತ್ನ ಇಲ್ಲಿ ನಡೆದಿದೆ.

ಹನ್ನೆರಡು ವರ್ಷಗಳ ಕಾಲ ಬಾಳಿ ಬದುಕಿದ ಪತ್ರಿಕೆಯ ಅಮೂಲ್ಯ ಲೇಖನಗಳನ್ನು ಇಂದಿನ ತಲೆಮಾರಿಗೆ ಪರಿಚಯಿಸುವ, ರಂಗಭೂಮಿಯ ಶಾಸ್ತ್ರೀಯ ಮತ್ತು ತಾಂತ್ರಿಕ ವಿವರಗಳನ್ನೊಳಗೊಂಡ ಹಲವಾರು ಮೌಲಿಕ ಲೇಖನಗಳು ಈ ಕೃತಿಯೊಳಗಿವೆ. ನಾಟಕಗಳ ರಚನೆ, ಲಲಿತಕಲೆಗಳ ಸಾಹಿತ್ಯ, ವಿಮರ್ಶೆ, ರಂಗಭೂಮಿಗೇ ಸಂಬಂಧಿಸಿದ ಸಂಪಾದಕೀಯ ಸೇರಿದಂತೆ ವಿವಿಧ ವಿಷಯಾಧಾರಿತ ಲೇಖನಗಳು ಅಂದು ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದವು. ಅತ್ಯುತ್ತಮವಾದ ವಿದ್ವತ್‌ಪೂರ್ಣ ಲೇಖನಗಳನ್ನು ಆಯ್ದು ಕೊಟ್ಟಿರುವುದು ರಂಗಭೂಮಿಯ ಗ್ರಂಥ ಭಂಡಾರಕ್ಕೊಂದು ಅಮೂಲ್ಯ ಕೊಡುಗೆ ಎನ್ನಬಹುದು.

ಒಟ್ಟು 70 ಲೇಖನಗಳು ಈ ಕೃತಿಯೊಳಗಿವೆ. ರಂಗದಿಗ್ಗಜರ, ಸಾಹಿತಿಗಳ ನೆನಪುಗಳಿವೆ. 'ರಂಗಭೂಮಿ'ಯ ಸಂಪಾದಕ ದ.ಕೃ. ಭಾರದ್ವಾಜ ಸೇರಿದಂತೆ 12 ವರ್ಷಗಳಲ್ಲಿ ಆಗಿ ಹೋದ ಸಂಪಾದಕರು, ಆಡಳಿತ ತಂಡವನ್ನೂ ಸಂಗ್ರಾಹಕರಾದ ಪ್ರೊ.ಎ.ವಿ. ಸೂರ್ಯನಾರಾಯಣಸ್ವಾಮಿ ಮತ್ತು ಎಚ್.ಎಸ್. ಗೋವಿಂದೇಗೌಡ ಸ್ಮರಿಸಿದ್ದಾರೆ. ಕನ್ನಡ ರಂಗಭೂಮಿಯ ಶ್ರೀಮಂತ ವಿದ್ವತ್ ಪರಂಪರೆಯನ್ನು ತಿಳಿಯಬಯಸುವವರಿಗೆ, ಸಂಶೋಧನಾಸಕ್ತರಿಗೆ ಉಪಯುಕ್ತ ಕೃತಿ.




ರಂಗಭೂಮಿ (ಲೇಖನಗಳ ಸಂಗ್ರಹ)
ಸಂ: ಪ್ರೊ.ಎ.ವಿ. ಸೂರ್ಯನಾರಾಯಣಸ್ವಾಮಿ, ಎಚ್.ಎಸ್.ಗೋವಿಂದೇಗೌಡ
ಪ್ರ: ಹನ್ಯಾಳು ಪ್ರಕಾಶನ ಮೈಸೂರು
ಸಂ: 98863 25668
ಪು: 464 ₹500

ವಿಜ್ಞಾನ– ಪುರಾಣ– ಫ್ಯಾಂಟಸಿಯ ಕಿಟಕಿ

ರಾಜಮಹಾರಾಜರ ಇತಿಹಾಸದ ಹಿನ್ನೆಲೆ ಇಟ್ಟುಕೊಂಡು ಆರಂಭವಾಗುವ ಕಥೆಯಿದು. 'ಗೋಲ್ಡನ್ ಗೇಟ್' ರಚನೆಯ ಕೌತುಕವನ್ನು ಇದು ತೆರೆದಿಡುತ್ತದೆ. ಭೌತ, ಗಣಿತಶಾಸ್ತ್ರಗಳನ್ನು ಸ್ಪರ್ಶಿಸುತ್ತಾ ಸಾಗುವ ಕಥೆ ಮುಂದೆ ಸಾಹಸ ಮತ್ತು ಫ್ಯಾಂಟಸಿಯತ್ತ ತಿರುಗುತ್ತದೆ.

ಇತಿಹಾಸ, ಪುರಾಣ, ವಿಜ್ಞಾನವನ್ನು ಮೇಳೈಸಿಕೊಂಡು ಕಥೆ ಮುಂದೆ ಸಾಗಿದೆ. ಭೂಮಿಯ ಪರಿಭ್ರಮಣೆ, ಅಂತರಿಕ್ಷಕ್ಕೆ ನೇರ ಸಂಪರ್ಕ ಕಲ್ಪಿಸುವ ವರ್ಮ್‌ಹೋಲ್ (ಶೀಘ್ರಗಾಮಿ ಮಾರ್ಗಗಳು) ಎಂದು ಗುರುತಿಸಲಾಗಿರುವ ಜಾಗಗಳು, ಅಲ್ಲಿಗೆ ಹೋದಾಗ ಆಗುವ ವಿಸ್ಮಯಗಳನ್ನು ಸಂವಾದ ರೂಪದಲ್ಲಿ ವಿವರಿಸಲಾಗಿದೆ. ಅದಕ್ಕೊಂದಿಷ್ಟು ಪುರಾಣ ಕಥೆಗಳ ಕೊಂಡಿಯನ್ನೂ ಕಲ್ಪಿಸಲಾಗಿದೆ. ಅನ್ಯಗ್ರಹ ಜೀವಿಗಳ (ಏಲಿಯನ್ಸ್) ಬಗೆಗೂ ವಿವರಣೆಯಿದೆ. ತ್ರಿಶಂಕು ಸ್ವರ್ಗ, ಸೃಷ್ಟಿಯಲ್ಲಿರುವ ಧನಾತ್ಮಕ ಮತ್ತು ಋಣಾತ್ಮಕ ಶಕ್ತಿಗಳು, ಅವುಗಳ ಸಂಘರ್ಷದಿಂದಾಗುವ ಪರಿಣಾಮವನ್ನು ನಿರೂಪಿಸಲಾಗಿದೆ. ಅದರಲ್ಲಿ ಮಹಾಭಾರತದ ಆಯ್ದ ಪ್ರಸಂಗಗಳನ್ನು ಮುಂದಿಟ್ಟುಕೊಂಡು ಮನುಷ್ಯನ ವಿಕಾಸ, ದೇಹರಚನೆ, ಮಿದುಳಿನ ಬೆಳವಣಿಗೆ ಇತ್ಯಾದಿಗಳನ್ನು ಚರ್ಚಿಸಿದೆ. ವಿಜ್ಞಾನದ ಬೆಳವಣಿಗೆಗಳ ಹಿಂದಿನ ಅಧ್ಯಾತ್ಮ, ಪೌರಾಣಿಕ ಪರಂಪರೆಯ ನೋಟ ಪಡೆಯಬಯಸುವವರಿಗೆ, ಫ್ಯಾಂಟಸಿ ಪ್ರಿಯರಿಗೆ, ಪರಂಪರೆ, ಇತಿಹಾಸ ಮತ್ತು ವಿಜ್ಞಾನವನ್ನು ಒಂದೇ ಕಿಟಕಿಯಲ್ಲಿ ನೋಡಬಯಸುವವರಿಗೆ ಇಷ್ಟ ಆಗಬಹುದಾದ ಕೃತಿ.



ಗೋಲ್ಡನ್ ಗೇಟ್
ಲೇ: ಎನ್.ಪ್ರಭಾಕರ್
ಪ್ರ: ಸ್ವರ ಪ್ರಿಂಟ್ ಆ್ಯಂಡ್ ಪಬ್ಲಿಕೇಷನ್ಸ್ ಬೆಂಗಳೂರು
ಸಂ: 9449040655
ಪು: 216 ₹200





ಮನೆ ಮನೆಯಲ್ಲೂ ಕಲೆ!

ಡಾ.ಕೆ.ಎಸ್.ಚೈತ್ರಾ

ಒಡಿಶಾದ ರಘುರಾಜಪುರ ದೇಶದ ಸಾಂಸ್ಕೃತಿಕ ನಕಾಶೆಯಲ್ಲಿ ಮಹತ್ವದ ಸ್ಥಾನ ಪಡೆದಿದೆ. ಜಗನ್ನಾಥನ ಪ್ರಭಾವಳಿಯ ಅಡಿ ಇಲ್ಲಿ ಅರಳಿ ಬೆಳೆದ ನೃತ್ಯ, ಚಿತ್ರ ಕಲೆಗಳು ಅದ್ಭುತವೇ ಸರಿ. ಏನೇನಿವೆ ಇಲ್ಲಿ? ಪುಟ್ಟ ನೋಟ ಹೀಗಿದೆ

ಭಾರ್ಗವಿ ನದಿತೀರದಲ್ಲಿ ತೆಂಗು, ಮಾವು, ಹಲಸಿನ ಮರಗಳಿಂದ ಸುತ್ತುವರಿದ ಪುಟ್ಟ ಗ್ರಾಮ. ದೊಡ್ಡದೊಂದು ಕಮಾನಿನ ಒಳಹೊಕ್ಕು ಒಳಗೆ ಪ್ರವೇಶಿಸಿದರೆ ಬೀದಿಯ ಇಕ್ಕೆಲಗಳಲ್ಲಿ ಸಾಲಾಗಿ ಸುಮಾರು ನೂರೈವತ್ತು ಮನೆಗಳು. ಪ್ರತಿಯೊಂದೂ ವಿಶಿಷ್ಟ, ವರ್ಣಮಯ. ಅನತಿ ದೂರ ಸಾಗಿದರೆ ಗೆಜ್ಜೆಯ ಸದ್ದು, ಜಯದೇವನ ಗೀತಗೋವಿಂದದ ಹಾಡು. ಕಣ್ಣು-ಕಿವಿಗಿಲ್ಲಿ ಹಬ್ಬ. ಏಕೆಂದರೆ ಮನೆಮನೆಯ ನೆಲ-ಗೋಡೆ ಎಲ್ಲೆಲ್ಲೂ ವರ್ಣ ಚಿತ್ತಾರ. ಗಾಳಿಯೊಡನೆ ತೇಲಿಬರುವ ಗೆಜ್ಜೆ ಸದ್ದು!

ಈ ಊರಿನ ಹೆಸರು ರಘುರಾಜಪುರ ಎಂದು. ಒಡಿಶಾದ ಈ ಹಳ್ಳಿ, ಭಾರತದ ಸಾಂಸ್ಕೃತಿಕ ನಕಾಶೆಯಲ್ಲಿ ಮಹತ್ವದ ಸ್ಥಾನ ಪಡೆದಿದೆ. ಇದನ್ನು 'ಪಾರಂಪರಿಕ ಗ್ರಾಮ' ಎಂದು ಘೋಷಿಸಲಾಗಿದೆ.

ಒಡಿಶಾದ ಪ್ರಾಚೀನ ಹೆಸರು ಉತ್ಕಲಾ. ಕಲೆಯ ಉತ್ಕರ್ಷಕ್ಕೆ ಕಾರಣವಾದ ಉತ್ಕಲಾ ಎಂಬ ಹೆಸರು ನಿಜಕ್ಕೂ ಅನ್ವರ್ಥಕ ಅನ್ನಿಸಿದ್ದು ಒಡಿಶಾ ಸುತ್ತುವಾಗಲೆಲ್ಲಾ ಕಂಡ ಕಲ್ಲಿನಲ್ಲಿ ಕೊರೆದ ಸೂಕ್ಷ್ಮ ಚಿತ್ತಾರ, ಕಸೂತಿಯ ಸಂಭಲ್‌ಪುರಿ ಸೀರೆ, ನಾಜೂಕಾದ ಬೆಳ್ಳಿಯ ಆಭರಣ, ಶಂಖ-ಕಪ್ಪೆಚಿಪ್ಪಿನ ಕರಕುಶಲ ವಸ್ತುಗಳು, ಪಟ್ಟ ಚಿತ್ರಗಳು ಮತ್ತು ಒಡಿಸ್ಸಿ ನೃತ್ಯದಿಂದಾಗಿ!

ರಾಜಧಾನಿ ಭುವನೇಶ್ವರಕ್ಕೆ ಹೋಗುವಾಗ ಪುರಿಯಿಂದ ಕೇವಲ ಹತ್ತು ಕಿ.ಮೀ. ದೂರದಲ್ಲಿ ಚಿತ್ರ-ನೃತ್ಯ ಎರಡಕ್ಕೂ ಪ್ರಸಿದ್ಧವಾದ ಕಲಾಗ್ರಾಮ ಎಂದು ಜತೆಯಲ್ಲಿದ್ದ ರಂಜಿತ್ ತೋರಿಸಿದ್ದು ರಘುರಾಜಪುರ ಎಂಬ ಗ್ರಾಮವನ್ನು! ಇದು, ಶಿಲ್ಪ ಗುರು ಡಾ.ಜಗನ್ನಾಥ್ ಮಹಾಪಾತ್ರ, ಒಡಿಸ್ಸಿ ನೃತ್ಯಗುರು ಕೇಳುಚರಣ್ ಮಹಾಪಾತ್ರ ಮತ್ತು ಗುರು ಶ್ರೀಮಗುನಿ ಚರಣ್ ದಾಸ್‌ರಂಥ ಮೇರುಕಲಾವಿದರ ಜನ್ಮಸ್ಥಳ ಹಾಗೂ ಕರ್ಮಭೂಮಿ.

ಪುರಿಯ ಜಗನ್ನಾಥ ಇಲ್ಲಿನ ವಿಶಿಷ್ಟ ಚಿತ್ರ - ನೃತ್ಯಗಳೆರಡಕ್ಕೂ ಸ್ಫೂರ್ತಿ. ಒಡಿಯಾ ಜನರ ಆರಾಧ್ಯ ದೈವ ಮಾತ್ರವಲ್ಲ, ಆತ್ಮಬಂಧು ಜಗನ್ನಾಥ. ಪುರಿಯಲ್ಲಿ ಅಣ್ಣ ಬಲರಾಮ, ತಂಗಿ ಸುಭದ್ರೆಯೊಡನೆ ಆತ ಪ್ರತಿಷ್ಠಾಪಿತ. ದೇವಸ್ಥಾನ ಎಂದೊಡನೆ ಕರಿಕಲ್ಲಿನ / ಅಮೃತಶಿಲೆಯ ಮೂರ್ತಿಯಲ್ಲ. ಅಲ್ಲಿರುವುದು ಮರದಿಂದ ಮಾಡಿದ ಕಿವಿ - ಕಾಲಿಲ್ಲದ, ಕಣ್ಣಿನ ಜಾಗದಲ್ಲಿ ದೊಡ್ಡ ವರ್ತುಲ ಮತ್ತು ಮುರಿದ ಕೈಗಳ ಬೇರೆ ಬೇರೆ ಬಣ್ಣದ ಮೂರ್ತಿಗಳಿವು. ಆದರೆ ಜನರಿಗೆ ತಮ್ಮ ಕರೆ ಕೇಳಿದೊಡನೆ ಕಾಲಿಲ್ಲದಿದ್ದರೂ ಓಡಿಬರುವ, ಕಿವಿಯಿಲ್ಲದಿದ್ದರೂ ಆಲಿಸುವ, ಮುರಿದ ಕೈಯಿಂದಲೇ ಅಭಯ ನೀಡುವ, ಜಗನ್ನಾಥನೆಂದರೆ ಎಲ್ಲಿಲ್ಲದ ಭಕ್ತಿ-ಪ್ರೀತಿ.

ಜಗನ್ನಾಥ ಆಷಾಢದಲ್ಲಿ ಬಿಸಿಲ ತಾಪಕ್ಕೆ ಬಸವಳಿದು ಸ್ನಾನಯಾತ್ರೆ ಮಾಡುತ್ತಾನೆ. ನಂತರ ಹದಿನೈದು ದಿನಗಳ ಕಾಲ ಅಣ್ಣ ತಮ್ಮ ತಂಗಿಯರು ಜ್ವರಪೀಡಿತರಾಗುತ್ತಾರೆ. ಆಗ ಅವರಿಗೆ ಕಟ್ಟುನಿಟ್ಟಾದ ಆರೈಕೆ ಪ್ರತ್ಯೇಕ ಸ್ಥಳದಲ್ಲಿ ನಡೆಯುತ್ತದೆ. ಈ ಸಮಯದಲ್ಲಿ ಮೂರ್ತಿಗಳ ಬದಲಾಗಿ ಈ ಪಟ್ಟಚಿತ್ರಗಳನ್ನು ಇಟ್ಟು ಪೂಜಿಸಲಾಗುತ್ತದೆ! ಹೀಗೆ ಹನ್ನೆರಡನೇ ಶತಮಾನದಲ್ಲಿ ಇದೇ ಗ್ರಾಮದಲ್ಲಿ ಉಗಮವಾದದ್ದೇ ವಿಶೇಷ ಚಿತ್ರಕಲೆ, ಪಟ್ಟಚಿತ್ರಗಳು. ಪುರಿ ದೇವಾಲಯದ ವಿಧಿಯುಕ್ತ ಆಚರಣೆಗಳಲ್ಲಿ, ಧಾರ್ಮಿಕ ವಿಧಿವಿಧಾನಗಳಲ್ಲಿ ಇಲ್ಲಿಂದ ಸಿದ್ಧವಾದ ಪಟ್ಟಚಿತ್ರಗಳು ಬಳಕೆಯಾಗುತ್ತವೆ. ಜಗನ್ನಾಥನ ಲೀಲೆ, ಪುರಾಣಕಥೆಗಳ ಚಿತ್ರಣ ಮುಖ್ಯ ವಸ್ತು. ಈ ಕಲಾವಿದರಿಗೆ ಚಿತ್ರಕಾರ್ ಎಂದು ಕರೆಯಲಾಗುತ್ತದೆ.

ಪಟ್ಟ ಎಂದರೆ ರಟ್ಟರಿವೆ. ಅದರಲ್ಲಿ ತೆಗೆದ ಬಣ್ಣದ ಹಸೆಚಿತ್ರಗಳು. ಮೊದಲು ಹತ್ತಿಯ ಬಟ್ಟೆಯನ್ನು ಅಳತೆಗೆ ತಕ್ಕಂತೆ ಆರಿಸಿಕೊಳ್ಳುತ್ತಾರೆ. ನಂತರ ಹುಣಸೇಹಣ್ಣಿನ ಬೀಜವನ್ನು ಕುಟ್ಟಿ ಪುಡಿ ಮಾಡಿ ಅದನ್ನು ಸೀಮೆಸುಣ್ಣದೊಂದಿಗೆ ಬೆರೆಸಿ ಮಿಶ್ರಣವನ್ನು ತಯಾರಿಸುತ್ತಾರೆ. ಅಂಟಾದ ಇದರ ಲೇಪನದಿಂದ ಬಟ್ಟೆ ಒಣಗಿದ ನಂತರ ರಟ್ಟಿನಂತಾಗುತ್ತದೆ. ಇಡೀ ಬಟ್ಟೆ ನುಣುಪಾಗಿರಲು ನಿರ್ದಿಷ್ಟ ಕಲ್ಲಿನಿಂದ ಉಜ್ಜುತ್ತಾರೆ. ಹೀಗೆ ಚಿತ್ರ ಬಿಡಿಸಲು ರಟ್ಟರಿವೆ ಸಿದ್ಧವಾಗುತ್ತದೆ.

ಚಿತ್ರಕಾರರು ಪಟ್ಟದ ಮೇಲೆ ಚಿತ್ರವನ್ನು ಬರೆದು ಬಣ್ಣವನ್ನು ತುಂಬುತ್ತಾರೆ. ಗಾಢ ವರ್ಣಗಳಾದ ಕೆಂಪು, ನೀಲಿ, ಹಳದಿ, ಕಪ್ಪು ಹೆಚ್ಚಾಗಿ ಬಳಕೆಯಾಗುತ್ತವೆ. ಬಳಸುವುದು ನೈಸರ್ಗಿಕ ಬಣ್ಣಗಳು; ಕಪ್ಪೆಚಿಪ್ಪಿನಿಂದ ಬಿಳಿ, ಸುಟ್ಟ ಮಣ್ಣಿನ ಮಡಕೆಗಳಿಂದ ಕಪ್ಪು, ಹಿಂಗುಲಾ ಕಲ್ಲಿನಿಂದ ಕೆಂಪು ಮತ್ತು ಹರಿಕಲಾ ಕಲ್ಲಿನಿಂದ ಹಳದಿ ಹೀಗೆ. ಬಿಡಿಸಿರುವ ಚಿತ್ರ, ಲೇಪಿಸಿದ ಬಣ್ಣ ತೇವಕ್ಕೆ ಹಾಳಾಗದಂತೆ ನಾಜೂಕಾಗಿ ಶಾಖ ನೀಡಿ, ಹೊಳಪು ನೀಡುವ ಎಣ್ಣೆಯನ್ನು ಸವರಲಾಗುತ್ತದೆ. ಚಿತ್ರದ ವಿನ್ಯಾಸ, ಗಾತ್ರದ ಮೇಲೆ ಸಮಯ ಮತ್ತು ಬೆಲೆ ನಿರ್ಧಾರವಾಗುತ್ತದೆ. ಸಮಯ, ಒಂದು ವಾರದಿಂದ ವರ್ಷಗಟ್ಟಲೇ ತೆಗೆದುಕೊಂಡರೆ ಬೆಲೆ, ನೂರು ರೂಪಾಯಿಯಿಂದ ಲಕ್ಷವನ್ನೂ ಮೀರುತ್ತದೆ.

ಜಗನ್ನಾಥ, ವಿಷ್ಣುವಿನ ದಶಾವತಾರ, ಕೃಷ್ಣರಾಸಲೀಲೆ, ಪುರಾಣಕಥೆಗಳ ಚಿತ್ರಣ ಮುಖ್ಯ ವಸ್ತು. ಯಾವುದೇ ಪಟ್ಟಚಿತ್ರಕ್ಕೂ ಹೂಬಳ್ಳಿಗಳ ಅಲಂಕಾರಿಕ ಚೌಕಟ್ಟು ಇರುತ್ತದೆ. ತಲೆತಲಾಂತರದಿಂದ ಈ ಕಲಾಕಾರರ ಕುಟುಂಬಗಳು ಪಟ್ಟಚಿತ್ರಗಳ ತಯಾರಿಕೆಯಲ್ಲಿ ತೊಡಗಿಕೊಂಡಿವೆ. ಮನೆಮಂದಿಯೆಲ್ಲಾ ಪಟ್ಟಚಿತ್ರಗಳ ಸಿದ್ಧತೆಯ ವಿವಿಧ ಹಂತದಲ್ಲಿ ತೊಡಗಿಸಿಕೊಳ್ಳುತ್ತಾರೆ. ಮಹಿಳೆಯರು ಈ ಅಂಟು, ರಟ್ಟರಿವೆ ಮತ್ತು ಚಿತ್ರದ ಚೌಕಟ್ಟಿನಲ್ಲಿ ನಿರತರಾದರೆ ಮುಖ್ಯ ಚಿತ್ರಕಾರ ಪುರುಷನಾಗಿರುವುದು ರೂಢಿ. ಆದರೀಗ ಯುವತಿಯರೂ ಮುಖ್ಯಚಿತ್ರಕಾರರಾಗಿ ಮನ್ನಣೆ ಪಡೆಯುತ್ತಿದ್ದಾರೆ.

ಧಾರ್ಮಿಕ ವಿಧಿವಿಧಾನಗಳಿಗೆ ಮೀಸಲಾಗಿದ್ದ ಪಟ್ಟಚಿತ್ರಗಳ ಮೂಲ ಆಶಯವನ್ನು ಉಳಿಸಿಕೊಂಡು ಚಿತ್ರಕಾರರು ಹೊಸ ಸಾಧ್ಯತೆಗಳತ್ತ ಗಮನಹರಿಸಿದ್ದಾರೆ. ಬಟ್ಟೆಯ ಬದಲು ಮರ, ಚರ್ಮ, ಕಾಗದ, ಲೋಹ ಹೀಗೆ ಬೇರೆ ಮಾಧ್ಯಮ ಬಳಸಿ ವಸ್ತು ವೈವಿಧ್ಯವನ್ನೂ ಮೂಡಿಸಿದ್ದಾರೆ. ಕೈಚೀಲ, ಸೀರೆ, ಸ್ಮರಣಿಕೆ ಹೀಗೆ ಜನಸಾಮಾನ್ಯರಿಗೆ ಪ್ರಿಯವಾಗುವ ವಿನ್ಯಾಸ, ಕೈಗೆಟುಕುವ ಬೆಲೆಯಲ್ಲಿ ಕಲೆ ಮುಖ ಮಾಡಿದೆ. ಇತ್ತೀಚೆಗೆ ಕೋವಿಡ್ ಬಗ್ಗೆಯೂ ಪಟ್ಟಚಿತ್ರ ತಯಾರಿಸಿ ಆ ಮೂಲಕ ತಮ್ಮ ಸಾಮಾಜಿಕ ಬದ್ಧತೆಯನ್ನು ಚಿತ್ರಕಾರರು ಮೆರೆದಿದ್ದಾರೆ. ದೇಶ ವಿದೇಶಗಳ ಗಣ್ಯರಿಗೆ ನೀಡಲು ಪಟ್ಟಚಿತ್ರ ಕೊಡುಗೆಯಾಗಿ ಬಳಕೆಯಲ್ಲಿದೆ (ವ್ಯಾಟಿಕನ್ ಪೋಪ್ ಫ್ರಾನ್ಸಿಸ್, ಡೆನ್ಮಾರ್ಕ್‌ನ ಪ್ರಧಾನಮಂತ್ರಿ ಇತ್ಯಾದಿ).

ಮನೆಗಳ ಎದುರಿನಲ್ಲಿ ಪಟ್ಟಚಿತ್ರಗಳನ್ನು ತಯಾರಿಸುವ ಚಿತ್ರಕಾರರನ್ನು ಕಂಡು, ಸ್ಮರಣಿಕೆ ಕೊಂಡು, ಕೇಳುತ್ತಿರುವ ಗೆಜ್ಜೆ ನಾದವನ್ನು ಹಿಂಬಾಲಿಸಿದರೆ ಬೀದಿಯಿಂದ ತುಸು ದೂರದಲ್ಲಿ ಎರಡು ಗುರುಕುಲ (ದಸಭುಜ ಮತ್ತು ಅಭಿನ್ನ ಸುಂದರ) ಮಾದರಿಯ ನೃತ್ಯಶಾಲೆಗಳು. ರಘುರಾಜಪುರ ಘರಾನಾದ ಗೊತಿಪುವಾ ನೃತ್ಯಶಿಕ್ಷಣವನ್ನು ಇಲ್ಲಿ ನೀಡಲಾಗುತ್ತದೆ.

ಈ ನೃತ್ಯದ ಹಿಂದೆಯೂ ಜಗನ್ನಾಥನಿದ್ದಾನೆ! ಜಗತ್ತಿಗೇ ಒಡೆಯ ಅಂದರೆ ರಾಜನಾದ ಜಗನ್ನಾಥನಿಗೆ ಪುರಿಯಲ್ಲಿ ಸಲ್ಲುವ ವೈಭವ ಅಷ್ಟಿಷ್ಟಲ್ಲ. ಅನ್ನ ನೈವೇದ್ಯದ ಐವತ್ತಾರು ಬಗೆ ಛಪ್ಪನ್ ಭೋಗ್, ಸೋನಾ ಬೇಷ್ (ಸ್ವರ್ಣ ವೇಷ), ನೃತ್ಯ ಸೇವೆ-ಹೀಗೆ ಪಟ್ಟಿ ದೊಡ್ಡದು. ನೃತ್ಯಸೇವೆ ಸಲ್ಲಿಸುವವರು ಜಗನ್ನಾಥನಿಗೆ ಪ್ರಿಯರಾದ ಮಹಾ ನಾರಿಯರು-ಮಹಾರಿಯರು! ಭಾರತದ ಶಾಸ್ತ್ರೀಯ ನೃತ್ಯ ಪದ್ಧತಿಗಳಲ್ಲಿ ಒಂದಾಗಿರುವ ಒಡಿಸ್ಸಿಯ ಮೂಲ ಮಹಾರಿ ನೃತ್ಯ ಎನ್ನಲಾಗುತ್ತದೆ.

ಕಾರಣಾಂತರದಿಂದ ಈ ಮಹಾರಿಗಳು ಕಡಿಮೆಯಾದಂತೆ ನೃತ್ಯಸೇವೆಯ ಸಂಪ್ರದಾಯ ಉಳಿಸುವ ದೃಷ್ಟಿಯಿಂದ ಹದಿನಾರನೇ ಶತಮಾನದಲ್ಲಿ ಈ ರಘುರಾಜಪುರದಲ್ಲಿ ಆರಂಭವಾದದ್ದು ಗೊತಿಪುವಾ. ಈಗಲೂ ಜಗನ್ನಾಥನಿಗೆ ಸಂಬಂಧಿಸಿದ ಎಲ್ಲಾ ಉತ್ಸವಗಳಲ್ಲಿ ರಥಯಾತ್ರಾ, ಡೋಲಾಯಾತ್ರಾ, ಝೂಲಾನಾಗಳಲ್ಲಿ ಗೊತಿಪುವಾದ ಮೂಲಕ ನೃತ್ಯಸೇವೆ ಸಲ್ಲುತ್ತದೆ. ಆದರಿಲ್ಲಿ ನರ್ತಿಸುವವರು ಬಾಲಕಿಯರಲ್ಲ; ಹಾಗೆ ಅಲಂಕೃತರಾಗಿ ಸಾಹಸ- ದೈಹಿಕ ಕಸರತ್ತನ್ನು ಒಳಗೊಂಡು ರಾಧಾ-ಕೃಷ್ಣರ ಕತೆಯನ್ನು ನಿರೂಪಿಸುವವರು ಪುಟ್ಟ ಬಾಲಕರು. ಹೆಸರು ಗೊತಿ-ಒಬ್ಬ ಪುವಾ -ಹುಡುಗ ಎಂದಾದರೂ ಇದು ಸಮೂಹ ನೃತ್ಯವಾಗಿ ಆಚರಣೆಯಲ್ಲಿದೆ.

ಐದು ವರ್ಷದವರಿದ್ದಾಗಲೇ ಬಾಲಕರಿಗೆ ತರಬೇತಿ ನೀಡಲಾಗುತ್ತದೆ. ಗೊತಿಪುವಾದಲ್ಲಿ ಹಾಡುಗಳನ್ನು ಹಾಡುತ್ತಾ, ಜಾನಪದ ವಾದ್ಯಗಳನ್ನು ನುಡಿಸುತ್ತಾ ನೃತ್ಯ ಮಾಡುವುದು ವಿಶೇಷ. ಈ ಬಾಲಕರು ಹದಿನೈದು ವರ್ಷದ ನಂತರ ಅಂದರೆ ಪ್ರೌಢಾವಸ್ಥೆ ತಲುಪುತ್ತಿದ್ದಂತೆ ಗೊತಿಪುವಾ ಮಾಡುವಂತಿಲ್ಲ. ಆದರೆ ಇತರ ನೃತ್ಯಪ್ರಕಾರಗಳಲ್ಲಿ ತೊಡಗಿಸಿಕೊಳ್ಳುವುದು ಸುಲಭ ಮತ್ತು ಸಾಮಾನ್ಯ.

ಒಡಿಸ್ಸಿ ನೃತ್ಯದಲ್ಲಿ ಇದರ ಪ್ರಭಾವ ಬಹಳಷ್ಟಿದೆ ಎನ್ನಲಾಗುತ್ತದೆ. ಗುರು ಕೇಳುಚರಣ್ ಮಹಾಪಾತ್ರ ಬಾಲ್ಯದಲ್ಲಿ ಗೊತಿಪುವಾ ನರ್ತಕರಾಗಿದ್ದರು! ಕೃಷ್ಣನ ರಾಧೆ ತಾನು ಎಂಬ ಸಖೀಭಾವ ಅವರ ಅಭಿನಯದಲ್ಲಿ ಅದ್ಭುತವಾಗಿ ಮೂಡಿಬರಲು ಗೊತಿಪುವಾ ನೃತ್ಯದ ಹಿನ್ನೆಲೆಯೇ ಕಾರಣ ಎನ್ನಲಾಗುತ್ತದೆ. ಒಡಿಸ್ಸಿ ನೃತ್ಯದಷ್ಟು ಪ್ರಚಾರ ಪಡೆಯದ, ಅಳಿವಿನ ಅಂಚಿನಲ್ಲಿರುವ ಈ ಕಲೆಯನ್ನು ಉಳಿಸುವ ದೃಷ್ಟಿಯಿಂದ ಸ್ಥಾಪಿತವಾದ ಈ ಗುರುಕುಲಗಳಲ್ಲಿ ಸುಮಾರು ಅರವತ್ತು ಜನ ಬಡ ಕುಟುಂಬದ ಹುಡುಗರು ಶಿಕ್ಷಣ ಪಡೆಯುತ್ತಿದ್ದಾರೆ. 'ಬಸಂತ್ ಉತ್ಸವ್ ಪರಂಪರಾ' ಹೆಸರಿನಲ್ಲಿ ಪ್ರತಿವರ್ಷ ಎರಡು ದಿನಗಳ ಕಾಲ ರಘುರಾಜಪುರದಲ್ಲಿ ನೃತ್ಯ-ಚಿತ್ರ ವೈಭವವನ್ನು ಹಮ್ಮಿಕೊಳ್ಳಲಾಗುತ್ತಿದೆ. ದೇಶ-ವಿದೇಶಗಳ ಪ್ರವಾಸಿಗರು ಇದರಲ್ಲಿ ಪಾಲ್ಗೊಳ್ಳುತ್ತಾರೆ.

ತವಾಂಗ್ ಕೊನೆಯ ಶಾಂಗ್ರಿ-ಲಾ

10ನೇ ಪುಟದಿಂದ...

ಹಳೆಯ ಬಾನ್ ಪದ್ಧತಿಯಾದ ಪ್ರಾಣಿ ಬಲಿ ಕೆಲವು ಕಡೆ ಈಗಲೂ ವಿರಳವಾಗಿ ನಡೆಯುತ್ತದೆ.

ನಾವು ತವಾಂಗ್‌ಗೆ ಹೋಗುವಾಗ ಪಟ್ಟಪಾಡು ಒಂದು ಒಳ್ಳೆ ರೋಚಕ ಕಥೆ. ಅದರಲ್ಲೂ ದಾರಿಯಲ್ಲಿ ಬರುವ ದುರ್ಗಮ 'ಸಿಲಾ ಪಾಸ್' (ಎತ್ತರದ ಶಿಖರ) ದಾಟುವಾಗ ನಮ್ಮ ಡೀಸೆಲ್ ವಾಹನ ಎಲ್ಲಿ ಹೆಪ್ಪುಗಟ್ಟಿ ನಿಂತುಬಿಡುತ್ತದೋ ಎಂಬ ಭೀತಿಗೆ ಒಳಗಾಗಿದ್ದೆವು. ಹೋಗುತ್ತಿದ್ದ ದಾರಿಯಲ್ಲಿ ಬೆಟ್ಟಗಳಿಂದ ರಸ್ತೆಗೆ ಉರುಳಿಬರುತ್ತಿದ್ದ ರಾಶಿರಾಶಿ ಕಲ್ಲುಮಣ್ಣು ನೋಡಿ, ಯಾತಕ್ಕಾದರೂ ಈ ಸಾಹಸಕ್ಕೆ ಇಳಿದೆನೋ ಎಂದು ನನ್ನ ಹೃದಯ ಪ್ರಯಾಣದ ಉದ್ದಕ್ಕೂ ಹೊಡೆದುಕೊಳ್ಳುತ್ತಿತ್ತು. ದಾರಿಯಲ್ಲಿ ಬೇರೆ ಇಬ್ಬರು ಕುಡುಕರು ಎದುರಾಗಿ ಕತ್ತಿಗಳೊಂದಿಗೆ ನಮ್ಮನ್ನು ಅಟ್ಟಾಡಿಸಿಕೊಂಡು ಬಂದಿದ್ದರು. ಅವರಿಂದ ತಪ್ಪಿಸಿಕೊಂಡು ಓಡಿಹೋಗಿದ್ದೆವು.

ಕೊನೆಗೆ ಹೇಗೋ ಹಿಮಾಲಯ ಇಳಿದುಬಂದು ಒಂದು ಗ್ಯಾರೇಜ್‌ನಲ್ಲಿ ಸಣ್ಣ ರಿಪೇರಿಗಾಗಿ ನಮ್ಮ ಜೀಪ್ ನಿಲ್ಲಿಸಿದ್ದೆವು. ಅಲ್ಲೇ ತನ್ನ ಹೊಸ ಸಫಾರಿ ಗಾಡಿಯೊಂದಿಗೆ ಒಬ್ಬ ಬೌದ್ಧ ಸನ್ಯಾಸಿ, ದೃಢಕಾಯದ ಯುವಕ ವಾಹನದ ಚಕ್ರಗಳಿಗೆ ಗಾಳಿ ಹಾಕಿಸುತ್ತಿದ್ದ. ಮಾತುಕತೆ ನಡುವೆ ಆತ ತವಾಂಗ್‌ಗೆ ಹೋಗುವುದಾಗಿ ತಿಳಿಸಿದ.

ನಾವು ತವಾಂಗ್‌ನಿಂದ ಈಗತಾನೇ ಹಿಂದಿರುಗಿ ಬಂದೆವು ಎಂದು ಹೇಳಿದೆವು. ಆತ 'ಹೇಗೆ?' ಎಂದ. ನಾವು ನಮ್ಮ ವಾಹನ ತೋರಿಸಿದೆವು. ಆತ ನಮ್ಮಿಬ್ಬರನ್ನು ಮೇಲಿಂದ ಕೆಳಕ್ಕೆ ನೋಡಿ ಆಶ್ಚರ್ಯಚಕಿತನಾಗಿ 'ಈ ವಾಹನದಲ್ಲಿ ಹೋಗಿಬಂದಿರ? ನಿಮ್ಮ ಅದೃಷ್ಟ ಚೆನ್ನಾಗಿತ್ತು ಬಿಡಿ' ಎಂದ. ಆತನ ಮಾತು ಕೇಳಿದ ನನಗೆ ನಿಜವಾಗಿಯೂ ಗಾಬರಿಯಾಗಿತ್ತು.

ಬೌದ್ಧಧರ್ಮ ಮೂಲವಾಗಿ ಭಾರತದಲ್ಲಿ ಹುಟ್ಟಿದರೂ ಅದು ಭಾರತದಿಂದ ಚೀನಾಕ್ಕೆ ಹೋಗಿ ಅಲ್ಲಿಂದ ಬರ್ಮಾ-ಟಿಬೆಟ್ ಮೂಲಕ ಮತ್ತೆ ಅರುಣಾಚಲ ಪ್ರದೇಶ ತಲುಪಿದೆ ಎಂದು ಹೇಳಲಾಗುತ್ತದೆ. ಇಂತಹ ಸುಂದರ ತವಾಂಗ್‌ಗಾಗಿ ಚೀನಾ ಹಂಬಲಿಸಿ ನಿಂತಿರುವ ಕಾರಣ ನಿಮಗೀಗ ಗೊತ್ತಾಗಿರಬೇಕಲ್ಲವೇ?



ತವಾಂಗ್ ಬೆನ್ನುಬಿದ್ದ ಚೀನಾ

ಚೀನಾ ಸೈನಿಕರು ಆಗಾಗ ಭಾರತೀಯ ಗಡಿಯನ್ನು ಪ್ರವೇಶಿಸಿ ಭಾರತೀಯ ಸೈನ್ಯದ ಜೊತೆಗೆ ಘರ್ಷಣೆಗೆ ಇಳಿಯುವುದು ಮಾಮೂಲಿಯಾಗಿದೆ. 2020ರಲ್ಲಿ ಲಡಾಕ್‌ನ ಗಾಲ್ವನ್ ಪ್ರದೇಶದಲ್ಲಿ ಚೀನಾ ಸೈನಿಕರು ಅತಿಕ್ರಮಣ ನಡೆಸಿದ್ದರು. ಇದೇ 9-10ರಂದು ತವಾಂಗ್ ಹತ್ತಿರ ಮತ್ತೆ ಅತಿಕ್ರಮಣ ನಡೆಸಿ ಘರ್ಷಣೆಗೆ ಇಳಿದರು. ಶೂನ್ಯ ಡಿಗ್ರಿ ತಾಪಮಾನದಲ್ಲಿ ಹಗಲು-ರಾತ್ರಿ ದೇಶವನ್ನು ಕಾವಲು ಕಾಯುವ ಯೋಧರ ಬಗ್ಗೆ ಒಂದು ಕಡೆ ದುಃಖವಾದರೆ, ಮತ್ತೊಂದು ಕಡೆ ಹೆಮ್ಮೆ ಎನಿಸುತ್ತದೆ. ಜಗತ್ತಿನ ಯಾವುದೇ ಮೂಲೆಯಲ್ಲಿ ಇಂಥ ವಾತಾವರಣದಲ್ಲಿ ಕೆಲಸ ಮಾಡುವುದೆಂದರೆ ಅದೊಂದು ನರಕಯಾತನೆಯೇ ಸರಿ.

1947ರಲ್ಲಿ ಸ್ವಾತಂತ್ರ್ಯ ಪಡೆದುಕೊಂಡ ಭಾರತ 1960ರ ದಶಕದಲ್ಲಿ ಇನ್ನೂ ಮಂಪರಿನಲ್ಲೇ ಉಳಿದುಕೊಂಡಿತ್ತು. ಪ್ರಪಂಚದ ಚಾವಣಿ ಎಂದು ಹೆಸರಾದ, ಹಿಮಾಚ್ಛಾದಿತ ನೀರಿನ ಸಂಪನ್ಮೂಲ ಹೊಂದಿರುವ ಟಿಬೆಟ್ ದೇಶವನ್ನು ಆಗ ಚೀನಾ ದಿಢೀರನೆ ತನ್ನ ತೆಕ್ಕೆಗೆ ತೆಗೆದುಕೊಂಡುಬಿಟ್ಟಿತು.

1959ರಲ್ಲಿ ಟಿಬೆಟ್‌ನ ಬೌದ್ಧ ಗುರು ದಲೈಲಾಮಾ ಭಾರತಕ್ಕೆ ಓಡಿಬಂದರು. ನೆಹರೂ, ಅವರಿಗೆ ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ಆಶ್ರಯ ಕೊಟ್ಟಿದ್ದರಿಂದ ಚೀನಾಕ್ಕೆ ಮತ್ತಷ್ಟು ಕೋಪ ಬಂತು. ಅಂದಿನಿಂದ ಇಂದಿನವರೆಗೂ ಚೀನಾವು ಅರುಣಾಚಲ ಪ್ರದೇಶದ ವಿಷಯವಾಗಿ ಕಾಲು ಕೆದರಿಕೊಂಡು ಬರುತ್ತಲೇ ಇದೆ.

1962ರ ಅಕ್ಟೋಬರ್‌ನಿಂದ ನವೆಂಬರ್‌ವರೆಗೂ ಹಿಮಾಲಯದ ಕಣಿವೆಗಳಲ್ಲಿ ಭಾರತ- ಚೀನಾ ಯುದ್ಧ ನಡೆಯಿತು. ಯುದ್ಧ ನಡೆದ ಸ್ಥಳಗಳು, ಪಾಳುಬಿದ್ದ ಬಂಕರುಗಳು, ಯುದ್ಧದಲ್ಲಿ ಉಪಯೋಗಿಸಿದ ಮದ್ದುಗುಂಡು ಮತ್ತು ಭಾರತೀಯ ಯೋಧರ ಯುದ್ಧ ಸ್ಮಾರಕಗಳು ತವಾಂಗ್ ಸುತ್ತಮುತ್ತಲೂ ಹತ್ತಾರು ಕಡೆ ಹರಡಿಕೊಂಡಿವೆ. ಇದನ್ನೆಲ್ಲ ನೋಡಿದಾಗ ಮನಸ್ಸಿಗೆ ಖೇದವಾಗುತ್ತದೆ.

ಅರುಣಾಚಲ ಪ್ರದೇಶ, ಅದೂ ಮುಖ್ಯವಾಗಿ ತವಾಂಗ್ ಭೂಭಾಗ, ತನಗೆ ಸೇರಿದ್ದು ಎಂದು ಚೀನಾ ಪದೇ ಪದೇ ಹೇಳಿಕೊಳ್ಳುತ್ತಾ ಭಾರತದ ಗಡಿಯೊಳಕ್ಕೆ ಬಂದು ಘರ್ಷಣೆಗೆ ನಿಲ್ಲುತ್ತದೆ. ತವಾಂಗ್ ಪ್ರಾಂತ್ಯವು ಯುದ್ಧ ವ್ಯೂಹಾತ್ಮಕ ಸ್ಥಳವಾಗಿರುವುದು ಮತ್ತು ಅದು ಹಿಮಾಲಯದ ಮುದ್ದಿನ ಮಗಳಾಗಿರುವುದು ಇದಕ್ಕೆ ಕಾರಣ!



• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಹೊಂದಿಸು – ಆನಂದಿಸು

ದೊಡ್ಡ ಸಮಾರಂಭವೊಂದು ಏರ್ಪಾಡಾಗಿತ್ತು. ಮೊದಲೇ ಗೊತ್ತುಪಡಿಸಿದ್ದಂತೆ ಬಂದ ಅತಿಥಿಗಳಿಗೆ ಕುಡಿಯಲು ಕೋಕಾಕೋಲಾ ಕೊಡುವ ಏರ್ಪಾಡಾಗಿತ್ತು. ಸಾವಿರಾರು ಬಾಟಲಿಗಳು ಬಂದಿಳಿದಿದ್ದವು. ಜನರು ದೊಡ್ಡ ಪ್ರಮಾಣದಲ್ಲಿ ಸೇರಿದ್ದರಿಂದ ಕೋಕಾಕೋಲಾ ಲೆಕ್ಕವಿಲ್ಲದೇ ಎಲ್ಲವೂ ಮುಗಿಯುತ್ತಾ ಬಂದವು. ಆದರೆ, ಸಮಾರಂಭಕ್ಕೆ ಬರಬೇಕಿದ್ದ ಕೆಲವು ಮುಖ್ಯ ಅತಿಥಿಗಳು ಬಂದಿರಲಿಲ್ಲ. ಆದ್ದರಿಂದ ಯಜಮಾನರು ತಮ್ಮ ಸೇವಕನನ್ನು ಕರೆದು ಕೆಲವು ಬಾಟಲಿಗಳನ್ನು ಕಡ್ಡಾಯವಾಗಿ ಉಳಿಸಲೇಬೇಕು ಎಂದು ಅಪ್ಪಣೆ ಮಾಡಿದರು. ಆದ್ದರಿಂದ ಸೇವಕನು ಕೆಲವೊಂದು ಬಾಟಲಿಗಳನ್ನು ಉಳಿಸಲೇಬೇಕಾಯಿತು. ಆದರೆ, ತನ್ನ ಕೆಲಸದ ಗಡಿಬಿಡಿಯಲ್ಲಿ ಅವುಗಳನ್ನು ಕಾಯುವುದೊಂದು ಸಮಸ್ಯೆ ಆಯಿತು. ಆದ್ದರಿಂದ ತಾನೊಂದು ಉಪಾಯ ಮಾಡಿ ಒಂದು ಕೋಣೆಯಲ್ಲಿ ದೊಡ್ಡ ಮೇಜಿನ ಮೇಲೆ ಉಳಿದ 44 ಬಾಟಲಿಗಳನ್ನು ಒಂದು ಕ್ರಮದಲ್ಲಿ ಇಟ್ಟನು. ಆಗ ಮೇಜಿನ ಯಾವ ಭಾಗದಿಂದ ನೋಡಿದರೂ 12 ಬಾಟಲಿಗಳು ಕಾಣುತ್ತಿದ್ದವು. ಚಿತ್ರ ನೋಡಿ.

1	10	1
10	ಒಟ್ಟು 44	10
1	10	1

ಹಾಗೆ ಇಟ್ಟಿದ್ದರಿಂದ ಆಗಾಗ ಅಲ್ಲಿಗೆ ಬಂದು ಬಾಟಲಿಗಳೆಲ್ಲಾ ಸರಿಯಾಗಿವೆಯೇ ಎಂದು ನೋಡಲು ಅನುಕೂಲವಾಗುವುದೆಂದು ಅವನು ಬಗೆದನು. ಪ್ರತಿ 5 ನಿಮಿಷಗಳಿಗೊಮ್ಮೆ ಬಂದು ಅವುಗಳೆಲ್ಲವನ್ನೂ ಎಣಿಸಿ ಕಾಲ ವಿಳಂಬ ಮಾಡದೇ ತನ್ನ ಸೂತ್ರಕ್ಕನುಸಾರವಾಗಿ ಅಂದರೆ ಯಾವ ಬಾಜುವಿನಿಂದ ನೋಡಿದರೂ 12 ಬಾಟಲಿಗಳು ಇರುವವೇ ಎಂದು ಖಾತ್ರಿ ಮಾಡಿಕೊಂಡು ಹೋಗುತ್ತಿದ್ದನು.

ಆದರೆ, ತುಂಟನೊಬ್ಬ ಇದನ್ನೆಲ್ಲ ಅರಿತು ಅವನಿಗೆ ತಿಳಿಯದ ಹಾಗೆ 44 ಬಾಟಲಿಗಳ ಪೈಕಿ 4ನ್ನು ಹಾರಿಸಿಕೊಂಡು ಹೋದನು. ಕೇವಲ 40 ಬಾಟಲಿಗಳನ್ನು ಲೆಕ್ಕಕ್ಕೆ ಚ್ಯುತಿ ಬಾರದಂತೆ ಅಂದರೆ ಯಾವ ಭಾಗದಿಂದ ಎಣಿಸಿದರೂ 12 ಆಗುವಂತೆ ಸರಿ ಹೊಂದಿಸಿ ಹೋದನು: ಅವನೊಬ್ಬನೇ 4 ಬಾಟಲಿಗಳನ್ನು ಕುಡಿಯುತ್ತಿದ್ದಾಗ ಇನ್ನೊಬ್ಬ ಬಂದು ನನಗೆ ಬಂದು ನನಗೊಂದು ಕೊಡು ಎನ್ನಲು, ಆ ತುಂಟ ತಾನು ಮಾಡಿದ ಜಾಣ್ಮೆಯನ್ನು ಹೇಳಿ, 'ನೀನೂ ಬೇಕಾದರೆ ನಿನ್ನ ಜಾಣ್ಮೆಯಿಂದ ಸೇವಕನ ಲೆಕ್ಕಕ್ಕೆ ತಕ್ಕಂತೆ ಹೊಂದಿಸಿ ಕೆಲವು ಬಾಟಲಿಗಳನ್ನು ತೆಗೆದುಕೊಂಡು ಬಾ ಎಂದನು.

ಆ ಪ್ರಕಾರವಾಗಿ ಅವನೂ 4 ಹಾರಿಸಿಕೊಂಡು ಹೋಗಿ ಮೊದಲಿನ ಲೆಕ್ಕದ ಪ್ರಕಾರ ಇಟ್ಟನು. ಮೂರನೇ ಯುವಕನೊಬ್ಬನೂ 4 ಬಾಟಲಿಗಳನ್ನು ಹಾರಿಸಿಕೊಂಡು ಹೋಗಿ ಮೊದಲಿನ ಲೆಕ್ಕದ ಪ್ರಕಾರ ಇಟ್ಟನು. ಆಗಾಗ ಸೇವಕ ಬಂದು ತನ್ನ ಲೆಕ್ಕ ಸರಿ ಇದೆಯೇ ಎಂದು ನೋಡಿ ಹೋಗುತ್ತಿದ್ದನು. ನಾಲ್ಕನೆಯವನೊಬ್ಬನೂ ಬಂದು ಇತರರಂತೆ ತಾನೂ 4ನ್ನು ಹಾರಿಸಿಕೊಂಡು ಸೇವಕನ ಲೆಕ್ಕಕ್ಕೆ ಸರಿ ಮಾಡಿದನು. ಇದನ್ನು ನೋಡಿ ಐದನೆಯವನೊಬ್ಬನೂ 4 ಹಾರಿಸಿಕೊಂಡು ಬರಲು ಎಷ್ಟು ಪ್ರಯತ್ನಿಸಿದರೂ ಅನಿವಾರ್ಯವಾಗಿ ಕೇವಲ ಎರಡನ್ನು ಮಾತ್ರ ಹಾರಿಸಿಕೊಂಡು ಹೋಗಿ ಸೇವಕನ ಲೆಕ್ಕಕ್ಕೆ ಸರಿಯಾಗುವಂತೆ ಹೊಂದಿಸಿಟ್ಟು ಬಂದನು. ಹಾಗಾದರೆ 44 ಬಾಟಲಿಗಳಿಂದ ನಾಲ್ಕನ್ನು ಹಾರಿಸಿದ ಮೊದಲನೆಯವ 40ರಲ್ಲೇ ಸೇವಕನ ಲೆಕ್ಕಕ್ಕೆ ಹೇಗೆ ಹೊಂದಿಸಿದನು? ಆನಂತರ 2ನೆಯವ 36ರಲ್ಲಿ ಹೇಗೆ ಹೊಂದಿಸಿದನು? 4ನೆಯವ 28ರಲ್ಲಿ ಹೇಗೆ ಹೊಂದಿಸಿದನು? ಹಾಗೂ 5ನೆಯವನು ಕೇವಲ 26ರಲ್ಲಿ ಹೇಗೆ ಹೊಂದಿಸಿದನು? ಹೇಳಿ.

ಕನಕದಾಸರು

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಇವರು ಕನಕದಾಸರು ಕರ್ನಾಟಕದ ಭಕ್ತಿ ಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರು. ಕನಕದಾಸರು ದಂಡನಾಯಕರಾಗಿದ್ದು, ಯುದ್ಧವೊಂದರ ಬಳಿಕ ಲೌಕಿಕ ಬದುಕಿನಲ್ಲಿ ವೈರಾಗ್ಯ ಉಂಟಾಗಿ, ಹರಿಭಕ್ತರಾದರು ಎಂಬ ಇತಿಹಾಸವಿದೆ



ಕನಕದಾಸರ ಮೂಲ ಹೆಸರು ತಿಮ್ಮಪ್ಪನಾಯಕ. ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಬಾಡ ಗ್ರಾಮದಲ್ಲಿ ಬಚ್ಚಮ್ಮ ಮತ್ತು ಬೀರಪ್ಪ ನಾಯಕ ಎಂಬ ದಂಪತಿಯ ಮಗನಾಗಿ ಜನಿಸಿದರು. ತಂದೆ ಸೇನಾಧಿಪತಿಯೂ ಆಗಿದ್ದರು



ಕನಕದಾಸರ ರಾಜನಿಷ್ಠೆ, ಆಡಳಿತ, ಶೌರ್ಯ, ಅಧ್ಯಾತ್ಮ, ಭಕ್ತಿಪಥ, ಕೀರ್ತನೆಗಳು ಕೃತಿಗಳು... ಹೀಗೆ ಎಲ್ಲವನ್ನೂ ದಾಖಲಿಸುವ ಕಾರ್ಯ ನಡೆದಿದೆ. ಅವರ ಬದುಕು ಹಲವು ಟಿಸಿಲುಗಳಾಗಿ ತೆರೆದುಕೊಂಡದ್ದನ್ನು ಸಂಕೇತಿಸುತ್ತಿದೆ ಈ ಚಿತ್ರ



ಬಾಡ ಗ್ರಾಮದಲ್ಲಿ ಕನಕದಾಸರ ಗೌರವಾರ್ಥ, ಅವರ ಬದುಕಿನ ವೈಭವ ನೆನಪಿಸುವ ಉದ್ದೇಶದಿಂದ ಅರಮನೆ ಹಾಗೂ ಕೋಟೆಯೊಂದನ್ನು ಕಟ್ಟಲಾಗಿದೆ. ಉತ್ತಮ ಪ್ರವಾಸಿ ತಾಣವಾಗಿಯೂ ಬಾಡ ಗುರುತಿಸಿಕೊಂಡಿದೆ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ದೇಶ ಪದದ ಹಿಂದೆ ಒಂದಕ್ಷರ ತುಂಬಿ ಮೂರಕ್ಷರಗಳ ಪದ ಮಾಡಿ

1 – ದೇಶ
2 – ದೇಶ
3 – ದೇಶ
4 – ದೇಶ
5 – ದೇಶ

ಟು ಇನ್ ಒನ್ ಪದಗಳು

ಇಲ್ಲಿ ಕೊಟ್ಟಿರುವ ಅನುಸ್ವಾರ ಪದಗಳನ್ನು ಎಡದಿಂದ ಅಥವಾ ಬಲದಿಂದ ಓದಿ ಎರಡು ಬೇರೆ ಬೇರೆ ಪದಗಳಾಗಿರುವುದನ್ನು ಗಮನಿಸಿ.

1 ಬಿಂದು 2 ಕಂಬ 3 ಕಂಬ
4 ತಂಗಿ 5 ತಂದ 6 ಬಂತು

ಅದಲು ಬದಲು ಕಂಚಿ ಕದಲು

ಇಲ್ಲಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಬೇರೊಂದು ಪದ ಮಾಡಿ


1. ಹಣ್ಣಿನ ಮರಕೆ
2. ಮಲ್ಲುನಗೆ
3. ಹಾಡಿಗೆ ಸಿಹಿ
4. ರಿ ಮನೆಸಾಲ

ಆಟಗಳ ಹೆಸರು	
1.	ಪರಿಚಯ ತಿಳಿಸೋ ಆಟ/ ಕಣ್ಣು ಕಟ್ಟಿಕೊಂಡು ಖೂನ ಹೇಳುವಾಟ
2.	ಪಾಂಡಿ ಕಟ್ಟುವ ಆಟ
3	ಬಟಾಟಿ ಆಟ
4	ಬಸವನ ಕಲ್ಲಾಟ
5	ಬಳೆ ಚೂರಿನ ಆಟ/ ಬೆಳ್ಳುಳ್ಳಿ ಪಾವು ಆಟ
6	ಬುಗುರಿ ಆಟ
7	ಬುರ್ರೋ ಆಟ
8	ಮಲ್ಲೆ-ಗಿಲ್ಲಿ ಆಟ
9	ಮರಕೋತಿ ಆಟ/ ಗಿಡ ಮಂಗ್ಯಾನಾಟ
10	ಮಸೆಯೋ ಆಟ/ ಕೈ ಉಜ್ಜೋ ಆಟ
11	ಮುಷ್ಟಿ ಬಗ್ಗಿಸು
12	ಮೂರು ಕಾಲುಗಳ ಓಟದಾಟ
13	ಮಂಡಲ ಖೋ
14	ರತ್ತೊ ರತ್ತೊ
15	ರಾಮ ಲಕ್ಷ್ಮಣರಾಟ
16	ರೈತ-ನರಿ
17	ಲಡ್ಡು – ಲಡ್ಡು ತಿಮ್ಮಯ್ಯಾ/ ಟೋಪಿ ಆಟ/ ಲೋಲೋ ತಿಮ್ಮಯ್ಯ
18	ಲಗೋರಿ
19	ಲ್ವಾಳ ಮುರಗಿ
20	ಲಿಂಬು ಚಮಚದ ಆಟ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳಿಗೆ ಸರಿಹೊಂದುವಂತೆ ಪಕ್ಕದಲ್ಲಿರುವ ಸುಳಿವು ಆಧರಿಸಿ ಎರಡು ಅಕ್ಷರಗಳ ಹೊಸ ಪದ ರಚಿಸಿ

	ಬ	ಡ	ಸುಳಿವು
1			ಹೊಡೆ
2			ಕುಂದು
3			ಯಾಚಿಸು
4			ತೊರೆ
5			ಎಣಿಕೆ ಕ್ರಮದಲ್ಲಿ ಮೊದಲನೇ ಸ್ಥಾನ



ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಜಾಣಪದ ಆಟ

1 ಮುರಿ 2 ಮೂರು 4 ಮೀರು 5 ಮೆರೆ

ಕಳೆದ ಸಂಚಿಕೆಯ ಮಜಕೂರ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ 'ಮಜಕೂರ'ಕ್ಕೆ ಪ್ರತಿಕ್ರಿಯಿಸಿದ ಆಯ್ದ ಮೂವರು ಪುಟಾಣಿಗಳು



ಪುನರ್ವ ಕೆ. ಗೌಡ
ಕೆ..ಆರ್. ನಗರ



ಮಾನ್ವಿ ಟಿ.ವಿ.
ದಾವಣಗೆರೆ



ಆಯುಷ್ ಎಂ.ಎನ್.
ಕೊಪ್ಪಳ

ಅರ್ಜೆಂಟೀನಾ– ಫ್ರಾನ್ಸ್ ಫೈನಲ್ ಇಂದು; ಲಯೊನೆಲ್ ಮೆಸ್ಸಿ–ಎಂಬಾಪೆ ಕದನ ಕುತೂಹಲ

ಕಾಲ್ಚೆಂಡಾಟದ ಕಿರೀಟ ಯಾರ ಮುಡಿಗೆ?

ದೋಹಾ (ರಾಯಿಟರ್ಸ್, ಎಎಫ್‌ಪಿ): ಮುಂದಿನ ನಾಲ್ಕು ವರ್ಷಗಳ ಅವಧಿಗೆ ಕಾಲ್ಚೆಂಡಾಟದ ನೂತನ ದೊರೆ ಯಾರಾಗುವರು ಎಂಬುದು ದೊರೆಗಳ ಆಡಳಿತವಿರುವ ಅರಬ್ ನಾಡಿನಲ್ಲಿ ಭಾನುವಾರ ರಾತ್ರಿ ನಿರ್ಧಾರವಾಗಲಿದೆ.

ಮೂರನೇ ಟ್ರೋಫಿ ಗೆಲ್ಲಬೇಕೆಂಬ ಕನಸಿನೊಂದಿಗೆ ಅರ್ಜೆಂಟೀನಾ ಮತ್ತು ಹಾಲಿ ಚಾಂಪಿಯನ್ ಫ್ರಾನ್ಸ್ ತಂಡಗಳು ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ಪೈಪೋಟಿ ನಡೆಸಲಿದ್ದು, ಕೋಟ್ಯಾಂತರ ಅಭಿಮಾನಿಗಳಲ್ಲಿ ಕುತೂಹಲ ಗರಿಗೆದರಿದೆ.

ದಕ್ಷಿಣ ಅಮೆರಿಕದ ಸಾಂಪ್ರದಾಯಿಕ ಫುಟ್‌ಬಾಲ್ ಶೈಲಿಯು ಯೂರೋಪ್‌ನ ವೇಗ ಮತ್ತು ಅಕ್ರಮಣಕಾರಿ ಶೈಲಿಯ ಜತೆ ತಿಕ್ಕಾಟ ನಡೆಸುವಾಗ ಲುಸೈಲ್ ಕ್ರೀಡಾಂಗಣದ ಹಸಿರು ಹಾಸಿನಲ್ಲಿ ಮೈನವಿರೇಳಿಸುವ ದೃಶ್ಯಗಳು ಮೂಡಿಬರುವುದರಲ್ಲಿ ಅನುಮಾನವಿಲ್ಲ.

ತಮ್ಮ ಐದನೇ ಹಾಗೂ ಕೊನೆಯ ವಿಶ್ವಕಪ್ ಆಡುತ್ತಿರುವ ದಿಗ್ಗಜ ಆಟಗಾರ ಲಯೊನೆಲ್ ಮೆಸ್ಸಿ ಮಿರುಗುವ ಟ್ರೋಫಿ ಎತ್ತಿಹಿಡಿಯುವರೇ, ಕಿಲಿಯನ್ ಎಂಬಾಪೆಯ ಕಾಲ್ಚಳಕದ ಮುಂದೆ ಮೆಸ್ಸಿ ಮಣಿಯುವರೇ ಎಂಬ ಪ್ರಶ್ನೆಗಳಿಗೆ ಉತ್ತರ ಲಭಿಸುವ ಕಾಲ ಕೂಡಿಬಂದಿದೆ.

ಫ್ರಾನ್ಸ್ ಮತ್ತು ಅರ್ಜೆಂಟೀನಾ ಮಾತ್ರವಲ್ಲದೆ ವಿಶ್ವದ ವಿವಿಧ ದೇಶಗಳಲ್ಲಿರುವ ಫುಟ್‌ಬಾಲ್ ಪ್ರೇಮಿಗಳು ಫೈನಲ್ ಪಂದ್ಯವನ್ನು ಉತ್ಸವದ ರೀತಿಯಲ್ಲಿ ಆಚರಿಸಲು ತಯಾರಿ ನಡೆಸಿದ್ದು, ಪೋಲೆಂಡ್‌ನ ರೆಫರಿ ಸೈಮನ್ ಮಾರ್ಸಿನಿಯಾಕ್ ಅವರು ಕಿಕಾಫ್ ವಿಷಲ್ ಊದುವ ಕ್ಷಣಕ್ಕಾಗಿ ಚಾತಕಪಕ್ಷಿಯಂತೆ ಕಾಯುತ್ತಿದ್ದಾರೆ.

ಆಧುನಿಕ ಫುಟ್‌ಬಾಲ್‌ನ ಶ್ರೇಷ್ಠ ಆಟಗಾರರಲ್ಲೊಬ್ಬರಾದ ಮೆಸ್ಸಿ ಹಾಗೂ ಮುಂದಿನ ದಿನಗಳಲ್ಲಿ ಫುಟ್‌ಬಾಲ್ ಜಗತ್ತನ್ನು ಆಳಲು ಸಜ್ಜಾಗಿರುವ ಎಂಬಾಪೆ ನಡುವಿನ ಹೋರಾಟದಿಂದಾಗಿ ಫೈನಲ್ ಪಂದ್ಯದ ರೋಚಕತೆ ಹೆಚ್ಚಿದೆ. ಎರಡೂ ತಂಡಗಳಲ್ಲಿ ಘಟಾನುಘಟಿ ಆಟಗಾರರು ಇದ್ದರೂ, ಎಲ್ಲರ ಚಿತ್ತ ಇವರಿಬ್ಬರ ಮೇಲೆ ನೆಟ್ಟಿದೆ.

35 ವರ್ಷದ ಮೆಸ್ಸಿ ತಮ್ಮ 18 ವರ್ಷಗಳ ವೃತ್ತಿ ಜೀವನದಲ್ಲಿ ವಿಶ್ವಕಪ್ ಹೊರತುಪಡಿಸಿ ಎಲ್ಲ ಪ್ರಮುಖ ಪ್ರಶಸ್ತಿಗಳನ್ನು ಗೆದ್ದಿದ್ದಾರೆ. ಭಾನುವಾರ ಅವರು ಟ್ರೋಫಿ ಎತ್ತಿಹಿಡಿಯಬೇಕು ಎಂಬುದು ಅಭಿಮಾನಿಗಳ ಬಯಕೆಯಾಗಿದೆ.

ಎಂಬಾಪೆ ಅಲ್ಲದೆ ಒಲಿವಿಯೆರ್ ಜಿರೋಡ್, ಆಂಟೋನ್ ಗ್ರೀಸ್‌ಮನ್ ಮತ್ತು ಉಸ್ಮಾನ್ ದೆಂಬೆಲೆ ಅವರು ಫ್ರಾನ್ಸ್ ಪರ ಮಿಂಚುವ ವಿಶ್ವಾಸದಲ್ಲಿದ್ದರೆ, ಅರ್ಜೆಂಟೀನಾ ತಂಡ ಜೂಲಿಯನ್ ಅಲ್ವರೆಜ್, ಗೋಲ್‌ಕೀಪರ್ ಎಮಿಲಿಯಾನೊ ಮಾರ್ಟಿನೆಜ್ ಹಾಗೂ ಎಂಜೊ ಫೆರ್ನಾಂಡಿಜ್ ಅವರ ಮೇಲೂ ಭರವಸೆ ಇಟ್ಟಿದೆ.

ಫ್ರಾನ್ಸ್ ಗೆದ್ದರೆ ಎಂಬಾಪೆ, ಬ್ರೆಜಿಲ್‌ನ ದಿಗ್ಗಜ ಆಟಗಾರ ಪೆಲೆ ಅವರ ದಾಖಲೆ ಸರಿಗಟ್ಟಲಿದ್ದಾರೆ. ಪೆಲೆ ತಾವಾಡಿದ ಮೊದಲ ಎರಡು ವಿಶ್ವಕಪ್ ಟೂರ್ನಿಗಳಲ್ಲಿ ಟ್ರೋಫಿ ಜಯಿಸಿದ್ದರು. 2018 ರಲ್ಲಿ ಫ್ರಾನ್ಸ್ ಗೆದ್ದಾಗ ಎಂಬಾಪೆ ತಂಡದಲ್ಲಿದ್ದರು. ಆಗ ಅವರಿಗೆ 19 ವರ್ಷ ಆಗಿತ್ತು. ಇದೀಗ ತಮ್ಮ 23ನೇ ವಯಸ್ಸಿನಲ್ಲಿ 2ನೇ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದಾರೆ.

1978 ಮತ್ತು 1986 ರಲ್ಲಿ ಚಾಂಪಿಯನ್ ಆಗಿದ್ದ ಅರ್ಜೆಂಟೀನಾ 2014ರ ಫೈನಲ್‌ನಲ್ಲಿ ಜರ್ಮನಿ ಎದುರು ಮಣಿದಿತ್ತು. 36 ವರ್ಷಗಳ ಬಳಿಕ ಮತ್ತೆ ಟ್ರೋಫಿಯ ಸನಿಹ ಬಂದು ನಿಂತಿದೆ. 1998 ಮತ್ತು 2018 ರಲ್ಲಿ ಪ್ರಶಸ್ತಿ ಜಯಿಸಿದ್ದ ಫ್ರಾನ್ಸ್ ಕೂಡಾ ಮೂರನೇ ಕಿರೀಟವನ್ನು ಎದುರು ನೋಡುತ್ತಿದೆ.

ಇಟಲಿ (1938) ಮತ್ತು ಬ್ರೆಜಿಲ್ (1962) ತಂಡಗಳನ್ನು ಹೊರತುಪಡಿಸಿ ಯಾವುದೇ ತಂಡವೂ ಸತತ ಎರಡು ಟೂರ್ನಿಗಳಲ್ಲಿ ಚಾಂಪಿಯನ್ ಆಗಿಲ್ಲ. ಫ್ರಾನ್ಸ್ ಗೆದ್ದರೆ ಈ ತಂಡಗಳ ಸಾಲಿಗೆ ಸೇರಲಿದೆ.

ಫೈನಲ್‌ಗೆ ಸಾಗಿ ಬಂದ ಹಾದಿ

	ಫ್ರಾನ್ಸ್	ಅರ್ಜೆಂಟೀನಾ
ಗುಂಪು ಹಂತ		
	ಆಸ್ಟ್ರೇಲಿಯಾ ವಿರುದ್ಧ 4-1 ಜಯ	ಸೌದಿ ಅರೇಬಿಯಾ ಎದುರು 1-2 ಸೋಲು
	ಡೆನ್ಮಾರ್ಕ್ ವಿರುದ್ಧ 2-1 ಜಯ	ಮೆಕ್ಸಿಕೊ ಎದುರು 2-0 ಜಯ
	ಟ್ಯುನಿಷಿಯಾ ಎದುರು 0-1 ಸೋಲು	ಪೋಲೆಂಡ್ ಎದುರು 2-0 ಜಯ
ಪ್ರೀಕ್ವಾರ್ಟರ್‌ಫೈನಲ್	ಪೋಲೆಂಡ್ ಎದುರು 3-1 ಜಯ	ಆಸ್ಟ್ರೇಲಿಯಾ ಎದುರು 2-1 ಜಯ
ಕ್ವಾರ್ಟರ್‌ಫೈನಲ್	ಇಂಗ್ಲೆಂಡ್ ವಿರುದ್ಧ 2-1 ಜಯ	ನೆದರ್ಲೆಂಡ್ಸ್ ವಿರುದ್ಧ ಪೆನಾಲ್ಟಿ ಶೂಟೌಟ್‌ನಲ್ಲಿ 3-4 ಜಯ
ಸೆಮಿಫೈನಲ್	ಮೊರೊಕ್ಕೊ ಎದುರು 2-0 ಜಯ	ಕ್ರೊವೇಷ್ಯಾ ಎದುರು 3-0 ಜಯ

ಫ್ರಾನ್ಸ್ ಆಟಗಾರರಿಗೆ ಅನಾರೋಗ್ಯ

ದೋಹಾ (ಎಎಫ್‌ಪಿ): ಫೈನಲ್ ಪಂದ್ಯಕ್ಕೆ ಸಜ್ಜಾಗಿರುವ ಫ್ರಾನ್ಸ್ ತಂಡದ ಕೆಲವು ಆಟಗಾರರು ವೈರಾಣು ಸೋಂಕಿಗೆ ತುತ್ತಾಗಿರುವುದು ಕೋಚ್ ದಿದಿಯೆರ್ ದೆಶಾಂಪ್ ಅವರಿಗೆ ಚಿಂತೆ ಉಂಟುಮಾಡಿದೆ.

ಡಿಫೆಂಡರ್‌ಗಳಾದ ರಫೇಲ್ ವರೇನ್, ಇಬ್ರಾಹಿಮಾ ಕೊನಾತೆ ಮತ್ತು ಕಿಂಗ್ಸ್‌ಲೆ ಕೊಮನ್ ಅವರು ಅನಾರೋಗ್ಯದ ಕಾರಣ ಶುಕ್ರವಾರ ಅಭ್ಯಾಸದಲ್ಲಿ ಪಾಲ್ಗೊಂಡಿರಲಿಲ್ಲ. ಅಡ್ರಿಯಾನ್ ರಬಿಯೊ ಮತ್ತು ಡಯೊ ಉಪಮೆಕಾನೊ ಅವರು ಅನಾರೋಗ್ಯದಿಂದಾಗಿ ಸೆಮಿಫೈನಲ್ ಪಂದ್ಯದಲ್ಲಿ ಆಡಿರಲಿಲ್ಲ. ಇನ್ನಷ್ಟು ಆಟಗಾರರಲ್ಲಿ ಸೋಂಕು ಕಾಣಿಸಿಕೊಂಡಿರುವುದು ತಂಡಕ್ಕೆ ಹಿನ್ನಡೆ ಉಂಟುಮಾಡಿದೆ. ವೈರಾಣು ಸೋಂಕಿಗೆ ತುತ್ತಾದ ಆಟಗಾರರು ಜ್ವರ, ಹೊಟ್ಟೆನೋವು ಮತ್ತು ತಲೆನೋವಿನಿಂದ ಬಳಲುತ್ತಿದ್ದಾರೆ ಎಂದು ತಂಡದ ಮೂಲಗಳು ತಿಳಿಸಿವೆ.

- ಆರನೇ ಬಾರಿ ವಿಶ್ವಕಪ್ ಫೈನಲ್ ಆಡುತ್ತಿರುವ ಅರ್ಜೆಂಟೀನಾ
- ಎರಡನೇ ವಿಶ್ವಕಪ್ ಫೈನಲ್ ಆಡಲಿರುವ ಮೆಸ್ಸಿ. 2014ರಲ್ಲಿ ಆಡಿದಾಗ ಅವರ ತಂಡವು ಜರ್ಮನಿ ಎದುರು ಸೋತಿತ್ತು.



ಪ್ರೇಕ್ಷಕರ ಭಯವಿಲ್ಲ: ದೆಶಾಂಪ್

ದೋಹಾ (ಎಎಫ್‌ಪಿ): ಫೈನಲ್ ಪಂದ್ಯ ವೀಕ್ಷಿಸಲು ಲುಸೈಲ್ ಕ್ರೀಡಾಂಗಣದಲ್ಲಿ ಅರ್ಜೆಂಟೀನಾದ ಹೆಚ್ಚಿನ ಪ್ರೇಕ್ಷಕರು ಸೇರಲಿರುವುದು ತಮ್ಮ ಆಟಗಾರರ ಪ್ರದರ್ಶನದ ಮೇಲೆ ಯಾವುದೇ ಪರಿಣಾಮ ಬೀರದು ಎಂದು ಫ್ರಾನ್ಸ್ ತಂಡದ ಕೋಚ್ ದಿದಿಯೆರ್ ದೆಶಾಂಪ್ ಹೇಳಿದ್ದಾರೆ.

ಮೆಸ್ಸಿ ಬಳಗವನ್ನು ಬೆಂಬಲಿಸಲು ಅರ್ಜೆಂಟೀನಾದಿಂದ 40 ಸಾವಿರ ಮಂದಿ ದೋಹಾಕ್ಕೆ ಬಂದಿದ್ದಾರೆ. ಇಲ್ಲಿಗೆ ಬಂದಿರುವ ಫ್ರಾನ್ಸ್ ಬೆಂಬಲಿಗರ ಸಂಖ್ಯೆ 6,000 ದಷ್ಟಿದೆ.

‘ಕ್ರೀಡಾಂಗಣದಲ್ಲಿ ಉತ್ಸವದ ವಾತಾವರಣ ಇರಲಿದೆ. ಅರ್ಜೆಂಟೀನಾದ ಬೆಂಬಲಿಗರೇ ತುಂಬಿರಲಿದ್ದಾರೆ. ಅದರಿಂದ ನಮಗೆ ಚಿಂತೆಯಿಲ್ಲ. ನಮ್ಮ ಎದುರಾಳಿಗಳು ಅಂಗಳದಲ್ಲಿರುವರೇ ಹೊರತು, ಗ್ಯಾಲರಿಗಳಲ್ಲಿ ಅಲ್ಲ’ ಎಂದು ದೆಶಾಂಪ್ ಹೇಳಿದ್ದಾರೆ.

ಕಿಲಿಯನ್ ಎಂಬಾಪೆ

ಲಯೊನೆಲ್ ಮೆಸ್ಸಿ

ಪಂದ್ಯ ಆರಂಭ: ರಾತ್ರಿ 8.30 • ನೇರ ಪ್ರಸಾರ: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನೆಮಾ ಆ್ಯಪ್ • ಕ್ರೀಡಾಂಗಣ: ಲುಸೈಲ್, ದೋಹಾ • ಆಸನ ಸಾಮರ್ಥ್ಯ: 88,966

	ಅರ್ಜೆಂಟೀನಾ	ಫ್ರಾನ್ಸ್
ಫಿಫಾ ರ‍್ಯಾಂಕಿಂಗ್	3	4
ಚಾಂಪಿಯನ್	1978, 1986	1998, 2018
ರನ್ನರ್ಸ್‌ಅಪ್	1930, 1990, 2014	2006

ಪ್ರಮುಖ ಆಟಗಾರರು

	ಲಯೊನೆಲ್ ಮೆಸ್ಸಿ (ಅರ್ಜೆಂಟೀನಾ)	ಕಿಲಿಯನ್ ಎಂಬಾಪೆ (ಫ್ರಾನ್ಸ್)
ಅಂತರರಾಷ್ಟ್ರೀಯ ಪಂದ್ಯ	171	65
ಗಳಿಸಿದ ಗೋಲುಗಳು	96	33
ಆಡಿದ ವಿಶ್ವಕಪ್	5 (2006, 2010, 2014, 2018, 2022)	2 (2018, 2022)
ವಿಶ್ವಕಪ್ ಗೋಲುಗಳು	11	9
ಈ ವಿಶ್ವಕಪ್‌ನಲ್ಲಿ ಗೋಲುಗಳು	5	5
ಅಸಿಸ್ಟ್ಸ್	3	

ಕ್ರೊವೇಷ್ಯಾ ತಂಡಕ್ಕೆ ಮೂರನೇ ಸ್ಥಾನ

‘ಪ್ಲೇ ಆಫ್’ ಪಂದ್ಯದಲ್ಲಿ ಮೊರೊಕ್ಕೊ ವಿರುದ್ಧ 2–1 ಗೋಲುಗಳ ಗೆಲುವು

ದೋಹಾ (ಎಎಫ್‌ಪಿ): ಜೊಸ್ಕೊ ಗ್ವಾರ್ಡಿಯೊಲ್ ಮತ್ತು ಮಿಸ್ಲಾವ್ ಒರಸಿಚ್ ಗಳಿಸಿದ ಗೋಲುಗಳ ನೆರವಿನಿಂದ ಕ್ರೊವೇಷ್ಯಾ ತಂಡ, ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಮೂರನೇ ಸ್ಥಾನ ಗಳಿಸಿತು.

ಖಲೀಫಾ ಇಂಟರ್‌ನ್ಯಾಷನಲ್ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಕ್ರೊವೇಷ್ಯಾ 2–1 ಗೋಲುಗಳಿಂದ ಮೊರೊಕ್ಕೊ ತಂಡವನ್ನು ಮಣಿಸಿತು.

ಗ್ವಾರ್ಡಿಯೊಲ್ ಅವರು ಏಳನೇ ನಿಮಿಷದಲ್ಲಿ ಕ್ರೊವೇಷ್ಯಾ ತಂಡಕ್ಕೆ ಮುನ್ನಡೆ ತಂದಿತ್ತರು. ಇದಾದ ಎರಡು ನಿಮಿಷಗಳಲ್ಲೇ ಮೊರೊಕ್ಕೊ ತಿರುಗೇಟು ನೀಡಿತು. ಅಶ್ರಫ್ ದರಿ ಅವರು ಗೋಲು ಗಳಿಸಿ ಪಂದ್ಯವನ್ನು ಸಮಸ್ಥಿತಿಗೆ ತಂದರು.

ಆದರೆ ಮೊದಲಾರ್ಧ ಕೊನೆಗೊಳ್ಳಲು ಕೆಲವೇ ನಿಮಿಷಗಳು ಇದ್ದಾಗ ಒರಸಿಚ್ (42ನೇ ನಿ.) ಅವರು ಕ್ರೊವೇಷ್ಯಾ ತಂಡಕ್ಕೆ ಮತ್ತೆ ಮುನ್ನಡೆ ತಂದಿತ್ತರು.

ಎರಡನೇ ಅವಧಿಯಲ್ಲಿ ಮೊರೊಕ್ಕೊ ಸಮಬಲದ ಗೋಲಿಗಾಗಿ ಪ್ರಯತ್ನಿಸಿದರೂ ಯಶಸ್ಸು ಕಾಣಲಿಲ್ಲ. ಯೂಸೆಫ್ ಎನ್ ನೆಸ್ರಿ ಅವರಿಗೆ ಲಭಿಸಿದ ಅತ್ಯುತ್ತಮ ಅವಕಾಶವನ್ನು ಕ್ರೊವೇಷ್ಯಾ ಗೋಲ್‌ಕೀಪರ್ ಲಿವಕೊವಿಚ್ ತಡೆದರು. ಕ್ರೊವೇಷ್ಯಾ ತಂಡ 2–3 ಸಲ ಗೋಲು ಗಳಿಸುವ ಸನಿಹಕ್ಕೆ ಬಂದರೂ, ಅಲ್ಪ ಅಂತರದಲ್ಲಿ ಗುರಿ ತಪ್ಪಿತು.

ಉಭಯ ತಂಡಗಳು ಸಾಕಷ್ಟು ಬದಲಾವಣೆಗಳೊಂದಿಗೆ ಕಣಕ್ಕಿಳಿದಿದ್ದವು. ಮೊರೊಕ್ಕೊ ತಂಡದ ಪ್ರಮುಖ ಡಿಫೆಂಡರ್‌ಗಳಾದ ರೊಮೇನ್ ಸೈಸ್, ನಯೇಫ್ ಅಗುಯೆದ್ ಮತ್ತು ನಸೇರ್ ಮಜರೂಯಿ ಅವರು ಈ ಪಂದ್ಯದಲ್ಲಿ ಆಡಲಿಲ್ಲ.

ಕ್ರೊವೇಷ್ಯಾ ತಂಡ ಫಿಫಾ ವಿಶ್ವಕಪ್‌ನಲ್ಲಿ ಮೂರನೇ ಸ್ಥಾನ ಗಳಿಸಿದ್ದು ಇದು ಎರಡನೇ ಬಾರಿ. ಸ್ವತಂತ್ರ ದೇಶವಾದ ಬಳಿಕ 1998 ರಲ್ಲಿ ಆಡಿದ ತನ್ನ ಚೊಚ್ಚಲ ವಿಶ್ವಕಪ್‌ನಲ್ಲೂ ಮೂರನೇ ಸ್ಥಾನ ಪಡೆದುಕೊಂಡಿತ್ತು.



ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಮೂರನೇ ಸ್ಥಾನ ಪಡೆದ ಕ್ರೊವೇಷ್ಯಾ ತಂಡದ ಆಟಗಾರರ ಸಂಭ್ರಮ –ಎಎಫ್‌ಪಿ ಚಿತ್ರ

ಫರ್ನಾಂಡೊ ರಾಜೀನಾಮೆ

ಲಿಸ್ಬನ್ (ಎಎಫ್‌ಪಿ): ಪೋರ್ಚುಗಲ್ ತಂಡದ ಕೋಚ್ ಫರ್ನಾಂಡೊ ಸ್ಯಾಂಟೋಸ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಪೋರ್ಚುಗಲ್ ಫುಟ್‌ಬಾಲ್ ಫೆಡರೇಷನ್ (ಎಫ್‌ಪಿಎಫ್) ಈ ವಿಷಯ ತಿಳಿಸಿದೆ.

ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಪೋರ್ಚುಗಲ್ ತಂಡವು ಮೊರೊಕ್ಕೊ ಎದುರು ಮುಗ್ಗರಿಸಿತ್ತು. ಎಂಟು ವರ್ಷಗಳಿಂದ ರಾಷ್ಟ್ರೀಯ ತಂಡದ ಕೋಚ್ ಆಗಿದ್ದ 68 ವರ್ಷದ ಫರ್ನಾಂಡೊ, ತಾವು ಹುದ್ದೆಯಿಂದ ಬಲವಂತವಾಗಿ ಕೆಳಗಿಳಿಯುವುದಿಲ್ಲ ಎಂದಿದ್ದರು.

ವಿಶ್ವಕಪ್ ಟೂರ್ನಿಯ ಮಹತ್ವದ ಪಂದ್ಯಗಳಲ್ಲಿ ಪ್ರಮುಖ ಆಟಗಾರ ರೊನಾಲ್ಡೊ ಅವರನ್ನು ಹೊರಗಿಟ್ಟ ಅವರ ನಿರ್ಧಾರವನ್ನು ಬಹಳಷ್ಟು ಜನ ವಿರೋಧಿಸಿದ್ದರು.

ಫಾರೂಕ್ ಆಟ: ಬಿಎಫ್‌ಸಿಗೆ ಜಯ

ಇಂಡಿಯನ್ ಸೂಪರ್ ಲೀಗ್ ಪಂದ್ಯ: ಜೆಎಫ್‌ಸಿಗೆ ನಿರಾಸೆ

• ಬಸವರಾಜ ದಳವಾಯಿ

ಬೆಂಗಳೂರು: ಕಂಠೀರವ ಕ್ರೀಡಾಂಗಣದಲ್ಲಿ ಪಂದ್ಯ ವೀಕ್ಷಿಸಲು ಆಗಷ್ಟೇ ಆಸೀನರಾಗುತ್ತಿದ್ದ ಬೆಂಗಳೂರು ಎಫ್‌ಸಿ ಅಭಿಮಾನಿಗಳನ್ನು ಸಂಭ್ರಮದ ಅಲೆಯಲ್ಲಿ ತೇಲುವಂತೆ ಮಾಡಿದವರು ದಾನಿಶ್ ಫಾರೂಕ್..

ಇಲ್ಲಿ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಹಣಾಹಣಿಯಲ್ಲಿ ಅವರು 5ನೇ ನಿಮಿಷದಲ್ಲಿ ಗಳಿಸಿದ ಗೋಲಿನ ನೆರವಿನಿಂದ ಬಿಎಫ್‌ಸಿ 1–0ಯಿಂದ ಜಮ್ಶೆಡ್‌ಪುರ ಎಫ್‌ಸಿ (ಜೆಎಫ್‌ಸಿ) ತಂಡಕ್ಕೆ ಸೋಲುಣಿಸಿತು. ಇದರೊಂದಿಗೆ ಸತತ ಸೋಲಿನಿಂದ ನಿರಾಸೆಯಲ್ಲಿದ್ದ ಅಭಿಮಾನಿಗಳನ್ನು ಸಂತಸದ ಕಡಲಿನಲ್ಲಿ ಮಿಂದೇಳುವಂತೆ ಮಾಡಿತು.

ಚುರುಕಿನ ಆಟ: ಎಂಟೂವರೆ ಸಾವಿರಕ್ಕೂ ಅಧಿಕ ಪ್ರೇಕ್ಷಕರ ಎದುರು ನಡೆದ ಹಣಾಹಣಿಯ ಆರಂಭದಲ್ಲೇ ಬಿಎಫ್‌ಸಿ ಚುರುಕಿನ ಆಟಕ್ಕೆ ಮೊರೆಹೋಯಿತು. ಅದಕ್ಕೆ ಪ್ರತಿಫಲವನ್ನು ಪಡೆಯಿತು.

ಬಿಎಫ್‌ಸಿ 4–3–3 ಮಾದರಿಯಲ್ಲಿ ಆಟ ಆರಂಭಿಸಿತು. ತಂಡದ ಚೆಟ್ರಿ, ಜೇವಿಯರ್ ಹೆರ್ನಾಂಡೆಜ್ ಮತ್ತು ರಾಯ್‌ಕೃಷ್ಣ ಅವರು ಗೋಲು ಗಳಿಸುವ ಸುಂದರ ಅವಕಾಶ ಸೃಷ್ಟಿಸಿದರು. ಚೆಟ್ರಿ ಅವರಿಂದ ಚೆಂಡು ಪಡೆದ ಕೃಷ್ಣ ಅದನ್ನು ಫಾರೂಕ್ ಅವರತ್ತ ಸೊಗಸಾಗಿ ಕ್ರಾಸ್ ಮಾಡಿದರು. ಈ ವೇಳೆ ಮಿಂಚಿನ ವೇಗದಲ್ಲಿ ಫಾರೂಕ್ ಚೆಂಡನ್ನು ಗೋಲ್‌ಪೋಸ್ಟ್‌ಗೆ ಸೇರಿಸಿದರು.

ಆರಂಭದಲ್ಲೇ ದೊರೆತ ಯಶಸ್ಸು ಚೆಟ್ರಿ ಬಳಗದಲ್ಲಿ ಹೊಸ ಉತ್ಸಾಹಕ್ಕೆ ಕಾರಣವಾಯಿತು. ಬಳಿಕ ನಿರಂತರವಾಗಿ ಜೆಎಫ್‌ಸಿ ಗೋಲ್‌ಪೋಸ್ಟ್‌ಅನ್ನು ಗುರಿಯಾಗಿಸಿ ಆಕ್ರಮಣ ಮಾಡಿತು. ಆದರೆ ಯಶಸ್ಸು ಸಾಧ್ಯವಾಗಲಿಲ್ಲ. ಪಂದ್ಯದುದ್ದಕ್ಕೂ ಹೆಚ್ಚಿನ ಅವಕಾಶಗಳು ದೊರೆತರೂ ಬಿಎಫ್‌ಸಿ ಕೂದಲೆಳೆ ಅಂತರದಲ್ಲಿ ಹಲವು ಗೋಲುಗಳನ್ನು ತಪ್ಪಿಸಿಕೊಂಡಿತು. ಆಟಗಾರರ ನಡುವಿನ ಹೊಂದಾಣಿಕೆ, ನಿಖರ ಪಾಸ್‌ಗಳು ಗಮನಸೆಳೆದವು.

ಜೆಎಫ್‌ಸಿ ತಂಡದ ಕೆಲವು ಪ್ರಯತ್ನಗಳಿಗೆ ಬಿಎಫ್‌ಸಿ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ತಡೆಗೋಡೆಯಾದರು. ಉಭಯ ತಂಡಗಳು ಜಿದ್ದಾಜಿದ್ದಿನ ಪೈಪೋಟಿ ನಡೆಸಿದರೂ ಮತ್ತೊಂದು ಗೋಲು ಸಾಧ್ಯವಾಗಲಿಲ್ಲ.

ಪಂದ್ಯದ ಗೆಲುವಿನೊಂದಿಗೆ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಎಂಟನೇ ಸ್ಥಾನಕ್ಕೇರಿತು. 10 ಪಂದ್ಯ ಆಡಿರುವ ತಂಡವು ಮೂರು ಗೆಲುವು, ಒಂದು ಡ್ರಾ ಮತ್ತು ಆರು ಪಂದ್ಯಗಳಲ್ಲಿ ಸೋಲು ಕಂಡಿದೆ. ಜಮ್ಶೆಡ್‌ಪುರ 10ನೇ ಸ್ಥಾನದಲ್ಲುಳಿಯಿತು.

ಐದು ಹಳದಿ ಕಾರ್ಡ್: ಒರಟು ಆಟವಾಡಿದ ಕಾರಣ ಐವರು ಆಟಗಾರರಿಗೆ ರೆಫರಿ ಹಳದಿ ಕಾರ್ಡ್ ದರ್ಶನ ಮಾಡಿಸಿದರು. ಜಮ್ಶೆಡ್‌ಪುರ ತಂಡದ ಬೊರಿಸ್ ಸಿಂಗ್, ಪ್ರತೀಕ್ ಚೌಧರಿ, ಬೆಂಗಳೂರು ಎಫ್‌ಸಿಯ ಪರಾಗ್ ಶ್ರೀವಾಸ್, ರೋಹಿತ್ ಕುಮಾರ್ ಮತ್ತು ಸುರೇಶ್ ವಾಂಗ್‌ಜಮ್ ಹಳದಿ ಕಾರ್ಡ್ ಪಡೆದವರು.



ಗೋಲು ಗಳಿಸಿದ ದಾನಿಶ್ ಫಾರೂಕ್ ಅವರನ್ನು ಅಭಿನಂದಿಸಿದ ರಾಯ್‌ಕೃಷ್ಣ– ಐಎಸ್‌ಎಲ್ ಮೀಡಿಯಾ ಟ್ವಿಟರ್ ಚಿತ್ರ

ಮುಖ್ಯಾಂಶಗಳು
- ಐದನೇ ನಿಮಿಷದಲ್ಲಿ ದಾನಿಶ್ ಫಾರೂಕ್ ಗೋಲು
- ಪಾಯಿಂಟ್ ಪಟ್ಟಿಯಲ್ಲಿ ಎಂಟನೇ ಸ್ಥಾನಕ್ಕೇರಿದ ಚೆಟ್ರಿ ಬಳಗ

ಟೆಸ್ಟ್: ಆಸ್ಟ್ರೇಲಿಯಾ ನೆರವಿಗೆ ಹೆಡ್

ಬ್ರಿಸ್ಬೇನ್ (ಎಪಿ): ಮಧ್ಯಮ ಕ್ರಮಾಂಕದ ಬ್ಯಾಟರ್ ಟ್ರ್ಯಾವಿಸ್ ಹೆಡ್ ಅವರ ಅಜೇಯ ಅರ್ಧಶತಕದ (ಬ್ಯಾಟಿಂಗ್ 78) ನೆರವಿನಿಂದ ಆಸ್ಟ್ರೇಲಿಯಾ ತಂಡ, ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಮರುಹೋರಾಟ ನಡೆಸಿದೆ.

ಬ್ರಿಸ್ಬೇನ್‌ನಲ್ಲಿ ಶನಿವಾರ ಆರಂಭವಾದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಮೊದಲ ಇನಿಂಗ್ಸ್‌ನಲ್ಲಿ 152 ರನ್‌ಗಳಿಗೆ ಆಲೌಟಾಯಿತು. ಆಸ್ಟ್ರೇಲಿಯಾ ತಂಡ ದಿನದಾಟದ ಅಂತ್ಯಕ್ಕೆ 4 ವಿಕೆಟ್‌ಗಳನ್ನು ಕಳೆದುಕೊಂಡು 145 ರನ್ ಗಳಿಸಿದೆ.

ಆಸ್ಟ್ರೇಲಿಯಾ ತಂಡ 27 ರನ್ ಗಳಿಸುವಷ್ಟರಲ್ಲಿ ಮೂರು ವಿಕೆಟ್ ಕಳೆದುಕೊಂಡಿತ್ತು. ಸ್ಟೀವ್ ಸ್ಮಿತ್ ಮತ್ತು ಹೆಡ್ ಅವರು ನಾಲ್ಕನೇ ವಿಕೆಟ್‌ಗೆ 117 ರನ್ ಸೇರಿಸಿ ತಂಡವನ್ನು ಕುಸಿತದಿಂದ ಪಾರು ಮಾಡಿದರು.

ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಅವರು ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಕಳುಹಿಸಿದರು. ಮಿಚೆಲ್ ಸ್ಟಾರ್ಕ್ (41ಕ್ಕೆ 3) ಮತ್ತು ನೇಥನ್ ಲಿಯೊನ್ (14ಕ್ಕೆ 3) ಅವರ ದಾಳಿಗೆ ನಲುಗಿದ ಪ್ರವಾಸಿ ತಂಡ ಅಲ್ಪ ಮೊತ್ತಕ್ಕೆ ಆಲೌಟಾಯಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ 48.2 ಓವರ್‌ಗಳಲ್ಲಿ 152 (ಕೈಲ್ ವೆರೆಯ್ನ್ 68, ತೆಂಬಾ ಬವುಮಾ 38, ಮಿಚೆಲ್ ಸ್ಟಾರ್ಕ್ 41ಕ್ಕೆ 3, ನೇಥನ್ ಲಿಯೊನ್ 14ಕ್ಕೆ 3, ಪ್ಯಾಟ್ ಕಮಿನ್ಸ್ 35ಕ್ಕೆ 2, ಸ್ಕಾಟ್ ಬೋಲಂಡ್ 28ಕ್ಕೆ 2) ಆಸ್ಟ್ರೇಲಿಯಾ 33.1 ಓವರ್‌ಗಳಲ್ಲಿ 5 ವಿಕೆಟ್‌ಗೆ 145 (ಸ್ಟೀವ್ ಸ್ಮಿತ್ 36, ಟ್ರ್ಯಾವಿಸ್ ಹೆಡ್ ಬ್ಯಾಟಿಂಗ್ 78, ಕಗಿಸೊ ರಬಾಡ 50ಕ್ಕೆ 2, ಎನ್ರಿಕ್ ನಾರ್ಕಿಯಾ 37ಕ್ಕೆ 2)